44 ಬಾಲ ಕಾರ್ಮಿಕರನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯ ಅಡಿಯಲ್ಲಿ ಕಾರ್ಮಿಕ ಇಲಾಖೆಯ ಪುನರ್ವಸತಿ ಕಲ್ಪಿಸುವ ಪ್ರಯತ್ನಗಳನ್ನು ಒಗ್ಗೂಡಿಸಲು ಮತ್ತು ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವಂತೆ ಮಾಡುವ ಮತ್ತು ಅವರನ್ನು ಶಾಲೆಯಲ್ಲೇ ಉಳಿಯುವಂತೆ ಮಾಡುವ ಉದ್ದೇಶದಿಂದ ಮತ್ತು ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದನ್ನು ತಡೆಯುವ ಸಲುವಾಗಿ ಪೂರ್ಣ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳೊಂದಿಗೆ ಕೂಡಿ ಕೆಲಸ ಮಾಡುತ್ತದೆ

45 ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಹಿತರಕ್ಷಣೆಗಾಗಿ ನಿಯಮಗಳನ್ನು ರಚಿಸಲಾಗಿದೆ ಇದರ ಪ್ರಯೋಜನವನ್ನು 15 ಲಕ್ಷ ಕಟ್ಟಡ ನಿರ್ಮಾಣ ಕೆಲಸಗಾರರು ಪಡೆಯಲಿದ್ದಾರೆ

46 ನನ್ನ ಸರ್ಕಾರವು ಬಿಪಿಎಲ್ ಕಾರ್ಡುಗಳ ನೀಡಿಕೆಯನ್ನು ಗಣಕೀಕರಿಸಲು ಕ್ರಮ ತೆಗೆದುಕೊಂಡಿದೆ ಮನೆಮನೆ ಸಮೀಕ್ಷೆಯ ಮೂಲಕ ಗುರುತಿಸಲಾದ 1 10 ಕೋಟಿ ಫಲಾನುಭವಿಗಳಿಗೆ ತಾತ್ಕಾಲಿಕ ಕಾರ್ಡುಗಳನ್ನು ನೀಡಲಾಗಿದೆ ಇದುವರೆಗೆ 64 ಲಕ್ಷಕ್ಕೂ ಹೆಚ್ಚು ಕುಂದುಕೊರತೆಗಳನ್ನು ಸ್ವೀಕರಿಸಲಾಗಿದೆ ಮತ್ತು ಅವುಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಆ ನಂತರ ಕಾಯಂ ಪಡಿತರ ಚೀಟಿಗಳನ್ನು ನೀಡಲಾಗುವುದು

47 ಮನೆಮನೆ ಸಮೀಕ್ಷೆ ಅವಧಿಯಲ್ಲಿ ಗುರುತಿಸಲಾದ ಕುಟುಂಬಗಳಿಗೆ ಪ್ರತಿ ವ್ಯಕ್ತಿಗೆ ತಲಾ 5 ಕೆ ಜಿ (4 ಕೆ ಜಿ ಅಕ್ಕಿ ಮತ್ತು 1 ಕೆ ಜಿ ಗೋಧಿ) ಯಂತೆ ಗರಿಷ್ಟ 25 ಕೆ ಜಿ ಆಹಾರ ಧಾನ್ಯಗಳನ್ನು (20 ಕೆ ಜಿ ಅಕ್ಕಿ ಮತ್ತು 5 ಕೆ ಜಿ ಗೋಧಿ) ವಿತರಿಸುವ ಘಟಕ ಪದ್ಧತಿಯನ್ನು ಅಳವಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು

48 2006ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿಯು ತೃಪ್ತಿಕರವಾಗಿತ್ತು ಗೃಹ ರಕ್ಷಕ ದಳ ಮತ್ತು ಅಗ್ನಿ ಶಾಮಕ ಧಳಗಳ ನೆರವಿನೊಂದಿಗೆ ಪೊಲೀಸರು ಧಾರ್ಮಿಕ ಉತ್ಸವಗಳಿಗೆ ಮತ್ತು ದತ್ತ ಮೂಲ ಅಭಿಯಾನಕ್ಕೆ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು ಅವುಗಳನ್ನು ಶಾಂತಿಯುತವಾಗಿ ಆಚರಿಸಲಾಯಿತು ಅಲ್ಲದೆ, ಅವರು ಕೃಷ್ಣಾ ಮತ್ತು ಭೀಮಾ ನದಿಗಳಲ್ಲಿ

ಹಿಂದೆಂದೂ ಇಲ್ಲದಂಥ ಪ್ರವಾಹಗಳಿಂದುಂಟಾದ ತುರ್ತು ಪರಿಸ್ಥಿತಿಗಳನ್ನು ಸಹ ಪರಿಣಾಮಕಾರಿಯಾಗಿ ನಿಭಾಯಿಸಿದರು ರಾಜ್ಯದಲ್ಲಿ ನಕ್ಸಲೈಟ್ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡಲಾಗಿದೆ 2006ರಲ್ಲಿ ರಾಜ್ಯದಲ್ಲಿನ ಅಪರಾಧ ನಕ್ಷೆಯು ಇಳಿಮುಖ ಪ್ರವೃತ್ತಿಯನ್ನು ತೋರಿಸಿದೆ ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಮಹಿಳೆಯರ ಮೇಲೆಸಗುವ ಅಪರಾಧಗಳು ಸಹ ಇಳಿಮುಖವಾಗಿವೆ

49 ಬೆಳೆಯುತ್ತಿರುವ ಬೆಂಗಳೂರು ಮಹಾನಗರದಲ್ಲಿ ಅಪರಾಧಗಳನ್ನು ನಿಯಂತ್ರಿಸಲು, ಹೆಚ್ಚುವರಿಯಾಗಿ ಒಂದು ಆಗ್ನೇಯ ಪೊಲೀಸ್ ವಿಭಾಗವನ್ನು ತೆರೆಯಲಾಗಿದೆ ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಕಲ್ಯಾಣ ಯೋಜನೆಗಳನ್ನು ರೂಪಿಸಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ

50 ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತವು ಗುಲ್ಬರ್ಗಾದಲ್ಲಿ 'ಹಸಿರು ಕಟ್ಟಡ' ವನ್ನು ನಿರ್ಮಿಸಿದ ದೇಶದಲ್ಲಿನ ಮೊಟ್ಟ ಮೊದಲ ಸಾರ್ವಜನಿಕ ವಲಯ ಘಟಕವಾಗಿದೆ ಈ ನಿಗಮವು ಅದರ ಪರಿಸರ ಸ್ನೇಹಿ ನಿರ್ಮಾಣಕ್ಕಾಗಿ 2006ರ ಗೋಲ್ಡನ್ ಪೀಕಾಕ್ ಎಕೋ ಇನ್ನೋವೇಷನ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ

51 ಸುವರ್ಣ ಕರ್ನಾಟಕ ವರ್ಷವಾದುದರಿಂದ ಜೀವಾವಧಿ ಶಿಕ್ಷೆಗೆ ಒಳಗಾದ 319 ಪುರುಷ ಕೈದಿಗಳು ಹಾಗೂ 3 ಮಹಿಳಾ ಕೈದಿಗಳಿಗೆ ಶಿಕ್ಷೆಯನ್ನು ಕ್ರಮವಾಗಿ 9 ವರ್ಷದ ಮತ್ತು 4 ವರ್ಷವೆಂದು ನಿರ್ಧರಿಸಿ ಅವರನ್ನು ಬಿಡುಗಡೆ ಮಾಡಲಾಯಿತು ಅಲ್ಲದೆ ಬಂಧೀಖಾನೆ ಆಡಳಿತದಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ಸಹ ಕೈಗೊಂಡಿದ್ದೇವೆ

52 ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ತ್ವರಿತವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯ ಅತ್ಯಾವಶ್ಯಕ ವೈಶಿಷ್ಟಗಳಲ್ಲೊಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇವು ಉನ್ನತ ತಂತ್ರಜ್ಞಾನದ ವೋಲ್ವೋ ಬಸ್‌ಗಳು ಸೇರಿದಂತೆ 4000ಕ್ಕೂ ಹೆಚ್ಚು ಹೊಸ ಬಸ್‌ಗಳನ್ನು ಸೇರ್ಪಡೆ ಮಾಡುವ ಮೂಲಕ ತಮ್ಮ ವಾಹನ ಪಡೆಯನ್ನು ಆಧುನೀಕರಿಸಿವೆ ಈ ಸಂಸ್ಥೆಗಳನ್ನು ದೇಶದಲ್ಲಿಯೇ ಅತ್ಯುತ್ತಮವಾಗಿ ನಡೆಯುತ್ತಿರುವ ರಾಜ್ಯ ನಿಗಮಗಳೆಂದು ನಿರ್ಣಯಿಸಲಾಗಿದೆ

53 ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ನನ್ನ ಸರ್ಕಾರವು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ ವಾರಾಹಿ ಜಲ ವಿದ್ಯುತ್ ಯೋಜನೆಯ 3 ಹಾಗೂ 4ನೇ ಘಟಕಗಳ ಕೆಲಸ ಪ್ರಗತಿಯಲ್ಲಿದ್ದು, ಪೂರ್ಣಗೊಂಡಾಗ ಆ ಯೋಜನೆ 230 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿರುತ್ತದೆ ಈ ಯೋಜನೆ 2008ರ ವೇಳೆಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ 250 ಮೆಗಾವ್ಯಾಟ್ ಸಾಮರ್ಥ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 8ನೇ ಘಟಕಕ್ಕೆ ಸಂಬಂಧಪಟ್ಟಂತೆ ಬಿಟಿಜಿ ಹಾಗೂ ಆಕ್ಸಿಲರಿ ಪ್ಯಾಕೇಜ್‌ಗಾಗಿ ಮೆ॥ ಬಿಎಚ್‌ಇಎಲ್ ಕಂಪನಿಗೆ ಆಶಯ ಪತ್ರ ನೀಡಲಾಗಿದೆ 500 ಮೆಗಾವ್ಯಾಟ್ ಸಾಮರ್ಥ್ಯದ ಭದ್ರಾ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 2ನೇ ಘಟಕದ ಕಾಮಗಾರಿ ಕುರಿತಂತೆ ಬಿಎಚ್‌ಇಎಲ್ ಕಂಪನಿಗೆ ಇಪಿಸಿ ಪ್ಯಾಕೇಜ್‌ಗಾಗಿಯೂ ಆಶಯ ಪತ್ರವನ್ನು ನೀಡಲಾಗಿದೆ

54 ಪ್ರಸಕ್ತ ವರ್ಷದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 31 ಹೊಸ ಕೇಂದ್ರಗಳ ನಿರ್ಮಾಣ ಕಾರ್ಯವನ್ನು ಪೂರೈಸಿದ್ದು, 2007ರ ಮಾರ್ಚ್ ಅಂತ್ಯದ ವೇಳೆಗೆ ಇನ್ನೂ 100 ಕೇಂದ್ರಗಳ ಕಾರ್ಯಾರಂಭ ಮಾಡಲಿವೆ ಇದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಅನುಷ್ಠಾನದ ವೇಗವನ್ನು ಗಮನಾರ್ಹವಾಗಿ ಹೆಚ್ಚಿಸುತ್ತಿರುವುದರ ಪ್ರತೀಕ

55 ಭಾರತ ಸರ್ಕಾರವು, ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ 2005ರ ಡಿಸೆಂಬರ್‌ನಲ್ಲಿ 375 ಕೋಟಿ ರೂ ವೆಚ್ಚದಲ್ಲಿ 17 ಜಿಲ್ಲೆಗಳಿಗೆ ಯೋಜನೆಗಳನ್ನು ಮಂಜೂರು ಮಾಡಿತ್ತು 2006ರ ಡಿಸೆಂಬರ್‌ನಲ್ಲಿ ಭಾರತ ಸರ್ಕಾರವು ಉಳಿದ 9 ಜಿಲ್ಲೆಗಳಿಗೆ ಎಂದರೆ ಗುಲ್ಬರ್ಗಾ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ 238 ಕೋಟಿ ರೂ ಮೌಲ್ಯದ ಯೋಜನೆಗಳನ್ನು ಮಂಜೂರು ಮಾಡಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ ಈವರೆಗೆ, ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ 47 ಗ್ರಾಮಗಳಿಗೆ, 730 ಕುಗ್ರಾಮಗಳಿಗೆ, 1708 ದಲಿತರ ಬಸದಿಗಳಿಗೆ ಹಾಗೂ ಆಶ್ರಯ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ 1,41,025 ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಅವುಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ 1,01,073 ಕುಟುಂಬಗಳು ಸೇರಿವೆ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲಾಗಿರುವ 1268 ಹಳ್ಳಿಗಳಲ್ಲಿ

ವಿತರಣಾ ವ್ಯವಸ್ಥೆಯನ್ನು ಬಲಪಡಿಸಲಾಗಿದೆ ಹಾಸನದಲ್ಲಿ ಒಂದು ಜೈವಿಕ ಇಂಧನ ಘಟಕವನ್ನು ಸ್ಥಾಪಿಸಲಾಗಿದೆ

56 ಪ್ರವಾಸೋದ್ಯಮ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲಿ ವಿಮಾನ ನಿಲ್ದಾಣಗಳು ವಹಿಸುವ ಪಾತ್ರದ ಮಹತ್ವವನ್ನು ಪರಿಗಣಿಸಿ, ಸರ್ಕಾರವು ರಾಜ್ಯದಲ್ಲಿ ಹನ್ನೆರಡು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಪೂರ್ವನಿಯಾಮಕವಾಗಿ ಸಾಗುತ್ತಿದೆ 2008ರ ಏಪ್ರಿಲ್ ವೇಳೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಕಾರ್ಯಾರಂಭ ಮಾಡಲಿದೆ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರವು ಮಂಗಳೂರು, ಬೆಳಗಾವಿ, ಹುಬ್ಬಳ್ಳಿ ವಿಮಾನ ನಿಲ್ದಾಣಗಳನ್ನು ವಿಸ್ತರಿಸುತ್ತಿದೆ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡುತ್ತಿದೆ

57 ಕಳೆದ ವರ್ಷದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ವಲಯ ಅತ್ಯುತ್ತಮ ಸಾಧನೆಯನ್ನು ಮುಂದುವರೆಸಿದೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಂಡವಾಳ ಹೂಡುವುದಕ್ಕೆ ಬೆಂಗಳೂರು ಪ್ರಶಸ್ತ ಸ್ಥಳವಾಗಿಯೇ ಮುಂದುವರೆದಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ ಕಳೆದ ವರ್ಷ 208 ಹೊಸ ಮಾಹಿತಿ ತಂತ್ರಜ್ಞಾನ ಕಂಪನಿಗಳ ಪೈಕಿ ನಾಲ್ಕು ಕಂಪನಿಗಳು ಫಾರ್ಚುನ್ 500ದ ಪಟ್ಟಿಯಲ್ಲಿ ಹಾಗೂ 11 ಕಂಪನಿಗಳು ದಶಲಕ್ಷ ಡಾಲರ್ ಕಂಪನಿಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿವೆ ಐಟಿ ಕ್ಷೇತ್ರವೊಂದೇ ರಾಜ್ಯದಲ್ಲಿ ನಾಲ್ಕು ಲಕ್ಷ ಜನರಿಗೆ ನೇರ ಉದ್ಯೋಗ ಒದಗಿಸುತ್ತದೆ ಭಾರತದ ಸಾಫ್ಟ್‌ವೇರ್ ರಫ್ತಿನ 1/3 ಭಾಗದಷ್ಟು ಎಂದರೆ 37000 ಕೋಟಿ ರೂ ಮೌಲ್ಯದ ಸಾಫ್ಟ್‌ವೇರ್ ಕರ್ನಾಟಕದಿಂದ ರಫ್ತಾಗುತ್ತದೆ ಜೈವಿಕ ತಂತ್ರಜ್ಞಾನ ವಲಯವು ಕೂಡ 500 ಕೋಟಿಗಿಂತ ಹೆಚ್ಚಿನ ಮೊತ್ತದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿದ್ದು, 35 ಹೊಸ ಜೈವಿಕ ತಂತ್ರಜ್ಞಾನ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ ಈ ಉದ್ದಿಮೆಗಳಿಗಾಗಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸಲು ನಾವು ಬಜೆಟ್‌ನಲ್ಲಿ ಹಣ ಒದಗಿಸಿದ್ದೇವೆ ಈ ವರ್ಷದಲ್ಲಿ ನನ್ನ ಸರ್ಕಾರದ ಹೊಸ ಉಪಕ್ರಮ ಎಂದರೆ ಬೆಂಗಳೂರು ನ್ಯಾನೋ ಮೇಳ ನಡೆಸುವುದು

58 ನನ್ನ ಸರ್ಕಾರವು ಸಾರ್ವಜನಿಕರ ಕುಂದುಕೊರತೆಗಳ ನಿವಾರಣೆಗಾಗಿ ಜನತಾ ಸಂದರ್ಶನದ ಕಾರ್ಯಕ್ರಮವನ್ನು ಪ್ರತಿ ವಾರ ಮಾಡುವುದರಿಂದ ಈ

ಸರ್ಕಾರ ಜನಗಳ ಬೇಡಿಕೆಗಳಿಗೆ ಸ್ಪಂದಿಸುತ್ತದೆ ಹಾಗೂ ಪರಿಹಾರವನ್ನು ಒದಗಿಸುತ್ತದೆ

59 ನನ್ನ ಸರ್ಕಾರವು ಇ-ಆಡಳಿತವನ್ನು ಹೆಚ್ಚು ಗಂಭೀರವಾಗಿ ಕೈಗೆತ್ತಿಕೊಂಡಿದ್ದು ಹಲವಾರು ಹೊಸ ಯೋಜನೆಗಳನ್ನು ಪ್ರಾರಂಭಿಸಿದೆ ಎಂದು ನಿಮಗೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ ಅವುಗಳಲ್ಲಿ ಭೂಮಿ, ಬೆಂಗಳೂರು ಒನ್, ಖಜಾನೆ, ಕಾವೇರಿ ಇವು ಹೆಸರಿಸಬಹುದಾದ ಕೆಲವು ಯೋಜನೆಗಳಾಗಿದ್ದು, ರಾಜ್ಯಕ್ಕೆ ಕೀರ್ತಿ ತಂದಿವೆ ಈಗ, ನೆಮ್ಮದಿ ಕಾರ್ಯಕ್ರಮದಡಿ ಹೋಬಳಿ ಹಂತದಲ್ಲಿ 800 ಟೆಲಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ, ನನ್ನ ಸರ್ಕಾರವು ಆಡಳಿತವನ್ನು ನಾಗರೀಕರ ಮನೆ ಬಾಗಿಲಿಗೆ ಒಯ್ಯುತ್ತಿದೆ ವಿದ್ಯುನ್ಮಾನ-ಸಂಗ್ರಹಣಾ ವೇದಿಕೆಯನ್ನು ಕೆಲವು ಪ್ರಮುಖ ಇಲಾಖೆಗಳಲ್ಲಿ ಸದ್ಯದಲ್ಲೇ ಸ್ಥಾಪಿಸಲಾಗುವುದು ವ್ಯಾಪಕ ಪ್ರದೇಶ ಜಾಲದ ಮೂಲಕ ತಾಲ್ಲೂಕು ಹಂತದವರೆಗೂ ಆದಷ್ಟು ಬೇಗನೆ ಸಂಪರ್ಕ ಸಾಧಿಸಲಾಗುವುದು

60 ಈ ವರ್ಷ ಸಕಾಲದಲ್ಲಿ ಸಾಕಷ್ಟು ಮಳೆಯಾಗಿ ರಾಜ್ಯದಲ್ಲಿ ಸಮೃದ್ಧಿ ನೆಲೆಸುತ್ತದೆಂದು ಆಶಿಸುತ್ತೇನೆ ಉತ್ತಮ, ದಕ್ಷ ಹಾಗೂ ಜನಸ್ಪಂದನ ಆಡಳಿತ ನೀಡುವುದರ ಮೂಲಕ ಕನ್ನಡದ ಜನತೆ ಉತ್ತಮ ಮಟ್ಟದ ಬದುಕನ್ನು ನಡೆಸುವಂತಾಗಲು ನನ್ನ ಸರ್ಕಾರ ಶ್ರಮಿಸುತ್ತದೆ

ಜೈ ಹಿಂದ್, ಜೈ ಕರ್ನಾಟಕ

ಉಪಾಧ್ಯಕ್ಷರು ಮಂಡಿಸಲಾಯಿತು ಈಗ ಸದನವನ್ನು ಒಂದನೇ ಫೆಬ್ರವರಿ 2007ನೇ ಗುರುವಾರ ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 12 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 1ನೇ ಫೆಬ್ರವರಿ 2007ರ ಗುರುವಾರ ಬೆಳಿಗ್ಗೆ 11 00 ಗಂಟೆಗೆ ಸೇರಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ

ಗುರುವಾರ 1ನೇ ಫೆಬ್ರವರಿ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
`ಬೆಳಿಗ್ಗೆ 11 00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

1 ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು

ಮಾಜಿ ಸಚಿವರಾಗಿದ್ದ ಶ್ರೀ ವೈ ರಾಮಚಂದ್ರ ಹಾಗೂ ಶ್ರೀ ಎಂ ಎಲ್ ಉಸ್ತಾದ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಳವಂತರಾವ್ ದೇವರಾವ್ ಪಟೇಲ್, ಶ್ರೀ ಎಂ ಬಸಪ್ಪ, ಶ್ರೀ ಮಂಜಪ್ಪ ಉಳ್ಳಾಲ್ ಹಾಗೂ ಶ್ರೀ ಡಿ ಹಲಗೇಗೌಡ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ

1 ಶ್ರೀ ವೈ ರಾಮಚಂದ್ರ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮಾಜಿ ಸಚಿವರಾದ ಶ್ರೀ ವೈ ರಾಮಚಂದ್ರ ಅವರು 1922ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದು, ವಿಜ್ಞಾನ ಹಾಗೂ ಕಾನೂನು ಪದವೀಧರರು, ವಿದ್ಯಾರ್ಥಿ ಜೀವನದಲ್ಲಿ ಅತ್ಯುತ್ತಮ ಸಂಘಟಕರಾಗಿದ್ದ ಶ್ರೀಯುತರು 1942 ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು 1954ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾಗಿ, 1958ರಲ್ಲಿ ಮಹಾಪೌರರಾಗಿ ನಗರದ ಅಭಿವೃದ್ಧಿಗೆ ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ರೂಪಿಸಿ ಹೆಸರು ಗಳಿಸಿದ್ದರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ದುಡಿದಿದ್ದ ಶ್ರೀಯುತರು 1960ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಹಲವಾರು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದು, ಮೂರನೇ ವಿಧಾನಸಭೆಗೆ ಚಿಕ್ಕಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ಶ್ರೀ ನಿಜಲಿಂಗಪ್ಪ ಅವರ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪೌರಾಡಳಿತ ಸಚಿವರಾಗಿದ್ದರು ಹಾಗೂ 1970 ರಿಂದ 1974ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 15 01 2007ರಂದು ನಿಧನ ಹೊಂದಿದರು

11 00 A M

2 ಶ್ರೀ ಎಂ ಎಲ್ ಉಸ್ತಾದ್

ಮಾಜಿ ಸಚಿವರಾಗಿದ್ದ ಶ್ರೀ ಉಸ್ತಾದ್ ಮಹಬೂಬ್ ಪಟೇಲ್ ಲಾಡ್ಲೆ ಅವರು 1950ನೇ ಜೂನ್ 1 ರಂದು ಸಿಂಧಗಿ ತಾಲ್ಲೂಕಿನ ಕೊಂಡಗುಲಿ ಗ್ರಾಮದಲ್ಲಿ ಜನಿಸಿದ್ದು, ಕಲೆ ಹಾಗೂ ಕಾನೂನು ಪದವೀಧರರು ವೃತ್ತಿಯಲ್ಲಿ ಕೃಷಿಕರು ಹಾಗೂ ನ್ಯಾಯವಾದಿಗಳಾಗಿದ್ದ ಶ್ರೀಯುತರು ಬಡವರ ಅಭಿವೃದ್ಧಿಯಲ್ಲಿ ತುಂಬಾ ಆಸಕ್ತಿ ಹೊಂದಿದ್ದು ಬಿಜಾಪುರ ಕ್ಷೇತ್ರದಿಂದ ಎಂಟು, ಎಂಭತ್ತು ಹಾಗೂ ಹನ್ನೊಂದನೇ ವಿಧಾನಸಭೆಗೆ ಚುನಾಯಿತರಾಗಿದ್ದು, ಒಂಭತ್ತನೇ ವಿಧಾನಸಭೆ ಅವಧಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು

ಶ್ರೀಯುತರು ದಿನಾಂಕ 31 01 2007ರಂದು ನಿಧನ ಹೊಂದಿದರು

3 ಶ್ರೀ ಬಳವಂತರಾವ್ ದೇವರಾವ್ ಪಟೇಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಳವಂತರಾವ್ ದೇವರಾವ್ ಪಟೇಲ್ ಅವರು 1918ರಲ್ಲಿ ಬೀದರ್ ಜಿಲ್ಲಯ ಖಾನಾಪುರದಲ್ಲಿ ಜನಿಸಿದ್ದು, ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕಲೆ ಹಾಗೂ ಕಾನೂನು ಪದವಿಯನ್ನು ಪಡೆದಿದ್ದರು ವಕೀಲಿ ವೃತ್ತಿಯನ್ನು ಮಾಡುತ್ತಿದ್ದ ಶ್ರೀಯುತರು ರಜಾಕರ ಕಾಲದಲ್ಲಿ ಪ್ರತಿಭಟನೆಯನ್ನು ನಡೆಸಿ ವೃತ್ತಿಯನ್ನು ಹಾಗೂ ರಾಜ್ಯವನ್ನು ತೊರೆದಿದ್ದರು ಆನಂತರ ಮುನ್ಸಿಫ್ ನ್ಯಾಯಧೀಶರಾಗಿ ಕೆಲಕಾಲ ಕಾರ್ಯನಿರ್ವಹಿಸಿದ್ದ ಶ್ರೀಯುತರು ಸಾಮಾಜಿಕ ಸೇವೆಯಲ್ಲಿ ಆಸಕ್ತಿ ಹೊಂದಿ ವೃತ್ತಿಗೆ ರಾಜೀನಾಮೆ ಸಲ್ಲಿಸಿದ್ದರು 1952ರಲ್ಲಿ ಬೀದರ್ ಪುರಸಭೆಯ ಸದಸ್ಯರಾಗಿ ಸೇವೆ ಸಲ್ಲಸಿದ್ದ ಶ್ರೀಯುತರು ಭಾಲ್ಕಿ ಕ್ಷೇತ್ರದಿಂದ ಎರಡನೇ ವಿಧಾನಸಭೆಗೆ ಚುನಾಯಿತರಾಗಿದ್ದರು

ಶ್ರೀಯುತರು ದಿನಾಂಕ 25 11 2006ರಂದು ನಿಧನ ಹೊಂದಿದರು

4 ಶ್ರೀ ಎಂ ಬಸಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ ಬಸಪ್ಪ ಅವರು 1923ನೇ ಸೆಪ್ಟೆಂಬರ್ 13ರಂದು ಜನಿಸಿ, ಬಿಇ ಹಾಗೂ ಎಂಎಸ್‌ಸಿ (ಯುಎಸ್‌ಎ) ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆ ಸಲ್ಲಿಸಿದ್ದರು ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ಹೊಂದಿದ ಶ್ರಿಯುತರು 10ನೇ ವಿಧಾನಸಭೆಗೆ ಜಗಳೂರು

ಕ್ಷೇತ್ರದಿಂದ ಚುನಾಯಿತರಾಗಿದ್ದು, ಕರ್ನಾಟಕ ನಾರು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 03 12 2006ರಂದು ನಿಧನ ಹೊಂದಿದರು

5 ಶ್ರೀ ಮಂಜಪ್ಪ ಉಳ್ಳಾಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಂಜಪ್ಪ ಉಳ್ಳಾಲ್ ಅವರು 1928ರಲ್ಲಿ ಮಂಗಳೂರು ಜಿಲ್ಲೆಯ ಉಳ್ಳಾಲದಲ್ಲಿ ಜನಿಸಿದ್ದರು ಕ್ರೀಡಾಪಟುವಾಗಿದ್ದ ಶ್ರೀಯುತರು ಗ್ರಾಮಗಳಲ್ಲಿ ಶ್ರಮದಾನ ಚಳವಳಿಯನ್ನು ಪಸರಿಸಲು ಶ್ರಮಿಸಿದ್ದರು ದಲಿತರ ಏಳಿಗೆಯ ಬಗ್ಗೆ ಅಪಾರ ಕಾಳಜಿ ಹೊಂದಿದ ಶ್ರೀಯುತರು ರಾಜ್ಯ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಾರ್ಯನೀತಿ ಸಮಿತಿ ಹಾಗೂ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಸಂಸ್ಥೆಯ ಸದಸ್ಯರಾಗಿ, ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದು, ಕಾರ್ಕಳ ಕ್ಷೇತ್ರದಿಂದ ಎರಡನೇ ವಿಧಾನಸಭೆಗೆ ಅವಿರೋಧವಾಗಿ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 13 12 2006ರಂದು ನಿಧನ ಹೊಂದಿದರು

6 ಶ್ರೀ ಡಿ ಹಲಗೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ ಹಲಗೇಗೌಡ ಅವರು 1934ನೇ ಮಾರ್ಚ್ 12ರಂದು ಪಾಂಡವಪುರ ತಾಲ್ಲೂಕು, ಅಮೃತಿಯಲ್ಲಿ ಜನಿಸಿದ್ದು, ಕಲಾ ಪದವೀಧರರು ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿದ್ದು, ಪಾಂಡವಪುರ ತಾಲ್ಲೂಕು ಬೋರ್ಡ್ ಸದಸ್ಯರಾಗಿ, ರಾಜ್ಯ ಸಹಕಾರ ಮಹಾಮಂಡಲ ಮತ್ತು ಪಾಂಡವಪುರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ, ಎಂ ಡಿ ಸಿ ಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು ಶ್ರೀಯುತರು ಐದು ಮತ್ತು ಒಂಭತ್ತನೇ ವಿಧಾನಸಭೆಗೆ ಪಾಂಡವಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 12 01 2007ರಂದು ನಿಧನ ಹೊಂದಿದರು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ತಾವು ಅಗಲಿಹೋದ ನಮ್ಮ ಸದಸ್ಯರ ಬಗ್ಗೆ ಸಂತಾಪ ಸೂಚನೆ ಗೊತ್ತುವಳಿಯನ್ನು ಮಂಡಿಸಿದ್ದೀರಿ ಶ್ರೀ ವೈ ರಾಮಚಂದ್ರರವರು, ಮಾನ್ಯ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಅವರು ಮಂತ್ರಿಗಳಾಗಿ ಕೆಲಸಮಾಡಿದಂತಹವರು ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಬಹಳ

ಸಕ್ರಿಯವಾದಂತಹ ಪಾತ್ರವನ್ನು ವಹಿಸಿದಂತಹ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿ ಹಿಂದುಳಿದ ಜನಾಂಗದ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿಕೊಂಡು ಅನೇಕ ಕೆಲಸಕಾರ್ಯಗಳನ್ನು ಮಾಡುವುದರ ಜೊತೆಗೆ ಕೊನೆಯವರೆವಿಗೂ ಕೂಡ ಸಂಸ್ಥಾ ಕಾಂಗ್ರೆಸ್ ಮತ್ತು ನಿಜಲಿಂಗಪ್ಪನವರ ಅನುಯಾಯಿಗಳಾಗಿ ಉಳಿದಿರತಕ್ಕಂತಹವರು ಬಿಎಂಎಸ್ ಶಿಕ್ಷಣ ಸಂಸ್ಥೆಗೆ ಅದ್ಯಕ್ಷರಾಗಿ ಅಪಾರವಾದ ಸೇವೆಯನ್ನು ಮಾಡಿದಂತಹ ಮಾನ್ಯ ವೈ ರಾಮಚಂದ್ರರವರು ಬೆಂಗಳೂರು ನಗರದಲ್ಲಿ ಬಹಳ ಜನಪ್ರಿಯರಾದ ವ್ಯಕ್ತಿಗಳಾಗಿ ಅನೇಕ ಸಂಘಸಂಸ್ಥೆಗಳೊಡನೆ ಗುರುತಿಸಿಕೊಂಡಂತಹವರಾಗಿದ್ದರು ಪ್ರಾಯಶ ಜಿ ನಾರಾಯಣರವರ, ನಿಟ್ಟೂರು ಶ್ರೀನಿವಾಸರಾಯರ ಮತ್ತು ಆ ಕಾಲದ ಎಲ್ಲಾ ಹಿರಿಯ ಮುತ್ಸದ್ದಿಗಳಾದವರು ಹಾಗೂ ಅ ನ ಕೃಷ್ಣರಾಯರ ಹೀಗೆ ಮೊದಲಾದ ಸಾಹಿತ್ಯ ಪ್ರೇಮಿಗಳ ಮತ್ತು ಸ್ನೇಹಿತರ ಜೊತೆಗೂ ನಿಕಟವಾದಂತಹ ಸಂಬಂಧವನ್ನು ವೈ ರಾಮಚಂದ್ರರವರು ಇಟ್ಟುಕೊಂಡಿದ್ದರು ನಮ್ಮ ಪಕ್ಷದಲ್ಲಿ ಬಹಳ ಉನ್ನತಮಟ್ಟದ ನಾಯಕರಾಗಿ ಅನೇಕ ಸಂದರ್ಭದಲ್ಲಿ ನಮಗೆ ಮಾರ್ಗದರ್ಶನ ಮಾಡಿದಂತಹವರಾಗಿದ್ದರು ಅದೇ ರೀತಿಯಾಗಿ ಶ್ರೀ ಎಂ ಎಲ್ ಉಸ್ತಾದ್‌ರವರು ಬಹಳ ಚಿಕ್ಕ ವಯಸ್ಸಿನವರು ಅವರು ಮಂತ್ರಿಗಳಾಗಿ ಕೆಲಸ ಮಾಡುವ ಹಾಗೂ ವಿವಿಧ ಸಮಿತಿಗಳಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ನಾನು ಅವರೊಡನೆ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದೆ ಬಹಳ ಹಾಸ್ಯಪ್ರಿಯರಾಗಿದ್ದರು, ಬಿಜಾಪುರದ ಅನೇಕ ಸಮಸ್ಯೆಗಳು ಅದರಲ್ಲೂ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಬಹಳ ಹೋರಾಟವನ್ನು ಮಾಡಿ ಆ ಕುಡಿಯುವ ನೀರಿನ ಸಮಸ್ಯೆಯನ್ನು ಸುಧಾರಿಸುವುದಕ್ಕೆ ಬಹಳ ಕೆಲಸ ಮಾಡಿದತಂಹ ಚಿಕ್ಕ ವಯಸ್ಸಿನವರಾದ ಉಸ್ತಾದ್ ಮಹಬೂಬ್ ಪಟೇಲ್‌ರವರು ಅಕಾಲಿಕ ಹೃದಯಘಾತಕ್ಕೆ ಒಳಗಾಗಿ ಬೆಂಗಳೂರಿನಲ್ಲಿ ನಿಧನರಾದದ್ದು ನಿಜಕ್ಕೂ ಶೋಚನಿಯವಾದ ವಿಚಾರ ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು ನನಗೆ ಹೆಚ್ಚಿನ ಪರಿಚಯವಿಲ್ಲದಿರುವವರು ಇವರು ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಎರಡು ಸಾರಿ ಗೆದ್ದು ಬಂದಿರುವುದರಿಂದ ವಿರೋಧಪಕ್ಷದ ನಾಯಕರಾದ ಮಾನ್ಯ ಧರ್ಮ್‌ಸಿಂಗ್‌ರವರಿಗೆ, ಮಲ್ಲಿಕಾರ್ಜುನ ಖರ್ಗೆಯವರಿಗೆ ಚೆನ್ನಾಗಿ ಗೊತ್ತಿರತಕ್ಕಂತಹವರು ಅದೇ ರೀತಿಯಲ್ಲಿ ಶ್ರೀ ಮಂಜಪ್ಪ ಉಳ್ಳಾಲ್‌ರವರು, ಶ್ರೀ ಡಿ ಹಲಗೇಗೌಡರವರು ಇವರೆಲ್ಲರೂ ಸಮಾಜ ಸೇವೆಯಲ್ಲಿ ಕೆಲಸ ಮಾಡಿದವರು ಆದರೆ ಇವರುಗಳು ನನಗೆ ಅಂತಹ ದೊಡ್ಡ

ಪರಿಚಯವಿಲ್ಲದವರಾಗಿದ್ದರು ಕೂಡ ಹಲಗೇಗೌಡರು ಮಂಡ್ಯದ ಸಕ್ಕರೆ ಕಾರ್ಖಾನೆಯ ಬಗ್ಗೆ ಹಾಗೂ ಮಂಡ್ಯ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಮಾಡಿದ ಸೇವೆಯ ಬಗ್ಗೆ ಹಾಗು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಮಾಡಿದ ಕೆಲಸಗಳ ಬಗ್ಗೆ ಅನೇಕ ವಿಷಯಗಳು ನಮಗೆ ಗೊತ್ತಿದ್ದಂತಹ ಅನೇಕ ಸಂದರ್ಭ ಇದ್ದುದ್ದರಿಂದ ಪ್ರಾಯಶ ಹಲಗೇಗೌಡರನ್ನು ವೈಯಕ್ತಿಕವಾಗಿ ನಾನು ಬಲ್ಲವನಾಗಿದ್ದೆ ಶ್ರೀ ಎಂ ಬಸಪ್ಪನವರು, ನಮ್ಮ ಜಗಳೂರು ಕ್ಷೇತ್ರದ ಶಾಸಕರಾಗಿ ಕೆಲಸ ಮಾಡಿದಂತಹವರು ಪ್ರಥಮಭಾರಿಗೆ ಅವರಿಗೆ ಟಿಕೆಟ್ ಕೊಟ್ಟಂತಹ ಸಂದರ್ಭದಲ್ಲಿ ಅವರು ಸೋತಿದ್ದರು ಅವರು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಸಕ್ರಿಯವಾದ ರಾಜಕಾರಣದಲ್ಲಿ ಪಾಲ್ಗೊಂಡು ಅವರು ನಮ್ಮ ಜೊತೆಗೆ, ನಮ್ಮ ಪಕ್ಷದ ವತಿಯಿಂದ ವಿಧಾನ ಸಭೆಗೆ ಜಗಳೂರು ಕ್ಷೇತ್ರದಿಂದ ಆಯ್ಕೆಯಾದಂತಹವರಾಗಿದ್ದರು ಈ ಎಲ್ಲಾ ಮಹನೀಯರುಗಳ ನಿಧನದಿಂದ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡತಕ್ಕಂತಹ ಹಿರಿಯ ಜೀವಿಗಳು ಕಣ್ಮರೆಯಾದಂತಾಗಿದೆ ಆ ಕಾಲಕ್ಕೆ ಈ ಎಲ್ಲಾ ವ್ಯಕ್ತಿಗಳು ಕೂಡ ಒಂದು ಉತ್ತಮವಾದ ಸಿದ್ಧಾಂತ ತತ್ವಗಳಿಗೆ ಬದ್ಧರಾಗಿ ಎಲೆಮರೆಯ ಕಾಯಿಯಂತೆ ತಮ್ಮ ಕೆಲಸವನ್ನು ಮಾಡಿ, ತಮ್ಮ ಅವಧಿ ಮೀರಿದ ನಂತರ ಅಥವಾ ತಾವು ಸದಸ್ಯರಲ್ಲದ ಸಂದರ್ಭದಲ್ಲಿಯು ಕೂಡ ತಮ್ಮ ಇತಿಮಿತಿಯಲ್ಲಿ ಹಾಗು ತಮ್ಮ ಆರೋಗ್ಯ ಸ್ಥಿತಿಗೆ ಅನುಗುಣವಾದಂತಹ ರೀತಿಯಲ್ಲಿ ತಮ್ಮ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಿದ ಮಹನೀಯರುಗಳಾಗಿದ್ದಾರೆ ಅವರೆಲ್ಲರಿಗೂ ಕೂಡ ಸದನ ಸಂತಾಪ ವ್ಯಕ್ತಪಡಿಸುವುದು ಆದ್ಯಕರ್ತವ್ಯವಾಗಿದೆ ಆದುದರಿಂದ ತಾವೇನು ಸಂತಾಪ ಸೂಚನೆಯನ್ನು ತಂದಿದ್ದೀರಿ ಇದಕ್ಕೆ ಇಡೀ ಸದನದ ಸಂಪೂರ್ಣವಾದ ಸಹಮತವಿದೆ ಎಂದು ಹೇಳಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬವರ್ಗಕ್ಕೆ ಸಾಂತ್ವನ ಹೇಳುವಂತಹ ನಮ್ಮ ಗೊತ್ತುವಳಿಯನ್ನು ಅವರಿಗೆ ಕಳುಹಿಸಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಈಶ್ವರಪ್ಪನವರ ಕೈ ಮುರಿದಿದೆ, ಪಾರ್ಟಿ ಮೀಟಿಂಗ್‌ನಲ್ಲಿ ಏನು ಕುಸ್ತಿ ಆಯಿತೋ ಹೇಗೆ?

ಶ್ರೀ ಕೆ ಎಸ್ ಈಶ್ವರಪ್ಪ ಸಂತಾಪ ಸೂಚನೆ ಆದ ನಂತರ ಹೇಳುತ್ತೇನೆ

ಶ್ರೀ ಎನ್ ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಸಭಾಧ್ಯಕ್ಷರೇ, ಶ್ರೀ ವೈ ರಾಮಚಂದ್ರರವರು ಈ ನಾಡಿನ ಒಬ್ಬ ಹಿರಿಯ ನಾಯಕರಾಗಿದ್ದವರು ಮಹಾ ಪೌರರಾಗಿದ್ದವರು ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಮಾನ್ಯ ದಿವಂಗತ ದೇವರಾಜರಸ್‌ರವರು ಕರ್ನಾಟಕದಲ್ಲಿ ಹಾವನೂರು ಆಯೋಗವನ್ನು ರಚನೆ ಮಾಡಿದರು ಆ ಆಯೋಗದಲ್ಲಿ ನಾನು ಅವರು ಜೊತೆಯಲ್ಲಿ ಕೆಲಸ ಮಾಡಿದ್ದೇವೆ ಶ್ರೀ ವೈ ರಾಮಚಂದ್ರರವರು ಹಿಂದುಳಿದ ವರ್ಗಗಳ ಬಗ್ಗೆ ಹೆಚ್ಚಿನ ಕಳಕಳಿ ಇಟ್ಟುಕೊಂಡಿದ್ದರು ಹಾವನೂರು ಆಯೋಗ ಈ ರಾಜ್ಯದ ಹಿಂದುಳಿದ ವರ್ಗಗಳ ಜನರಿಗೆ ಬೈಬಲ್ ಎಂದು ಎಲ್ಲ ಜನರು ಮಾತನಾಡುತ್ತಿದ್ದಾರೆ ಇದಕ್ಕೆ ಹೆಚ್ಚಿನ contribution ಕೊಟ್ಟು ಅವರು ಸಾಕಷ್ಟು ಸಹಾಯ ಮಾಡಿದ್ದಾರೆ ಅವರ ಅಗಲಿಕೆಯಿಂದ ನಮಗೆ ಮತ್ತು ವಿಶೇಷವಾಗಿ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಹಾನಿ ಆಗಿದೆ ಎನ್ನತಕ್ಕಂತಹ ಮಾತನ್ನು ನಾನು ಕೂಡ ಪ್ರಸ್ತಾಪ ಮಾಡುತ್ತಿದ್ದೇನೆ ಮಾನ್ಯ ಉಸ್ತಾದ್‌ರವರು ನಿನ್ನೆ 11 00 ಗಂಟೆಗೆ ಅವರ ಮನೆಯಲ್ಲಿ ಉಪಹಾರ ಸೇವಿಸಿ ವಾಶ್ ಬೇಸಿನ್‌ನಲ್ಲಿ ಕೈ ತೊಳೆಯುವಂತಹ ಸಂದರ್ಭದಲ್ಲಿ ಅವರು ಹೃದಯಾಘಾತದಿಂದ ತೀರಿಕೊಂಡಿದ್ದಾರೆ ನಾನು ಮತ್ತು ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಹೋಗಿದ್ದೆವು ಮಾನ್ಯ ಉಸ್ತಾದ್‌ರವರು ನಮ್ಮ ನೆರೆ ಜಿಲ್ಲೆಯಾದ ಬಿಜಾಪುರ ಜಿಲ್ಲೆಯವರು ಅವರು ವಿಧಾನಸಭೆಗೆ ಮೂರು ಬಾರಿ ಆರಿಸಿ ಬಂದಿದ್ದಾರೆ ಅಲ್ಪಸಂಖ್ಯಾತರಾಗಿ ಹುಟ್ಟಿ, ಕೇವಲ ಅಲ್ಪಸಂಖ್ಯಾತರಾಗಿ ನಾಯಕರಾಗಿರದೆ ಆ ಭಾಗದಲ್ಲಿನ ಎಲ್ಲ ಕೋಮಿನ ಜನರ ಪ್ರೀತಿಗೆ ಪಾತ್ರರಾದ ಒಳ್ಳೆಯ ಕಾರ್ಯಕರ್ತರಾಗಿದ್ದರು ಅವರ ಅಗಲಿಕೆಯಿಂದ ಉತ್ತರ ಕರ್ನಾಟಕ ಭಾಗಕ್ಕೆ ಹೆಚ್ಚಿನ ಅನ್ಯಾಯವಾಗಿದೆ ಇವತ್ತಿನದಿವಸ ಅವರ ಅಂತ್ಯಕ್ರಿಯೆ ಕೂಡ ನಡೆಯುತ್ತಿದೆ ನಮ್ಮ ಜೊತೆಯಲ್ಲಿ ಅವರು ಸದನದಲ್ಲಿದ್ದರು ಮಂತ್ರಿಗಳಾಗಿ ಎರಡು ಸಲ ಕೆಲಸ ಮಾಡಿದ್ದಾರೆ ಬಹಳ ಸೌಮ್ಯ ಸ್ವಭಾವದವರು ಅವರ ಅಗಲಿಕೆಯಿಂದ ಇವತ್ತು ಬಿಜಾಪುರ ಜಿಲ್ಲೆ ಮತ್ತು ಆ ಭಾಗದಲ್ಲಿರತಕ್ಕಂತಹ ಎಲ್ಲ ಜನರು ಕೂಡ ದಿಗ್ಭ್ರಮೆಗೆ ಒಳಗಾಗಿದ್ದಾರೆ ಅವರ ಪರಿವಾರದವರಿಗೆ ಈ ಒಂದು ದೊಡ್ಡ ಹಾನಿ ಏನಾಗಿದೆ ಅದನ್ನು ಸಹನೆ ಮಾಡತಕ್ಕಂತಹ ಶಕ್ತಿ ಕೊಟ್ಟು ದೇವರು ಅವರ ಮೇಲೆ ದಯೆ ತೋರಿಸಲಿ ಎಂದು ಕೇಳಿಕೊಳ್ಳುತ್ತೇನೆ ಶ್ರೀ ಬಳವಂತರಾವ್ ದೇವರಾವ್

ಪಟೇಲ್, ಶ್ರೀ ಎಂ ಬಸಪ್ಪ, ಶ್ರೀ ಮಂಜಪ್ಪ ಉಳ್ಳಾಲ್, ಇವರ ಪೈಕಿ ಶ್ರೀ ಹಲಗೇಗೌಡರು ನಮ್ಮ ಜೊತೆ ಶಾಸಕರಾಗಿದ್ದವರು ಮಂಡ್ಯ ಜಿಲ್ಲೆಯಿಂದ ಬಂದಂತಹ ಹಲಗೇಗೌಡರು ನಾವೂ ಜೊತೆಗೂಡಿ ಕೆಲಸ ಮಾಡಿದ್ದೇವೆ ಇವರು ಸಹಕಾರ ಕ್ಷೇತ್ರದಲ್ಲಿ ಕೂಡ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿದ್ದಾರೆ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಮತ್ತು ಕರ್ನಾಟಕದ ಜನತೆಗೆ ವಿಶೇಷವಾಗಿ ಪಾಂಡವಪುರ ಕ್ಷೇತ್ರದಿಂದ ಅವರು ಆರಿಸಿ ಬಂದಿದ್ದಾರೆ ಇವರ ನಿಧನದಿಂದ ಮಂಡ್ಯ ಜಿಲ್ಲೆಗೆ ಆದಂತಹ ಆಘಾತಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತಿದ್ದೇನೆ ತಾವು ಸದನದಲ್ಲಿ ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನಾನು ಪೂರ್ಣವಾದ ಬೆಂಬಲವನ್ನು ಸೂಚಿಸುತ್ತೇನೆ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅದ್ಯಕ್ಷರೆ, ತಾವು ಈ ಸದನದಲ್ಲಿ ಸಂತಾಪ ಸೂಚನಾ ನಿರ್ಣಯವನ್ನು ಏನು ಮಂಡನೆ ಮಾಡಿದ್ದೀರಿ ಅದಕ್ಕೆ ಬೆಂಬಲವನ್ನು ಸೂಚಿಸುತ್ತೇನೆ ದಿವಂಗತ ವೈ ರಾಮಚಂದ್ರರವರು ನಾನು ಮೊದಲನೆಯ ಬಾರಿ ವಿಧಾನ ಸಬೆಗೆ ಆರಿಸಿ ಬಂದಾಗ ಅವರ ಬಗ್ಗೆ ಸಾಕಷ್ಟು ವಿಚಾರಗಳನ್ನು ಕೇಳಿದ್ದೆ ಬರೀ ಹಿಂದುಳಿದ ವರ್ಗದವರು, ದಲಿತರು, ಅವರ ಉದ್ದಾರ ಎನ್ನುವಂತಹ ಭಾಷಣಗಳನ್ನು ಕೇಳುತ್ತಿರುವಂತಹ ಸಂದರ್ಭದಲ್ಲಿ, ಕನಕದಾಸರ ಸಿದ್ಧಾಂತವನ್ನು ರಾಜ್ಯದ ಜನತೆಗೆ ಮುಟ್ಟಿಸುವ ದಿಕ್ಕಿನಲ್ಲಿ ಅವರು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಮತ್ತು ಮಂತ್ರಿಯಾಗದಿದ್ದಂತಹ ಸಂದರ್ಭದಲ್ಲಿಯೂ ಕೂಡ ಸಾಕಷ್ಟು ಪ್ರಯತ್ನವನ್ನು ಮಾಡಿದಂತಹ ಒಬ್ಬ ವ್ಯಕ್ತಿ ಎನ್ನುವಂತಹ ಮಾತನ್ನು ಕೇಳಿ ನಿಜಕ್ಕೂ ನನಗೆ ಬಹಳಷ್ಟು ಸಂತೋಷವೂ ಕೂಡ ಆಗಿತ್ತು ಅಂತಹ ವೈ ರಾಮಚಂದ್ರರವರು ಇವತ್ತು ನಮ್ಮ ಜೊತೆ ಇಲ್ಲ ಆದರೆ ಅವರು ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೂ ಕೂಡ ಸಾಕಷ್ಟು ಪ್ರಯತ್ನವನ್ನು ಮಾಡಿದ್ದೂ ಕೂಡ ನಾನು ಕೇಳಿದ್ದೇನೆ ಹೀಗಾಗಿ, ಅಂತಹ ಒಬ್ಬ ಆದರ್ಶ ವ್ಯಕ್ತಿ ಇವತ್ತು ನಮ್ಮನ್ನು ಬಿಟ್ಟು ಅಗಲಿರುವುದು ನಿಜಕ್ಕೂ ನಮಗೆಲ್ಲರಿಗೂ ಕೂಡ ನೋವು ತಂದಿದೆ ನಾನು ಶಾಸಕನಾಗಿರುವಂತಹ ಸಂದರ್ಭದಲ್ಲಿ ಶ್ರೀಯುತ ಎಂ ಎಲ್ ಉಸ್ತಾದ್‌ರವರು ಮಂತ್ರಿಗಳಾಗಿ ಸಾಕಷ್ಟು ಸೇವೆಯನ್ನು ಈ ರಾಜ್ಯದ ಜನತೆಗೆ ಮಾಡಿದ್ದಾರೆ ಜೊತೆಗೆ ಶ್ರೀಯುತ ಬಳವಂತರಾವ್ ದೇವರಾವ್ ಪಟೇಲ್‌ರವರೂ ಕೂಡ ಇಂದು ನಿಧನರಾಗಿದ್ದಾರೆ ಅವರ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ನಾನು ಸಾಕಷ್ಟು ತಿಳಿದುಕೊಂಡಿದ್ದೇನೆ ಅವರೂ ಕೂಡ ಇಂದು ನಮ್ಮ ಜೊತೆಯಲ್ಲಿಲ್ಲ ಹಿರಿಯರಾದ ಶ್ರೀಯುತ

ಎಂ ಬಸಪ್ಪನವರು ಅವರಿಗೆ ವಯಸ್ಸಾಗಿದ್ದರೂ ಕೂಡ ಅವರು ತಮ್ಮ ಕ್ಷೇತ್ರದ ಬಗ್ಗೆ ವಿಧಾನ ಸಭೆಯಲ್ಲಿ ಮಾಡುತ್ತಿದ್ದಂತಹ ಪ್ರಯತ್ನ ನಿಜವಾಗಿಯೂ ನಮಗೆಲ್ಲರಿಗೂ ದಾರಿ ತೋರಿಸುವ ಹಾಗಿತ್ತು ಈ ರೀತಿ ಕೆಲಸ ಮಾಡಬೇಕೆಂದು ಅವರು ಮಾಡಿದ ಪ್ರಯತ್ನ ಮಾದರಿಯಾಗಿತ್ತು ಅವರು ಅವರ ಇಳಿ ವಯಸ್ಸಿನಲ್ಲಿ ಕೂಡ ಪ್ರಯತ್ನ ಮಾಡುತ್ತಿದ್ದರು ಅಂತಹ ಬಸಪ್ಪನವರು ಕೂಡ ಇವತ್ತು ನಮ್ಮಿಂದ ಅಗಲಿದ್ದಾರೆ ಅದೇ ರೀತಿಯಲ್ಲಿ ಶ್ರೀಯುತ ಮಂಜಪ್ಪ ಉಳ್ಳಾಲ್‌ರವರು ಮತ್ತು ಹಲಗೇಗೌಡರು ಕೂಡ ಇಂದು ನಮ್ಮ ಜೊತೆಯಲ್ಲಿಲ್ಲ ಹಲಗೇಗೌಡರು ಕೂಡ ಈ ಶಾಸನ ಸಭೆಯಲ್ಲಿ ಸಾಕಷ್ಟು ಪ್ರಯತ್ನ ಮಾಡಿ ರೈತರ ಪರವಾಗಿ ಅವರು ಹೋರಾಟ ಮಾಡಿರುವುದನ್ನು ನಾವು ನೋಡಿದ್ದೇವೆ ಇವತ್ತು ಏನು ಹಿರಿಯರು ನಿಧನರಾಗಿದ್ದಾರೆ, ಅವರು ಅವರ ಜೀವನದಲ್ಲಿ ಯಾವ ಒಳ್ಳೆಯ ಕೆಲಸಗಳನ್ನು ಮಾಡಿದ್ದರು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಹ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೂ ಕೂಡ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಪರಮಾತ್ಮ ಕೊಡಲಿ ಎಂದು ಹೇಳಿ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ಇಷ್ಟ ಪಡುತ್ತೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ನಾನು ಬೆಂಬಲಿಸುತ್ತಾ, ಶ್ರೀ ವೈ ರಾಮಚಂದ್ರರವರು ಅತ್ಯಂತ ಪ್ರಭಾವಿ ಹಿಂದುಳಿದ ವರ್ಗಗಳ ನಾಯಕರು ಮತ್ತು ವಿಶೇಷವಾಗಿ ಅವರು ಹಾವನೂರು ಕಮಿಷನ್‌ನಲ್ಲಿ ಸದಸ್ಯರಾಗಿ ಕೆಲಸ ಮಾಡಿದಂತಹವರು ಶಿಕ್ಷಣ ಕ್ಷೇತ್ರದಲ್ಲಿ ಅವರು ತಮ್ಮದೇ ಆದ ಕೊಡುಗೆಯನ್ನು ಬೆಂಗಳೂರು ನಗರದಲ್ಲಿ ಕೊಟ್ಟಿರತಕ್ಕಂಥದ್ದು, ಮತ್ತು ಮೇಯರ್ ಆಗಿ ಕೂಡ ಅವರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ ಅಂತಹ ಒಬ್ಬ ಧೀಮಂತ ವ್ಯಕ್ತಿ ನಮ್ಮಿಂದ ಅಗಲಿ ಹೋಗಿದ್ದಾರೆ ಅದಕ್ಕಾಗಿ ನಾನು ಅವರಿಗೆ ತುಂಬು ಹೃದಯದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ ಎರಡನೆಯದಾಗಿ ಶ್ರೀ ಎಂ ಎಲ್ ಉಸ್ತಾದ್‌ರವರು ಇವರು ನಮ್ಮ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನವರು ಇವರೂ ಕೂಡ ಸುಮಾರು ಮೂರು ಸಾರಿ ನಮ್ಮ ಜೊತೆಯಲ್ಲಿ ಈ ಶಾಸನಸಭೆಯಲ್ಲಿ ಶಾಸಕರಾಗಿದ್ದರು ಎರಡು ಸಲ ನಮ್ಮ ಜೊತೆಯಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಅಂತಹ ಒಬ್ಬ ವ್ಯಕ್ತಿ ನಗು ನಗುತ್ತಾ ಅವರು ಅವರ ಮನೆಯ ಮುಂದೆ ವಾಕ್ ಮಾಡುವಾಗ 10 ಗಂಟೆಗೆ ಹಾರ್ಟ್ ಅಟ್ಯಾಕ್

ಆಗಿ ಅರ್ದ ಗಂಟೆಯಲ್ಲಿ ಕೊನೆಯುಸಿರೆಳೆದರು 11 00 ಗಂಟೆಗೆ ಅವರಿಗೆ ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ಆಗಲೇ ಡಿಕ್ಲೇರ್ ಆಗಿತ್ತು ಈಗಾಗಲೇ ಅವರು ಹೃದಯಾಘಾತದಿಂದ ತೀರಿಕೊಂಡಿದ್ದಾರೆ, ಅವರನ್ನು ಆಸ್ಪತ್ರೆಗೆ ತರತಕ್ಕಂತಹ ಅವಶ್ಯಕತೆ ಇಲ್ಲವೆಂದು ಡಾಕ್ಟರ್ ಹೇಳಿದರು ಪ್ರಿಮೆಚ್ಯೂರ್ ಡೆತ್ ಸಹಜವಾಗಿ ವಯಸ್ಸಾಗಿ ಸತ್ತರೆ ಮನುಷ್ಯನಿಗೆ ಅಷ್ಟು ದುಃಖವಾಗುವುದಿಲ್ಲ ಪ್ರಿಮೆಚ್ಯೂರ್ ಡೆತ್ ಅಂದಾಗ ನ್ಯಾಚುರಲಿ ಒಬ್ಬ ಮನುಷ್ಯ ಬದುಕತಕ್ಕಂತಹವನು ಮತ್ತು ಎಲ್ಲರ ಜೊತೆಯಲ್ಲಿ ಬೆರೆಯುವುದು ಮತ್ತು ಯಾವಾಗಲೂ ಹಸನ್ಮುಖಿಯಾಗಿದ್ದಂತಹ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ ಇವತ್ತು ಮಧ್ಯಾಹ್ನದ ಮೇಲೆ ಬಿಜಾಪುರದಲ್ಲಿ ಅವರ ಅಂತ್ಯ ಕ್ರಿಯೆ ಆಗುತ್ತಿದೆ ಅದಕ್ಕಾಗಿ ಈ ಸದನದ ಮುಖಾಂತರ ಅವರ ಕುಟುಂಬಕ್ಕೆ ಏನು ದೊಡ್ಡ ಹಾನಿಯಾಗಿದೆ ಆ ಹಾನಿಯನ್ನು ತುಂಬತಕ್ಕಂತಹ ಮತ್ತು ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹೇಳಿ ಈ ಸಂದರ್ಭದಲ್ಲಿ ಆಶಿಸುತ್ತೇನೆ ಬಳವಂತರಾವ್‌ರವರೂ ಕೂಡ ನಮ್ಮ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನವರು 1957ರಲ್ಲಿ ಇವರು MES ನಿಂದ ಆರಿಸಿ ಬಂದಂತಹ ಒಬ್ಬ ವ್ಯಕ್ತಿ ಅವರ ಜೊತೆ ಜೊತೆಯಲ್ಲೇ ಒಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಧೀಮಂತ ನಾಯಕರಾದ ಶ್ರೀ ಶಾಮಸುಂದರ್‌ರವರು ಕೂಡ ಆ ಸಾರಿ ಅನ್ ಅಪೋಸ್ಡ್ ಆಗಿ ಆರಿಸಿ ಬಂದಿದ್ದರು ಅಂತಹ ಕೆಲವು ವ್ಯಕ್ತಿಗಳು ಇಂದು ನಮ್ಮಿಂದ ಅಗಲಿ ಹೋಗಿದ್ದಾರೆ ಯಾರು ಈ ಸಮಾಜಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿ, ತಮ್ಮದೇ ಆದ ಕೊಡುಗೆಯನ್ನು ಕೊಟ್ಟಂತಹ ಮಹನೀಯರು, ಹಾಗೆಯೇ ಶ್ರೀ ಎಂ ಬಸಪ್ಪನವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು ಅವರೂ ಕೂಡ PWDಯಲ್ಲಿ ಚೀಫ್ ಇಂಜಿನಿಯರ್ ಆಗಿ ಕೆಲಸ ಮಾಡಿ ರಿಟೈರ್ಡ್ ಆಗಿ ಕೂಡ ಪುನ ಬಂಗಾರಪ್ಪನವರ ಪಕ್ಷದಿಂದ ಶಾಸಕರಾಗಿ ಕಡೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಕೆಲಸವನ್ನು ಮಾಡಿದ್ದರು ಅಂಥ ಒಬ್ಬ ಹಿರಿಯ ನಾಯಕರು ನಮ್ಮನ್ನು ಅಗಲಿದ್ದಾರೆ ಇವರುಗಳಲ್ಲದೇ ಶ್ರೀ ಮಂಜಪ್ಪ ಉಳ್ಳಾಲ್‌ರವರೂ ಕೂಡ ನಮ್ಮನ್ನು ಅಗಲಿದ್ದಾರೆ ಅವರೂ ಕೂಡ ಉತ್ತಮ ಶಾಸಕರಾಗಿದ್ದರು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದಂದ ವ್ಯಕ್ತಿಯಾಗಿದ್ದರು ಶ್ರೀ ಡಿ ಹಲಗೇಗೌಡರೂ ಕೂಡ ಈ ಸದನದ ಸದಸ್ಯರಾಗಿದ್ದರು ತಮಗೂ ಕೂಡ ಗೊತ್ತಿದೆ, ಇವರು ಸಹಕಾರಿ ರಂಗದಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದಂಥ

ವ್ಯಕ್ತಿಯಾಗಿದ್ದರು ಇವರಿಗೆ ಯಾವುದೇ ಒಂದು ಗಿಜಿಗಿಜಿಯ ರಾಜಕಾರಣದಲ್ಲಿ ಆಸಕ್ತಿ ಇರಲಿಲ್ಲ ಸರಳ ಜೀವಿಯಾಗಿದ್ದರು ಮತ್ತು ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿದ್ದಂದ ಇವರು ಕೂಡ ನಮ್ಮಿಂದ ಅಗಲಿದ್ದಾರೆ ಇವರೆಲ್ಲರಿಗೂ ಕೂಡ ನನ್ನ ತುಂಬು ಹೃದಯದ ಶ್ರದ್ದಾಂಜಲಿಯನ್ನು ಅರ್ಪಿಸುತ್ತೇನೆ

ಶ್ರೀ ಜೆ ಸಿ .ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) –ಮಾನ್ಯ ಅಧ್ಯಕ್ಷರೆ, ತಾವು ಇಲ್ಲಿ ತಂದಿರುವ ಸಂತಾಪ ಸೂಚನೆಗೆ ನಾನೂ ಕೂಡ ನನ್ನ ಹಾಗೂ ನನ್ನ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮಾನ್ಯ ರಾಮಚಂದ್ರರವರು, ಮಾನ್ಯ ಉಸ್ತಾದ್‌ರವರು, ಮಾನ್ಯ ಬಳವಂತರಾವ್ ದೇವರಾಯ್ ಪಟೇಲ್‌ರವರು, ಮಾನ್ಯ ಬಸಪ್ಪನವರು, ಮಾನ್ಯ ಮಂಜಪ್ಪ ಉಳ್ಳಾಲ್‌ರವರು, ಮಾನ್ಯ ಹಲಗೇಗೌಡರು, ಇವರುಗಳೆಲ್ಲಾ ನಿಧನ ಹೊಂದಿರುವುದಕ್ಕೆ ನನ್ನ ಸಂತಾಪವನ್ನು ಸೂಚಿಸಿ, ಅವರ ಕುಟುಂಬದ ಸದಸ್ಯರಿಗೆ ದುಃಖವನ್ನು ಭರಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತೇನೆ ಮಾನ್ಯ ಉಸ್ತಾದ್‌ರವರು ಮತ್ತು ಮಾನ್ಯ ಬಸಪ್ಪನವರು, ನಾವೆಲ್ಲಾ ಶಾಸಕರಾಗಿ ಬಂದಾಗ ಈ ಸಭೆಯ ಸದಸ್ಯರಾಗಿದ್ದರು ಮಾನ್ಯ ಬಸಪ್ಪನವರು ಸ್ನಾತಕೋತ್ತರ ಇಂಜಿನಿಯರಿಂಗ್ ಪದವೀಧರರಾಗಿದ್ದರು ಎಂದರೆ ಅವರನ್ನು ನೋಡಿದರೆ ಆ ರೀತಿ ಅನ್ನಿಸುತ್ತಿರಲಿಲ್ಲ ಅವರು ಒಂದು ದಿವಸ ಈ ಅಸೆಂಬ್ಲಿಯಲ್ಲಿ ನಿಂತುಕೊಂಡು ಪಿಡಬ್ಲ್ಯೂಡಿ ಇಲಾಖೆ ಬಗ್ಗೆ ಮಾತನಾಡುವಾಗ ನಾವೆಲ್ಲಾ ತಿರುಗಿ ಅವರ ಕಡೆಗೆ ನೋಡಿದೆವು, ಮಾನ್ಯ ಬಸಪ್ಪನವರು ಇಷ್ಟೊಂದು ಚೆನ್ನಾಗಿ ಮಾತನಾಡುತ್ತಿದ್ದಾರೆ ಎಂದು ತಿರುಗಿ ನೋಡಿದೆವು ಆಗಲೇ ನನಗೆ ಗೊತ್ತಾಗಿದ್ದು, ಅವರು ಇಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರಾಗಿದ್ದಾರೆಂದು ಅವರು ಬಹಳ ಸರಳ ಜೀವಿಗಳಾಗಿದ್ದರು ಮಾನ್ಯ ಉಸ್ತಾದ್‌ರವರು ಕೂಡ ಅಷ್ಟೆ ಸ್ನೇಹಿತರ ಜೊತೆ ಸ್ವೇಹಿತರಾಗಿ, ಹುಡುಗರಾಗಿದ್ದುಕೊಂಡು ಮಂತ್ರಿಗಿರಿ ಕೆಲಸವನ್ನು ಮಾಡುತ್ತಿದ್ದಂಥವರು ಅವರೆಲ್ಲರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲೆಂದು ನಾನು ಹಾರೈಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) – ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ ನಾನು ಅನೇಕ ಸ್ನಾರಿ ಇಂಥ ಸಂಧರ್ಬ ಬಂದಾಗಲೆಲ್ಲಾ ಮಾತನಾಡುವಾಗ ತಮ್ಮಲ್ಲಿ ಮನವಿ ಮಾಡಿದ್ದೇನೆ ಈ

ರೀತಿಯಲ್ಲಿ ನಿಧನ ಹೊಂದಿದಂಧ ಮಾಜಿ ಮಂತ್ರಿಗಳು, ಮಾಜಿ ಶಾಸಕರುಗಳ ಕುಟುಂಬದ ಪರಿಸ್ಧಿತಿ ಬಗ್ಗೆ ಮತ್ತು ಅವರ ವ್ಯವಸ್ಧೆ ಬಗ್ಗೆ ತಿಳಿಯಲು ಸದನ ಸಮಿತಿಯನ್ನು ಮಾಡಿ ಅದರಿಂದ ವರದಿಯನ್ನು ತರಿಸಿಕೊಂಡು, ಅವರ ಜೀವನ ಭದ್ರತೆ ಹೇಗಿದೆಯೆಂದು ತಿಳಿದುಕೊಳ್ಳುವ ಸಲುವಾಗಿ ತಾವು ಈ ಬಗ್ಗೆ ಪರಾಮರ್ಶೆ ಮಾಡಬೇಕೆಂದು ಈ ಹಿಂದೆ ಅನೇಕ ಸಾರಿ ನಾನು ಹೇಳಿದ್ದೆ ಅದನ್ನು ಮಾಡದೇ ಇದ್ದರೆ ಏನಾಗುತ್ತದೆಂದರೆ, ಇದೊಂದು ರೀತಿ ಸಂಪ್ರದಾಯವಾಗಿದೆ ಪ್ರತಿ ಸಾರಿ ಒಂದೆರಡ್ಮೂರು ಪುಟಗಳಲ್ಲಿ ಸತ್ತವರುಗಳ, ಹೆಸರುಗಳನ್ನು ಹೇಳಿ, ಅವರ ಬಗ್ಗೆ ನಾವು ಈ ಸದನದಲ್ಲಿ ಕೇವಲ ಮಾತನಾಡಿ ಹೋದರೆ ಏನೂ ಪ್ರಯೋಜನವಾದಂತಾಗುವುದಿಲ್ಲ ಆದಕಾರಣ ನಾನು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯಿಂದ ಮನವಿ ಮಾಡುತ್ತೇನೆ, ಅನೇಕ ಮಾಜಿ ಶಾಸಕರುಗಳು ತಮ್ಮ ಕೊನೆಯ ದಿನಗಳಲ್ಲಿ ಬಹಳ ತೊಂದರೆಗಳನ್ನು ಅನುಭವಿಸು ತ್ತಿರುವಂದವರು ಇದ್ದಾರೆ ಇಂಧವರ ಜೀವನ ಭದ್ರತೆ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ತಾವು ಅಧ್ಯಕ್ಷರಾದಂಧವರು ಪ್ರಾಮಾಣಿಕ ಚಿಂತನೆ ಮಾಡಬೇಕಾದುದು ತಮ್ಮ ಕರ್ತವ್ಯವೆಂದು ನಾನು ಹೇಳಬಯಸುತ್ತೇನೆ ಅದನ್ನು ಮಾಡಬೇಕೆಂದು ಮತ್ತೊಮ್ಮೆ ತಮಗೆ ನಾನು ಹೇಳಬಯಸುತ್ತೇನೆ ಮತ್ತು ಈ ಒಂದು ಸಂತಾಪ ಸೂಚನೆ ನಿರ್ಣಯಕ್ಕೆ ಸಂಒಂಧಪಟ್ಟಂತೆ ಕೆಲವೊಂದು ವಿಷಯಗಳನ್ನು ಹೇಳಬಯಸುತ್ತೇನೆ ಮಾನ್ಯ ವೈ ರಾಮಚಂದ್ರರವರು ಬೆಂಗಳೂರನ್ನು ಕಟ್ಟಿದಂಧ ಅತ್ಯಂತ ಧೀಮಂತ ಒಂದು ಶಕ್ತಿಯಾಗಿದ್ದರು ಬೆಂಗಳೂರಿನಲ್ಲಿ ಪ್ರಪ್ರಧಮವಾಗಿ ಕೆಂಪೇಗೌಡ ಪ್ರತಿಮೆ ಬಂದದ್ದು ನಿಜಲಿಂಗಪ್ಪನವರ ಕಾಲದಲ್ಲಿ ಇವರು ಮಂತ್ರಿಗಳಾಗಿದ್ದಾಗ ನನ್ನ ಮತ್ತು ಅವರ ಸ್ನೇಹ ಅತ್ಯಂತ ವಿಶ್ವಾಸಕರವಾಗಿತ್ತು ಮತ್ತು ಸ್ನೇಹಪರವಾಗಿತ್ತು ಆದರೆ ಅವರು ಚುನಾವಣೆಯಲ್ಲಿ ನಿಂತು ನನಗೆ ಅವರು ಪರಾಜಿತರಾದರು ತದನಂತರದ ದಿನಗಳಲ್ಲಿ ಅವರು ವಿಧಾನ ಪರಿಷತ್ತಿಗೆ ಹೋಗಲು ನಾನೂ ಕೂಡ ಅವರಿಗೆ ಮತ ಕೊಟ್ಟು ಅವರನ್ನು ಗೆಲ್ಲಿಸುವಂಧ, ವಿಚಾರದಲ್ಲಿ ಮುಂದಾಗಿದ್ದೆ ಇವರು ರಾಜ್ಯಕ್ಕೋಸ್ಕರವಾಗಿ ತ್ಯಾಗ ಮಾಡಿದಂಧವರಾಗಿದ್ದರು ನಿಜಲಿಂಗಪ್ಪನವರ ಅತ್ಯಂತ ಕಟ್ಟಾ ಅಭಿಮಾನಿಗಳಲ್ಲಿ ಒಬ್ಬರಾದಂಧವರು ವೈ ರಾಮಚಂದ್ರ ರವರಾಗಿದ್ದರು ಇವರು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ , ಇವೊತ್ತೇನು ನಾವು ಬೆಂಗಳೂರು ಮುಂದೆ ಹೇಗಿರಬೇಕೆಂದು ಕಾಣುತ್ತಿದ್ದೇವೆ ಅದನ್ನು ಆಗಲೇ ಹಿಂದೆಯೇ ಇವರು ಬೆಂಗಳೂರು ಮುಂದೆ ಯಾವ ರೀತಿ ಬೆಳೆಯಬೇಕು, ಯಾವ ರೀತಿ ಜನರಿಗೆ ಅನುಕೂಲ ಆಗಬೇಕೆಂದು ಹೇಳಿದ್ದರು ಅವರು

ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್‌ರವರೂ ಕೂಡ ಆಗಿದ್ದರು ಬೆಂಗಳೂರು ಸೇರಿದಂತೆ ಸಚಿವರೂ ಕೂಡ ಆಗಿದ್ದರು ನಿಜಲಿಂಗಪ್ಪನವರ ಕಟ್ಟಾ ಅಭಿಮಾನಿಗಳಲ್ಲಿ ಇವರೊಬ್ಬರಾಗಿದ್ದರು ಅದೇ ರೀತಿ ಎಂ ಎಲ್ ಉಸ್ತಾದ್‌ರವರು, ಬಳವಂತರಾವ್ ದೇವರಾಯ್ ಪಾಟೀಲ್‌ರವರು ಮತ್ತು ಬಸಪ್ಪನವರು, ಮಂಜಪ್ಪ ಉಳ್ಳಾಲ್‌ರವರು ಡಿ ಹಲಗೇಗೌಡರು, ಇವರೆಲ್ಲರ ನಿಧನದಿಂದ ಈ ರಾಜ್ಯಕ್ಕೆ ದೊಡ್ಡ ನಷ್ಟವಾಗಿದೆ ಇವರುಗಳಲ್ಲದೇ ಇನ್ನೂ ಕೆಲವರು ಪ್ರಮುಖರಾದವರು ನಿಧನರಾಗಿರುವ ಬಗ್ಗೆ ಸದನದ ಗಮನಕ್ಕೆ ತಂದಿಲ್ಲ ಸಂತಾಪ ಸೂಚನೆಯಲ್ಲಿ ಹೆಸರಾಂಥ ಕಥೆಗಾರರೂ ಹಾಗೂ ಹಿರಿಯ ಪತ್ರಕರ್ತರಾಗಿದ್ದಂಥ ಮಾನ್ಯ ಜಿ ಎಸ್ ಸದಾಶಿವರವರು ನಿಧನ ಹೊಂದಿದ್ದಾರೆ ಅವರನ್ನು ಈ ಸಂತಾಪ ಸೂಚನೆಯಲ್ಲಿ ಸೇರಿಸದೆ ಕೈ ಬಿಡಲಾಗಿದೆ ಇದು ಏತಕ್ಕೆ ಎಂದು ನನಗೆ ಅರ್ಥವಾಗಲಿಲ್ಲ ಮಾನ್ಯ ಅಧ್ಯಕ್ಷರೆ, ನಿಮ್ಮ ಕಾರ್ಯಾಲಯದವರು ಇವರ ಬಗ್ಗೆ ಮಾಹಿತಿ ತರಿಸಿ ತಕ್ಷಣ ಸೇರಿಸಬೇಕಾಗಿತ್ತು ಮಾನ್ಯ ಸದಾಶಿವರವರು ಬರಹಗಾರರಾಗಿ, ಪತ್ರಕರ್ತರಾಗಿ, ಕಥೆಗಾರರಾಗಿ ಈ ನಾಡಿಗೆ ಅಪಾರವಾದಂಥ ಸೇವೆಯನ್ನು ಮತ್ತು ಒಳ್ಳೆಯ ಕೆಲಸವನ್ನು ಮಾಡಿದಂಥವರಾಗಿದ್ದರು ಇಂಥವರ ನಿಧನದ ಬಗ್ಗೆ ನಾವು ಇಲ್ಲಿ ಸಂತಾಪವನ್ನು ಮಾಡದಿದ್ದರೆ ಎಲ್ಲೋ ಒಂದು ಕಡೆ ನಾವು ಲೋಪ ಮಾಡಿದಂತಾಗುತ್ತದೆ ಅದೇ ರೀತಿ ವೈ ಕೆ ರಾಜಗೋಪಾಲ್ ಎನ್ನುವ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವರದಿಗಾರರಾಗಿದ್ದಂಥವರು ಕೂಡ ನಿಧನ ಹೊಂದಿರುವ ಬಗ್ಗೆ ಈ ಸಂತಾಪ ಸೂಚನೆ ಪಟ್ಟಿಯಲ್ಲಿ ಸೇರಿಸಿಲ್ಲ ನಾನು ಹೇಳುವುದೇನೆಂದರೆ, ಮೊಟ್ಟಮೊದಲು ಮಹಾಜನ್ ವರದಿಯನ್ನು ಬಹಿರಂಗ ಪಡಿಸತಕ್ಕಂಥ ಕಾರ್ಯದಲ್ಲಿ ಇವರು ಮೊದಲನೆಯ ವ್ಯಕ್ತಿಯಾಗಿದ್ದರು ಮಹಾಜನ್ ವರದಿಯನ್ನು ಪ್ರಪ್ರಥಮವಾಗಿ ಬಹಿರಂಗ ಪಡಿಸಿದವರು ವರದಿಗಾರರಾಗಿದ್ದ ಮಾನ್ಯ ವೈ ಕೆ ರಾಜಗೋಪಾಲ್‌ರವರು ಅವರ ಸಾವಿನ ಅಂತ್ಯ ಹೇಗಾಯಿತೆಂದರೆ ಅದನ್ನು ಇಲ್ಲಿ ವರ್ಣನೆ ಮಾಡುವುದಕ್ಕಾಗುವುದಿಲ್ಲ ಒಬ್ಬ ಹಿರಿಯ ಪತ್ರಕರ್ತನಾಗಿ ಎಷ್ಟು ಹೀನಾಯವಾಗಿ ನೋವಿನಲ್ಲಿ ನರಳಿ ಅವರು ಚಿಂತೆಪಟ್ಟು ಸತ್ತರೆಂದರೆ ಅವರ ಕುಟುಂಬದ ಜೀವನದ ಭದ್ರತೆ ಬಗ್ಗೆ ಮತ್ತು ಅವರ ಬಗ್ಗೆ ನಾವ್ಯಾರೂ ಕಳಕಳಿಯನ್ನು ತೋರಿಸಲಿಲ್ಲ ಈ ರೀತಿ ನಾವು ನಡೆದುಕೊಂಡಿರುವ ಬಗ್ಗೆ ನಾನು ವ್ಯಾಖ್ಯಾನ ಮಾಡದೇ ಇದ್ದರೂ ಕೂಡ ನೋಡಿದವರಿಗೆ ಏನೋ ಒಂದು ರೀತಿಯಲ್ಲಿ ಮೊಸಳೆ ಕಣ್ಣೀರು, ಸತ್ತವರ ಬಗ್ಗೆ ಒಂದ್ನಾಲ್ಕು ಮಾತುಗಳನ್ನಾಡುತ್ತಾರೆನ್ನುವಂತಾಗುತ್ತದೆ ಇಂಥ ಒಂದು ಸದನದಲ್ಲಿ

ಮಾತನಾಡುವಾಗ ಇಂಥವರ ಬಗ್ಗೆ ಹಾಗೂ ಅವರ ಕುಟುಂಬದವರ ಬಗ್ಗೆ ನಾವೇನು ಮಾಡುತ್ತೇವೆ ಎನ್ನುವ ಬಗ್ಗೆ ಚಿಂತನೆ ಆಗಬೇಕು ವೈ ಕೆ ರಾಜಗೋಪಾಲ್‌ರವರಿಗೆ ಯಾರೂ ಇಲ್ಲದಿದ್ದರೂ ಕೂಡ ಅವರ ಸಾವಿನ ಕೊನೆಯ ದಿನಗಳಲ್ಲಿ ಪ್ರತಿ ನಿತ್ಯ ಅವರು ಇಲ್ಲಿಗೆ ಬಂದು ಕುಳಿತುಕೊಳ್ಳುತ್ತಿದ್ದರು, ಪ್ರತಿ ಬಾರಿ ಎಲ್ಲಾ ಪತ್ರಿಕಾ ಸಮ್ಮೇಳನಕ್ಕೆ ಬರುತ್ತಿದ್ದರು, ಪ್ರತಿ ನಿತ್ಯ ಎಲ್ಲಾ ಕಡತಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುತ್ತಿದ್ದರು, ಓದುತ್ತಿದ್ದರು, ಕಡತಗಳನ್ನು ನೋಡುತ್ತಿದ್ದರು ಅಂಥ ವ್ಯಕ್ತಿ ಅಗಲಿದಾಗ ನಾವು ಇಲ್ಲಿ ಸ್ಮರಣೆ ಮಾಡಬೇಕು ಇವರಲ್ಲದೇ ಮತ್ತೊಬ್ಬ ವ್ಯಕ್ತಿ ಬಗ್ಗೆ ತಮಗೆ ಗೊತ್ತಿರಬೇಕು, ಹೊಟ್ಟೆಪಕ್ಷದ ರಂಗಸ್ವಾಮಿಯವರು ಗಿನ್ನಿಸ್ ದಾಖಲೆಯನ್ನು ಮಾಡಿದಂಥವರು ಇವರು ಇಡೀ ರಾಜ್ಯದಲ್ಲಿ ಒಂದು ವಿಶಿಷ್ಟವಾದಂಥ ಸ್ಥಾನವನ್ನು ಪಡೆದಿದ್ದರು ವರ್ಣರಂಜಿತವಾದ ವ್ಯಕ್ತಿತ್ವವನ್ನು ಹೊಂದಿದ್ದರು ಇವರು ರಸ್ತೆ ರಸ್ತೆಗಳಲ್ಲಿ ಒಂದು ರೂಪಾಯಿಗೆ ಒಂದು ಕೆ ಜಿ ಅಕ್ಕಿಯನ್ನು ಪ್ರಪ್ರದಮವಾಗಿ ಈ ದೇಶದಲ್ಲಿ ಮಾರಿದಂಥ ವ್ಯಕ್ತಿಯಾಗಿದ್ದರು ಇಂಥ ಹೊಟ್ಟೆಪಕ್ಷದ ರಂಗಸ್ವಾಮಿಯವರ ಬಗ್ಗೆ ಕೂಡ ಇಲ್ಲಿ ಚರ್ಚೆ ಮಾಡುವುದಕ್ಕೆ ಸಂತಾಪ ಸೂಚನಾ ಪಟ್ಟಿಯಲ್ಲಿ ಸೇರಿಸಿ ಅವಕಾಶ ಕೊಡಬೇಕಾಗಿತು ಇನ್ನು ಮುಂದಾದರೂ ಮುಂದಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಇಂಥವರುಗಳ ಬಗ್ಗೆ ಗಮನ ಹರಿಸಬೇಕು ಕೇವಲ ಇಲ್ಲಿ ನಿಧನ ಹೊಂದಿದವರ ಬಗ್ಗೆ ಸಂತಾಪ ಸೂಚನೆ ಮಾಡಿದರೆ ಸಾಲದು ಇಂಥವರ ಕುಟುಂಬದವರ ಜೀವನ ಬದ್ರತೆ ಬಗ್ಗೆ ಕೂಡ ಗಮನ ಹರಿಸಬೇಕು ಮಾಜಿ ಶಾಸಕರಿರಬಹುದು, ಮಾಜಿ ಮಂತ್ರಿಗಳೆ ಇರಬಹುದು, ಒಬ್ಬ ಹಿರಿಯ ಪತ್ರಕರ್ತರಾಗಿ ಕೂಡ ಕೆಲವರು ಕೆಲಸ ಮಾಡಿ ನಿಧನ ಹೊಂದಿರುತ್ತಾರೆ ಇಂಥವರುಗಳ ಬಗ್ಗೆ ಕೂಡ ಚಿಂತನೆಯನ್ನು ತಾವು ಮಾಡಬೇಕೆಂದು ಹೇಳುತ್ತೇನೆ ತಾವು ಈ ಪಟ್ಟಿಯಲ್ಲಿ ನಿಧನ ಹೊಂದಿರುವ ಇಂಥವರುಗಳ ಬಗ್ಗೆ ಸೇರಿಸದಿದ್ದರೂ ಕೂಡ ನಾನು ಸದಾಶಿವರವರಿಗೆ ಮತ್ತು ವೈ ಕೆ ರಾಜ್‌ಗೋಪಾಲ್‌ರವರಿಗೆ ಹಾಗೂ ಹೊಟ್ಟೆಪಕ್ಷದ ರಂಗಸ್ವಾಮಿಯವರ ಹೆಸರುಗಳನ್ನೂ ಕೂಡ ಸೇರಿಸಿಕೊಂಡು ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ(ಬಾಗೆಪಲ್ಲಿ) –ಮಾನ್ಯ ಅಧ್ಯಕ್ಷರೆ, ತಾವೇನು ಇಂದು ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಮಾಡುತ್ತೇನೆ ಈ ಪಟ್ಟಿಯಲ್ಲಿ ಇತ್ತೀಚೆಗೆ ಅಪಘಾತದಲ್ಲಿ ನಿಧನ ಹೊಂದಿದ ಹರಪನಹಳ್ಳಿಯ ಶಾಸಕರಾಗಿದ್ದಂಥ ಶ್ರೀ ನಾರಾಯಣ

ದಾಸ್‌ರವರ ಹೆಸರನ್ನು ಸೇರಿಸಬೇಕಾಗಿತ್ತು ಈ ಪಟ್ಟಿಯಲ್ಲಿ ಅವರ ಹೆಸರನ್ನು ಸೇರಿಸಿಲ್ಲ ಏಕೆ ಅವರ ಹೆಸರನ್ನು ಸೇರಿಸಿಲ್ಲವೆನ್ನುವ ಬಗ್ಗೆ ನನಗೆ ಅರ್ಧವಾಗಿಲ್ಲ ಅವರು ಮಂತ್ರಿಗಳಾಗಿದ್ದಂಥವರು ನಿಧನ ಹೊಂದಿದ ಮಂತ್ರಿಗಳಾಗಿದ್ದಂದವರ ಹೆಸರನ್ನೇ ಪಟ್ಟಿಯಲ್ಲಿ ಕೈಬಿಟ್ಟಿರುವುದರಿಂದ ತಮ್ಮ ಕಾರ್ಯಾಲಯ ಕೆಲಸದ ಬಗ್ಗೆ ನಮ್ಮೆಲ್ಲರಿಗೂ ಸ್ವಲ್ಪ ಅತೃಪ್ತಿ ಬರುತ್ತದೆ ಈಗಾಗಲೇ ಮಾನ್ಯ ವಾಟಾಳ್‌ರವರು ಮಾತನಾಡುವಾಗ ಕೆಲವು ಪ್ರಮುಖರ ಹೆಸರನ್ನು ಸಂತಾಪ ಸೂಚನಾ ಪಟ್ಟಿಯಲ್ಲಿ ಕೈ ಬಿಟ್ಟಿರುವ ಬಗ್ಗೆ ಪ್ರಸ್ತಾಪ ಮಾಡಿದರು ಮಾನ್ಯ ಸದಾಶಿವ, ಮಾನ್ಯ ವೈಕೆ ರಾಜಗೋಪಾಲ್ ರವರುಗಳ ಹೆಸರನ್ನು ಸೇರಿಸಿಲ್ಲದಿರುವ ಬಗ್ಗೆ ಅವರು ಹೇಳಿದರು ಆದರೆ ಮಾನ್ಯ ನಾರಾಯಣದಾಸ್‌ರವರು ಹಿಂದೆ ಮಂತ್ರಿಗಳಾಗಿದ್ದಂಥವರು ಈ ಸದನದ ಸದಸ್ಯರಾಗಿದ್ದರು ಅವರು ಬೆಳಗಾಂ ಅಧಿವೇಶನದ ಸಮಯದಲ್ಲಿ ಸತ್ತಿದ್ದಲ್ಲ, ಹರಪನಹಳ್ಳಿ ಎಂಎಲ್‌ಎ ಮಾಜಿ ಶಾಸಕರು ಹಾಗೂ ಮಾಜಿ ಮಂತ್ರಿಗಳಾಗಿದ್ದವರು ಬೆಳಗಾಂ ಅಧಿವೇಶನ ಆದಮೇಲೆ ಮೊನ್ನೆ 15 ಅಥವಾ 20 ದಿವಸದ ಹಿಂದೆ ಅವರು accident ನಲ್ಲಿ ಸತ್ತರು ಬೆಳಗಾಂ ಅಧಿವೇಶನದ ಸಮಯದಲ್ಲಿ ಅವರು ಸತ್ತಿರಲಿಲ್ಲ ಅಂತಹ್ ಪ್ರಮುಖವಾದಂತಹ ವ್ಯಕ್ತಿಯ ಹೆಸರನ್ನು ಇವತ್ತು ಕೈಬಿಟ್ಟಿದ್ದಾರೆ ಇದು ಸರಿಯಲ್ಲ ಇವತ್ತು ಸಂತಾಪ ಸೂಚನಾ ನಿರ್ಣಯದಲ್ಲಿರುವ ಕೆಲವು ಜನರ ಪರಿಚಯ ಇಲ್ಲ ಮೊನ್ನೆ ಮಾನ್ಯ ಶಿವಾನಂದ ಪಾಟೀಲ್ ಅವರು ಧರಣಿ ಕುಳಿತುಕೊಂಡಂತಹ ಸಂದರ್ಭದಲ್ಲಿ ನಾನು ಅವರ ಜೊತೆ ಕುಳಿತುಕೊಂಡಿದ್ದಾಗ ಮಾನ್ಯ ಉಸ್ತಾದ್‌ವರು ಕೂಡ ಬಂದು ನಮ್ಮ ಜೊತೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು ಅವರು ಇಷ್ಟು ಬೇಗ ಸಾಯುತ್ತಾರೆ ಎಂದು ಗೊತ್ತಿರಲಿಲ್ಲ ದಿನಾಂಕ 25 ರಂದು ಮಾನ್ಯ ರಾಜ್ಯಪಾಲರ ಭಾಷಣ ಇದ್ದಾಗ ಧರಣಿ ಸತ್ಯಾಗ್ರಹ ಕುಳಿತಿದ್ದರು ಆದರೆ ಅವರು ದಿನಾಂಕ 31 ರಂದು ಸತ್ತಿದ್ದಾರೆ ಮಾನ್ಯ ವೈ ರಾಮಚಂದ್ರ ಅವರು ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರು ಸ್ವಾತಂತ್ರ್ಯ ಚಳುವಳಿಯ ಆಶಯಗಳು ಇವತ್ತು ಈ ದೇಶದಲ್ಲಿ ಹಿಂದಕ್ಕೆ ಸರಿಯುತ್ತಿವೆ ಆ ಆಶಯಗಳೆಲ್ಲಾ ಇವತ್ತು ನಿರಾಸೆಯಾಗುತ್ತಿವೆ ಅಂತಹ ಸಂದರ್ಭದಲ್ಲಿ ಈ ಸ್ವತಂತ್ರ ಚಳುವಳಿಯ ಸೇನಾನಿಗಳ ಕಡೆಯ ಕೊಂಡಿಗಳು ಕಳಚಿಕೊಳ್ಳುತ್ತಿವೆ ಅವರ ಆಶಯಗಳು ನಮ್ಮೆಲ್ಲರಿಗೂ ಕೂಡ ಮಾರ್ಗದರ್ಶನ ವಾಗಿರತಕ್ಕಂಥ ಆಶಯಗಳು ಆ ಆಶಯಗಳನ್ನು ಮುಂದುವರಿಸುವುದರ ಮುಖಾಂತರ ಮಾನ್ಯ ವೈ ರಾಮಚಂದ್ರ ಅವರಿಗೆ ನಿಜವಾದಂತಹ ಸಂತಾಪವನ್ನು ಸಲ್ಲಿಸಿದ ಹಾಗೆ ಆಗುತ್ತದೆಂದು ಹೇಳುತ್ತಾ ತಾವು

ತಂದಿರುವಂತಹ ಸಂತಾಪಸೂಚನ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪಸೂಚನಾ ನಿರ್ಣಯವನ್ನು ಬೆಂಬಲ ಮಾಡುತ್ತಾ, ಮಾನ್ಯ ನಾರಾಯಣದಾಸ್ ಅವರು ಸೇರಿದಂತೆ ಏಳು ಜನ ಅಗಲಿದ್ದಾರೆ ಮಾನ್ಯ ನಾರಾಯಣ್‌ದಾಸ್‌ರವರು ಈ ಸದನದ ಸದಸ್ಯರಾಗಿದ್ದರು ಅವರು ಬೆಳಗಾಂ ಅಧಿವೇಶನ ಆದಮೇಲೆ accidentನಲ್ಲಿ ಸತ್ತಿರುವುದು

ಅಧ್ಯಕ್ಷರು ನಿರ್ಣಯದಲ್ಲಿ ಸೇರಿಸಬೇಕಾಗಿತ್ತು ಅದು ಲೋಪವಾಗಿದೆ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ನಾರಾಯಣದಾಸ್ ಅವರು ಹರಪನಹಳ್ಳಿಯಿಂದ 3–4 ಬಾರಿ ಆಯ್ಕೆಯಾಗಿದ್ದರು ಅವರು ಮಂತ್ರಿ ಹಾಗೂ ಎಂಎಲ್‌ಸಿ ಕೂಡ ಆಗಿದ್ದರು ಇವತ್ತು ನಿರ್ಣಯದಲ್ಲಿ ಅವರ ಹೆಸರನ್ನು ಸೇರಿಸಿಕೊಂಡು ಬಿಡಿ ಒಳ್ಳೆಯದು ಇವತ್ತು ಏಳು ಜನ ಈ ಸದನದ ಸದಸ್ಯರಾಗಿದ್ದವರು ನಮ್ಮನ್ನು ಆಗಲಿದ್ದಾರೆ ಅವರಲ್ಲಿ ಮಾನ್ಯ ವೈ ರಾಮಚಂದ್ರ ರವರು ಸದಸ್ಯರಾಗಿದ್ದಾಗ ನಾವು ಇರಲಿಲ್ಲ ಆದರೆ ಅವರ ಪರಿಚಯ ಚೆನ್ನಾಗಿ ಇದೆ ಮಾನ್ಯ ವೈ ರಾಮಚಂದ್ರರವರು ಮಾನ್ಯ ನಿಜಲಿಂಗಪ್ಪನವರ ಸಂಪುಟದಲ್ಲಿ ಈ ರಾಜ್ಯದ ಮಂತ್ರಿಯಾಗಿದ್ದರು ಜೊತೆಗೆ ಬೆಂಗಳೂರು ನಗರದ ಮಹಾಪೌರರಾಗಿದ್ದರು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದವರು ಎಲ್ಲಾದಕ್ಕಿಂತ ಹೆಚ್ಚಾಗಿ ನಾವು ಅವರಿಂದ ಪ್ರೇರಣೆ ಪಡೆಯಬೇಕಾಗಿರುವುದೇನೆಂದರೆ ಸಾಮಾಜಿಕ ನ್ಯಾಯಕ್ಕಾಗಿ ಅವರು ಬಹಳ ಬದ್ಧರಾಗಿ ಕೆಲಸ ಮಾಡಿದವರು ಹಿಂದುಳಿದವರು , ದಲಿತರು, ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವವರು, ಶೋಷಿತರ ಪರವಾಗಿ ಮಾನ್ಯ ವೈ ರಾಮಚಂದ್ರ ರವರನ್ನು ನಾವು ಯಾವಾಗ ಭೇಟಿ ಮಾಡಿದಾಗಲೂ ಕೂಡ ಆ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದರು ಅವರು ಅವರದೇ ಆದಂತಹ ಸಂಘಟನೆ ಕಟ್ಟಿಕೊಂಡು ಅನ್ಯಾಯಕ್ಕೆ ಒಳಗಾದಂಥ ಈ ವರ್ಗದ ಜನರ ಪರವಾಗಿ ಜೀವನದುದ್ದಕ್ಕೂ ಕೂಡ ಹೋರಾಟ ಮಾಡಿಕೊಂಡು ಬಂದಂತಹ ವ್ಯಕ್ತಿ ಎಂದು ನೆನಪು ಮಾಡಿಕೊಳ್ಳಬೇಕಾಗುತ್ತದೆ ಅಲ್ಲದೆ ಅವರು ಒಬ್ಬ ಶಿಕ್ಷಣ ತಜ್ಞರು ಕೂಡ ಆಗಿದ್ದರು ಅವರು ಅನೇಕ ಶಿಕ್ಷ ಣ ಸಂಸ್ಥೆಗಳ ಅಧ್ಯಕ್ಷರು ಆಗಿದ್ದರು ಅವರು ಸ್ವತ ಶಿಕ್ಷಣ ಸಂಸ್ಥೆಗಳನ್ನು ಕೂಡ ನಡೆಸುತ್ತಿದ್ದರು ಈಗಲೂ ಕೂಡ ಸಾಯಿಬಾಬಾ ವಿದ್ಯಾ ಸಂಸ್ಥೆ ಎಂದು ರಾಜಾಜಿನಗರದಲ್ಲಿ ಒಂದು ವಿದ್ಯಾಸಂಸ್ಥೆ

ಇದೆ ಅದನ್ನು ಈಗಲೂ ಕೂಡ ಅವರ ಮಕ್ಕಳು ನೋಡಿಕೊಳ್ಳುತ್ತಿದ್ದಾರೆ ಅವರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ ಜನರಿಗೆ ಒಳ್ಳೆಯ ಶಿಕ್ಷಣ ಸಿಗಬೇಕು ಎನ್ನುವಂತಹ ಕಾಳಜಿಯನ್ನು ಇಟ್ಟುಕೊಂಡಿದ್ದವರು ಜನಪರ ಕಾಳಜಿ ಇದ್ದಂತಹ ವ್ಯಕ್ತಿ ಇವತ್ತು ನಮ್ಮನ್ನಗಲಿದ್ದಾರೆ ಅವರು 85 ವರ್ಷಗಳ ದೀರ್ಘಕಾಲ ಬದುಕಿದ್ದರು ಅವರ ನೆನಪು ಸದಾ ಚಿರಾಯುವಾಗಿರಲಿ ಎಂದು ಹೇಳುತ್ತಾ ಅವರಿಂದ ನಮಗೆ ಸ್ಪೂರ್ತಿ ಮತ್ತು ಅವರಿಗೆ ಇದ್ದಂತಹ ಬದ್ಧತೆ ನಮಗೆ ಬರಲಿ ಎಂದು ಹೇಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ

ಮಾನ್ಯ ಎಂ ಎಲ್ ಉಸ್ತಾದ್ ರವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದವರು ಅವರು ಮೂರು ಬಾರಿ ಬಿಜಾಪುರದಿಂದ ಆರಿಸಿಬಂದು ಶಾಸಕರಾಗಿದ್ದರು ಮತ್ತು ಮಂತ್ರಿಗಳಾಗಿದ್ದರು ವಕೀಲರೂ ಕೂಡ ಆಗಿದ್ದರು ನಾವು ಆ ಕಡೆ ಕುಳಿತುಕೊಂಡಿದ್ದಾಗ ಅವರು ಸದನದಲ್ಲಿ ಈ ಕಡೆ ಹಿಂದುಗಡೆ ಕುಳಿತುಕೊಂಡು ಬಹಳ ತಮಾಷೆಯಾಗಿ ಮಾತನಾಡುತ್ತಿದ್ದರು ಬಹಳ ಎದ್ದೆದ್ದು ಹೆಚ್ಚು ಗಲಾಟೆ ಮಾಡುತ್ತಿದ್ದರು ಬಹಳ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು ಅವರು ಅನೇಕ ಬಾರಿ ಸದನವನ್ನು ನಗೆಗಡಲಿನಲ್ಲಿ ತೇಲಿಸುವಂತಹ ಕೆಲಸವನ್ನು ಕೂಡ ಮಾಡುತ್ತಿದ್ದರು ಮಾನ್ಯ ರಮೇಶ್‌ಕುಮಾರ್ ರವರು ಸಭಾಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಅವರು ಶಾಸಕರಾಗಿದ್ದರು ಮತ್ತು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ ಅವರೂ ಕೂಡ ನಮ್ಮನ್ನು ಅಗಲಿದ್ದಾರೆ ಅವರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಬಯಸುತ್ತೇನೆ

ಮಾನ್ಯ ಬಳವಂತರಾವ್ ದೇವರಾವ್ ಪಟೇಲ್ ರವರು ಕೂಡ ನಿಧನರಾಗಿದ್ದಾರೆ ಅವರ ಪರಿಚಯ ನಮಗೆ ಇಲ್ಲ ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲಿ ಎಂದು ಬಯಸುತ್ತೇನೆ

ಮಾನ್ಯ ಎಂ ಬಸಪ್ಪನವರು ಕೂಡ ಜನತಾ ದಳದ ಶಾಸಕರಾಗಿದ್ದರು ಅವರು ಕೆಸಿಪಿ ಯಿಂದ ಬಂದು ನಮ್ಮ ಜನತಾ ದಳಕ್ಕೆ ಸೇರಿಕೊಂಡರು ಅವರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರು ಅವರು ಹೊರಗಡೆ ದೇಶದಿಂದ ಡಿಗ್ರಿ ಪಡೆದುಕೊಂಡು ಬಹಳ ಉತ್ತಮವಾಗಿ ಕೆಲಸ ಮಾಡಿ ಈ ಸಮಾಜಕ್ಕೆ ಬಹಳಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ ಅವರು ನಿಧನರಾಗಿದ್ದಾರೆ ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲಿ ಎಂದು ಬಯಸುತ್ತೇನೆ

ಮಾನ್ಯ ಮಂಜಪ್ಪ ಉಳ್ಳಾಲ್ , ದಕ್ಷಿಣ- ಕನ್ನಡ ಜಿಲ್ಲೆಯವರು ಇವರು ಕೂಡ ನಮ್ಮನ್ನು ಅಗಲಿದ್ದಾರೆ

ಮಾನ್ಯ ಡಿ ಹಲಗೇಗೌಡ ರವರು ಮಂಡ್ಯಾ ಜಿಲ್ಲೆಯವರು ಬಹಳ ಆತ್ಮೀಯ ಪರಿಚಯವಿದ್ದವರು ಬಹಳ ಸರಳ ಹಾಗೂ ಸೌಮ್ಯವಾದಂತಹ ವ್ಯಕ್ತಿ ಎಲ್ಲರ ಜೊತೆ ಸ್ನೇಹಭಾವ ಇಟ್ಟುಕೊಂಡಂತಹ ಸಜ್ಜನಿಕೆಯ ವ್ಯಕ್ತಿ ಅಗಲಿದ್ದಾರೆ ಅವರು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು ಮಂಡ್ಯದಲ್ಲಿ ಡಿಸಿಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ನಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಅವರು ಎರಡು ಬಾರಿ ಸದನದ ಸದಸ್ಯರಾಗಿದ್ದರು ಇಂತಹ ಒಬ್ಬ ಅತ್ಯಂತ ಹಿರಿಯ ವ್ಯಕ್ತಿ ಅಗಲಿದ್ದಾರೆ ಅವರ ಅತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಆಶಿಸುತ್ತೇನೆ

ಇನ್ನು ಮಾನ್ಯ ನಾರಾಯಣ ದಾಸ್ ರವರು ಎಂಎಲ್‌ಎ ಆಗಿದ್ದರು ಮೇಲ್ಮನೆಯ ಸದಸ್ಯರಾಗಿದ್ದರು ಹಾಗೂ ಮಂತ್ರಿಯಾಗಿದ್ದರು ಇವರು ಪರಿಶಿಷ್ಟ ಜಾತಿಗೆ ಸೇರಿದಂತಹ ಒಬ್ಬ ಸಜ್ಜನ ವ್ಯಕ್ತಿ ಅಪಾರ ಅನುಭವ ಇದ್ದವರು ಅವರೂ ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ ಅವರ ಆತ್ಮಕ್ಕೂ ಕೂಡ ಚಿರಶಾಂತಿ ದೊರಕಲಿ ಎಂದು ಆಶಿಸುತ್ತಾ ಇವತ್ತು ನೀವು ತಂದಿರುವಂತಹ ಸಂತಾಪ ಸೂಚನ ನಿರ್ಣಯವನ್ನು ಬೆಂಬಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಕೆ ಎಂ ಕೃಷ್ಣಮೂರ್ತಿ(ಕಡೂರು) ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು ಮಾನ್ಯ ಸದಸ್ಯರುಗಳಾದ ವೈ ರಾಮಚಂದ್ರ ರವರು, ಎಂ ಎಲ್ ಉಸ್ತಾದ್ ರವರು, ಬಳವಂತರಾವ್ ದೇವರಾವ್ ಪಾಟೀಲ್‌ರವರು, ಎಂ ಬಸಪ್ಪನವರು, ಮಂಜಪ್ಪ ಉಳ್ಳಾಲ್‌ರವರು ಹಾಗೂ ಡಿ ಹಲಗೇಗೌಡ ಇವರುಗಳು ಈ ಸದನದ ಸದಸ್ಯರಾಗಿ, ಸಚಿವರಾಗಿ ಹಲವಾರು ರೀತಿಯಲ್ಲಿ ಈ ರಾಜ್ಯಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ ಹುಟ್ಟು ಆಕಸ್ಮಿಕ ಸಾವು ನಿಶ್ಚಯ ಮಾನ್ಯ ರಾಮಚಂದ್ರರವರು ಬೆಂಗಳೂರು ನಗರದಲ್ಲಿ ಒಂದು ಒಳ್ಳೆಯ ಕುಟುಂಬದಲ್ಲಿ ಹುಟ್ಟಿ ಕಾನೂನು ಪದವಿಯನ್ನು ಮಾಡುವುದರ ಜೊತೆಗೆ ಅವರು ಜೀವನದಲ್ಲಿ ಸಕ್ರಿಯವಾಗಿ ರಾಜಕಾರಣವನ್ನು ಆರಿಸಿಕೊಂಡರು ಅವರು ಚಿಕ್ಕಪೇಟೆಯಿಂದ ಕಾರ್ಪೋರೇಟರ್ ಆಗಿ, ಈ ಮಹಾನಗರ ಪಾಲಿಕೆಯ ಮೇಯರ್ ಆಗಿ, ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿಯಿಂದ ಕುಡಿಯುವ ನೀರನ್ನು ತರುವಂತಹ ಕೆಲಸವನ್ನು ಮಾಡಿ ಸರ್ ಎಂ ವಿಶ್ವೇಶ್ವರಯ್ಯನವರ

ಪ್ರೀತಿಗೆ ಪಾತ್ರರಾಗಿದ್ದರು ಇವರು ಹಲವಾರು ಕ್ಷೇತ್ರಗಳಲ್ಲಿ ಮಾಡಿದ ಸೇವೆಗಳು ಚಿರಸ್ಮರಣೀಯವಾದದ್ದು ಅವರ ದಿಟ್ಟತನ ಮತ್ತು ಅವರು ತೆಗೆದುಕೊಂಡಂತಹ ತೀರ್ಮಾನಗಳು, ಅವರನ್ನು ರಾಜ್ಯ ವಿಧಾನ ಸಭೆಗೆ ಜನ ಆಯ್ಕೆ ಮಾಡಿದರು ಇದಕ್ಕೂ ಮುಂಚೆ 1942ರಲ್ಲಿ ಗಾಂಧೀಜಿಯವರ ಸಿದ್ಧಾಂತಕ್ಕೆ ಒಳಗಾಗಿ "ಕ್ವಿಟ್ ಇಂಡಿಯಾ ಚಳುವಳಿ"ಯಲ್ಲಿ ಭಾಗವಹಿಸಿ, ಜೈಲು ವಾಸವನ್ನು ಸಹ ಅನುಭವಿಸಿದರೆಂಬ ವಿಚಾರವನ್ನು ನಾವು ಕೇಳಿದ್ದೇವೆ ಅವರು ರಾಜಕೀಯವಾಗಿ ಹಿಂದುಳಿದ ವರ್ಗಗಳ ನಾಯಕರಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗೆ ದುಡಿದಂತಹ ಹಲವಾರು ನಿದರ್ಶನಗಳು ಸಾಕಷ್ಟು ಇವೆ ಅದೇ ರೀತಿಯಲ್ಲಿ ಶ್ರೀ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಸಚಿವರಾಗಿ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿದರು 1967ರಲ್ಲಿ ಜವಹರಲಾಲ್ ನೆಹರು ಭವನದ ಉಪಾಧ್ಯಕ್ಷರಾಗಿ, ಇವತ್ತು ಕಬ್ಬನ್‌ಪಾರ್ಕಿನ ಬಾಲಭವನದಲ್ಲಿ ಮಕ್ಕಳಿಗೆಂದು ಪುಟ್ಟಾಣಿ ರೈಲು ಏನು ಇದೆ, ಅದು ಅವರು ಮಾಡಿಕೊಟ್ಟ ಸಾಧನೆ ಎಂದು ಹೇಳಿದರೆ ತಪ್ಪಾಗುವುದಿಲ್ಲ ಅದೇ ರೀತಿಯಲ್ಲಿ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ, ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ನಾಯಕರಾಗಿದ್ದವರಿಗೆ ತಮ್ಮನ್ನು ಗುರುತು ಮಾಡಿಕೊಂಡಿದ್ದರು ಇಂತಹ ವ್ಯಕ್ತಿ ಇವತ್ತು ಇಲ್ಲ, ಅದಕ್ಕೆ ಅವರಿಗೆ ಸಂತಾಪ ಸೂಚನೆಯನ್ನು ಹೇಳುತ್ತೇನೆ ಇನ್ನು ಶ್ರೀ ಎಂ ಬಸಪ್ಪನವರ ಬಗ್ಗೆ ಹೇಳುವುದಾದರೆ, ನಾವು ಮೊದಲನೆಯ ಬಾರಿ ವಿಧಾನ ಸಭೆಗೆ ಆಯ್ಕೆಯಾದಂತಹ ಸಂದರ್ಭದಲ್ಲಿ, ಅವರು ನಿವೃತ್ತ ಇಂಜಿನಿಯರ್ ಆಗಿ, ಅವರು ರಾಜಕೀಯ ರಂಗವನ್ನು ಪ್ರವೇಶ ಮಾಡಿ, 10ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು ಅದೇ ರೀತಿಯಲ್ಲಿ ಶ್ರೀ ಎಂ ಎಲ್ ಉಸ್ತಾದ್‌ರವರು ಕೂಡ ಮಾನ್ಯ ಎಸ್ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು ಮಾನ್ಯ ಎಸ್ ಎಂ ಕೃಷ್ಣರವರ ಸರ್ಕಾರದಲ್ಲೂ ಶಾಸಕರಾಗಿ ಹಲವಾರು ಕ್ಷೇತ್ರಗಳಲ್ಲಿ ಕೆಲಸವನ್ನು ಮಾಡಿದರು ನಾವು ಒಮ್ಮೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಪ್ರವಾಸ ಹೋದಂತಹ ಸಂದರ್ಭದಲ್ಲಿ, ಅವರು ಯಾವಾಗಲೂ ತನ್ನ ಸಹದ್ಯೋಗಿಗಳೊಂದಿಗೆ, ನಗುನಗುತ್ತಾ ತಮ್ಮ ಸುಖ ದು ಖಗಳನ್ನು ಹಂಚಿಕೊಳ್ಳುವಂತಹ ಮಾತುಗಳನ್ನು ಅವರು ಆಡುತ್ತಿದ್ದರು ಆದುದರಿಂದ ಇವತ್ತು ಏನು ನಿಧನ ಹೊಂದಿರುವವರಿಗೆ ಸಂತಾಪ ಸೂಚನೆಯನ್ನು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಬಂಡೆಪ್ಪ ಕಾಶಂಪೂರ್(ಬೀದರ್) ಸನ್ಮಾನ್ಯ ಅಧ್ಯಕ್ಷರೆ, ತಾವು ಇಂದಿನ ಸಭೆಯಲ್ಲಿ ತಂದಿರುವ ಸಂತಾಪ ಸೂಚನೆಯನ್ನು ಸ್ವಾಗತ ಮಾಡುತ್ತಾ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ ಇಂದು ನಿಧನ ಹೊಂದಿರುವ ಶ್ರೀ ವೈ ರಾಮಚಂದ್ರರವರು, ಶ್ರೀ ಎಂ ಎಲ್ ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಶ್ರೀಎಂ ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು, ಹಾಗೂ ಡಿ ಹಲಗೇಗೌಡರವರು, ಇವರೆಲ್ಲರಿಗೂ ಶ್ರದ್ಧಾಂಜಲಿಯನ್ನು ಹೇಳುತ್ತೇನೆ ಇದರಲ್ಲಿ ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು ನಮ್ಮ ಬೀದರ್ ಜಿಲ್ಲೆಯವರಾಗಿದ್ದು, ಇವರು ಖಾನಪುರದ ಭಾಲ್ಕಿಯಲ್ಲಿ ಜನಿಸಿದರು 1952ರಲ್ಲಿ ಪುರಸಭೆಯ ಸದಸ್ಯರಾಗಿದ್ದರು, ಹಾಗೂ 1957ರಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು, ಈ ಕ್ಷೇತ್ರದಲ್ಲಿ ಬಹಳಷ್ಟು ಸಾಧನೆಯನ್ನು ಮಾಡಿ, ವಕೀಲರು ಆಗಿ ಇವರು ರಜಾಕ್‌ರ ಕಾಲದಲ್ಲಿ ಅವರದೇ ಆದಂತಹ ಒಂದು ವಿಶೇಷವಾದ ಹೋರಾಟದಲ್ಲಿ ಮೂಂಚೂಣಿಯಲ್ಲಿದ್ದರು ನಮ್ಮ ಹೈದರಾಬಾದ್ ಕರ್ನಾಟಕ ಸ್ವತಂತ್ರ ಆಗಿ, ನಮಗೆ ಒಂದು ವರ್ಷದ ನಂತರ ಸ್ವಾತಂತ್ರ್ಯ ಸಿಕ್ಕಿತು ಆಗ ನಿಜಾಮರ ಕೈಯಲ್ಲಿ ಆಡಳಿತವಿದ್ದಾಗ ರಜಾಕ್‌ರ ಜೊತೆಗೆ ಹೋರಾಟ ಮಾಡಿದವರಲ್ಲಿ ಇವರು ಒಬ್ಬರಾಗಿದ್ದರು ಹಾಗಾಗಿ ಇಂತಹ ಒಬ್ಬ ಮಹಾತ್ಮ ವ್ಯಕ್ತಿ ಬೀದರ್ ಜಿಲ್ಲೆಯಲ್ಲಿ ನ್ಯಾಯವಾದಿಗಳಾಗಿ, ಮತ್ತೆ ನ್ಯಾಯಾಧೀಶರಾಗಿ, ಅವರು ಸೇವೆಯನ್ನು ಸಲ್ಲಿಸಿ, ಅಪಾರವಾದಂತಹ ಗೌರವವನ್ನು ಹೊಂದಿದ್ದಂತಹ ವ್ಯಕ್ತಿಯಾಗಿದ್ದರು ಅಂತಹ ವ್ಯಕ್ತಿಗೆ ನನ್ನ ಪರವಾಗಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ ಎಂದು ಹೇಳುತ್ತಾ, ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಆ ಒಂದು ಶಕ್ತಿಯನ್ನು ಕೊಡಲಿ ಎಂದು ನಾನು ಈ ಸಭೆಯ ಮೂಖಾಂತರ ಕೋರುತ್ತೇನೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಔರಾದ್) ಸನ್ಮಾನ್ಯ ಆಧ್ಯಕ್ಷರೆ, ತಾವು ಇಂದು ತಂದಿರುವ ಸಂತಾಪ ಸೂಚನೆಯನ್ನು ಅನುಮೋದಿಸುತ್ತೇನೆ ಇಂದು ನಿಧನ ಹೊಂದಿರುವಂತಹ ಮಾಜಿ ಸಚಿವರಾಗಿದ್ದ ಶ್ರೀ ವೈ ರಾಮಚಂದ್ರರವರು, ಹಾಗೂ ಶ್ರೀ ಎಂ ಎಲ್ ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಇವರು ನಮ್ಮ ಔರಾದ್ ತಾಲ್ಲೂಕಿನವರು, ಬಹಳ ಒಳ್ಳೆಯವರು, ಅನುಭವಿಗಳು, ಇವರು ರಜಾಕ್‌ರವರ ಕಾಲದಲ್ಲೂ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಇವರು ಒಮ್ಮೆ ಮುನ್ಸಿಫ್‌ರು ಆಗಿದ್ದರು ಇವರು ಸಾಮಾಜಿಕ ಕೆಲಸಗಳನ್ನು ಬಹಳ ಮಾಡಿದ್ದಾರೆ ಇವರು ಒಳ್ಳೆಯ

(B) 25205

ಕೆಲಸಗಾರರರು ಆಗಿದ್ದರು, ಮತ್ತು ಒಳ್ಳೆಯವರು ಆಗಿದ್ದರು ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಅವರ ಕುಟುಂಬ ವರ್ಗದವರಿಗೂ ಶಾಂತಿ ಸಿಗಲಿಯೆಂಬ ಮಾತನ್ನು ಹೇಳುತ್ತೇನೆ ಇನ್ನು ಶ್ರೀ ಎಂ ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು ಹಾಗೂ ಶ್ರೀ ಡಿ ಹಲಗೇಗೌಡರು, ಶ್ರೀ ಹಲಗೇಗೌಡರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಇದ್ದರು, ನಾನು ಕೂಡ ಅವರೊಂದಿಗೆ ಇದ್ದೆ, ನಾನು ಅವರೊಂದಿಗೆ ಡೈರಕ್ಟರ್ ಆಗಿ ಕೂಡ ಇದ್ದೆ ಅವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಅವರು ಎರಡು ಬಾರಿ ವಿಧಾನ ಸಭೆಗೂ ಬಂದಿದ್ದಾರೆ ಇವರು ಬಹಳ ಒಳ್ಳೆಯವರು, ಅನುಭವಿಗಳು, ಮತ್ತೆ ಬಹಳ ಸಾತ್ವಿಕರು ಆಗಿದ್ದರು ಇವರ ಆತ್ಮಕ್ಕೂ ಶಾಂತಿ ಸಿಗಲಿಯೆಂದು ಹೇಳುತ್ತಾ, ನನಗೆ ಮಾತನಾಡಲು ಅನುಮತಿ ನೀಡಿದ್ದಕ್ಕಾಗಿ ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಪಿ ಟಿ ಪರಮೇಶ್ವರ ನಾಯಕ(ಹರಪನಹಳ್ಳಿ) ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡನೆ ಮಾಡಿರುವಂತಹ ಸಂತಾಪ ಸೂಚನೆಯಲ್ಲಿ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರವನ್ನು 1972ರಲ್ಲಿ, 1978 ಹಾಗೂ 1994ರಲ್ಲಿ ಆಯ್ಕೆಯಾಗಿದ್ದಂತಹ ಶ್ರೀ ಡಿ ನಾರಾಯಣ ದಾಸ್‌ರವರು, ಇವರು ಮಂತ್ರಿಗಳಾಗಿ ಕೂಡ ಕೆಲಸವನ್ನು ಮಾಡಿದ್ದರು ಅವರ ಹೆಸರನ್ನು ಇಂದಿನ ಸಂತಾಪ ಸೂಚನೆಯಲ್ಲಿ ಕೈ ಬಿಟ್ಟಿದ್ದೀರಿ ಇವರು ಒಮ್ಮೆ ಎಂ ಎಲ್ ಸಿ ಯಾಗಿ ಕೂಡ ಕೆಲಸವನ್ನು ಮಾಡಿದ್ದಾರೆ ಇವರ ಹೆಸರನ್ನು ಸಂತಾಪ ಸೂಚನೆಯಲ್ಲಿ ಪ್ರಸ್ತಾಪ ಮಾಡಿಲ್ಲ ಇದನ್ನು ತಾವು ಪ್ರತ್ಯೇಕವಾಗಿ ಪ್ರಸ್ತಾಪ ಮಾಡುತ್ತಿರೋ, ಅಧವಾ ಇದರಲ್ಲೆ ಸೇರಿಸುವುದಕ್ಕೆ ಅನುಮತಿಯನ್ನು ಕೊಡುತ್ತಿರೋ, ಎಂಬುದು ಹೇಳಬೇಕು

ಅಧ್ಯಕ್ಷರು ಇವರ ಹೆಸರನ್ನು ಇಂದಿನ ಪಟ್ಟಿಯಲ್ಲೆ ಸೇರಿಸಿ ಮಾಡಿಯೆಂದು ಹೇಳಿದ್ದಾರಲ್ಲಾ ನೀವು ಮಾತನಾಡಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಈ ವಿಷಯನ್ನು ಮಾನ್ಯ ಜಿ ವಿ ಶ್ರೀರಾಮರೆಡ್ಡಿರವರು ಗಮನ ಸೆಳೆದ ತಕ್ಷಣವೇ ಇದು ಲೋಪವಾಗಿದೆಯೆಂದು, ಅದನ್ನು ಸೇರಿಸುತ್ತೇವೆಂದು ಹೇಳಿದ್ದಾರೆ ಆದುದರಿಂದ ತಾವು ಸಂತಾಪವನ್ನು ವ್ಯಕ್ತಪಡಿಸಬಹುದು

ಶ್ರೀ ಪಿ ಟಿ ಪರಮೇಶ್ವರ ನಾಯಕ ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಡಿ ನಾರಾಯಣದಾಸ್‌ರವರು ಹಿಂದುಳಿದ ವರ್ಗದ ಒಬ್ಬ ಮೇರು ನಾಯಕತ್ವವನ್ನು ಹೊಂದಿರುವಂತಹ ಹಾಗೂ ತುಳಿತಕ್ಕೆ ಒಳಗಾಗಿರುವಂತಹ ಸಮಾಜಕ್ಕೆ ಧ್ವನಿಯನ್ನು ನೀಡಿರುವಂತಹವರು ಅವರು ಕಳೆದ ಒಂದೂವರೆ ತಿಂಗಳ ಕೆಳಗೆ ರಸ್ತೆ ಅಪಘಾತದಲ್ಲಿ ಸಾವನ್ನು ಅಪ್ಪಿರುವಂತಹ ವಿಚಾರವನ್ನು ಇವತ್ತಿನ ಸಂತಾಪ ಸೂಚನೆಯ ಪಟ್ಟಿಯಲ್ಲಿ ಸೇರಿಸುತ್ತೇವೆಂಬ ಮಾತನ್ನು ಹೇಳಿದ್ದೀರಿ ಇವರು ಸಹ ಹರಪನಹಳ್ಳಿಯ ಮೀಸಲು ಕ್ಷೇತ್ರಕ್ಕೆ ತಮ್ಮದೇ ಆದಂತಹ ಅಪಾರವಾದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ ಇವರು ಮೂರು ಬಾರಿ ವಿಧಾನ ಸಭಾ ಸದಸ್ಯರಾಗಿ ಒಮ್ಮೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿ, ಇವತ್ತು ನಮ್ಮನ್ನು ಅಗಲಿರುವುದರಿಂದ ನಮ್ಮ ತಾಲ್ಲೂಕಿಗೆ ಸಾಕಷ್ಟು ನೋವು ಆಗಿದೆಯೆಂಬ ಮಾತನ್ನು ಹೇಳಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಅದೇ ರೀತಿಯಲ್ಲಿ ತಾವು ಮಂಡನೆ ಮಾಡಿರುವಂತಹ ಶ್ರೀ ವೈ ರಾಮಚಂದ್ರರವರು, ಶ್ರೀ ಎಂ ಎಲ್ ಉಸ್ತಾದ್‌ರವರು, ಶ್ರೀ ಬಳವಂತರಾವ್ ದೇವರಾವ್ ಪಟೇಲ್‌ರವರು, ಶ್ರೀ ಎಂ ಬಸಪ್ಪನವರು, ಶ್ರೀ ಮಂಜಪ್ಪ ಉಳ್ಳಾಲ್‌ರವರು, ಶ್ರೀ ಡಿ ಹಲಗೇಗೌಡರು, ಇವರೆಲ್ಲರಿಗೂ ಸಂತಾಪವನ್ನು ಸೂಚಿಸುತ್ತೇನೆ ತಾವು ಮಂಡನೆ ಮಾಡಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ ಮಾನ್ಯ ಅಧ್ಯಕ್ಷರೆ, ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರು ಮಾತನಾಡುವಾಗ ಹರಪನಹಳ್ಳಿ ಶಾಸಕರು ಎಂದು ಪ್ರಸ್ತಾಪ ಮಾಡಿದರು ಅವರು ಮಾಜಿ ಶಾಸಕರು ಹಾಗೂ ಸಚಿವರಾಗಿ ಇದ್ದವರು ಎಂದು ತಮ್ಮ ಗಮನಕ್ಕೆ ತರುತ್ತೇನೆ ಇಷ್ಟು ಹೇಳಿ ನಮ್ಮ ಮಾತನ್ನು ಮುಗಿಸುತ್ತೇನೆ

ಶ್ರೀ ವೈಜನಾಥ ಪಾಟೀಲ್(ಚಿಂಚೋಳಿ) ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರುವ ಸಂತಾಪ ಸೂಚನೆಯಲ್ಲಿ ವೈ ರಾಮಚಂದ್ರ, ಎಂ ಎಲ್ ಉಸ್ತಾದ್, ಬಳವಂತರಾವ್ ದೇವರಾವ್ ಪಟೇಲ್, ಎಂ ಬಸಪ್ಪ, ನಾರಾಯಣದಾಸ್, ಮಂಜಪ್ಪ ಉಳ್ಳಾಲ್, ಡಿ ಹಲಗೇಗೌಡ ಇವರುಗಳಿಗೆ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದನ್ನು ನಾನು ಸಮರ್ಧಿಸುತ್ತಾ, ಬಳವಂತರಾವ್ ಖಾನಾಪುರ್‌ಕರ್ ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ ಅವರು ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನವರು ಅವರು ಭಾಲ್ಕಿಯಿಂದ ಆರಿಸಿ ಬಂದಿದ್ದರು ಎಂದು ಸಂತಾಪ ಸೂಚನಾ ನಿರ್ಣಯದಲ್ಲಿ ತೋರಿಸಿದ್ದೀರಿ ಆದರೆ ಅವರು ಭಾಲ್ಕಿಯಿಂದಲ್ಲ, ಔರಾದ್‌ನಿಂದಲೇ ಆರಿಸಿ

ಬಂದಿದ್ದರು ಆ ಕಾಲಕ್ಕೆ ಅದು ಔರಾದ್ ಮತ್ತು ಭಾಲ್ಕಿ ಎಂದು double member constituency ಆಗಿತ್ತು ಅದನ್ನು ಸರಿ ಮಾಡಬೇಕು ಅವರ ಬಗ್ಗೆ ಹೇಳುವುದಾದರೆ, ಅವರು ಒಳ್ಳೆಯ ವಕೀಲರು ಅವರು ಮೊದಲು ವಕಾಲತ್ತು ಮಾಡಿಕೊಂಡಿದ್ದರು ಆನಂತರ, ನಾನು Bidar Bar Associationಗೆ ಸೇರಿದಾಗ ಬಹಳಷ್ಟು ಸಲ ನಾನಷ್ಟೇ ಅಲ್ಲ, ಎಷ್ಟೋ ಜೂನಿಯರ್‌ಗಳು ಅವರ ಸಲಹೆಗಳನ್ನು ಪಡೆಯುತಿದ್ದರು ಅವರು ಒಳ್ಳೆಯ ಸಜ್ಜನರು, ಬಹಳ ಪ್ರಾಮಾಣಿಕರು ಅವರು ಸ್ವತಂತ್ರವಾಗಿ ಆರಿಸಿ ಬಂದಿದ್ದರು ಇನ್ನು, ನಾರಾಯಣದಾಸ್‌ರವರ ಬಗ್ಗೆ ಹೇಳಬೇಕಾದರೆ, ಅವರು 1994ರಲ್ಲಿ ಎಂ ಎಲ್ ಸಿ ಚುನಾವಣೆಗೆ ನಿಂತಿದ್ದರು ಆಗ ಅದು ಬಳ್ಳಾರಿ ಜಿಲ್ಲೆಯಲ್ಲಿತ್ತು ಅವರು ಒಳ್ಳೆಯ ಕಾರ್ಯಕರ್ತರು ಅವರು ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವುದನ್ನು ನೋಡುವ ಅವಕಾಶ ನನಗೆ ಸಿಕ್ಕಿತ್ತು ಮೊದಲಿಗೆ, ತಾವು ಅವರ ಬಗ್ಗೆ ಸಂತಾಪ ಸೂಚನಾ ನಿರ್ಣಯದಲ್ಲಿ ಸೇರಿಸುವುದನ್ನು ಮರೆತರೂ ಕೂಡ, ನಂತರ ಸೇರಿಸುವುದಾಗಿ ಹೇಳಿದ್ದೀರಿ ಅದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ಸಮರ್ಧಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಮಾನ್ಯ ಡಿ ನಾರಾಯಣದಾಸ್‌ರವರು ಈ ಸದನದ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರು ಅವರು 01-07-1939ರಲ್ಲಿ ಬಳ್ಳಾರಿ ಜಿಲ್ಲೆಯ ಕಮಲಾಪುರದಲ್ಲಿ ಜನಿಸಿದ್ದು, ಅವರು ಬಿ ಎ ಪದವೀಧರರಾಗಿದ್ದರು ಶ್ರೀಯುತರು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಜನತಾ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಶ್ರೀಯುತರು 5, 6 ಮತ್ತು 10ನೇ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು ಅಲ್ಲದೇ, 1989ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ ಶ್ರೀಯುತರು ದಿನಾಂಕ 29-12-2006ರಂದು ಅಪಘಾತದಿಂದ ನಿಧನ ಹೊಂದಿರುವುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸಬಯಸುತ್ತೇನೆ

ಈಗ ಮೃತರ ಗೌರವಾರ್ಧ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಮೃತರ ಗೌರವಾರ್ಧ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು

ಅಧ್ಯಕ್ಷರು ಈಗ ಪ್ರಶ್ನೋತ್ತರಗಳು

2 ನೂತನ ಸಚಿವರ ಪರಿಚಯ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು, ನೂತನವಾಗಿ ಸಚಿವರಾದಂಧ ಸನ್ಮಾನ್ಯ ಆಲಂಗೂರು ಶ್ರೀನಿವಾಸ್‌ರವರು, ಸನ್ಮಾನ್ಯ ಜಿ ಟಿ ದೇವೇಗೌಡರವರು ಹಾಗೂ ಸನ್ಮಾನ್ಯ ಮಹದೇವ ಪ್ರಸಾದ್‌ರವರು ನೂತನವಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಸದನಕ್ಕೆ ಬಂದಿದ್ದಾರೆ ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಕೇಳುತ್ತಿದ್ದೇನೆ, ಮಹಿಳೆಯರಿಗೆ ಏಕೆ ಸಚಿವ ಸ್ಥಾನವನ್ನು ಕೊಡಲಿಲ್ಲ ಎಂದು ನಾನು ಕೇಳುತ್ತಿದ್ದೇನೆ ಮಹಿಳೆಯರ ಪರವಾಗಿ ಮಾತನಾಡತಕ್ಕಂಥ ಈ ಸರ್ಕಾರ, ಒಬ್ಬ ಮಹಿಳೆಯನ್ನಾದರೂ ಮಂತ್ರಿಯನ್ನಾಗಿ ಮಾಡಿದ್ದರೆ, ಅದು ನಿಜಕ್ಕೂ ಆದರ್ಶವಾಗುತ್ತಿತ್ತು, ಆಗ ಮಹಿಳಾ ಕುಲಕ್ಕೆ ಒಂದು ಒಳ್ಳೆಯ ಗಂಭೀರ ಇರುತ್ತಿತ್ತು ಆದರೆ ತಾವು ಮಹಿಳೆಯರನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೀರಿ ತಮ್ಮ ಪಕ್ಷಕ್ಕೆ ಮಹಿಳೆಯರ ಗುರುತನ್ನೇ ಇಟ್ಟುಕೊಂಡಿರತಕ್ಕಂಥವರು ತಾವು

ಅಧ್ಯಕ್ಷರು ಮಾನ್ಯ ವಾಟಾಳ್ ನಾಗರಾಜ್‌ರವರೇ ಈಗ ಪ್ರಶ್ನೋತ್ತರಕ್ಕೆ ಹೋಗೋಣ ಸದನ ಪ್ರಾರಂಭವಾಗಿ ಈಗಾಗಲೇ ಒಂದು ಗಂಟೆಯಾಯಿತು

ಶ್ರೀ ವಾಟಾಳ್ ನಾಗರಾಜ್ ಒಬ್ಬ ಮಹಿಳೆಗೂ ನೀವು ಅವಕಾಶ ಕೊಟ್ಟಿಲ್ಲ ಈ ರಾಜ್ಯದ ಮಹಿಳೆಯರು ಬೇಡವೇ? ಇದರಿಂದ ಮನಸ್ಸಿಗೆ ನೋವಾಗುತ್ತದೆ ಮಾನ್ಯ ಪ್ರಕಾಶ್‌ರವರೇ ಇದಕ್ಕೆ ತಾವು ಉತ್ತರವನ್ನು ಹೇಳಬೇಕು ಏಕೆ ಮಹಿಳೆಯರನ್ನು ತೆಗೆದುಕೊಳ್ಳಲಿಲ್ಲ? ಮಹಿಳೆಯರಿಗೆ ಏಕೆ ಅವಕಾಶ ಕೊಡಲಿಲ್ಲ? ಅದಕ್ಕೆ ಕಾರಣವೇನು? ಎನ್ನುವುದನ್ನು ನೀವು ಹೇಳಬೇಕು

ಅಧ್ಯಕ್ಷರು ಆಯಿತು, ಕುಳಿತುಕೊಳ್ಳಿ ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ ಈಗ ಪ್ರಶ್ನೋತ್ತರ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ನಾವು Adjournment Motion move ಮಾಡಿದ್ದೇವೆ ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ, ಅತಿವೃಷ್ಟಿಯಿದೆ, ಅದನ್ನು ಮೊದಲು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ

ಅಧ್ಯಕ್ಷರು ಅದನ್ನು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳೋಣ

ಶ್ರೀ ಆರ್ ವಿ ದೇಶಪಾಂಡೆ ಎಲ್ಲ ಕಲಾಪಗಳನ್ನು ಬಿಟ್ಟು Adjournment Motion ತೆಗೆದುಕೊಳ್ಳಬೇಕಾಗುತ್ತದೆ

ಅಧ್ಯಕ್ಷರು ಪ್ರಶ್ನೋತ್ತರವಾದ ಮೇಲೆ ಶೂನ್ಯವೇಳೆಯಲ್ಲಿ ತಾವು ಆ ವಿಷಯವನ್ನು ಪ್ರಸ್ತಾಪ ಮಾಡಿ, ನಾನು ನಿಮಗೆ ಆಗ ಅವಕಾಶ ಕೊಡುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಸಾಮಾನ್ಯವಾಗಿ ಏನು ಕಲಾಪವಿರುತ್ತದೆ, ಅದನ್ನು ಬಾಕಿ ಇಟ್ಟು Adjournment Motion ತೆಗೆದುಕೊಳ್ಳಲಾಗುತ್ತದೆ ಅದಕ್ಕೆ ಸರ್ಕಾರವೂ ಒಪ್ಪಿಕೊಳ್ಳಬಹುದು ರಾಜ್ಯದಲ್ಲಿ ಬಹಳ ಭೀಕರವಾದ ಬರಗಾಲವಿದೆ ರೈತರು ಕಷ್ಟದಲ್ಲಿದ್ದಾರೆ, ದನಕರುಗಳು ಕಷ್ಟದಲ್ಲಿವೆ

ಅಧ್ಯಕ್ಷರು ಅವುಗಳನ್ನೆಲ್ಲ consider ಮಾಡತಕ್ಕಂಧ ಪರಿಪಾರ ಆಯಿತು, ನಂತರ ಅದಕ್ಕೆ ಅವಕಾಶ ಕೊಡುತ್ತೇನೆ ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ

3 ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮೊರಾರ್ಜಿ ವಸತಿ ಶಾಲೆಯನ್ನು ಪ್ರಾರಂಭಿಸುವುದು

31 (212) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸೊರಬ ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿಶಾಲೆಗೆ ಮಂಜೂರಾದ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆಯೇ ,

ಆ) ಮೊರಾರ್ಜಿ ವಸತಿ ಶಾಲೆಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ,

ಇ) ವಿಳಂಬಕ್ಕೆ ಕಾರಣವೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಸೊರಬ ತಾಲ್ಲೂಕಿನ ಹಿರೇಮಾಗಡಿ ಗ್ರಾಮದ ಸರ್ವೆ ನಂ 7ರಲ್ಲಿ ಒಟ್ಟು 24 ಎಕರೆ 37 ಗುಂಟೆ ಜಮೀನನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗಾಗಿ ಕಾಯ್ದಿರಿಸಲಾಗಿದೆ ಆದರೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಾಯ್ದಿರಿಸಿದ ಜಮೀನನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ತೆಗೆದುಕೊಂಡಿರುವುದಿಲ್ಲ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸೊರಬ ತಾಲ್ಲೂಕಿಗೆ ಮಂಜೂರಾಗಿರುವುದಿಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಎಸ್ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೇ, ವಸತಿ ಶಾಲೆಗಾಗಿ ಈಗಾಗಲೇ ಜಾಗವನ್ನು ಕಾಯ್ದಿರಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ 2ವರ್ಷಗಳ ಹಿಂದೆಯೇ ಸುಮಾರು 24 ಎಕರೆಗಳಷ್ಟು ಜಾಗವನ್ನು ಅದಕ್ಕೆಂದೇ ಕಾಯ್ದಿರಿಸಲಾಗಿದೆ ಸೊರಬ ತಾಲ್ಲೂಕಿಗೆ ವಸತಿ ಶಾಲೆಯನ್ನು ಕೊಡಬೇಕೆಂದು ಇತ್ತೀಚೆಗೆ ನಾವು ಚರ್ಚೆ ಮಾಡಿದಾಗ, ಮಾನ್ಯ ಸಚಿವರು ಇದನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದರೂ ಕೂಡ ಇನ್ನೂ ಮಂಜೂರು ಮಾಡಿರುವುದಿಲ್ಲ ಜಾಗಗಳು ಇಲ್ಲದೇ ಇರತಕ್ಕಂಥ ಕಡೆಗಳಲ್ಲಿ ವಸತಿ ಶಾಲೆಗಳನ್ನು ಕೊಡುತ್ತಾರೆ ನಂಜುಂಡಪ್ಪನವರ ವರದಿ ಪ್ರಕಾರವಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ ನಂಜುಂಡಪ್ಪನವರ ವರದಿ ಪ್ರಕಾರವಾಗಿಯೂ ಕೊಡುವುದಿಲ್ಲ ಯಾವುದಾದರೂ ಒಂದು ಮಾನದಂಡವನ್ನಿಟ್ಟುಕೊಂಡು ವಸತಿ ಶಾಲೆಗಳನ್ನು ಮಾಡಬೇಕಾಗುತ್ತದೆ ಇಲ್ಲದಿದ್ದರೆ, ಅಲ್ಲಿ ನಾವು ಜಾಗ ಕಾಯ್ದಿರಿಸಿದರೂ ಪ್ರಯೋಜನವಾಗುವುದಿಲ್ಲ, ನಂಜುಂಡಪ್ಪ ವರದಿ ಪ್ರಕಾರವೂ ಆಗುವುದಿಲ್ಲ, ಜನಸಂಖ್ಯೆಯ ಆಧಾರದ ಮೇಲೆಯೂ ಆಗುವುದಿಲ್ಲವೆಂದರೆ ಹೇಗೆ? ನಮ್ಮ ತಾಲ್ಲೂಕಿನಲ್ಲಿ ಮುಂದೆ ವಸತಿ ಶಾಲೆಯನ್ನು ಮಾಡುತ್ತೇವೆ ಎಂದೂ ಹೇಳಿಲ್ಲ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಉತ್ತರವನ್ನು ಕೊಡುತ್ತಾರೆ ಇದು ತುಂಬಾ ನಿರಾಶಾದಾಯಕವಾದ ಉತ್ತರ ಎಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುತ್ತೇನೆ

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದುದು ನಿಜವಿದೆ ಬರುವ ವರ್ಷದಲ್ಲಿ ಅದನ್ನು ಪ್ರಾರಂಭ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಕೆ ಗೋಪಾಲ ಪೂಜಾರಿ ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ನನ್ನ ಕ್ಷೇತ್ರದಲ್ಲಿ ವಸತಿ ಶಾಲೆಯನ್ನು ಪ್ರಾರಂಭ ಮಾಡಲು ಅನುಮತಿ ನೀಡಿತ್ತು ಅದಕ್ಕೆ ಬೇಕಾದ ಜಾಗವನ್ನೂ ಸಹ ನಾವು ಕಾಯ್ದಿರಿಸಿದ್ದೇವೆ ಆ ಖಾಸಗಿ ಜಾಗಕ್ಕೆ ಬಾಡಿಗೆಯನ್ನು ಕೊಡಲೂ ಪ್ರಾರಂಭ ಮಾಡಿದ್ದೇವೆ ಆದರೂ ಅದನ್ನು ಪ್ರಾರಂಭ ಮಾಡಲು ಸರ್ಕಾರ ಇಲ್ಲಿಯವರೆಗೂ ಯಾವ ರೀತಿಯಲ್ಲೂ-ಮುಂದೆ ಬರಲಿಲ್ಲ ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಬಿ ಎಸ್ ಹೊರಟ್ಟಿ ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮಾಹಿತಿ ಪಡೆದು ನಂತರ ಉತ್ತರವನ್ನು ಹೇಳಲಾಗುವುದು

ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಪೂರೈಸುವುದು

32 (218) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ಹುಚ್ಚುನಾಯಿ ಕಡಿತಕ್ಕೆ ಚುಚ್ಚುಮದ್ದನ್ನು ಖರೀದಿಸಲು ವಾರ್ಷಿಕ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು , (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಆರ್ ಅಶೋಕ್ (ಆರೋಗ್ಯ ಸಚಿವರು)

ಅ) ಹುಚ್ಚುನಾಯಿ ಕಡಿತದ ಚುಚ್ಚುಮದ್ದನ್ನು ಖರೀದಿಸಲು ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ 2006–07ನೇ ಸಾಲಿನಲ್ಲಿ ಸರ್ಕಾರಿ ಔಷಧ ಮಳಿಗೆಗೆ ಒಟ್ಟು ರೂ 58 00 ಕೋಟಿ ಅನುದಾನ ಮತ್ತು ವೈದ್ಯಕೀಯ ಶಿಕ್ಷಣ ಅಡಿಯಲ್ಲಿ 18 56 ಕೋಟಿ ರೂ ಬಿಡುಗಡೆಯಾಗಿದೆ ಈ ಅನುದಾನದಿಂದ ರಾಜ್ಯದ ವಿವಿಧ ಆಸ್ಪತ್ರೆಗಳಿಂದ ಬಂದಂತ ಬೇಡಿಕೆಗೆ ಅನುಗುಣವಾಗಿ ರೂ 3,39,75,076/–ಗಳ ಹುಚ್ಚುನಾಯಿ ಕಡಿತದ (ರ್ಯಾಬಿಪೂರ್) ಔಷಧಿಯನ್ನು ಖರೀದಿಸಿ ವಿತರಿಸಲಾಗಿದೆ

(ಜಿಲ್ಲಾವಾರು ಸರಬರಾಜು ಮಾಡಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ)

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಇವರ ಪ್ರಶ್ನೆ ಸಂಖ್ಯೆ 218ಕ್ಕೆ ಭಾಗಶಃ ಉತ್ತರ

ಅನುಬಂಧ

	ಜಿಲ್ಲೆಯ ಹೆಸರು	ಜಿಲ್ಲಾವಾರು ಸರಬರಾಜು ಮಾಡಿರುವ ಔಷಧಿಯ ಪ್ರಮಾಣ ಮತ್ತು ಮೊತ್ತ ರೂ ಗಳಲ್ಲಿ					
		2005–06		2006–07			
		ಪ್ರಮಾಣ ವಯಲ್ ಗಳಲ್ಲಿ	ದರ 207 41/– ಮೊತ್ತ	ಪ್ರಮಾಣ ವಯಲ್ ಗಳಲ್ಲಿ	ದರ 169 50/– ಮೊತ್ತ	ಪ್ರಮಾಣ	ದರ 207 41/– ಮೊತ್ತ
1	ಬೆಂಗಳೂರು ಗ್ರಾಂ	4725	980012–00	5050	855975–00	1750	362967–00
2	ಬೆಂಗಳೂರು ನಗರ	24213	5022018–00	19860	3366270–00	6870	1424907–00
3	ಬಾಗಲಕೋಟೆ	3600	746676–00	2420	410190–00	930	192891–00
4	ಬೆಳಗಾಂ	10325	2141508–00	8900	1508550–00	2650	549636–00
5	ಬಳ್ಳಾರಿ	3550	736305–00	2480	420360–00	2040	423116–00
6	ಬಿಜಾಪುರ	7225	1560760–00	3980	674610–00	1670	346374–00
7	ಬೀದರ್	5025	1042235–00	2310	391545–00	710	147261–00
8	ಚಾಮರಾಜನಗರ	6350	1317053–00	2920	494940–00	2480	514376–00
9	ಚಿಕ್ಕಮಂಗಳೂರು	4675	969641–00	2940	498330–00	2790	578674–00
10	ಚಿತ್ರದುರ್ಗ	8125	1685206–00	3560	603420–00	2705	561044–00
11	ದಾವಣಗೆರೆ	7005	1452907–00	2180	369510–00	1030	213632–00

12	ಧಾರವಾಡ	4300	891863–00	1880	318660–00	1660	344300–00
13	ಗದಗ್	4750	985197–00	2000	339000–00	1800	373338–00
14	ಗುಲ್ಬರ್ಗ	4969	1030620–00	1480	250860–00	1270	263410–00
15	ಹಾಸನ	11725	2431882–00	7081	1200229–00	4845	1004901–00
16	ಹಾವೇರಿ	3000	622230–00	2600	440700–00	2300	477043–00
17	ಕಾರವಾರ	7725	1602242–00	3420	579690–00	2405	498821–00
18	ಕೋಲಾರ	16450	3411894–00	5560	942420–00	7530	1561797–00
19	ಕೊಪ್ಪಳ	5950	1234089–00	2360	400020–00	2180	452153–00
20	ಮಡಿಕೇರಿ	8125	1685206–00	4460	755970–00	3110	645045–00
21	ಮಂಗಳೂರು	12488	25901360–00	1639	277970–00	1180	244743–00
22	ಮಂಡ್ಯ	7725	1602242–00	3423	580198–00	2850	591118–00
23	ಮೈಸೂರು	27797	5765375–00	15800	2678100–00	4555	944753–00
24	ರಾಯಚೂರು	5475	1135569–00	1260	213570–00	2070	429338–00
25	ಶಿವಮೊಗ್ಗ	8425	1747429–00	6197	1050391–00	4470	927123–00
26	ತುಮಕೂರು	9825	2037803–00	5220	884790–00	4090	848307–00
27	ಉಡುಪಿ	5475	1135569–00	2760	467820–00	2070	429338–00
28	ಯಾದಗಿರ್	2925	606674–00	1260	213570–00	990	205335–00
	ಒಟ್ಟು	**232247**	**48170350**	**125000**	**21187500**	**75000**	**15555750**
					@ Rs. 169.40	**125000**	**21187500**
					@ Rs 207 41	**75000**	**15555750**
					Total Vial	**200000**	**36743250**

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಈ ಬಾರಿ ಕಳೆದ ಬಾರಿಗಿಂತ ಬಹಳ ಕಡಿಮೆ ಔಷಧವನ್ನು ಸಪ್ಲೈ ಮಾಡಿದ್ದಾರೆ 2005–06ರಲ್ಲಿ 5,475 ವಯಲ್‌ಗಳನ್ನು ಕೊಟ್ಟಿದ್ದರೆ, ಈ ವರ್ಷ ಕೇವಲ 2,760 ವಯಲ್‌ಗಳನ್ನು ಕೊಟ್ಟಿದ್ದಾರೆ ನಮ್ಮಲ್ಲಿ ಬಹಳ ಸಮಸ್ಯೆ ಉದ್ಭವವಾಗಿದೆ ಹುಚ್ಚುನಾಯಿ ಕಡಿತದಿಂದ ಕೆಲವರು ನಿಧನ ಹೊಂದಿದ್ದಾರೆ ನಾನು District Medical Officer ಹತ್ತಿರ ಕೇಳಿದಾಗ ಅವರು ಔಷಧಿ ಸಪ್ಲೈ ಇಲ್ಲ ಎಂದು ಹೇಳುತ್ತಾರೆ ಅದಕ್ಕಾಗಿ ನೀವು ಹೆಚ್ಚು ಸಪ್ಲೈಯನ್ನು ಮಾಡಿ, ಎಲ್ಲ ಐಹೆಚ್‌ಸಿಗಳಲ್ಲಿ ಹೆಚ್ಚಿನ ಸ್ಟಾಕನ್ನು ಇಡುವ ವ್ಯವಸ್ಥೆಯಾಗಬೇಕು ಇದನ್ನು ನಿಯಂತ್ರಣ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಔಷಧದ ವಿಷಯ ನಂತರದ್ದು ಆಯಿತು ಅದನ್ನು ತಡೆಗಟ್ಟಲು ಏನು ಕ್ರಮವನ್ನು ಕೈಗೊಂಡಿದ್ದೀರಿ?

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ರ್‍ಯಾಬಿಪೂರ್ ಔಷದಿಯನ್ನು ಅಂದರೆ ಹುಚ್ಚುನಾಯಿ ಕಡಿದಾಗ ಮನುಷ್ಯರಿಗೆ ನೀಡುವಂಥ ಔಷಧಿಯನ್ನು ಎಲ್ಲ ಕಡೆಗಳಲ್ಲಿ ಸರಿಯಾದಂಥ ರೀತಿಯಲ್ಲಿ ವಿತರಣೆ ಮಾಡಬೇಕು ಎಂದು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದರೂ ಸಹ ಕೆಲವು ಕಡೆಗಳಲ್ಲಿ ತೊಂದರೆಯಾಗಿದೆ ತಾವು ಹೇಳುತ್ತಿರುವಂಥ ಉಡುಪಿ ಜಿಲ್ಲೆಗೆ ನಾವು ಈಗಾಗಲೇ ಸುಮಾರು 15 ಲಕ್ಷ ರೂ ಗಳ ಮೆಡಿಸನ್‌ಅನ್ನು ಈಗಾಗಲೇ ಕೊಟ್ಟಿದ್ದೇವೆ 9 ಲಕ್ಷ ರೂ ಗಳ ಮೆಡಿಸನ್‌ಅನ್ನು ನಮ್ಮ Drug Logistics Societyಯಿಂದಲೇ ಕೊಟ್ಟಿದ್ದೇವೆ, ಉಳಿದ 6 ಲಕ್ಷ ರೂ ಗಳನ್ನು ಅಲ್ಲಿನ users amountನಿಂದ ಖರ್ಚು ಮಾಡಿದ್ದಾರೆ ಒಟ್ಟಾರೆಯಾಗಿ ಅಲ್ಲಿಗೆ ನಾವು 15 ಲಕ್ಷ ರೂ ಗಳನ್ನು ನಾಯಿ ಕಡಿತದ ಔಷಧಿಗಾಗಿ ಅಲ್ಲಿ ನಾವು ಕೊಟ್ಟಿದ್ದೇವೆ ಆದರೆ ಕೆಲವು ಕಡೆಗಳಲ್ಲಿ ಆಸ್ಪತ್ರೆಗಳ ವೈದ್ಯರು, ನಮ್ಮಲ್ಲಿ ಔಷಧಿಯಿಲ್ಲ ಎನ್ನುವ ಸಬೂಬನ್ನು ಹೇಳುತ್ತಾರೆ ಎನ್ನುವುದು ನಮ್ಮ ಗಮನಕ್ಕೆ ಬಂದ ಮೇಲೆ ನಾವು 2 ತಿಂಗಳ ಹಿಂದೆಯೇ ಒಂದು circularಅನ್ನು ಕಳುಹಿಸಿದ್ದೇವೆ ಹುಚ್ಚು ನಾಯಿ ಕಚ್ಚಿದಂಥ ಸಂದರ್ಭ ಬಂದಾಗ, ಅಂಥವರನ್ನು ಯಾವುದೇ ಸಂದರ್ಭದಲ್ಲಿ ಔಷಧಿಯಿಲ್ಲ ಎಂದು ಹೇಳಿ ವಾಪಸ್ಸು ಕಳುಹಿಸಬಾರದು, ಅಲ್ಲಿರತಕ್ಕಂದ users amount ಅನ್ನು ಖರ್ಚು ಮಾಡಬೇಕು ಎಂದು ಹೇಳಿದ್ದೇವೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿರುವಂಥ ಸರ್ಕಾರೀ ಆಸ್ಪತ್ರೆಗಳಲ್ಲಿ ಸಾಕಷ್ಟು ಅಂಥ ಅಮೌಂಟ್ ಇದೆ ಕೆಲವು ಕಡೆಗಳಲ್ಲಿ 3 ಕೋಟಿ ರೂ ಗಳವರೆಗೂ ಆ ಅಮೌಂಟ್ ಇದೆ ಆ

ಹಣವನ್ನು ಈ ಔಷಧಿ ಖರೀದಿಗೋಸ್ಕರ ಉಪಯೋಗ ಮಾಡಬೇಕು ಎನ್ನುವ circularಅನ್ನು ಕಳುಹಿಸಿದ್ದೇವೆ ಈಗಾಗಲೇ ಬೆಂಗಳೂರಿನಲ್ಲಿ ಈ ತರಹ ಆಗಿದ್ದ ಘಟನೆಯನ್ನು ನಾವು ನೋಡಿದ್ದೇವೆ ಇನ್ನು ಮುಂದೆ ಎಲ್ಲೂ ಸಹ ಈ ತರಹ ಘಟನೆ ಆಗಬಾರದು

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟು ಹುಚ್ಚು ನಾಯಿಗಳಿವೆ? ಈ ಹುಚ್ಚು ನಾಯಿಗಳು ಯಾವ್ಯಾವ ರೀತಿ, ಯಾವ್ಯಾವ ದರ್ಜೆಯ ನಾಯಿಗಳು ಇರುತ್ತವೆ ಎನ್ನತಕ್ಕ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಎರಡನೆಯದಾಗಿ, ಬೆಂಗಳೂರು ನಗರದಲ್ಲಿ 20 ನಾಯಿಗಳು ಒಂದು ಹೆಣ್ಣು ಮಗುವಿನ ಮಾಂಸವನ್ನು ರಸ್ತೆಯಲ್ಲಿಯೇ ಕಿತ್ತು ತಿಂದ ಘಟನೆ ಇತಿಹಾಸಲ್ಲೇ ಈ ತರಹ ನಡೆದಿಲ್ಲ ಇದು ಎಲ್ಲಿಯೂ ಯಾವ ಚರಿತ್ರೆಯಲ್ಲೂ ನಡೆದಿರಲ್ಲಿಲ್ಲ ಈ ಪರಿಸ್ಥಿತಿಯಾಗಿರುವಾಗ, ನಾನು ನಿಜಕ್ಕೂ ವೈಯಕ್ತಿಕವಾಗಿ ನಿಮ್ಮನ್ನು ದೂಷಿಸುತ್ತಿಲ್ಲ ನಮ್ಮ ರಾಜ್ಯದ ಜನತೆ ಯಾರಾದರೂ ತಲೆ ತಗ್ಗಿಸಲೇಬೇಕು ಈ ಘಟನೆ ಬೇರೆ ದೇಶದಲ್ಲಿ ನಡೆದಿದ್ದರೆ ಅಲ್ಲಿನ ಸರ್ಕಾರ ರಾಜೀನಾಮೆ ಕೊಡುತ್ತಿತ್ತು ನಮ್ಮ ದೇಶದಲ್ಲಿ ಈ ರೀತಿ ಎಂದೂ ನಡೆದಿಲ್ಲ ಬೆಂಗಳೂರು ನಗರದಲ್ಲಿ ಒಂದು ಹೆಣ್ಣು ಮಗುವನ್ನು ಕಚ್ಚಿ ಮಾಂಸವನ್ನು ರಸ್ತೆಯಲ್ಲಿ ಒಂದೊಂದು ನಾಯಿ ತಿನ್ನುತ್ತಿರುವಂಥ ಈ ವ್ಯವಸ್ಥೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇದು ಆಗದ ರೀತಿ ಮಾಡುವಂಥ ವ್ಯವಸ್ಥೆ ಏನಿದೆ? ಇದರ ಬಗ್ಗೆ ತಾವು ಬಹಳ ಪ್ರಮುಖವಾಗಿ ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ

ಅಧ್ಯಕ್ಷರು ಮಾನ್ಯ ಅಶೋಕ್‌ರವರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು ಎಲ್ಲರೂ ಇದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೋದರೆ ಆಗುವುದಿಲ್ಲ ಈಗ ಅವರು ಉತ್ತರ ಹೇಳಲಿ

(ಗೊಂದಲ)

ಶ್ರೀ ನೆ ಲ ನರೇಂದ್ರ ಬಾಬು ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ

ಅಧ್ಯಕ್ಷರು ನಾನು ಅವರನ್ನು ಕರೆದಿಲ್ಲ ನೀವು ಉತ್ತರ ಹೇಳಿ ಉತ್ತರ ಹೇಳುವುದಕ್ಕೆ ನಾನು ಮಂತ್ರಿಗಳನ್ನು ಕರೆದಿದ್ದೇನೆ ನಾನು ಅವರಿಗೆ ಅವಕಾಶ

ಕೊಟ್ಟಿಲ್ಲ ಅವರು ಎದ್ದು ನಿಂತು ಕೇಳುತ್ತಾರೆ, ಏನು ಮಾಡುವುದಕ್ಕಾಗುತ್ತದೆ? ನಿಮ್ಮನ್ನು ಕರೆದಿದ್ದೇನೆ ನೇರವಾಗಿ ಉತ್ತರ ಹೇಳಿ

ಶ್ರೀ ನೆಲ ನರೇಂದ್ರ ಬಾಬು ಸ್ವಾಮಿ, ನಾಯಿಗಳ ಕಾಟ ಜಾಸ್ತಿಯಾಗಿದೆ

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ತಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ

ಶ್ರೀ ನೆಲ ನರೇಂದ್ರ ಬಾಬು ಚುಕ್ಕೆ ಗುರುತಿನ ಪ್ರಶ್ನೆಗೂ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲವೇ?

ಅಧ್ಯಕ್ಷರು ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ ಮುಗಿಸಬೇಕು

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ 2003ರ ಗಣತಿ ಪ್ರಕಾರ 56,154 ಬೀದಿ ನಾಯಿಗಳಿವೆ ಎಂದು People for animals ಸಂಸ್ಥೆಯವರು ನಡೆಸಿರುವ ಸಮೀಕ್ಷೆಯಿಂದ ನಮಗೆ ತಿಳಿದು ಬಂದಿದೆ ಅದಾದ ಮೇಲೆ, ಬೀದಿ ನಾಯಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಇದಕ್ಕೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುವ ಮುಖಾಂತರ ಇದರ ಸಂಖ್ಯೆಯನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆ 4 ಸಂಸ್ಥೆಗಳನ್ನು ಗುರುತು ಮಾಡಿ ಇದನ್ನು ಮಾಡುತ್ತಿದೆ ಇದಾದಮೇಲೆ, ಈಗಿನ ಗಣತಿ ಪ್ರಕಾರ ಶೇಕಡಾ 21ರಷ್ಟು ಕಡಿಮೆಯಾಗಿದೆ ಎಂಬ ಮಾಹಿತಿ ನಮಗೆ ಬಂದಿದೆ ಮತ್ತೆ, ತಾವು ಹೇಳಿದ ಹಾಗೆ, ಇದನ್ನು ಬಹಳ ಯಶಸ್ವಿಯಾಗಿ ತಡೆಗಟ್ಟುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುವುದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ನಾವು ಆದೇಶ ಮಾಡಿದ್ದೇವೆ ಅಷ್ಟಿದ್ದರೂ ಸಹ, 2001ನೇ ಸಾಲಿನಂತೆ, Prevention of Cruelty to Animals Act, 1960 ಮತ್ತು ಅದರಡಿ ಇರುವಂಥ ABC Dogs Rules 2001 ಕೇಂದ್ರ ಸರ್ಕಾರದ ಏನು ನಿಯಮವಿದೆ, ಈ Act ಪ್ರಕಾರ ಆರೋಗ್ಯವಂತ ನಾಯಿಗಳನ್ನು ಸಾಯಿಸುವುದಕ್ಕೆ ಅವಕಾಶವಿರುವುದಿಲ್ಲ ಆದ್ದರಿಂದ, ಸಂತಾನ ಹರಣ ಮಾಡುವ ಮುಖಾಂತರ ಇದನ್ನು ಕಡಿಮೆ ಮಾಡಬೇಕೆನ್ನುವ ಉದ್ದೇಶದಿಂದ ನಾವು ಈಗಾಗಲೇ ಮಾಡಿದ್ದೇವೆ ಮೊನ್ನೆ ಚಂದ್ರಾ ಲೇಔಟ್‌ನಲ್ಲಿ ಆದಂಥ ಘಟನೆ ನಿಜಕ್ಕೂ ನಮಗೆಲ್ಲ ನೋವಿನ ಸಂಗತಿಯಾಗಿದೆ ಅದಾದಮೇಲೆ, ರಾತ್ರಿ ಪಾಳಿಯಲ್ಲಿ ವಿಶೇಷ ಕಾರ್ಯಾಚರಣೆ ಮಾಡಿ ಚಂದ್ರಾ ಬಡಾವಣೆಯಲ್ಲಿ ಸುಮಾರು 1,274 ಸಮಸ್ಯಾತ್ಮಕ ನಾಯಿಗಳನ್ನು ದಯಾ ಮರಣಕ್ಕೊಳ

ಪಡಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಇದನ್ನು 4 ಸರ್ಕಾರೇತರ ಸಂಸ್ಥೆಗಳು ಮಾಡುತ್ತಿವೆ 18 ವಾಹನಗಳು ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ನಾಯಿಗಳನ್ನು ನಿಯಂತ್ರಣ ಮಾಡುವುದಕ್ಕೋಸ್ಕರ ಯಾವ ನಾಯಿಗಳು ಆರೋಗ್ಯವಿಲ್ಲ ಅಂದರೆ accident ಆಗಿರುವಂಥವು ಅಥವಾ ಕಾಯಿಲೆ ಬಂದಂಥ ನಾಯಿಗಳನ್ನು ಕೊಲ್ಲಬೇಕೆಂಬ ಆದೇಶವನ್ನು ಮಾಡಲಾಗಿದೆ ಇದರಿಂದ ನಿಯಂತ್ರಣ ಮಾಡಬೇಕೆನ್ನುವ ಉದ್ದೇಶವಿದೆ ಇಡೀ ರಾಜ್ಯದಲ್ಲಿ ಮುಂದಿನ ವರ್ಷದ ಆಯವ್ಯಯದಲ್ಲಿ ಸುಮಾರು 9 ಕೋಟಿ ರೂಪಾಯಿಗಳ ಈ ರೇಬಿ ಪೂರ್ ಔಷಧಿಗಳನ್ನು purchase ಮಾಡಬೇಕೆಂದು ಈಗಾಗಲೇ ನಿರ್ಧಾರ ಮಾಡಿದ್ದೇವೆ ಈಗ ಸುಮಾರು 50,000 vials ಔಷಧಿ ಸರ್ಕಾರದ logisticನಲ್ಲಿ stock ಇದೆ ಅದನ್ನು ಸರಿಯಾಗಿ ವಿತರಣೆಯಾಗುವ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡುತ್ತೇವೆ

ಶ್ರೀ ವಿ ಸೋಮಣ್ಣ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ (ಗೊಂದಲ)

ಅಧ್ಯಕ್ಷರು ದಯಮಾಡಿ, ಕುಳಿತುಕೊಳ್ಳಬೇಕು ದಯಮಾಡಿ, ಕೇಳಿ ಸುಮ್ಮನೆ ಎಲ್ಲರೂ ಹೀಗೆ ಎದ್ದು ನಿಂತುಕೊಂಡರೆ ಹೇಗೆ? (ಗೊಂದಲ) ಇದರ ಬಗ್ಗೆ ಚರ್ಚೆಯಾಗಬೇಕೆಂದಾದರೆ, ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ (ಗೊಂದಲ) ದಯಮಾಡಿ, ಕುಳಿತುಕೊಳ್ಳಿ ಈ ತರಹ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ ದಯಮಾಡಿ, ನೀವೆಲ್ಲ ಕುಳಿತುಕೊಳ್ಳಿ (ಗೊಂದಲ) ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹಿರಿಯ ಸದಸ್ಯರಿದ್ದೀರಿ, ಕುಳಿತುಕೊಳ್ಳಿ ದಯಮಾಡಿ, ನೀವು ಕುಳಿತುಕೊಳ್ಳಿ (ಗೊಂದಲ) ಎಲ್ಲರೂ ಎದ್ದು ನಿಂತುಕೊಂಡು ಈ ತರಹ ಕಲಾಪ ನಡೆಯದ ಹಾಗೆ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ (ಗೊಂದಲ) ಒಂದು ಗಂಟೆಯೊಳಗಡೆ ನಾನು ಪ್ರಶ್ನೋತ್ತರ ಕಲಾಪವನ್ನು ಮುಗಿಸಬೇಕು ಬೇಕಾದರೆ, ಇದಕ್ಕೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಈಗ ಒಂದು ಗಂಟೆಯೊಳಗೆ ಪ್ರಶ್ನೋತ್ತರವನ್ನು ಮುಗಿಸಬೇಕು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಇದು ಬಹಳ ಪ್ರಮುಖವಾದ ವಿಚಾರ ಒಂದು ಮಗುವನ್ನು ನಾಯಿಗಳು ಕಿತ್ತು ತಿಂದಿವೆ

(ಗೊಂದಲ)

ಅಧ್ಯಕ್ಷರು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ

(ಈ ಹಂತದಲ್ಲಿ ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಹಿಂಬಾಕಿ ಹುದ್ದೆಗಳ ಭರ್ತಿಯಲ್ಲಿ ಆಗುತ್ತಿರುವ ವಿಳಂಬ

35 (185) ಶ್ರೀ ಧ್ರುವನಾರಾಯಣ ಆರ್ ಸಂತೇಮರಳ್ಳಿ ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಲವಾರು ಸಂಘ ಸಂಸ್ಥೆಗಳು ಹಿಂಬಾಕಿ ಹುದ್ದೆಗಳ ಭತಿ ಪ್ರಕ್ರಿಯೆ ಕುಂರಿತಗೊಂಡಿದೆ ಎಂದು ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರ್ತಿಸಿ ಪ್ರಕಟಣೆ ಹೊರಡಿಸಿ ಭರ್ತಿ ಮಾಡಲಾಗಿದೆ, (ಅಂಕಿಅಂಶಗಳ ಸಮೇತ ವಿವರ ನೀಡುವುದು) ,

ಇ) ಹಿಂಬಾಕಿ ಹುದ್ದೆಗಳ ನೇಮಕಾತಿಯಲ್ಲಿ ಆಗುತ್ತಿರುವ ಮಂದಗತಿಗೆ ಇಲಾಖೆಗಳ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಬ್ಯಾಕ್‌ಲಾಗ್ ಹುದ್ದೆಗಳನ್ನು ದಿನಾಂಕ 21-11-2001ರ ಸರ್ಕಾರಿ ಅಧಿಸೂಚನೆ ಪ್ರಕಾರ ಗುರುತಿಸಿ ಭರ್ತಿ ಮಾಡಲಾಗುತ್ತಿದೆ ಇದೊಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡಂದಿನಿಂದ ಡಿಸೆಂಬರ್ 2006ರವರೆಗೆ 186 ಹೊಸ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ ಈ ಅವಧಿಯಲ್ಲಿ ಪ್ರಕಟಣೆಗೆ ಬಾಕಿ ಇದ್ದ ಹುದ್ದೆಗಳಲ್ಲಿ 478 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಇಲ್ಲಿಯವರೆಗೆ 13615 ಅಭ್ಯರ್ಥಿಗಳು ಹಿಂಬಾಕಿ ಹುದ್ದೆಗಳ ಎದುರು ಹಾಜರಾಗಿರುತ್ತಾರೆ

ಇ) ವಿಳಂಬವಾಗಿರುವುದಿಲ್ಲ ಆದುದರಿಂದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ

Annexure to Sub-Question (B) 1 (ಅ) of Starred Question No 185

Tabled by Sri Dhruvanarayana R

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
		SC	ST	SC	ST	SC	ST
1	Advocate General						1
2	Agricultural Marketing	1				1	1
3	Collegiate Education						
a	Aided Colleges					-1	2
4	Commerce and Industry					8	2
5	K G I D					2	
6	Karnataka Bhavan, New Delhi						
b	Karnataka Bhavan, Resident Commissioner Office		1		1		
7	Karnataka Appalatte Tribunal					1	
8	Karnataka Lokayukta						2
9	Karnataka Small Savings and Lottery					2	1
10	Mines and Geology					2	
11	NCC					1	
12	Police	-1		-1		64	24
a	KSRP					19	4
13	Prosecution and Govt Litigation						2
14	Public Instructions						
a	High School (Aided)					22	5
15	Public Libraries					2	-1
16	Rural Dev and Panchayat Raj Dept					12	2

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
		SC	ST	SC	ST	SC	ST
17	State Accounts					2	
18	Techinical Education						
a	Aided Engineering Colleges					1	
b	Aided Polytechnic					4	-2
19a	Vocational Education	-22	-2				
20	PWD (RDPR)	-23	-4				
21	Agricultural University Dharwad					19	12
22	Agricultural University Hebbal, Bangalore					28	30
23	Karnataka University, Dharwad	-4	-5	-8	-24	-11	1
24	Bangalore Water Supply & Sewarage Board			79	49		
25	Institute of Animal Health, Veternary, Biologicals					1	2
26a	PCARD Bank	194	37				
c	Hopcoms and Other Institutions	38	7				
d	D C C Bank	-10	-5	-10	-5		
h	KCARD Bank			20	6		
i	K M F (Central Office)					1	2
l	Bangalore Urban & Rural Milk Union					3	1
x	Milk Union Gulbarga					1	1
27a	K S R T C (Bangalore Corporation)	-79	5	165	85		
b	B M T C	65	-7	109			

SL No	DEPARTMENTS	Backlog vacancies in Direct Recruitment					
		Vacancies identified		Vacancies Notified		No of candidates Appointed & Reported	
28	Karnataka Ware Housing Corpo			32	8		
29	Karnataka Housing Board					14	8
30	Karnataka Land Army Corp						1
31	Karnataka Silk Marketing Board						1
31a	Kar State Agro Corn Products Ltd			-3	-5		
32	Karnataka Police Housing Corp					4	1
33	Karnataka State Handicrafts Devp Corp					1	1
34	Karnataka State Seeds Certificate Agency				-1		
35	Kidwai Memorial Institute of Oncology						2
36	Mysore Sugar Factory, Mandya			-4	-15		
37	Vijayanagara Institute of Medical Science, Bellary					1	
38	Hubli Dharwad City Corporation					1	
	Grand Total	**159**	**27**	**379**	**99**	**205**	**107**
		186		**478**		**312**	

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂಥ ಪ್ರಶ್ನೆಗಳಿಗೆ ಸರಿಯಾದ ಮಾಹಿತಿಗಳನ್ನು ಒದಗಿಸಿಲ್ಲ 2004 ಫೆಬ್ರವರಿ ತಿಂಗಳವರೆಗೆ ಸಮಾಜ ಕಲ್ಯಾಣ ಇಲಾಖೆ ಗುರಿಪಡಿಸಿದ್ದ backlog ಹುದ್ದೆಗಳು 17,021 ಆದರೆ, ಈಗ ಭರ್ತಿ ಮಾಡಿದ ಹುದ್ದೆಗಳು 13,615 ಮತ್ತು ಇನ್ನೂ ಭರ್ತಿ ಮಾಡಬೇಕಾದಂಥ ಹುದ್ದೆಗಳ ಸಂಖ್ಯೆ 3,406 ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಆದರೆ, ಇಲ್ಲಿ ಕೊಟ್ಟಿರುವ ಉತ್ತರದಲಿ ಕೇವಲ 186 ಹುದ್ದೆಗಳನ್ನು ಮಾತ್ರ ಗುರುತಿಸಿದ್ದೇವೆ ಎಂಬ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ backlog ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ವಿಳಂಬ ಮಾಡಿಲ್ಲವೆನ್ನತಕ್ಕಂಥ ಮಾಹಿತಿಯನ್ನು ಕೊಟ್ಟಿದ್ದಾರೆ ಪ್ರಸಕ್ತ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿದ್ದಾರೆ ಎಂದು ಕೇಳಿದ ಪ್ರಶ್ನೆಗಳಿಗೆ ಕೇವಲ 312 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿದ್ದೇವೆಂದು ಹೇಳಿದ್ದಾರೆ ಅಂದರೆ SC/ST ಪಂಗಡದವರಲ್ಲಿ backlog ಹುದ್ದೆಗಳನ್ನು ತುಂಬುವುದರಲ್ಲಿ ಎಷ್ಟು ತಾತ್ಸಾರ ಮನೋಭಾವನೆ ಇದೆ ಎಂಬುದು ಗೊತ್ತಾಗುತ್ತದೆ ಸುಮಾರು 3,406 backlog ಹುದ್ದೆಳು ಖಾಲಿ ಇವೆ ಆ ಖಾಲಿ ಇರುವ ಹುದ್ದೆಗಳು ಇವೆ ಎನ್ನತಕ್ಕಂಥ ಮಾಹಿತಿಯನ್ನು ಕೂಡ ಕೊಟ್ಟಿಲ್ಲ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಸರಿಯಾದ ಮಾಹಿತಿಯನ್ನು ಸದನಕ್ಕೆ ಒದಗಿಸಿಕೊಡಬೇಕು ಇಲ್ಲಿಯತನಕ SC/ST backlog ಹುದ್ದೆಗಳ ಖಾಲಿ ಇರುವ ಸಂಖ್ಯೆ ಎಷ್ಟು? ಅದನ್ನು ತಾವು ಯಾವಾಗ ಭರ್ತಿ ಮಾಡಿಸುತ್ತೀರಿ? ನಿರ್ದಿಷ್ಟವಾದ ದಿನಾಂಕವನ್ನು ಗುರುತುಪಡಿಸಿ 6 ತಿಂಗಳೊಳಗೆ ಭರ್ತಿ ಮಾಡುತ್ತೇವೆ ಅಥವಾ ಒಂದು ವರ್ಷದೊಳಗೆ ಭರ್ತಿ ಮಾಡುತ್ತೇವೆ ಎನ್ನುವ ಉತ್ತರವನ್ನು ತಾವು ಕೊಡಬೇಕು ತಾವು ಇಲ್ಲಿ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದೀರಿ ಏಕೆಂದರೆ, notification ಪ್ರಕಾರ 17,000 ಹುದ್ದೆಗಳು ಖಾಲಿ ಇವೆ ತಾವು ಕೊಟ್ಟಿರುವುದು 13,000 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆಂದು ಇನ್ನುಳಿದ 3,406 ಹುದ್ದೆಗಳ ಬಗ್ಗೆ ಮಾಹಿತಿಯನ್ನೇ ತಾವು ಕೊಟ್ಟಿಲ್ಲ ಮತ್ತು ಸರ್ಕಾರ ವಿವಿಧ ಇಲಾಖೆಗಳನ್ನು ಹೊರತುಪಡಿಸಿ

ಅಧ್ಯಕ್ಷರು ಪ್ರಶ್ನೆಗಳನ್ನು ಕೇಳುವುದನ್ನು ಬಿಟ್ಟು ನೀವು ಈ ತರಹ ಭಾಷಣ ಮಾಡಿದರೆ ಹೇಗೆ? ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆಯೊಳಗೆ ಮುಗಿಸಬೇಕೆಂದು ನಾನು ಪುನ ಪುನ ಹೇಳುತ್ತಲೇ ಇದ್ದೇನೆ

(ಗೊಂದಲ)

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ

(ಗೊಂದಲ)

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ನೋಡಿ ಹಾರಿಕೆ ಉತ್ತರ ಕೊಟ್ಟುಬಿಟ್ಟು, ತಪ್ಪು ಮಾಹಿತಿಯನ್ನು ಕೊಟ್ಟುಬಿಟ್ಟು ನೀವು ಈ ತರಹ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾಗಿರತಕ್ಕಂಥ ವಿಚಾರ

(ಗೊಂದಲ)

ಅಧ್ಯಕ್ಷರು ಮಾನ್ಯ ಹೊರಟ್ಟಿಯವರೆ, ತಾವು ಈಗ ಉತ್ತರ ಹೇಳಿ

(ಗೊಂದಲ)

ಡಾ ಹೆಚ್ ಸಿ ಮಹಾದೇವಪ್ಪ ಮಾನ್ಯ ಅಧ್ಯಕ್ಷರೆ, 17,000 ಹುದ್ದೆಗಳನ್ನು identify ಮಾಡಿದ್ದೇವೆಂದು ಹಿಂದೆಯೇ ಹೇಳಿದ್ದಾರೆ (ಗೊಂದಲ) ಅವರು ಹಿಂದಿನ ಸಲ ಕೊಟ್ಟಿರುವ ಅಂಕಿಅಂಶವೇ ಬೇರೆ ಈಗ ಕೊಟ್ಟಿರುವ ಮಾಹಿತಿಯೇ ಬೇರೆ ಈ ತರಹ ಮಾಹಿತಿ ಒದಗಿಸಿದರೆ ಹೇಗೆ? Backlog ಹುದ್ದೆ SC/ST ಜನಾಂಗದವರಿಗೆ ರಾಜ್ಯಾಂಗಬದ್ಧವಾದ ಹಕ್ಕು ನಾವೆಲ್ಲ ಸೇರಿ ಅದನ್ನು ಅವರಿಗೆ ತುಂಬಿಕೊಡಬೇಕು 17,000ಗಿಂತಲೂ ಹೆಚ್ಚು ಹುದ್ದೆಗಳು ಇವೆಯೆಂದು identify ಮಾಡಿ ಈಗ ಕೆಲವೇ 100 ಹುದ್ದೆಗಳಿವೆ ಎಂದು ಈ ವರ್ಷ ಕೊಟ್ಟು ಇಷ್ಟು ಕಡಿಮೆ ಹುದ್ದೆಗಳನ್ನು ತುಂಬಿ ಈ ರೀತಿ ಉತ್ತರ ಕೊಟ್ಟರೆ ಸರ್ಕಾರ ಯಾವ ರೀತಿ ನಡೆಯುತ್ತದೆ? ಯಾವ ರೀತಿ ಅವರಿಗೆ ನ್ಯಾಯ ಸಿಗುತ್ತದೆ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಸಮಾಜ ಕಲ್ಯಾಣ ಸಚಿವರ ಪರವಾಗಿ) – ಮಾನ್ಯ ಅಧ್ಯಕ್ಷರೆ, ಇದು continuous process ಯಾವಾಗ ಹುದ್ದೆಗಳು ಖಾಲಿಯಾಗುತ್ತವೆ ಆಗೆಲ್ಲ ಹುದ್ದೆಗಳನ್ನು ತುಂಬುತ್ತಿರುತ್ತಾರೆ ಈಗಾಗಲೇ ಹೇಳಿದಂತೆ, 478 ಹುದ್ದೆಗಳಿಗೆ ಪ್ರಕಟಣೆ ಹೊರಡಿಸಲಾಗಿ ಅದರಲ್ಲಿ 312 ಹುದ್ದೆಗಳಿಗೆ ಈಗಾಗಲೇ

ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ 13,615 ಜನ ಇವತ್ತು appear ಆಗಿದ್ದಾರೆ ಆಮೇಲೆ, BMTC, KSRTC ಮತ್ತು Karnataka University ಇಲ್ಲಿ ಅವರು ಈ ಹುದ್ದೆಗಳು ಯಾವುವು reserve ಎಂದು ಕೇಳಿದ್ದಕ್ಕೆ ಅವರು ಮಾಹಿತಿಯನ್ನು ತಪ್ಪು ಕೊಟ್ಟಿದ್ದಕ್ಕೆ ಮತ್ತೊಂದು ಸಾರಿ ಇಲಾಖೆಯವರು ಮಾಹಿತಿ ಕಳುಹಿಸಿಕೊಟ್ಟಿದ್ದಾರೆ ಆ ಎಲ್ಲಾ ಮಾಹಿತಿಗಳನ್ನು correct ಮಾಡಿ ತಂದ ನಂತರ ಆ ಹುದ್ದೆಗಳನ್ನು ತುಂಬಲಿಕ್ಕೆ ಆದೇಶವನ್ನು ಮಾಡಲಾಗಿದೆ ಈಗಾಗಲೇ notified ಆಗಿದ್ದು 15,671 ಹುದ್ದೆಗಳು, selection ಆದದ್ದು 14,311 ಹುದ್ದೆಗಳು, recruitment ಆಗಬೇಕಾದ vacancy 2,832 ಮತ್ತು ಈಗ 491 ಹುದ್ದೆಗಳು notify ಆಗಬೇಕು ಇಷ್ಟು notify ಆಗಲಿಕ್ಕೆ ಇಲಾಖೆಯವರು ಎಲ್ಲಾ ಪ್ರಕ್ರಿಯೆ ನಡೆಸಿದ್ದಾರೆ ಇದೇನಾಗುತ್ತಿದೆ ಎಂದರೆ, ಇದು ದಿನದಿಂದ ದಿನಕ್ಕೆ ಅಂಕಿಗಳು ಹೆಚ್ಚು ಕಡಿಮೆಯಾಗುತ್ತವೆ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಎಲ್ಲಿಯೂ ನಿಂತಿಲ್ಲ ಹಿಂದಿನ ನಿಯಮವೇನಿತ್ತು ಆ ನಿಯಮದ ಪ್ರಕಾರ ಎಲ್ಲಾ Backlog ಹುದ್ದೆಗಳನ್ನು ತುಂಬಲಾಗುವುದು ಪ್ರಕ್ರಿಯೆ ನಡೆದಿದೆ ಪ್ರಕ್ರಿಯೆ ನಡೆದಾಗ ಸ್ವಲ್ಪ ಹೆಚ್ಚು ಕಡಿಮೆ ಇರುತ್ತದೆ ಅವೆಲ್ಲವನ್ನು ಸರಿಯಾದ ರೀತಿಯಿಂದ ತುಂಬಲಿಕ್ಕೆ ಇಲಾಖೆ ಕಾರ್ಯಕ್ರಮ ಹಾಕಿಕೊಂಡಿದೆ ಯಾವುದೇ Backlog ಹುದ್ದೆಯನ್ನು ತುಂಬದೇ ಇರಲಾರದಂತೆ ವ್ಯವಸ್ಥೆಯನ್ನು ಮಾಡಲಾಗುವುದು

ಶ್ರೀ ಆರ್ ಧ್ರುವ ನಾರಾಯಣ ಮಾನ್ಯ ಅಧ್ಯಕ್ಷರೆ, 17,021 ಹುದ್ದೆಗಳು ಖಾಲಿ ಇವೆ ಎಂದು ಸಮಾಜ ಕಲ್ಯಾಣ ಇಲಾಖೆ ಗುರುತಿಸಿದೆ ಅದರಲ್ಲಿ 13,615 ಹುದ್ದೆಗಳನ್ನು ಭರ್ತಿ ಮಾಡಿದೆ ಎಂಬ ಉತ್ತರವನ್ನು ತಾವು ಕೊಟ್ಟಿದ್ದೀರಿ ಉಳಿಕೆ 3,406 ಹುದ್ದೆಗಳು ಖಾಲಿ ಇವೆ ಎಂಬುದನ್ನು ತಾವು ಸದನದಲ್ಲಿ ಒದಗಿಸಿಲ್ಲ ಈ ಹುದ್ದೆಗಳನ್ನು ತಾವು ಆದಷ್ಟು ಶೀಘ್ರದಲ್ಲಿ ತುಂಬಬೇಕು ಏಕೆಂದರೆ, ಸರ್ಕಾರಿ ಇಲಾಖೆ ಹೊರತುಪಡಿಸಿ ಬೇರೆ ಸ್ವಾಯತ್ತ ಇಲಾಖೆ ಇರಬಹುದು (autonomous bodies) ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿರಬಹುದು ಇವೆಲ್ಲವೂ ಕೂಡ Backlog ಹುದ್ದೆಗಳನ್ನು ತಕ್ಷಣದಲ್ಲೇ ಭರ್ತಿ ಮಾಡತಕ್ಕಂಥ ಕ್ರಮವನ್ನು ತಾವು ಕೈಗೊಳ್ಳಬೇಕು ತಾವು ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು 186 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿರತಕ್ಕಂಥದ್ದು ಇದೆ 3,400 ಹುದ್ದೆಗಳು ಖಾಲಿ ಇವೆ ಒಂದು ವರ್ಷದಿಂದ ಕೇವಲ 186 ಹುದ್ದೆಗಳನ್ನು ಭರ್ತಿ ಮಾಡಿದ್ದಾರೆಂದರೆ ಇದರಲ್ಲಿ

ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ, ತಾವು ಬಹಳ ವಿಳಂಬ ನೀತಿಯನ್ನು ಅನುಸರಿಸಿದ್ದೀರಿ ತಾವು ತಕ್ಷಣವೇ ಆದೇಶ ಹೊರಡಿಸಿ ಇಂತಿಷ್ಟು ಸಮಯದಲ್ಲಿ ಖಾಲಿ ಇರುವ 3,400 ಹುದ್ದೆಗಳನ್ನು ಭರ್ತಿ ಮಾಡುವ ಕ್ರಮವನ್ನು ತಕ್ಷಣವೇ ತಾವು ಕೈಗೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖೇನ ತಮ್ಮ ಗಮನ ಸೆಳೆಯುತ್ತೇನೆ

ಶ್ರೀ ಪಿ ಟಿ ಪರಮೇಶ್ವರ ನಾಯಕ್ ಮಾನ್ಯ ಅಧ್ಯಕ್ಷರೆ, ಖಾಲಿ ಇರುವ ಹುದ್ದೆಗಳನ್ನು ಎಷ್ಟು ದಿನಗಳಲ್ಲಿ ಅಥವಾ ತಿಂಗಳಲ್ಲಿ ಭರ್ತಿ ಮಾಡುತ್ತಾರೆನ್ನುವುದನ್ನು ಕೂಡ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ನಾನು ಒತ್ತಾಯವನ್ನು ಮಾಡುತ್ತೇನೆ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಧ್ರುವ ನಾರಾಯಣರವರು ಹೇಳುವುದು ನಿಜ ಆದರೆ, ಪ್ರಕ್ರಿಯೆಯಲ್ಲಿ ತೊಂದರೆಯಾಗಿಲ್ಲ, ತಡವಾಗಿಲ್ಲ ಎಲ್ಲ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಆಗಲೇ 15,671 ಹುದ್ದೆಗಳನ್ನು notify ಮಾಡಿ, ಈಗ 14,315 ಹುದ್ದೆಗಳಿಗೆ selection ಆಗಿದೆ

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಸಚಿವರಲ್ಲಿ ತಪ್ಪು ಮಾಹಿತಿ ಇದೆ ಅದನ್ನು ಮೊದಲು ಸರಿಪಡಿಸಲಿ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಇದರಲ್ಲಿ ಹೆಚ್ಚು ಕಡಿಮೆಯಾಗಿದೆ ಮಾಹಿತಿಯನ್ನು correct ಆಗಿ ಹೇಳುತ್ತೇನೆ

(ಗೊಂದಲ)

ಅಧ್ಯಕ್ಷರು ಪ್ರಶ್ನೋತ್ತರ ವೇಳೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನಾನು ನಿಮಗೆಲ್ಲ ಹೇಳಬೇಕಾಗಿಲ್ಲ ನೀವೆಲ್ಲ ಹಿರಿಯ ಸದಸ್ಯರು ಮತ್ತೆ ಮತ್ತೆ ನಿಂತುಕೊಂಡು ನೀವು ಇಷ್ಟ ಬಂದ ರೀತಿಯಲ್ಲಿ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ ಎರಡು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ ಬೇರೆಯವರಿಗೆ ಒಂದು ಅವಕಾಶವಿದೆ ನೀವು ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಅಧ್ಯಕ್ಷರೆ, Backlog ಹುದ್ದೆಗಳನ್ನು ತುಂಬಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದು

ಡಾ ಹೆಚ್ ಸಿ ಮಹಾದೇವಪ್ಪ ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು ಮಾನ್ಯ ಮಹಾದೇವಪ್ಪನವರೆ, ಏಕೆ ಈ ರೀತಿ ಅಡ್ಡಿ ಮಾಡುತ್ತಿದ್ದೀರಿ?

ಡಾ ಹೆಚ್ ಸಿ ಮಹಾದೇವಪ್ಪ ಈಗ 15,000 ಹುದ್ದೆಗಳು notify ಆಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳುತ್ತಿದ್ದಾರೆ

ಅಧ್ಯಕ್ಷರು ಈಗ ನೋಡಿ ಸ್ವಾಮಿ, ಅವರ ಉತ್ತರವೇನೇ ಇರಲಿ

ಡಾ ಹೆಚ್ ಸಿ ಮಹಾದೇವಪ್ಪ 2003ರಲ್ಲಿ ಇಷ್ಟು ಹುದ್ದೆಗಳನ್ನು identify ಮಾಡಿದ್ದೇವೆಂದು ಹೇಳುತ್ತೀರಿ ಆಗ ಅಷ್ಟು ಹುದ್ದೆಗಳೆಂದು ಹೇಳುತ್ತೀರಿ, ಈಗ ಇಷ್ಟು ಹುದ್ದೆಗಳೆಂದು ಹೇಳುತ್ತೀರಿ ಯಾವ ತರಹ ನೀವು ಲೆಕ್ಕ ಕೊಡುತ್ತೀರಿ? ತಪ್ಪು ತಪ್ಪು ಮಾಹಿತಿ ಒದಗಿಸುತ್ತಿದ್ದೀರಿ

(ಗೊಂದಲ)

ಅಧ್ಯಕ್ಷರು ಈಗ ದಯಮಾಡಿ ಎಲ್ಲ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು ನಿಮಗೆ ಆ ಉತ್ತರ ತೃಪ್ತಿ ತಂದುಕೊಡದೇ ಇರಬಹುದು (ಗೊಂದಲ) ಅದು ವಿವರವಾಗಿಲ್ಲದೇ ಇರಬಹುದು ಆದರೆ, ಮೂರು ಉಪ ಪ್ರಶ್ನೆ ಕೇಳುವುದಕ್ಕೆ ಮಾತ್ರ ಅವಕಾಶವಿದೆ ದಯಮಾಡಿ, ಅರ್ಧ ಮಾಡಿಕೊಳ್ಳಿ ಒಂದು ಗಂಟೆಯೊಳಗಡೆ ಪ್ರಶ್ನೋತ್ತರ ಮುಗಿಯಬೇಕು ಆದರೆ, ನೀವು ಎಲ್ಲ ಕೇಳುವುದಕ್ಕೆ ಅವಕಾಶವಿಲ್ಲ , ದಯಮಾಡಿ, ಅದನ್ನು ಅರ್ಧ ಮಾಡಿಕೊಳ್ಳಬೇಕು

ಶ್ರೀ ನೆಲ ನರೇಂದ್ರಬಾಬು ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕೊಟ್ಟರೆ ಹಕ್ಕುಚ್ಯುತಿಯಾಗುತ್ತದೆ

ಅಧ್ಯಕ್ಷರು ಮಾನ್ಯ ಸಚಿವರು Final ಆಗಿ ಹೇಳಿಬಿಡಿ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಸದಸ್ಯರು ಹೇಳಿದ ಹಾಗೆ, ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು backlog ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು

ಅಧ್ಯಕ್ಷರು ಆಯಿತು

ಶ್ರೀ ಆರ್ ಧ್ರುವ ನಾರಾಯಣ ಸಮಯ ನಿಗದಿಪಡಿಸಬೇಕು

(ಗೊಂದಲ)

ಅಧ್ಯಕ್ಷರು ಇಲ್ಲ, ಇಲ್ಲ, ಸಾಕಷ್ಟು ಅವಕಾಶ ಕೊಟ್ಟಿದ್ದೇನೆ, ಕುಳಿತುಕೊಳ್ಳಿ ಕ್ಯಾತ್ಸಂದ್ರ ರಾಜಣ್ಣರವರು ಇಲ್ಲವೇ? ನೀವು ನಿಮ್ಮ ಪ್ರಶ್ನೆ ಕೇಳಿ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಅದೂ ಮುಖ್ಯವಾದುದೇ ಒಂದು ವಿಚಾರ ಚರ್ಚೆಯಾಗುವಾಗ ನಾವೇಕೆ ಅಡ್ಡಿ ಮಾಡಬೇಕು?

ಅಧ್ಯಕ್ಷರು ಮಾನ್ಯ ರಾಜಣ್ಣನವರೆ, ನೀವು ಪ್ರಶ್ನೆ ಕೇಳುತ್ತೀರಾ? ಅಥವಾ ಕುಳಿತುಕೊಳ್ಳುತ್ತೀರಾ?

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಸ್ವಾಮಿ, ನನ್ನ ಪ್ರಶ್ನೆ ಎಷ್ಟು ಮುಖ್ಯವೋ, ಅದೂ ಕೂಡ ಮುಖ್ಯವಾಗುತ್ತದೆ

ಅಧ್ಯಕ್ಷರು ಬಹಳ ಮುಖ್ಯ ಸ್ವಾಮಿ ಆದರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕು ಬೇರೆ ರೂಪದಲ್ಲಿ ಆ ವಿಚಾರವನ್ನು ಎತ್ತಬಹುದು

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ನೀವು ಮಧ್ಯೆ ಮಧ್ಯೆ ಹಾರಿಸಿಬಿಡುತ್ತಿದ್ದೀರಲ್ಲ, ನಾನು ಇನ್ನೂ ನನ್ನ turn ಬಂದಿಲ್ಲವೆಂದು ಕುಳಿತಿದ್ದೇನೆ ಅಷ್ಟೆ

ಅಧ್ಯಕ್ಷರು ಆ ರೀತಿ ಮುಖ್ಯವೆಂದರೆ, ಒಂದು ಗಂಟೆಯೊಳಗೆ ಪ್ರಶ್ನೋತ್ತರ ಹೇಗೆ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ?

ಕೊಳವೆ ಬಾವಿಗಳ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸುವುದು

38 (209) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ಎರಡು ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ, ನಿಗಮಗಳವಾರು ಮತ್ತು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು ,

ಆ) ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ ,

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊರೆದ ಕೊಳವೆ ಬಾವಿಗಳ ಸಂಖ್ಯೆ

ಕ್ರಸಂ	ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1	2003–04	360
2	2004–05	845
3	2005–06	872

2 ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊರೆದ ಬಾವಿಗಳ ಸಂ 15,702 (ದಿನಾಂಕ 01 04 2003 ರಿಮದ 31 03 2006ರವರೆಗೆ)

3 ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದಿಂದ ಕೊರೆಯಲಾದ ಬಾವಿಗಳ ಸಂಖ್ಯೆ

ಕ್ರಸಂ	ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ
1	2003–04	326
2	2004–05	404
3	2005–06	655

ಆ) 2003–04 ಹಾಗೂ 2004–05ನೇ ಸಾಲಿನಲ್ಲಿ ಕೊರೆದ ಎಲ್ಲಾ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಮಾಡಲಾಗಿರುತ್ತದೆ 2005–06ನೇ ಸಾಲಿನಲ್ಲಿ ಕೊರದ 872 ಕೊಳವೆ ಬಾವಿಗಳ ಪೈಕಿ 776 ಕೊಳವೆ ಬಾವಿಗಳಿಗೆ ಪಂಪು ಮೋಟಾರು ಹಾಗೂ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿರುತ್ತದೆ ಬಾಕಿ 96 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಕೆಲಸ ಪ್ರಗತಿಯಲ್ಲಿರುತ್ತದೆ

ವೈಯಕ್ತಿಕ ಯೋಜನೆಯಲ್ಲಿ ಕೊರೆದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಹಾಗೂ ಬಾಕಿ ಇರುವ ಈ ಮುಂದಿನಂತಿದೆ

ಕ್ರಸಂ	ವರ್ಷ	ಕೊರೆದ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕೊಳವೆ ಬಾವಿಗಳ ಸಂಖ್ಯೆ	ವಿದ್ಯುತ್ ಸಂಪರ್ಕಕ್ಕೆ ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ
01	2003–04	360	120	240
02	2004–05	845	270	575
03	2005–06	872	20	852
	ಒಟ್ಟು	**2077**	**410**	**1667**

ಇ) ವೈಯಕ್ತಿಕ ಗಂಗಾ ಕಲ್ಯಾಣ ಯೋಜನೆಯ ನಿಯಮಗಳನ್ವಯ ವಿದ್ಯುತ್ ರೇವಣಿ ಮೊತ್ತವನ್ನು ಫಲಾನುಭವಿಗಳೇ ಭರಿಸಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿರುತ್ತದೆ ಫಲಾನುಭವಿಗಳು ಹಿಂದುಳಿದ ಪ್ರವರ್ಗ-1, ಹಾಗೂ 2ಎಗೆ ಸೇರಿದವರಾಗಿದ್ದು, ಸಣ್ಣ ಹಾಗೂ ಅತಿ ಸಣ್ಣ ರೈತರುಗಳಾಗಿರುತ್ತಾರೆ ಈ ವರ್ಗದ ಜನರ ಆರ್ಥಿಕ ಆಶಕ್ತತೆಯಿಂದಾಗಿ ವಿದ್ಯುತ್ ರೇವಣಿ ಪಾವತಿಸದೇ ಇರುವ ಕಾರಣದಿಂದ ಈ ಯೋಜನೆಯಲ್ಲಿ ಕೊರೆದ ಹೆಚ್ಚಿನ ಕೊಳವೆ ಬಾವಿಗಳು ವಿದ್ಯುತ್ ಸಂಪರ್ಕಕ್ಕೆ ಬಾಕಿ ಉಳಿದಿರುತ್ತದೆ ಈ ಸಮಸ್ಯೆ ನಿವಾರಣೆಗೆ ಫಲಾನುಭವಿಗಳ ಪರವಾಗಿ ವಿದ್ಯುತ್ ರೇವಣಿ ಪಾವತಿಸಿ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರದ ಪರಿಶೀಲನೆಯಲ್ಲಿದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಅನುಬಂಧ-1

ಕ್ರ ಸಂ	ಜಿಲ್ಲೆಗಳು ಹಾಗೂ ವಿಧಾನಸಭಾ ಕ್ಷೇತ್ರಗಳು	2003-04 ಸಾಲಿನಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ		2004-05 ಸಾಲಿನಲ್ಲಿ ಕೊರೆದಕೊಳವೆ ಬಾವಿಗಳ ಸಂಖ್ಯೆ		2005-06 ಸಾಲಿನಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ	
		ಪ ಜಾ	ಪ ವರ್ಗ	ಪ ಜಾ	ಪ ವರ್ಗ	ಪ ಜಾ	ಪ ವರ್ಗ
1	2	3	4	5	6	7	8
1	**ಬಾಗಲಕೋಟೆ**						
1	ಬಾಗಲಕೋಟೆ	20	4	7	1	17	2
2	ಜಮಖಂಡಿ	16	1	12	3	24	0
3	ಬೀಳಗಿ	20	1	18	3	25	3
4	ಮುಧೋಳ	69	1	50	8	100	57
5	ಬಾದಾಮಿ	18	1	12	1	10	1
6	ಗುಳೇದಗುಡ್ಡ	13	1	7	1		
7	ಹುನಗುಂದ	19	2	5	1	5	1
	ಒಟ್ಟು	**175**	**11**	**111**	**18**	**181**	**64**

2 ಬೆಂ ನಗರ							
1	ಯಲಹಂಕ	7	0	4	0		
2	ಉತ್ತರಹಳ್ಳಿ	17	2	5	0	5	0
3	ವರ್ತೂರು	1	0				
4	ಅನೇಕಲ್	1	0	17	0	11	0
	ಒಟ್ಟು	**26**	**2**	**26**	**0**	**16**	**0**
3 ಬೆಂ ಗ್ರಾಮಾಂತರ							
1	ಕನಕಪುರ	3	0	15	1	38	3
2	ಸಾತನೂರು	5	1	19	0	37	1
3	ಚನ್ನಪಟ್ಟಣ	11	0	8	0	42	0
4	ರಾಮನಗರ	1	1	115	1	54	0
5	ಮಾಗಡಿ	3	0	21	3	23	2
6	ನೆಲಮಂಗಲ	2	1	4	0	41	4
7	ದೊಡ್ಡಬಳ್ಳಾಪುರ	0	0	7	1	15	0
8	ದೇವನಹಳ್ಳಿ	1	1	9	1	17	2
9	ಹೊಸಕೋಟೆ	0	1	0	0	13	1
	ಒಟ್ಟು	26	5	198	7	280	19
4 ಬೆಳಗಾಂ							
1	ರಾಮದುರ್ಗ	29	6	33	2	18	4
2	ಸವದತ್ತಿ	21	5	17	2	22	7
3	ಬೈಲಹೊಂಗಲ	25	1	1	2	21	5
4	ಕಿತ್ತೂರು	5	5	5	0	3	2
5	ಖಾನಾಪುರ	18	0	5	1	14	4
6	ಉಚ್ಚಗಾಂವ್	2	0	1	4		
7	ಬಾಗೇವಾಡಿ	3	0	0	5		
8	ಗೋಕಾಕ	11	7	2	4	1	7
9	ಅರಬಾನಿ	11	1	5	2	19	2

1	2	3	4	5	6	7	8
10	ಹುಕ್ಕೇರಿ	5	0	8	3	8	2
11	ಸಂಕೇಶ್ವರ	17	0	8	3	7	2
12	ನಿಪ್ಪಾಣಿ	13	0	5	2		
13	ಸಾದಲಗ	3	0			2	0
14	ಚಿಕ್ಕೋಡಿ	28	0	16	3	24	0
15	ರಾಯಭಾಗ	24	2	21	6	77	2
16	ಕಾಗವಾಡ	23	0	8	2	35	7
17	ಅಥಣಿ	27	1	21	5	42	2
	ಒಟ್ಟು	**265**	**28**	**156**	**46**	**293**	**46**
	5 ಬಳ್ಳಾರಿ						
1	ಶಿರಗುಪ್ಪ	13	0	0	0	31	12
2	ಕುರಗೋಡು	11	1	19	4	31	12
3	ಹೊಸಪೇಟೆ	31	3	16	0	17	7
4	ಸಂಡೂರು	0	5	21	1	32	25
5	ಕೂಡ್ಲಗಿ	33	8	68	4	32	39
6	ಕೊಟ್ಟೂರು	16	7	60	10	39	35
7	ಹಡಗಲಿ	27	9	19	6	30	0
	ಒಟ್ಟು	**131**	**33**	**203**	**25**	**212**	**130**
	6 ಬೀದರ್						
1	ಔರಾದ	15	6	20	9	66	22
2	ಬಾಲ್ಕಿ	27	8	28	10	50	12
3	ಹುಲಸೂರು	12	6	26	8	29	12
4	ಹುಮನಾಬಾದ	19	8	19	7	56	24
5	ಬೀದರ	20	5	19	8	39	13
6	ಬಸವಕಲ್ಯಾಣ	16	8	29	9	49	24
	ಒಟ್ಟು	**109**	**41**	**140**	**51**	**289**	**107**

7 ಬಿಜಾಪುರ							
1	**2**	**3**	**4**	**5**	**6**	**7**	**8**
1	ಬಿಜಾಪುರ	24	1	18	0	18	0
2	ಬಿ ಬಾಗೇವಾಡಿ	28	0	9	0	20	5
3	ಹೂವಿನ ಹಿಪ್ಪರಗಿ	8	0	7	0	41	2
4	ಮುದ್ದೇಬಿಹಾಳ	14	1	1	0	30	3
5	ತಿಕೋಟ	12	0	33	2	45	2
6	ಬಳ್ಳೋಳ್ಳಿ	18	0	28	2	85	2
7	ಉಂಡಿ	25	0	11	1	30	4
8	ಸಿಂಧಗಿ	28	0	36	2	38	5
	ಒಟ್ಟು	157	2	143	7	307	23
8 ಚಾಮರಾಜನಗರ							
1	ಚಾಮರಾಜನಗರ	25	3	5	4	46	5
2	ಎಸ್ ಮಾರಹಳ್ಳಿ	26	2	7	3	50	11
3	ಹನೂರು	17	3	11	3	70	22
4	ಗುಂಡ್ಲುಪೇಟೆ	23	3	5	2	27	12
5	ಕೊಳ್ಳೇಗಾಲ	16	1	5	2	39	7
	ಒಟ್ಟು	107	12	34	14	232	57
9 ಚಿಕ್ಕಮಗಳೂರು							
1	ಚಿಕ್ಕಮಗಳೂರು	5	4	12	0	32	0
2	ಶೃಂಗೇರಿ	0	0	6	0	20	4
3	ಮೂಡಿಗೆರೆ	0	0			0	0
4	ಬೀರೂರು			30	0	50	6
5	ತರೀಕೆರೆ	17	0	15	0	44	10
6	ಕಡೂರು	14	4	16	0		
	ಒಟ್ಟು	**36**	**8**	**79**	**0**	**146**	**20**

10 ಚಿತ್ರದುರ್ಗ							
1	**2**	**3**	**4**	**5**	**6**	**7**	**8**
1	ಚಳ್ಳಕೆರೆ	14	8	11	5	78	83
2	ಚಿತ್ರದುರ್ಗ	20	12	25	6	18	6
3	ಹಿರಿಯೂರು	28	20	31	3	76	58
4	ಹೊಳಲಕೆರೆ	25	17	10	9	33	20
5	ಹೊಸದುರ್ಗ	12	8	12	3	20	11
6	ಮೊಳಕಾಲ್ಮೂರು	0	5	6	2	19	37
7	ಭರಮಸಾಗರ	21	5	20	0	116	57
	ಒಟ್ಟು	**120**	**73**	**115**	**28**	**360**	**272**
11 ಮಂಗಳೂರು (ತೆರೆದ ಬಾವಿಗಳು)							
1	ಸೂಳ್ಯ	6	6	8	2	21	10
2	ಪುತ್ತೂರು	12	4	7	4	37	16
3	ವಿರಲ	4	6	0	0	20	15
4	ಬೆಳ್ತಂಗಡಿ	12	2	10	4	20	8
5	ಬಂಟ್ವಾಳ	3	2	4	5	8	12
6	ಮೂಡಬಿದ್ರೆ	9	2	3	0	1	0
	ಒಟ್ಟು	**46**	**22**	**32**	**15**	**107**	**61**
12 ದಾವಣಗೆರೆ							
1	ದಾವಣಗೆರೆ	0	0	0	0	0	0
2	ಚನ್ನಗಿರಿ	9	3	15	11	65	37
3	ಮಾಯಗೊಂಡ	21	3	15	10	85	43
4	ಹರಪ್ಪನಳ್ಳಿ	2	0	20	11	133	63
5	ಭರಮಸಾಗರ	2	3	5	4	13	5
6	ಹೊನ್ನಾಳಿ	10	3	20	9	56	40
7	ಹರಿಹರ	6	0	29	11	40	24

8	ಜಗಳೂರು	15	3	15	8	46	70
	ಒಟ್ಟು	**64**	**15**	**119**	**64**	**438**	**282**
13 ಧಾರವಾಡ							
1	ಧಾರವಾಡ ಗ್ರಾಮಾಂತರ	11	7	9	6	9	6
2	ಹುಬ್ಬಳ್ಳಿ ಗ್ರಾಮಾಂತರ	1	1			4	0
3	ಕಲ್ಲಘಟಗಿ	17	0	6	3	23	10
4	ಕುಂದಗೋಳ	6	0	1	4	8	5
5	ನವಲಗುಂದ	1	1				
	ಒಟ್ಟು	**36**	**9**	**16**	**13**	**44**	**21**
14 ಗದಗ							
1	ಗದಗ	7	1	3	1	7	3
2	ಶಿರಹಟ್ಟಿ	26	6	22	13	30	12
3	ಮುಂಡರಗಿ	22	2	19	3	31	8
4	ನರಗುಂದ	1	0			0	5
	ಒಟ್ಟು	**75**	**10**	**73**	**24**	**103**	**38**
15 ಗುಲ್ಬರ್ಗಾ							
1	ಚಿಂಚೋಳ್ಳಿ	36	1	26	1	44	1
2	ಕಮಲಾಪುರ	24	0	23	1	30	0
3	ಅಳಂದ	36	0	35	1	93	0
4	ಶಹಬಾದ	21	0	26	2	33	4
5	ಅಫಜಲಪುರ	27	0	15	3	65	4
6	ಚಿತ್ತಾಪುರ	69	0	34	0	17	2
7	ಸೇಡಂ	29	0	9	0	28	0
8	ಜೇವರ್ಗಿ	29	0	18	3	74	9
9	ಗುರುಮಿಟಿಕಲ್	97	5	59	17	109	24

1	2	3	4	5	6	7	8
10	ಯಾದಗಿರಿ	35	0	20	4	25	0
11	ಶಹಾಪುರ	26	1	21	3	51	6
12	ಸುರಪುರ	36	1	2	0	11	0
	ಒಟ್ಟು	**465**	**8**	**288**	**35**	**580**	**59**
16 ಹಾಸನ							
1	ಹಾಸನ	3	0	20	0	16	12
2	ಬೇಲೂರು	8	2	21	0	36	10
3	ಅರಸೀಕೆರೆ	3	0	33	1	73	20
4	ಗಂಡಸಿ	3	0	4	0	27	15
5	ಶ್ರವಣಬೆಳಗೋಳ	2	0	32	1	13	11
6	ಹೊಳೆನರಸೀಪುರ	0	0	17	0	18	10
7	ಅರಕಲಗೂಡು	12	0	7	0	26	2
8	ಸಕಲೇಶಪುರ	0	0	10	0	19	8
	ಒಟ್ಟು	**31**	**2**	**144**	**2**	**228**	**88**
17 ಹಾವೇರಿ							
1	ಹಾವೇರಿ	15	9	13	10	16	11
2	ಶಿಗ್ಗಾಂವ	25	11	21	5	33	6
3	ಹಾನಗಲ	13	9	13	13	28	15
4	ಹಿರೇಕೆರೂರು	2	1	22	5	28	13
5	ರಾಣೇಬೆನ್ನೂರು	15	5	17	2	20	20
6	ಬ್ಯಾಡಗಿ	8	6	5	6	18	12
	ಒಟ್ಟು	**78**	**41**	**91**	**41**	**143**	**77**
18 ಕೊಡಗು							
1	ವಿರಾಜಪೇಟೆ	0	0	0	0	0	0
2	ಮಡಿಕೇರಿ	0	0	0	0	0	0

1	2	3	4	5	6	7	8
3	ಸೋಮವಾರಪೇಟೆ	0	0	6	2	31	10
	ಒಟ್ಟು	**0**	**0**	**6**	**2**	**31**	**10**
19 ಕೋಲಾರ							
1	ಗೌರಿಬಿದನೂರು	11	1	18	3	36	23
2	ಚಿಕ್ಕಬಳ್ಳಾಪುರ	2	0	17	1	27	8
3	ಶಿಡ್ಲಘಟ್ಟ	1	2	25	4	58	16
4	ಚಿಂತಾಮಣಿ	5	1	27	2	38	6
5	ಶ್ರೀನಿವಾಸಪುರ	4	1	31	2	67	18
6	ಮುಳಬಾಗಿಲು	7	1	16	1	81	8
7	ಕೆ ಜಿ ಎಫ್					5	1
8	ಬೇತಮಂಗಲ	8	1	40	2	36	3
9	ಕೋಲಾರ	2	2	33	1	19	4
10	ವೇಮಗಲ್	5	0	33	2	15	3
11	ಮಾಲೂರು	3	1	38	4	44	17
12	ಬಾಗೇಪಲ್ಲಿ	12	0	32	3	63	16
	ಒಟ್ಟು	**60**	**10**	**310**	**25**	**489**	**123**
20 ಕೊಪ್ಪಳ							
1	ಕೊಪ್ಪಳ	12	2	0	0	96	89
2	ಕುಷ್ಟಗಿ	14	3	1	1	37	57
3	ಕನಕಗಿರಿ	16	6	11	2	50	22
4	ಯಲಬುರ್ಗಾ	15	3	6	3	71	56
5	ಗಂಗಾವತಿ	15	4	0	0	10	12
	ಒಟ್ಟು	**72**	**18**	**18**	**6**	**264**	**236**
21 ಮಂಡ್ಯ							
1	ಮಂಡ್ಯ	2	0	3	0	10	0
2	ನಾಗಮಂಗಲ	2	0	16	0	30	2

1	2	3	4	5	6	7	8
3	ಮದ್ದೂರು	20	1	11	0	17	2
4	ಕಿರುಗಾವಲು	6	0	6	0	17	0
5	ಮಳವಳ್ಳಿ	8	0	11	0	27	1
6	ಕೆರೆಗೋಡು	11	0	13	0	9	0
7	ಶ್ರೀರಂಗಪಟ್ಟಣ	8	0	28	2	19	3
8	ಪಾಂಡವಪುರ	2	0	19	0	67	7
9	ಕೆ ಆರ್ ಪೇಟೆ	3	1	26	2	94	9
	ಒಟ್ಟು	**63**	**2**	**133**	**4**	**290**	**24**
22	**ಮೈಸೂರು**						
1	ಚಾಮುಂಡೇಶ್ವರಿ	8	1	7	1	67	12
2	ಕೃಷ್ಣರಾಜ	0	0	0	0	0	0
3	ಹುಣಸೂರು	11	2	14	7	14	6
4	ಬನ್ನೂರು	2	1	5	0	16	1
5	ಟಿ ನರಸೀಪುರ	2	1	9	0	36	9
6	ಚಾಮರಾಜ	0	0	0	0	0	0
7	ನಂಜನಗೂಡು	0	0	11	2	12	2
8	ಹೆಚ್ ಡಿ ಕೋಟೆ	8	1	21	5	54	13
9	ಪರಿಯಾಪಟ್ಟಣ	18	2	4	1	17	2
10	ಕೃಷ್ಣರಾಜನಗರ	3	1	4	0	0	0
11	ನರಸಿಂಹರಾಜ	0	0	0	0	0	0
	ಒಟ್ಟು	**50**	**9**	**75**	**16**	**216**	**45**
23	**ರಾಯಚೂರು**						
1	ರಾಯಚೂರು	22	10	35	8	15	62
2	ಹೊಳೆಹೊನ್ನೂರು	54	6	35	4	43	9
3	ಭದ್ರಾವತಿ	15	2	2	0	12	0
4	ತೀರ್ಥಹಳ್ಳಿ	15	0	16	0	29	4

1	2	3	4	5	6	7	8
5	ಹೊಸನಗರ	10	2	10	4	45	14
6	ಸಾಗರ	10	1	7	1	35	4
7	ಸೊರಬ	13	2	18	6	49	12
8	ಶಿಕಾರಿಪುರ	20	4	26	6	143	38
	ಒಟ್ಟು	**146**	**1**	**119**	**21**	**370**	**81**
25	**ತುಮಕೂರು**						
1	ತುಮಕೂರು	10	2	11	5	24	14
2	ಪಾವಗಡ	12	0	19	6	55	49
3	ಕಳ್ಳಂಬೆಳ್ಳ	18	1	15	4	27	11
4	ಬೆಳ್ಳಾವಿ	20	1	16	4	28	18
5	ಮದುಗಿರಿ	34	2	3	4	34	11
6	ಕೊರಟಗೆರೆ	16	4	10	4	21	9
7	ಕುಣಿಗಲ್	12	2	11	3	27	10
8	ಹುಲಿಯೂರುದುರ್ಗ	14	2	10	3	15	0
9	ಗುಬ್ಬಿ	18	1	13	3	22	20
10	ತುರುವೇಕೆರೆ	18	3	9	1	30	5
11	ತಿಪಟೂರು	19	4	10	11	43	12
12	ಚಿಕ್ಕನಾಯಕನಹಳ್ಳಿ	19	2	11	3	23	11
13	ಶಿರಾ	22	1	18	4	37	17
	ಒಟ್ಟು	**261**	**25**	**156**	**45**	**386**	**187**
26	**ಉಡುಪಿ**						
1	ಉಡುಪಿ (ತೆರೆದ ಬಾವಿಗಳು)	0	0	0	1	5	8
2	ಕಾಪುರ	0	0	1	0	4	0
3	ಬ್ರಹ್ಮಾವರ	9	2	6	4	12	20
4	ಕುಂದಾಪುರ	9	2	7	2	13	4

1	2	3	4	5	6	7	8
5	ಬೈಂದೂರು	5	3	2	2	7	3
6	ಕಾರ್ಕಳ	6	3	6	2	31	13
	ಒಟ್ಟು	**29**	**10**	**22**	**11**	**72**	**48**
27 ಉತ್ತರ ಕನ್ನಡ							
1	ಅಂಕೋಲ	0	0	0	0	0	0
2	ಭಟ್ಕಳ (ತೆರೆದ ಬಾವಿಗಳು)	1	0	0	10	0	0
3	ಹಳಿಯಾಳ	145	2	22	7	93	22
4	ಹೊನ್ನಾವರ	0	0	0	0	2	0
5	ಕಾರವಾರ	0	0	0	0	0	0
6	ಕುಮಟ	0	0	0	0	0	0
7	ಸಿರಸಿ	0	0	2	0	21	1
	ಒಟ್ಟು	**146**	**2**	**24**	**17**	**116**	**23**
	ಕಳೆದ 3 ವರ್ಷಗಳಲ್ಲಿ ಒಟ್ಟು ತೆರೆದ ಬಾವಿಗಳು	**2827**	**444**	**2944**	**583**	**6479**	**2425**

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಕ್ಯಾತ್ಸಂದ್ರ ರಾಜಣ್ಣ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 38 (209) (ಇ) 84ರ ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಹಿತಿ–ಅನುಬಂಧ–1

ಗಂಗಾ ಕಲ್ಯಾಣ ವೈಯಕ್ತಿಕ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕೊರೆದ ಕೊಳವೆ ಬಾವಿಗಳ ವಿಧಾನಸಭಾ ಕ್ಷೇತ್ರವಾರು ಮಾಹಿತಿ ತಃಖ್ತೆ

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರದ ಹೆಸರು	2003–04	2004–05	20045–06
1	**2**	**3**	**4**	**5**
ಬೆಂಗಳೂರು ನಗರ				
1	ಅನೇಕಲ್	2	4	4

2	ಉತ್ತರಹಳ್ಳಿ	3	4	5
3	ಯಲಹಂಕ	0	3	1
4	ವರ್ತೂರು	2	4	4
	ಒಟ್ಟು	**7**	**15**	**14**

ಬೆಂಗಳೂರು ಗ್ರಾಮಾಂತರ

1	ರಾಮನಗರ	3	5	5
2	ಚನ್ನಪಟ್ಟಣ	2	4	5
3	ಮಾಗಡಿ	2	5	5
4	ಕನಕಪುರ (1)	4	3	6
5	ಸಾತನೂರು (2)	2	5	4
6	ನೆಲಮಂಗಲ	2	4	5
7	ದೊಡ್ಡಬಳ್ಳಾಪುರ	2	5	5
8	ದೇವನಹಳ್ಳಿ	3	1	4
9	ಹೊಸಕೋಟೆ	2	4	5
	ಒಟ್ಟು	**22**	**36**	**44**

ಶಿವಮೊಗ್ಗ

1	ಶಿವಮೊಗ್ಗ	3	3	5
2	ಬದ್ರಾವತಿ	1	4	2
3	ಶಿಕಾರಿಪುರ	2	5	5
4	ಸಾಗರ	0	4	3
5	ಸೊರಬ	2	2	8
6	ತೀರ್ಥಹಳ್ಳಿ	1	5	4
7	ಹೊಸನಗರ	2	5	8
8	ಹೊಳೆಹೊನ್ನೂರು	3	4	4
	ಒಟ್ಟು	**14**	**32**	**39**

ತುಮಕೂರು

1	2	3	4	5
1	ಪಾವಗಡ	2	6	9
2	ಶಿರಾ	2	2	4
3	ಕಳ್ಳಂಬೆಳ್ಳ	1	2	6
4	ಬೆಳ್ಳಾವಿ	2	4	5
5	ಮಧುಗಿರಿ	2	3	5
6	ಕೊರಟಗೆರೆ	4	9	9
7	ತುಮಕೂರು ನಗರ	3	4	3
8	ಕುಣಿಗಲ್	2	5	4
9	ಹುಲಿಯೂರು ದುರ್ಗ	2	3	5
10	ಗುಬ್ಬಿ	2	6	5
11	ತುರುವೇಕೆರೆ	2	7	8
12	ತಿಪಟೂರು	1	3	6
13	ಚಿಕ್ಕನಾಯಕನಹಳ್ಳಿ	2	4	0
	ಒಟ್ಟು	**27**	**58**	**69**

ಚಿತ್ರದುರ್ಗ

1	ಚಿತ್ರದುರ್ಗ	3	5	5
2	ಚಳ್ಳಕೆರೆ	2	4	5
3	ಹಿರಿಯೂರು	0	4	4
4	ಹೊಸದುರ್ಗ	1	8	6
5	ಹೊಳಲ್ಕೆರೆ	3	6	9
6	ಮೊಳಕಾಲ್ಮುರು	2	4	5
7	ಭರಮಸಾಗರ	2	1	5
	ಒಟ್ಟು	**10**	**35**	**39**

ಕೋಲಾರ

1	ಕೋಲಾರ	2	2	4

1	**2**	**3**	**4**	**5**
2	ಬೇತಮಂಗಲ	2	3	5
3	ಮುಳಬಾಗಿಲು	2	4	0
4	ಕೆ ಜಿ ಎಫ್	0	0	0
5	ಶ್ರೀನಿವಾಸಪುರ	0	3	4
6	ಚಿಂತಾಮಣಿ	2	4	5
7	ವೇಮಗಲ್	3	5	3
8	ಶಿಡ್ಲಘಟ್ಟ	0	3	4
9	ಚಿಕ್ಕಬಳ್ಳಾಪುರ	1	3	5
10	ಮಾಲೂರು	3	4	4
11	ಬಾಗೇಪಲ್ಲಿ	0	4	5
12	ಗೌರಿಬಿದನೂರು	2	3	5
	ಒಟ್ಟು	**17**	**38**	**44**

ದಾವಣಗೆರೆ

1	ಹರಪನಹಳ್ಳಿ	2	4	5
2	ಹರಿಹರ	2	4	7
3	ದಾವಣಗೆರೆ	2	–	–
4	ಜಗಳೂರು	2	4	7
5	ಚನ್ನಗಿರಿ	2	4	8
6	ಹೊನ್ನಾಳ್ಳಿ	1	5	5
7	ಮಾಯಗೊಂಡ	2	4	4
	ಒಟ್ಟು	**13**	**25**	**36**

ಮೈಸೂರು ಜಿಲ್ಲೆ

1	ಬನ್ನೂರು	2	2	1
2	ಟಿ ನರಸೀಪುರ	1	3	6
3	ಪರಿಯಾಪಟ್ಟಣ	2	4	4
4	ಹುಣಸೂರು	1	2	5

5	ಹೆಗ್ಗಡದೇವನಕೋಟೆ	2	4	1
6	ಕೆ ಆರ್ ನಗರ	3	4	5
7	ನಂಜನಗೂಡು	1	6	5
8	ಚಾಮುಂಡೇಶ್ವರಿ	2	25	5
	ಒಟ್ಟು	**14**	**50**	**25**

ಮಂಡ್ಯ

1	ಮಂಡ್ಯ	0	0	2
2	ಮದ್ದೂರು	2	4	5
3	ಮಳವಳ್ಳಿ	2	2	5
4	ಪಾಂಡವಪುರ	2	4	5
5	ಕಿರುಗಾವಲು	2	6	4
6	ಕೆ ಆರ್ ಪೇಟೆ	2	15	19
7	ನಾಗಮಂಗಲ	2	4	6
8	ಶ್ರೀರಂಗಪಟ್ಟಣ	2	3	7
9	ಕೆರೆಗೋಡು	2	6	5
	ಒಟ್ಟು	**17**	**44**	**58**

ಚಾಮರಾಜನಗರ

1	ಚಾಮರಾಜನಗರ	2	4	4
2	ಗುಂಡ್ಲುಪೇಟೆ	0	4	5
3	ಕೊಳ್ಳೇಗಾಲ	2	9	3
4	ಹನೂರು	1	4	5
5	ಸಂತೇಮರಳ್ಳಿ	1	4	6
	ಒಟ್ಟು	**6**	**26**	**23**

ಉಡುಪಿ

1	ಉಡುಪಿ	0	1	0
2	ಕುಂದಾಪುರ	3	1	0
3	ಕಾರ್ಕಳ	1	1	3

1	2	3	4	5
4	ಕಾಪು	0	0	0
5	ಬ್ರಹ್ಮಾವರ	1	1	1
6	ಬೈಂದೂರು	1	3	0
	ಒಟ್ಟು	**6**	**7**	**4**
1	ಹಾಸನ	2	3	5
2	ಬೇಲೂರು	2	4	6
3	ಅರಸೀಕೆರೆ	6	9	5
4	ಗಂಡಸಿ	2	8	6
5	ಹೊಳೆನರಸೀಪುರ	2	1	6
6	ಅರಕಲಗೂಡು	2	4	5
7	ಆಲೂರು (ಸಕಲೇಶಪುರ)	3	4	3
8	ಚನ್ನರಾಯಪಟ್ಟಣ (ಶ್ರವಣಬೆಳಗೋಳ)	2	4	5
	ಒಟ್ಟು	**21**	**37**	**43**

ಚಿಕ್ಕಮಗಳೂರು

1	ಚಿಕ್ಕಮಗಳೂರು	2	3	3
2	ಕಡೂರು	4	4	6
3	ತರೀಕೆರೆ	2	3	4
4	ಶೃಂಗೇರಿ	1	2	4
5	ಬೀರೂರು	3	4	7
6	ಮೂಡಗೆರೆ	0	0	0
	ಒಟ್ಟು	**12**	**16**	**24**

ದಕ್ಷಿಣಕನ್ನಡ

1	ಸುಳ್ಯ	0	1	0
2	ಮತ್ತೂರು	2	5	3
3	ವಿಟ್ಲ	2	4	7

1	2	3	4	5
4	ಬೆಳ್ತಂಗಡಿ	1	4	0
5	ಭಂಟ್ವಾಳ	2	6	6
6	ಉಳ್ಳಾಲ	0	2	0
7	ಮೂಡುಬಿದ್ರೆ	1	5	3
8	ಸೂರತ್ಕಲ್	0	0	0
	ಒಟ್ಟು	**8**	**27**	**19**

ಕೊಡಗು

1	ಮಡಿಕೇರಿ	0	0	0
2	ವಿರಾಜಪೇಟೆ	0	0	0
3	ಸೋಮವಾರಪೇಟೆ	1	11	5
	ಒಟ್ಟು	**1**	**11**	**5**

ಬೆಳಗಾವಿ

1	ಬೆಳಗಾವಿ ನಗರ	0	0	0
2	ಬೈಲಹೊಂಗಲ	0	2	3
3	ಕಿತ್ತೂರು	0	4	1
4	ಖಾನಾಪುರ	1	2	3
5	ಬಾಗೇವಾಡಿ	0	0	0
6	ಉಚ್ಚಗಾಂವ್	2	2	1
7	ಗೋಕಾಕ್	0	3	0
8	ಅರಬಾವಿ	0	3	3
9	ಹುಕ್ಕೇರಿ	0	5	1
10	ಸಂಕೇಶ್ವರ	1	4	5
11	ನಿಪ್ಪಾಣಿ	1	1	0
12	ಸದಲಗ	0	5	0
13	ಚಿಕ್ಕೋಡಿ	2	5	4
14	ರಾಯಬಾಗ್	3	6	8

1	2	3	4	5
15	ಕಾಗವಾಡ	2	0	0
16	ಅಥಣಿ	2	8	5
17	ರಾಮದುರ್ಗ	3	4	2
18	ಪರಸಗಡ (ಸವದತ್ತಿ)	1	3	5
	ಒಟ್ಟು	**17**	**57**	**44**

ಹಾವೇರಿ

1	ಹಾವೇರಿ	2	4	6
2	ರಾಣಿಬೆನ್ನೂರು	3	4	5
3	ಶಿಗ್ಗಾಂವ್–ಸವಣೂರು	2	6	4
4	ಬ್ಯಾಡಗಿ	2	4	5
5	ಹಿರೇಕೆರೂರು	2	4	5
6	ಹಾನಗಲ್	2	4	5
	ಒಟ್ಟು	**16**	**28**	**30**

ಗದಗ್

1	ಗದಗ್	3	4	3
2	ಮುಂಡರಗಿ	1	3	5
3	ನರಗುಂದ	2	3	5
4	ಗೋಣ	3	6	4
5	ಶಿರಹಟ್ಟಿ	3	5	4
	ಒಟ್ಟು	**12**	**21**	**21**

ಬಿಜಾಪುರ

1	ಬಿಜಾಪುರ	2	4	5
2	ಬಸವನಬಾಗೇವಾಡಿ	4	4	4
3	ಇಂಡಿ	2	4	5
4	ಮುದ್ದೇಬಿಹಾಳ	1	4	5
5	ಬಳ್ಳೊಳಿ	2	4	5

1	2	3	4	5
6	ಹೂವಿನಹಿಪ್ಪರಗಿ	2	3	5
7	ತಿಕೋಟ	2	8	4
	ಒಟ್ಟು	**17**	**33**	**37**

ಬಾಗಲಕೋಟೆ

1	ಬಾಗಲಕೋಟೆ	2	5	8
2	ಜಮಖಂಡಿ	1	5	4
3	ಬಾದಾಮಿ	3	5	5
4	ಗುಳೇದಗುಡ್ಡ	2	5	4
5	ಮುಧೋಳ	3	5	3
6	ಬೀಳಗಿ	2	4	5
7	ಹುನಗುಂದ	2	0	4
	ಒಟ್ಟು	**15**	**29**	**33**

ಧಾರವಾಡ

1	ಧಾರವಾಡ ನಗರ	2	6	5
2	ಧಾರವಾಡ ಗ್ರಾಮಾಂತರ	2	6	4
3	ಹುಬ್ಬಳ್ಳಿ ಗ್ರಾಮಾಂತರ	2	4	5
4	ಕಲಘಟಗಿ	4	5	5
5	ಕುಂದಗೋಳ	2	0	5
6	ನವಲಗುಂದ	1	3	0
7	ಹುಬ್ಬಳ್ಳಿ ಶಹರ	2	0	0
	ಒಟ್ಟು	**15**	**24**	**24**

ಉತ್ತರಕನ್ನಡ

1	ಶಿರಸಿ	2	3	6
2	ಭಟ್ಕಳ	1	2	0
3	ಕುಮಟಾ	2	4	0
4	ಅಂಕೋಲಾ	2	3	0

1	2	3	4	5
5	ಹಳಿಯಾಳ	2	4	8
6	ಕಾರವಾರ	0	2	0
	ಒಟ್ಟು	**9**	**18**	**14**

ಗುಲ್ಬರ್ಗಾ

1	ಚಿಂಚೋಳಿ	1	4	5
2	ಗುಲ್ಬರ್ಗಾ	1	1	0
3	ಶಹಬಾದ್	2	5	5
4	ಅಫಜಲ್‌ಪುರ	2	6	5
5	ಚಿತ್ತಾಪುರ	1	5	4
6	ಸೇಡಂ	2	5	5
7	ಜೇವರ್ಗಿ	0	13	4
8	ಗುರುಮಿಟ್ಕಲ್	1	18	6
9	ಯಾದಗೀರ್	3	3	2
10	ಶಹಾಪುರ	1	6	6
11	ಸುರಪುರ	0	4	3
12	ಕಮಲಾಪುರ	2	4	5
13	ಆಳಂದ	4	5	5
	ಒಟ್ಟು	**20**	**79**	**55**

ಬಳ್ಳಾರಿ

1	ಕುರುಗೋಡು	2	4	5
2	ಕೂಡ್ಲಗಿ	2	11	5
3	ಕೊಟ್ಟೂರು	2	7	5
4	ಶಿರಗುಪ್ಪ	2	3	5
5	ಹೊಸಪೇಟೆ	2	0	5
6	ಸಂಡೂರು	2	3	3

1	2	3	4	5
7	ಹಡಗಲಿ	2	7	4
	ಒಟ್ಟು	**14**	**35**	**32**

ಬೀದರ್

1	ಬೀದರ್	2	9	11
2	ಹುಮ್ನಾಬಾದ್	2	3	5
3	ಔರದ್	1	6	4
4	ಭಾಲ್ಕಿ	3	4	5
5	ಬಸವಕಲ್ಯಾಣ	2	4	4
6	ಹುಲಸೂರು	2	4	4
	ಒಟ್ಟು	**12**	**30**	**33**

ರಾಯಚೂರು

1	ರಾಯಚೂರು	1	5	9
2	ಸಿಂಧನೂರು	0	2	0
3	ಮಾಸ್ಕಿ	2	2	6
4	ಲಿಂಗಸ್ಗೂರು	0	4	4
5	ದೇವದುರ್ಗ	2	1	7
6	ಕಲ್ಯಾಲ	1	5	4
	ಒಟ್ಟು	**6**	**19**	**30**

ಕೊಪ್ಪಳ

1	ಕೊಪ್ಪಳ	2	3	4
2	ಗಂಗಾವತಿ	2	4	5
3	ಕುಷ್ಟಗಿ	3	3	5
4	ಯಲಬುರ್ಗಾ	2	4	5
5	ಕನಕಗಿರಿ	2	4	4
	ಒಟ್ಟು	**11**	**18**	**23**
	ಎಲ್ಲಾ ಒಟ್ಟು	**360**	**845**	**872**

KARNATAKA MINORITIES DEVELOPMENT CORPORATION LIMITED, BANGALORE

DETAILS OF BOREWELLS DRILLED FOR THE LAST THREE YEARS

SL No	Name of the District	2003-04	2004-05	2005-06
		Ind	Ind	Ind
A	**B'lore Division**			
1	Bangalore-U		9	7
2	Bangalore-R	6	12	28
3	Kolar	10	11	28
4	Chitradurga	8	11	32
5	Tumkur	11	16	42
6	Shimoga	9	9	23
7	Davangere	17	14	25
B	**Gulbarga Division**			
1	Raichur	21	17	19
2	Koppal	17	18	47
3	Bellary	9	20	20
4	Bidar	13	27	45
5	Gulbarga	8	22	34
C	**Mysore Division**			
1	Chickmagalur	10	9	13
2	Hassan	10	10	17

SL No	Name of the District	2003-04	2004-05	2005-06
3	Kodagu		8	4
4	Mysore	14	15	23
5	Mandya	14	18	26
6	D Kannada	9	17	11
7	Chamarajnagar	7	10	21
8	Udupi	3	5	2
D	**Belgaum Division**			
1	Belgaum	15	10	20
2	Bijapur	32	17	27
3	Dharwad	22	53	35
		Ind	**Ind**	**Ind**
4	Uttara Kannada	18	7	36
5	Haveri	15	12	23
6	Gadag	14	13	21
7	Bagalkote	15	14	16
	Total	**326**	**404**	**655**

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಮಾನ್ಯ ಅಧ್ಯಕ್ಷರೆ, ಇದು ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆ ತಾವೂ ಕೂಡ ಈ ಉತ್ತರವನ್ನು ಓದಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ ಆದ್ದರಿಂದ, ಪ್ರಶ್ನೆ,ಉಪ ಪ್ರಶ್ನೆ ಕೇಳಿ ಮತ್ತೆ ಸಭೆಯ ಸಮಯವನ್ನು ಹಾಳು ಮಾಡುವುದಕ್ಕೆ ಬದಲಾಗಿ ತಾವು ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅನುವು ಮಾಡಿಕೊಟ್ಟರೆ ಬಹಳ ಚೆನ್ನಾಗಿರುತ್ತದೆಂದು ಹೇಳಿ ಮೊದಲೇ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ

ಅಧ್ಯಕ್ಷರು ಬೇರೆ ರೂಪದಲ್ಲಿ ಕೊಡಿ ಆಗಬಹುದು

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಸುಮ್ಮನೆ ಸಮಯವನ್ನು ಏಕೆ ಹಾಳು ಮಾಡಿಸಬೇಕು?

ಅಧ್ಯಕ್ಷರು ಸಮಯ ಬೇಕೆಂದು ನೀವು ಹೇಳಿದರೆ ಸದನದಲ್ಲಿ ಅನೇಕ ಜನ ಸದಸ್ಯರು ಬೇಕೆಂದು ಕೇಳದರೆ ಅವಕಾಶ ಮಾಡಿಕೊಡೋಣ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ತಾವು ಕೊಡಲಿಕ್ಕೆ ತಯಾರಿದ್ದರೆ, ನಾನೂ ತಯಾರಿದ್ದೇನೆ

ಅಧ್ಯಕ್ಷರು ಅನೇಕ ಜನ ಸದಸ್ಯರು ಅದಕ್ಕೆ ಅವಕಾಶ ಮಾಡಿಕೊಡಿ ಎಂದರೆ ಕೊಡೋಣ ಎಲ್ಲದಕ್ಕೂ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದರೆ ಹೇಗೆ? ಉತ್ತರ ಹೇಳಿದ ಮೇಲೆ ನಿಮಗೆ ಸಮಾಧಾನವಾಗಲಿಲ್ಲವೆಂದರೆ, ನೋಡೋಣ

ಶ್ರೀ ಬಸವರಾಜ ಎಸ್ ಹೊರಟ್ಟಿ ಮಾನ್ಯ ಅಧ್ಯಕ್ಷರೆ, ಈಗ ಉತ್ತರ ಹೇಳುತ್ತೇನೆ ರಾಜ್ಯದಲ್ಲಿ ಪ್ರತಿಯೊಬ್ಬ SC/ST ಫಲಾನುಭವಿಗಳಿಗೆ deposit ತುಂಬಬೇಕಾಗುತ್ತದೆ ಅದನ್ನು ತುಂಬಲಿಕ್ಕಾಗುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದ ನಂತರ ಬಡವರಿಗೆ ತೊಂದರೆ ಇರುವುದರಿಂದ 9 ಕೋಟಿ 99 ಲಕ್ಷ ರೂಪಾಯಿಗಳನ್ನು ಸರ್ಕಾರ ತುಂಬಲಿಕ್ಕೆ December Cabinetನಲ್ಲಿ pass ಮಾಡಿದೆ ಹಣಕಾಸು ಇಲಾಖೆಯವರು ಒಪ್ಪಿಕೊಂಡಿದ್ದಾರೆ, ಕಳುಹಿಸಿಕೊಡುತ್ತಾರೆ ಅದಾದನಂತರ, ಪ್ರತಿಯೊಂದು borewellಗೆ depends upon the distance ಒಂದು ಲಕ್ಷ ರೂಪಾಯಿಗಳಿಂದ 3 ಲಕ್ಷ ರೂಪಾಯಿಗಳವರೆಗೆ ಖರ್ಚು ಬರುತ್ತದೆ ಆ ಪ್ರಕಾರ, KEBಯವರಿಗೆ 183 ಕೋಟಿ ರೂಪಾಯಿಗಳನ್ನು ತುಂಬಬೇಕು ಆ ಪ್ರಸ್ತಾವನೆಯನ್ನು ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆ ಆ ಪ್ರಸ್ತಾವನೆ ಮಂಜೂರಾದ ನಂತರ ಅದನ್ನು ಸಹ ಮಾಡುವಂಥ ಕೆಲಸವನ್ನು ಮಾಡುತ್ತೇವೆ ಸರ್ಕಾರ SC/ST ಫಲಾನುಭವಿಗಳಿಗೆ ಇವತ್ತು 10 ಕೋಟಿ ರೂಪಾಯಿಗಳಷ್ಟು ಹಣವನ್ನು ತುಂಬಿದೆ ಇನ್ನುಳಿದ 183 ಕೋಟಿ ಹಣಕ್ಕೆ FDಯವರಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ FDಯವರು ಅನುಮತಿ ಕೊಟ್ಟ ನಂತರ ಸಂಪೂರ್ಣವಾದಂಥ ಕೆಲಸವನ್ನು ಮುಗಿಸುವಂಥದ್ದು ಮಾಡುತ್ತೇವೆ ಅದು ಈಗಾಗಲೇ ಸಾಕಷ್ಟು ಪ್ರಗತಿಯಲ್ಲಿದೆ ಎನ್ನುವಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಇದಕ್ಕೆ ಮಾನ್ಯ ಹೊರಟ್ಟಿಯವರು ಬಂದು ಉತ್ತರ ಹೇಳಿದ್ದು ಮೊದಲನೇ ತಪ್ಪು ತಪ್ಪು ಎಂದು ಹೇಳಿದರೆ, ಯಾವ್ಯಾವುದೋ ಏನೇನೋ ಹೇಳಿ ಇವರು ಗೊಂದಲಕ್ಕೆ ತರುತ್ತಿದ್ದಾರೆ ನನ್ನ ಪ್ರಶ್ನೆ ಏನೆಂದರೆ, 2003-04ರಲ್ಲಿ ಕೊರೆಸಿರುವ borewell ಗಳು ಒಟ್ಟಾರೆ 360

ಆದರೆ, ಇವರು ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇವೆಂದು ಹೇಳುತ್ತಿದ್ದಾರೆ 240 ಇನ್ನೂ 2003-04ನೇ ಸಾಲಿನವೇ ಇವೆ 2004-05ನೇ ಸಾಲಿನವು 575 ಇವೆ 2005-06ನೇ ಸಾಲಿನ 852 ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಈಗ ಕಲ್ಪಿಸುತ್ತೇವೆಂದು ಹೇಳಿದ್ದಾರೆ ನನ್ನ ಪ್ರಮುಖವಾಗಿರತಕ್ಕಂಥ ವಿಚಾರವೆಂದರೆ, borewell ಗಳಲ್ಲೇ ನೀರಿಲ್ಲ ಇವರೆಲ್ಲ 200, 300 ಅಡಿ ಕೊರೆಸುತ್ತೇವೆ ಎಂದು 65,000 ರೂಪಾಯಿ unit cost ಇಟ್ಟುಕೊಂಡು ಮಾಡಿಕೊಂಡಿದ್ದಾರಲ್ಲ, ಈ ವರ್ಷದಲ್ಲಿ ಒಂದು ಲಕ್ಷ ರೂಪಾಯಿ unit cost ಇಟ್ಟಿದ್ದಾರೆ ಈಗಲೂ ಕೂಡ 300, 400 ಅಡಿ ಕೊರೆಸಬೇಕು ಎನ್ನತಕ್ಕಂದ ಆದೇಶವನ್ನು ಇವರೆಲ್ಲ ಕೊಡುವುದರಿಂದ ಯಾವ borewell ಗಳಲ್ಲೂ ನೀರು ಸಿಗುವುದಿಲ್ಲ ಇದೊಂದು ಬಹಳ ದೊಡ್ಡ ದಂಧೆ ಮಾಡಿಕೊಂಡು ಆ SC/STಗಳ ಹೆಸರಿನಲ್ಲಿ ಇದರಲ್ಲಿ ದುಡ್ಡು ಲೂಟಿ ಮಾಡುವ ಪ್ರಯತ್ನವಾಗುತ್ತಿದೆ ಆದ್ದರಿಂದ, ನಾನು ಅವೆಲ್ಲ ವಿವರಗಳನ್ನು ಕೂಡ ಸದನದ ಗಮನಕ್ಕೆ ತರುತ್ತಿದ್ದೇನೆ ಅವರಿಗೆ ನಿಜವಾದಂಧ ಫಲಾನುಭವಿಗಳಿಗೆ ಸರಿಯಾಗಿ ಸರ್ಕಾರದ ಉದ್ದೇಶ ಸಫಲವಾಗುವ ರೀತಿ ಆ ಒಂದು ಲಾಭ ದೊರಕಬೇಕೆಂದು ತಮ್ಮಲ್ಲಿ ನಾನು ಮನವಿ ಮಾಡುವಂದದ್ದು ಇದೆ ಇದರ ಮೇಲೆ ಅರ್ಧ ಗಂಟೆ ಚರ್ಚೆಯಾಗಬೇಕು ವಿವರವಾಗಿ ಇದರ ಬಗ್ಗೆ ಚರ್ಚೆಯಾಗಿ ಆ ಜನರಿಗೆ ಅನುಕೂಲ ಆಗತಕ್ಕಂಧ ರೀತಿಯಲ್ಲಿ ಒಂದು ತೀರ್ಮಾನವಾಗಬೇಕಾಗಿದೆ ಆದ್ದರಿಂದ, ತಾವು ಅರ್ಧ ಗಂಟೆ ಚರ್ಚೆಗೆ ಇದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಮತ್ತೊಮ್ಮೆ ನಾನು ತಮಗೆ ಒತ್ತಾಯ ಮಾಡುತ್ತೇನೆ

ಅಧ್ಯಕ್ಷರು ಬೇರೆ ರೂಪದಲ್ಲಿ ಸೂಚನೆ ಕಳುಹಿಸಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, SC/ST ಮತ್ತು backward class ನವರಿಗೆ,

ಅಧ್ಯಕ್ಷರು ಬೇರೆ ರೂಪದಲ್ಲಿ notice ಕಳುಹಿಸಿ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ ಆಯಿತು

ಅಧ್ಯಕ್ಷರು ಮಾನ್ಯ ಡಾ ವಿ ಎಸ್ ಆಚಾರ್ಯರವರು ವಿಧಾನ ಪರಿಷತ್ತಿಗೆ ಹೋಗಬೇಕಾಗಿದೆ ಈಗ ಮಾನ್ಯ ಗಂಗಾಧರ ನಾಗೇಶ್ ಭಟ್‌ರವರ ಪ್ರಶ್ನೆಯನ್ನು ತೆಗೆದುಕೊಳ್ಳೋಣ

ಶ್ರೀ ಕೆ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಗಂಗಾಧರ ನಾಗೇಶ್ ಭಟ್‌ರವರು ಇಲ್ಲ ನಮ್ಮ ಜಿಲ್ಲೆಯ ಪರವಾಗಿ ಆ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ತಾವು ಅವಕಾಶ ಕೊಟ್ಟರೆ ಕೇಳುತ್ತೇನೆ

ಅಧ್ಯಕ್ಷರು ಕೇಳಿ

ವೈದ್ಯಕೀಯ ಶಾಲೆಯನ್ನು ಮಂಜೂರು ಮಾಡುವುದು

40 (111) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಪರವಾಗಿ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರವಾದ ಕಾರವಾರದಲ್ಲಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಲು ಕ್ರಮ ಕೈಗೊಂಡಿದೆಯೇ ,

ಆ) ಹಾಗಿದ್ದಲ್ಲಿ, ವೈದ್ಯಕೀಯ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು ?

ಡಾ|| ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸದ್ಯಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆ ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಸದ್ಯಕ್ಕೆ ಸರ್ಕಾರದ ಪ್ರಸ್ತಾವನೆಯಲ್ಲಿ ಇಲ್ಲವೆಂದು ಹೇಳಿದ್ದಾರೆ ಆದರೆ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಉತ್ತರ ಕನ್ನಡ ಜಿಲ್ಲೆ ಬೇರೆ ಬೇರೆ ಅನೇಕ ಕಾರಣಗಳಿಗಾಗಿ ಅಲ್ಲಿ ಸಾಕಷ್ಟು ಅಭಿವೃದ್ಧಿಪರವಾದಂತ ಚಟುವಟಿಕೆಗಳು ನಡೆದು ರಾಜ್ಯ ಹಾಗೂ ದೇಶಕ್ಕೆ ಸಾಕಷ್ಟು ದೊಡ್ಡ ಕೊಡುಗೆಯನ್ನು ಕೊಟ್ಟಿರುವುದು ನಮ್ಮೆಲ್ಲರ ಗಮನದಲ್ಲಿದೆ ಆದರೆ ಶೈಕ್ಷಣಿಕವಾಗಿ ಖಾಸಗಿಯವರ ಕ್ಷೇತ್ರದಿಂದ ಅಲ್ಲಿ ಡಿಗ್ರಿ ಕಾಲೇಜುಗಳು ಇರಬಹುದು, ಹೈಸ್ಕೂಲ್‌ಗಳಾಗಬಹುದು, ಇವು ಸಾಕಷ್ಟು ದೊಡ್ಡ ಪ್ರಮಾಣದಲ್ಲಿವೆ ಈಗ ಇಂಜಿನಿಯರಿಂಗ್ ಕಾಲೇಜು ಆಗಬಹುದು, ಆದರೆ ಅಲ್ಲಿಗೆ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜು ಸರ್ಕಾರದ ವತಿಯಿಂದ ನಮ್ಮ ಜಿಲ್ಲೆಯಲ್ಲಿ ಇಲ್ಲ ಹೀಗಾಗಿ ನಮ್ಮ ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ಅಲ್ಲಿನ ಯುವಕರಿಗೆ ಹೆಚ್ಚು ಉದ್ಯೋಗದ ಅವಕಾಶ ಮತ್ತು ಶಿಕ್ಷಣ ಸಿಗುವುದಕ್ಕೆ ಅನಾನುಕೂಲವಾಗುತ್ತದೆ ಅಲ್ಲಿ ಇಂಜಿನಿಯರಿಂಗ್ ಕಾಲೇಜು ಆಗಬೇಕು ಅದು ಪ್ರತ್ಯೇಕ ವಿಷಯ ಆದರೆ ಮೆಡಿಕಲ್ ಕಾಲೇಜು

ಸರ್ಕಾರದ ವತಿಯಿಂದಲೇ ಮಾಡಿದರೆ, ನಮ್ಮ ಜಿಲ್ಲೆಯ ಜನಕ್ಕೆ ಅನುಕೂಲವಾಗುತ್ತದೆ ಹಿಂದಿನ ಸರ್ಕಾರಗಳು ನಮ್ಮ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜನ್ನು ಮಾಡುತ್ತೇವೆಂದು ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಧ ಶ್ರೀ ಧರ್ಮಸಿಂಗ್‌ರವರು ಘೋಷಣೆ ಮಾಡಿದ್ದರು

ಡಾ ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ, ನಾವು ಸಧ್ಯಕ್ಕೆ ಸರ್ಕಾರಿ ವಲಯದಿಂದ ಮೆಡಿಕಲ್ ಕಾಲೇಜು ಮಾಡುವಂಧ ಪ್ರಸ್ತಾವನೆಯಿಲ್ಲವೆಂದು ಹೇಳಿದ್ದೇವೆ ಅಷ್ಟೇ ಈಗ ಆರು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಬೇಕೆನ್ನುವ ಪ್ರವೃತ್ತಿ ಮಾಡಿರುವುದು ತಮಗೆ ಗೊತ್ತಿದೆ ಆ ಪೈಕಿ ಮೂರು ಕಾಲೇಜುಗಳನ್ನು ಕಳೆದ ವರ್ಷದಲ್ಲಿ ಪ್ರಾರಂಭ ಮಾಡಿದ್ದೇವೆ ಮತ್ತೆ ಮೂರು ಕಾಲೇಜುಗಳನ್ನು ಪ್ರಾರಂಭಮಾಡಲಿಕ್ಕೆ ಸರ್ವ ಪ್ರಯತ್ನವನ್ನು ಈ ಬಾರಿ ಮಾಡುತ್ತಿದ್ದೇವೆ ಆದು ಆರು ಆದ ನಂತರ ನಾವು ಇದರ ಬಗ್ಗೆ ಗಮನ ಕೊಡಬಹುದೆನ್ನುವ ದೃಷ್ಟಿಯಿಂದ ಉತ್ತರದಲ್ಲಿ ಸದ್ಯಕ್ಕೆ ಇಲ್ಲವೆಂದು ಹೇಳಿದ್ದೇವೆ ದಯಮಾಡಿ ಮಾನ್ಯ ಸದಸ್ಯರು ಆರ್ಧಮಾಡಿಕೊಳ್ಳಬೇಕು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ಮೂರು ಕಾಲೇಜು ಪ್ರಾರಂಭವಾಗಿದೆ ಮತ್ತೆ ಮೂರು ಕಾಲೇಜುಗಳಾದ ಮೇಲೆ ಅಲ್ಲಿಗೆ ಒಂದು ಮೆಡಿಕಲ್ ಕಾಲೇಜು ಕೊಡುತ್ತೇವೆಂದು ಹೇಳಿದರೆ ಅದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳುತ್ತದೋ ಗೊತ್ತಿಲ್ಲ ಅದುವರೆಗೆ ಯಾರಾದರೂ ಖಾಸಗಿಯವರು ಬಂದು ಪ್ರಾರಂಭ ಮಾಡುತ್ತಾರೆಂದರೆ ಅವರಿಗೆ ಸಂಪೂರ್ಣವಾದ ಸಹಾಯ ಮತ್ತು ಸಹಕಾರವನ್ನು ಈ ಸರ್ಕಾರ ಕೊಡುತ್ತದೆ ಎನ್ನುವ ಒಂದು ಸಂದೇಶವಾದರೂ ಈ ಸದನದ ಮೂಲಕ ಕಳುಹಿಸಿದರೆ, ಯಾರಾದರೂ ಆಸಕ್ತರಿದ್ದರೆ ಅವರು ಬರುವುದಕ್ಕೆ ಅವಕಾಶವಾಗುತ್ತದೆ

ಡಾ ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಏಳು ಜಿಲ್ಲೆಗಳಲ್ಲಿ ಸರ್ಕಾರ ಅಧವಾ ಖಾಸಗಿ ವಲಯದಲ್ಲಿ, ಎರಡು ವಲಯದಲ್ಲಿ ಮೆಡಿಕಲ್ ಕಾಲೇಜುಗಳು ಇಲ್ಲದಂಧ ಜಿಲ್ಲೆಗಳು ಇವೆ ಹಾವೇರಿ, ಗದಗ್, ಉತ್ತರಕನ್ನಡ, ಕೊಡಗು, ಚಾಮರಾಜನಗರ, ಕೊಪ್ಪಳ ಹಾಗೂ ಮತ್ತೊಂದು ಜಿಲ್ಲೆಯಲ್ಲಿ ಸರ್ಕಾರಿ ಆಧವಾ ಖಾಸಗಿ ವತಿಯಿಂದ ಮೆಡಿಕಲ್ ಕಾಲೇಜುಗಳು ಇಲ್ಲ ಆಂಧ ಕಡೆ ಯಾರು ಖಾಸಗಿಯವರು ರಿಸೋರ್ಸ್‌ಸ್ ಇದ್ದವರು ಮುಂದೆ ಬರುತ್ತಾರೆ ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟು ಅಲ್ಲಿ

ಕಾಲೇಜನ್ನು ಪ್ರಾರಂಭ ಮಾಡುವಂಥದ್ದಕ್ಕೆ ಸರ್ಕಾರ ಉತ್ಸುಕವಾಗಿದೆ ಅದರ ಬಗ್ಗೆ ಅವರಿಗೆ ಏನು ಅನುಮಾನ ಬೇಡ

ಶ್ರೀ ಪ್ರಕಾಶ ಬಿ ಹುಕ್ಕೇರಿ ಮಾನ್ಯ ಸಚಿವರು ಮೂರು ಕಾಲೇಜುಗಳನ್ನು ಪ್ರಾರಂಭಮಾಡಿದ್ದೇವೆಂದು ಉತ್ತರಿಸಿದರು ಅದನ್ನು ನಾನು ಸ್ವಾಗತಿಸುತ್ತೇನೆ ಆ ಮೂರು ಕಾಲೇಜುಗಳಲ್ಲಿ ಬೆಳಗಾವಿಯಲ್ಲಿ ಕೂಡ ಒಂದು ಕಾಲೇಜು ಇದೆ ಆದರೆ, ತಾವೇನು 37 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದಿರಿ, ಅಲ್ಲಿ ಎರಡನೇ ಹಂತದ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ ಸರ್ಕಾರ ಅಕ್ಟೋಬರ್‌ನಲ್ಲಿ 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಅದರೆ, ಅಲ್ಲಿ ಇನ್ನು ಟೆಂಡರ್ ಫೈನಲೈಜ್ ಆಗಿಲ್ಲ ಇದರಿಂದ ಮುಂದಿನ ವರ್ಷ ಅಲ್ಲಿ ಕಾಲೇಜು ಮುಂದುವರಿಯುತ್ತದೆಯೋ ಇಲ್ಲವೋ ಎನ್ನುವ ಶಂಕೆ ವಿದ್ಯಾರ್ಥಿಗಳಲ್ಲಿ ಬಂದಿದೆ ಇದರ ಜೊತೆಗೆ ಅಲ್ಲಿ ಸಿಬ್ಬಂದಿಗಳನ್ನು ಕೂಡ ತುಂಬಿಲ್ಲ ಅಲ್ಲಿ ಸಿಬ್ಬಂದಿಗಳನ್ನು ಮೊದಲು ತುಂಬಬೇಕು ಇವೆಲ್ಲಾ ಮಾಡಿದರೆ ಮುಂದಿನ ವರ್ಷದಲ್ಲಿ ಕಾಲೇಜು ಮುಂದುವರಿಯುತ್ತದೆ ಇಲ್ಲದೇ ಹೋದರೆ ಕಾಲೇಜು ಮುಂದುವರಿಯುವುದಿಲ್ಲ ದಯವಿಟ್ಟು ಮಾನ್ಯ ಸಚಿವರು ಬೆಳಗಾವಿ ಮೆಡಿಕಲ್ ಕಾಲೇಜಿನ ಬಗ್ಗೆ ಸ್ವಲ್ಪ ಕಾಳಜಿ ತೆಗೆದುಕೊಳ್ಳಬೇಕು ಅಕ್ಟೋಬರ್‌ನಲ್ಲಿ ದುಡ್ಡು ಬಿಡುಗಡೆಯಾದರೂ ಇನ್ನೂ ಟೆಂಡರ್ ಕರೆದಿಲ್ಲ

ಅಧ್ಯಕ್ಷರು ಆಯಿತು ಬಿಡಿ, ಅವರು ಕಾಳಜಿ ತೆಗೆದುಕೊಳ್ಳುತ್ತಾರೆ

ಡಾ ವಿ ಎಸ್ ಆಚಾರ್ಯ ಮಾನ್ಯ ಅಧ್ಯಕ್ಷರೆ, ನಾವು ಮಾಡಿರುವಂಥದ್ದು ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಎರಡನೇ ವರ್ಷದ ಅಧ್ಯಯನದ ಪಾರ-ಪ್ರವಚನ ಪ್ರಾರಂಭವಾಗಬೇಕಾಗಿದೆ ಅದಕ್ಕೆ ಬೇಕಾದ ಎಲ್ಲಾ ಸಿದ್ದತೆಗಳನ್ನು ಮಾಡುತ್ತಿದ್ದೇವೆ ಅದಕ್ಕೆ ಪ್ರತಿ ಹದಿನೈದು ದಿವಸಕ್ಕೊಮ್ಮೆ ಮಾನೀಟರ್ ಮಾಡುತ್ತಿದ್ದೇವೆ ಬೆಳಗಾವಿ ಮೆಡಿಕಲ್ ಕಾಲೇಜಿನ ಎರಡನೇ ಹಂತದ ಕಟ್ಟಡದ ಟೆಂಡರ್ ಆಗುವಂಥದ್ದು ಸುಮಾರು 10–12 ದಿವಸ ತಡವಾಗಿದೆ ಅದನ್ನು ಮೇಕಪ್ ಮಾಡಲಿಕ್ಕೆ ಏನೇನು ಮಾಡಬೇಕೆಂದು 6ನೇ ತಾರೀಖಿಗೆ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಮತ್ತು ನಾನು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಒಂದು ಸಭೆಯನ್ನು ಕರೆದಿದ್ದೇವೆ ನಾವು ಖಂಡಿತವಾಗಿ we will touch up with the time

ಶ್ರೀ ಪ್ರಕಾಶ ಬಿ ಹುಕ್ಕೇರಿ ಮಾನ್ಯ ಸಚಿವರು ಅಕ್ಟೋಬರ್‌ನಲ್ಲಿ 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಇದುವರೆಗೆ ಟೆಂಡರ್ ಏಕೆ ಆಗಿಲ್ಲ? ಅದರ ಬಗ್ಗೆ ತಾವು ಹೇಳುತ್ತಿಲ್ಲ

ಅಧ್ಯಕ್ಷರು ಆಯಿತು ಬಿಡಿ, ಅದು ಬೇರೆ ಪ್ರಶ್ನೆ ಏಕೆ ಸುಮ್ಮನೆ ಕೇಳುತ್ತೀರಿ?

ಶ್ರೀ ಪ್ರಕಾಶ ಬಿ ಹುಕ್ಕೇರಿ ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ ಸಾರ್ ಅಕ್ಟೋಬರ್ ನಲ್ಲಿ ಹಣ ಬಿಡುಗಡೆಯಾದರೂ ಇನ್ನು ಟೆಂಡರ್ ಪ್ರೋಸೆಸ್ ಏಕೆ ಮುಗಿದಿಲ್ಲ ಇದರ ಬಗ್ಗೆ ತಾವು ಕಾಳಜಿ ವಹಿಸಬೇಕು ಅಲ್ಲವೆ?

ಅದ್ಯಕ್ಷರು ಮಾನ್ಯ ಸದಸ್ಯರು ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು ಇದು ಅದಕ್ಕೆ ಸಂಬಂದಪಟ್ಟ ಉಪ ಪ್ರಶ್ನೆಯಲ್ಲ ನಾನು ಅನೇಕ ಸಾರಿ ಹೇಳುತ್ತಿದ್ದರೂ ಕೂಡ ನೀವು ಹಿರಿಯ ಸದಸ್ಯರು ಈ ರೀತಿ ಮಾಡಿದರೆ ಹೇಗೆ?

ಡಾ ವಿ ಎಸ್ ಆಚಾರ್ಯ ಎಲ್ಲಾ ಪ್ರಯತ್ನವನ್ನು ಮಾಡಲಾಗುವುದು

ಆಸ್ಪತ್ರೆಗಳ ಸುಧಾರಣೆ ಹಾಗೂ ಮೇಲ್ದರ್ಜೆಗೇರಿಸುವುದು

33 (206) ಬಸವರಾಜು ಎ ಎಸ್ (ಅರಸೀಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಹಾಸನ ಜಿಲ್ಲೆಯಲ್ಲಿರುವ ಪ್ರಾಧಮಿಕ ಆರೋಗ್ಯ ಘಟಕ ಹಾಗೂ ಪ್ರಾಧಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಆಸ್ಪತ್ರೆ ಸಾರ್ವಜನಿಕ ಆಸ್ಪತ್ರೆಗಳ ಸಂಖ್ಯೆ ಎಷ್ಟು , (ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು) ,

ಆ) ಈ ಎಲ್ಲಾ ಆಸ್ಪತ್ರೆಗಳಿಗೂ ಸಮರ್ಪಕ ವೈದ್ಯರ, ತಂತ್ರಜ್ಞರ ಸಿಬ್ಬಂದಿಗಳು ಇರುವರೇ ,

ಇ) ಅರಸೀಕೆರೆ ಜೆ ಸಿ ಆಸ್ಪತ್ರೆಯನ್ನು 150 ಹಾಸಿಗೆಗಳುಳ್ಳದ್ದಾಗಿ ಪರಿವರ್ತಿಸಲಾಗಿದೆಯೇ ,

ಈ) ಹಾಗಿದ್ದಲ್ಲಿ, ಹಾಲಿ ಇರುವ ಸಿಬ್ಬಂದಿಗಳು ಮತ್ತು 150 ಹಾಸಿಗೆಯ, ಆಸ್ಪತ್ರೆಗೆ 100 ಹಾಸಿಗೆಯುಳ್ಳ ಸಿಬ್ಬಂದಿ ಸೌಲಭ್ಯ ಸಾಕಾಗುವುದೇ,

ಉ) ಅರಸೀಕೆರೆ ಕ್ಷೇತ್ರ ಮತ್ತು ತಾಲ್ಲೂಕಿನ ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗಿದೆ ,

ಊ) ಮೇಲಿನ ಸದರಿ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿ ಮತ್ತು ವೈದ್ಯರ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ,

ಋ) ಸುವರ್ಣ ಕರ್ನಾಟಕ ಯೋಜನೆಯಡಿ ಹೊಸದಾಗಿ ಆಸ್ಪತ್ರೆ ತೆರೆಯುವ ಯೋಜನೆ ಸರ್ಕಾರದಲ್ಲಿದೆಯೇ ,

ಎ) ಇದ್ದಲ್ಲಿ, ಇದು ಯಾವ ಹಂತದಲ್ಲಿದೆ ,

ಏ) ಅರಸೀಕೆರೆ ಆಸ್ಪತ್ರೆ ಅಂಬುಲೆನ್ಸ್ ವಾಹನವನ್ನು ಹೊಸದಾಗಿ ಕೊಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ , (ತಿಳಿಸುವುದು) ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ)

ವಿಧಾನಸಭಾ ಕ್ಷೇತ್ರ	ಸಾರ್ವಜನಿಕ ಆಸ್ಪತ್ರೆ	ಸ ಆರೋಗ್ಯ ಕೇಂದ್ರ	ಪ್ರಾ ಆರೋಗ್ಯ ಕೇಂದ್ರ	ಪ್ರಾ ಆರೋಗ್ಯ ಘಟಕ
ಬೇಲೂರು	1	–	7	4
ಸಕಲೇಶಪುರ	1	–	13	8
ಹಾಸನ	1	–	9	5
ಅರಕಲಗೂಡು	1	1	8	6
ಹೊಳೆನರಸೀಪುರ	1	3	14	6
ಶ್ರವಣಬೆಳಗೊಳ	1	3	10	10
ಗಂಡಸಿ	–	2	10	8
ಅರಸೀಗೆರೆ	1	1	7	3

ಆ) ಕೆಲವು ವೈದ್ಯರು, ತಂತ್ರಜ್ಞರು ಹಾಗೂ ಸಿಬ್ಬಂದಿಗಳ ಕೊರತೆ ಇರುತ್ತದೆ

ಇ) ಹೌದು

ಈ) ಹೆಚ್ಚುವರಿ ಸಿಬ್ಬಂದಿ ಮಂಜೂರು ಮಾಡಲಾಗಿದ್ದು ನೇಮಕಾತಿ ಕಾರ್ಯ ಪ್ರಕ್ರಿಯೆಯಲ್ಲಿದೆ

ಉ) ಈಗಾಗಲೇ ಮೇಲ್ದರ್ಜೆಗೇರಿಸಿರುವ ಜೆ ಸಿ ಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಟ್ಟಡ ಕಟ್ಟಲು ಕ್ರಮ ತೆಗೆದುಕೊಳ್ಳಲಾಗಿದೆ

ಊ) ವಿಶೇಷ ನೇರ ನೇಮಕಾತಿ ಸಮಿತಿಯಿಂದ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿನ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅಂತಿಮ ಹಂತದಲ್ಲಿದ್ದು ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಎರಡನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದು ಕೊಳ್ಳಲಾಗುವುದು

2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿ ಆಹ್ವಾಹಿಸಲಾಗಿದ್ದು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲಾಗುವುದು ಇದಲ್ಲದೇ ಗುತ್ತಿಗೆ ಆಧಾರದ ಮೇರೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

ಋ) ಮತ್ತು ಎ) ಹೊಸ ಆಸ್ಪತ್ರೆ ತೆರೆಯುವ ಉದ್ದೇಶ ಇರುವುದಿಲ್ಲ ಈ ವರ್ಷ 63 ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ

ಏ) ಆಂಬ್ಯುಲೆನ್ಸ್ ವಾಹವನ್ನು ಹೊಸದಾಗಿ ನೀಡಲಾಗಿರುತ್ತದೆ

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ದೊರೆತ್ತಿಲ್ಲವೆಂದು ನನ್ನ ಭಾವನೆ ಅರಸೀಕೆರೆ ತಾಲ್ಲೂಕಿನಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಸಮರ್ಪಕವಾದಂಥ ಡಾಕ್ಟರ್‌ಗಳಾಗಲೀ ಸಿಬ್ಬಂದಿಗಳಾಗಲೀ ಯಾರೂ ಇಲ್ಲಿ ಇಲ್ಲ ಆದರೆ, ನಾನು ಮಾನ್ಯ ಆರೋಗ್ಯ ಸಚಿವರಿಗೆ ಅನೇಕ ಬಾರಿ ತಿಳಿಸಿದರೂ ಕೂಡ ಇವತ್ತಿನವರೆಗೆ ಕಾರ್ಯಗತ ಮಾಡಿಲ್ಲ ಅದನ್ನು ಯಾವ ಕಾರಣಕ್ಕಾಗಿ ಮಾಡಿಲ್ಲವೆಂದು ತಿಳಿಸುತ್ತೀರಾ? ಅರೀಸೀಕೆರೆ ತಾಲ್ಲೂಕು ಪ್ರಮುಖವಾದಂಥ ವ್ಯಾಪಾರಿ ಕೇಂದ್ರ, ಜಂಕ್ಷನ್ ಇದೆ, ಇಲ್ಲಿ ಇರತಕ್ಕಂಥ ಜೆ ಸಿ ಆಸ್ಪತ್ರೆಯಲ್ಲಿ ಸರಿಯಾದಂಥ ತಜ್ಞರು ಇಲ್ಲ ಮೂಳೆ ಡಾಕ್ಟರುಗಳು ಇಲ್ಲ ಫಿಜಿಷಿಯನ್ ನಾಗಭೂಷಣ ರವರು ಸುಮಾರು ಎರಡು ವರ್ಷಗಳ ಕಾಲ ರಜೆ ಹಾಕಿದ್ದಾರೆ ಜೊತೆಗೆ ಅವರು ವಿ ಅರ್ ಎಸ್ ಕೇಳಿದ್ದಾರೆ ಇವತ್ತಿನವರೆಗೆ ಅವರಿಗೆ ವಿ ಅರ್ ಎಸ್ ಕೊಟ್ಟಿಲ್ಲ ಅವರಿಗೆ ಯಾವ ಕಾರಣಕ್ಕಾಗಿ ವಿ ಅರ್ ಎಸ್ ಕೊಟ್ಟಿಲ್ಲವೋ ಗೊತ್ತಿಲ್ಲ ಇವತ್ತಿನ ದಿವಸ ನರ್ಸಗಳು ಕೂಡ ಬಹಳ ಕಡಿಮೆ ಇದ್ದಾರೆ 20 ಜನ ನರ್ಸಗಳು ಇರುವಂಥ ಕಡೆ 10 ಜನ

ಮಾತ್ರ ನರ್ಸಗಳು ಇದ್ದಾರೆ ದಾದಿಗಳ ಬಗ್ಗೆ ಹೇಳುವುದಾದರೆ, ನಾಲ್ಕು ಜನ ಬೇಕಾಗಿರತಕ್ಕಂದ ಜಾಗದಲ್ಲಿ ಕೇವಲ ಇಬ್ಬರು ದಾದಿಗಳು ಮಾತ್ರ ಇದ್ದಾರೆ ಅದು ಯಾವ ಕಾರಣಕ್ಕಾಗಿ ಅವರನ್ನು ಅಲ್ಲಿಗೆ ಕೊಟ್ಟಿಲ್ಲವೋ ಗೊತ್ತಿಲ್ಲ ಅಲ್ಲಿ ಡಿ–ಗ್ರೂಪ್‌ನ ನೌಕರರು ರಾತ್ರಿ ಹೊತ್ತು ಕುಡಿದು ನರ್ತನ ಮಾಡುತ್ತಿರುತ್ತಾರೆ ಅವರು ನರ್ತನ ಮಾಡುತ್ತಿರಬೇಕಾದರೆ ಕೆಲವು ರೋಗಿಗಳಿಗೆ ಅದು ಮನರಂಜನೆಯ ಕಾರ್ಯಕ್ರಮವಾಗುತ್ತದೆ, ಕೆಲವು ರೋಗಿಗಳಿಗೆ ಅದು ನಿಜವಾಗಲೂ ತೊಂದರೆಯಾಗುತ್ತದೆ ರಂಗಸ್ವಾಮಿ ಮತ್ತು ಸೋಮೇಗೌಡ ಇವರಿಬ್ಬರನ್ನು ಡಿಸ್‌ಮಿಸ್ ಮಾಡಿ ಇಲ್ಲ ಅಂದ್ರೆ ಸಸ್ಪೆಂಡ್ ಮಾಡಿ ಇವರನ್ನು ಹೊರಗಡೆ ಹಾಕಿ ಎಂದು ನಮ್ಮ ಸಚಿವರಿಗೆ ಹೇಳಿದ್ದೆ ಇವತ್ತಿನವರೆಗೆ ಏನೂ ಮಾಡಿಲ್ಲ ಈ ಮಟ್ಟಕ್ಕೆ ಇರತಕ್ಕಂಥ ಜೆ ಸಿ ಆಸ್ಪತ್ರೆ ತುಂಬಾ ಹದಗೆಟ್ಟಿದೆ ಹಾಗೇಯೇ ಜೆ ಸಿ ಆಸ್ಪತ್ರೆಯ ಬಗ್ಗೆ

ಅಧ್ಯಕ್ಷರು ಮಾನ್ಯ ಬಸವರಾಜುರವರೆ, ನೀವೇನು ಪ್ರಶ್ನೆ ಕೇಳುತ್ತೀದ್ದಿರೋ ಹೇಗೆ ಈ ರೀತಿ ಆದರೆ ಮುಗಿಸಲಿಕ್ಕೆ ಆಗುವುದಿಲ್ಲ

ಶ್ರೀ ಎ ಎಸ್ ಬಸವರಾಜು ಅರಸೀಕೆರೆ ಆಸ್ಪತ್ರೆಗೆ 150 ಹಾಸಿಗೆಗಳು ಮಂಜೂರೂ ಆಗಿದ್ದರೂ ಅಲ್ಲಿ ಇವತ್ತು 97 ಹಾಸಿಗೆಗಳು ಮಾತ್ರ ಇವೆಯಲ್ಲ ಯಾವ ಕಾರಣಕ್ಕಾಗಿ ಇದುವರೆಗೆ ಮಾಡಿಲ್ಲ?

ಅಧ್ಯಕ್ಷರು ಏಕೆಂದರೆ ಅವರ ನೋವುಗಳೇ ಜಾಸ್ತಿ ಆಗಿವೆ

ಶ್ರೀ ಎ ಎಸ್ ಬಸವರಾಜು ದಿನಾಂಕ 30–3–92 ರಲ್ಲಿ ಮಂಜೂರು ಆಗಿ 15 ವರ್ಷಗಳಾಗಿದ್ದರೂ ಇನ್ನು 150 ಹಾಸಿಗೆಗಳನ್ನು ಸಂಪೂರ್ಣವಾಗಿ ಏಕೆ ಹಾಕಿಲ್ಲ? ಅಲ್ಲಿಗೆ ಸಮರ್ಪಕವಾದಂಥ ಸಿಬ್ಬಂದಿಗಳನ್ನು ಏಕೆ ಹಾಕಿಲ್ಲವೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ ನನ್ನ ಕೆಲವು ಪ್ರಶ್ನೆಗಳಿಗೆ ಮಾನ್ಯ ಸಚಿವರು ಇನ್ನು ಸಮರ್ಪಕವಾದ ಉತ್ತರ ಕೊಟ್ಟಿಲ್ಲ ಅರಿಸೀಕೆರೆಯಲ್ಲಿ ಇವತ್ತು ಆಂಬ್ಯೂಲೆನ್ಸ್ ಇಲ್ಲ ಆಂಬ್ಯೂಲೆನ್ಸ್ ಕೊಡಿ ಎಂದು ಹಿಂದೆ ಮಾನ್ಯ ಚೆಲುವರಾಯ ಸ್ವಾಮಿಯವರು ಇದ್ದಾಗ ಕೇಳಿದ್ದರೂ ಕೊಡಲಿಲ್ಲ ಆದರೆ ಮಾನ್ಯ ಮಲ್ಯರವರ ಎಂ ಪಿ ಫಂಡ್‌ನಲ್ಲಿ ಒಂದು ಆಂಬ್ಯೂಲೆನ್ಸ್ ಬಂತು ಆದರೆ ಆಂಬ್ಯೂಲೆನ್ಸ್ ಬಂದರೂ ಕೂಡ ಅದಕ್ಕೆ ಚಾಲಕ ಇಲ್ಲ

ಅಧ್ಯಕ್ಷರು ಆಯಿತು ಎಲ್ಲಾ ಕೊಡಿಸುತ್ತಾರೆ ಕುಳಿತುಕೊಳ್ಳಿ

ಶ್ರೀ ಎ ಎಸ್ ಬಸವರಾಜು ಕೆಲವು ಆಸ್ಪತ್ರೆಗಳಲ್ಲಿ ಚಾಲಕರಿಲ್ಲ, ಚಾಲಕರಿದ್ದರೆ ಆಂಬ್ಯೂಲೆನ್ಸ್ ಇಲ್ಲ ಯಾವ ಕಾರಣಕ್ಕೋಸ್ಕರ ಈ

ರೀತಿಯಾಗುತ್ತದೆಯೋ ಗೊತ್ತಿಲ್ಲ ಇವತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ ಮಾತ್ರೆ ಕೊಡತಕ್ಕಂಥ ಕಾಂಪೌಂಡರ್ ಇಲ್ಲ ಈ ಮಟ್ಟಕ್ಕೆ ಆಸ್ಪತ್ರೆಗಳು ಇರಬೇಕಾದರೆ ಅಲ್ಲಿ ಬಹಳಷ್ಟು ಸಮಸ್ಯೆಗಳು ಇವೆ ಆ ಎಲ್ಲಾ ಸಮಸ್ಯೆಗಳಿಗೆ ಸರಿಯಾದಂಥ ಉತ್ತರ ಕೊಟ್ಟಿಲ್ಲ ನನ್ನ ಎಲ್ಲಾ ಪ್ರಶ್ನೆಗಳಿಗೆ ದಯಮಾಡಿ ಉತ್ತರ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ ಈಗಾಗಲೇ ಅರಿಸೀಕೆರೆ ಆಸ್ಪತ್ರೆಯನ್ನು 150 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗಿದೆ ಸದಸ್ಯರು ಮರೆತ್ತಿದ್ದಾರೆ, ಈಗ ಅದಕ್ಕೆ ಬೇಕಾದಂಥ ಮೇಲ್ದರ್ಜೆಗೇರಿಸಿದಂಥ ಆಸ್ಪತ್ರೆಗೆ ಕಟ್ಟಡ ಕಟ್ಟುವುದಕ್ಕೂ ಹಣ ಬಿಡುಗಡೆ ಮಾಡಲಾಗಿದೆ ಕಟ್ಟಡ ಕೆಲಸ ನಡೆಯುವುದಕ್ಕೆ ಈಗಾಗಲೇ ನಾವು ವ್ಯವಸ್ಥೆಯನ್ನು ಮಾಡಿದ್ದೇವೆ ಈಗ ರಾಜ್ಯದಲ್ಲಿ ಏನು ಡಾಕ್ಟರ್‌ಗಳ ಕೊರತೆ ಇದೆ, ಅದಕ್ಕೆ ಈ ಸಮ್ಮಿಶ್ರ ಸರಕಾರ ಬಂದ ಮೇಲೆ ಸುಮಾರು 500 ಡಾಕ್ಟರ್‌ಗಳನ್ನು ನೇಮಕಾತಿ ಮಾಡಬೇಕೆಂದು ನಿರ್ಧರಿಸಿ, ವಿಶೇಷ ನೇಮಕಾತಿಯಡಿಯಲ್ಲಿ ಸರ್ಕಾರ ಈಗಾಗಲೇ ನೇಮಕಾತಿಯ ಪ್ರಕ್ರಿಯೆಯನ್ನು ಮಾಡಿದೆ ಈಗಾಗಲೇ 250 ಜನ ನೇಮಕಾತಿಗಾಗಿ ಸಂದರ್ಶನ ನಡೆದು ಅಂತಿಮ ಹಂತದಲ್ಲಿದ್ದು ಇನ್ನು 10–15 ದಿವಸದಲ್ಲಿ ನೇಮಕಾತಿಯ ಪ್ರಕ್ರಿಯೆ ಮುಗಿಯುತ್ತದೆ, ಆ ಸಂದರ್ಭದಲ್ಲಿ ಎಲ್ಲೆಲ್ಲಿ ಸ್ಪೆಷಲಿಸ್ಟ್ ಪೋಸ್ಟ್ ಖಾಲಿ ಇದೆ ಆ ಸಂದರ್ಭದಲ್ಲಿ ತುಂಬುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಮತ್ತೆ ಅದರ ಜೊತೆಗೆ 250 ಡಾಕ್ಟರ್ ಹುದ್ದೆಗಳ ನೇಮಕಾತಿಗೆ ಆದೇಶವನ್ನು ಕೊಟ್ಟಿದ್ದೇವೆ ಒಟ್ಟು 500 ಜನರನ್ನು ತುಂಬಿಕೊಳ್ಳುತ್ತಿದ್ದೇವೆ ಹಾಗೆಯೇ, 2807 ಅರೆ ವೈದ್ಯಕೀಯ ಸಿಬ್ಬಂದಿ ಪ್ಯಾರಾ ಮೆಡಿಕಲ್ ಸ್ಟ್ಯಾಫ್ ನೇಮಕಾತಿಗೆ ಅರ್ಜಿಗಳನ್ನು ಕರೆಯಲಾಗಿದೆ ಈ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ನಾವು ಅವಕಾಶ ಮಾಡಿ ಕೊಡುತ್ತಿದ್ದೇವೆ ಮತ್ತೆ ಸುವರ್ಣ ಕರ್ನಾಟಕ ಯೋಜನೆಯಡಿಯಲ್ಲಿ ಹೊಸದಾಗಿ PHC ಪ್ರಾರಂಭ ಮಾಡಲಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ ಸದ್ಯಕ್ಕೆ ಈ ರೀತಿಯಾದ ಪ್ರಸ್ತಾವನೆಗಳು ಸರ್ಕಾರದ ಮುಂದಿಲ್ಲ ಹೊಸದಾಗಿ PHC ಪ್ರಾರಂಭ ಮಾಡಬೇಕಾದರೆ, 30 ಸಾವಿರ ಜನ ಸಂಖ್ಯೆ ಇರಬೇಕೆಂದು ಕೇಂದ್ರ ಸರ್ಕಾರದ ನಿಯಮವಿದೆ ಆದರೆ, ಈಗ ಹೊಸದಾಗಿ PHC ಪ್ರಾರಂಭ ಮಾಡಬೇಕೆಂಬ ಉದ್ದೇಶ ಸರ್ಕಾರದ ಮುಂದಿಲ್ಲ ಆದರೆ, 30 ಅಥವಾ 50 ಹಾಸಿಗೆ ಹೊಂದಿರುವಂಥ ಸರ್ಕಾರದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ 100 ಹಾಸಿಗೆ ಇರತಕ್ಕಂಥ ವ್ಯವಸ್ಥೆ

ಮಾಡಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ಮಾಡಿ ಇದಕ್ಕೆ ಸಂಬಂಧಪಟ್ಟಂತಹ ಆದೇಶವನ್ನು ಸಹ ಹೊರಡಿಸಿದ್ದೇವೆ ಹಾಗೆಯೇ, 63 ತಾಲ್ಲೂಕು ಆಸ್ಪತ್ರೆಗಳನ್ನು ಅಪ್ ಗ್ರೇಡ್ ಮಾಡುವುದರ ಜೊತೆಗೆ ಅದಕ್ಕೆ ಬೇಕಾಗಿರತಕ್ಕಂಥ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಬೇಕಾಗಿರತಕ್ಕಂಥ ಹಣವನ್ನೂ ಸಹ ಬಿಡುಗಡೆ ಮಾಡುತ್ತೇವೆ ಅರಸೀಕೆರೆ ಆಸ್ಪತ್ರೆಗೆ ಆಂಬ್ಯುಲೆನ್ಸ್ ವಾಹನವನ್ನು ಕೇಳಿದ್ದಾರೆ ಆದರೆ, ಈಗಾಗಲೇ 2005ರಲ್ಲಿ ಒಂದು ಆಂಬ್ಯುಲೆನ್ಸ್ ವಾಹನವನ್ನು ನೀಡಿದ್ದೇವೆ ಆದ್ದರಿಂದ, ಉಳಿದಂಥ ನೇಮಕಾತಿಗಳನ್ನು ಮಾಡುವುದಕ್ಕಾಗಿ ಸರ್ಕಾರ ಈಗಾಗಲೇ ಇಂಟರ್‌ವ್ಯೂ ಕಾಲ್ ಮಾಡಿದೆ ಈ ಹುದ್ದೆಗಳನ್ನು ನೇಮಕಾತಿ ಮಾಡಿದ ನಂತರ ಮಾನ್ಯ ಸದಸ್ಯರು ಕೇಳಿರತಕ್ಕಂಥ ಹುದ್ದೆಗಳನ್ನು ತುಂಬುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಸಮಸ್ಯೆ ಇರತಕ್ಕಂಥದು ಕಾಂಟ್ರಾಕ್ಟ್ ಡಾಕ್ಟರ್ಸ್‌ದ್ದು ಗುತ್ತಿಗೆ ಆಧಾರದ ಮೇಲೆ MBBS ಮಾಡಿರತಕ್ಕಂಥ ಡಾಕ್ಟರ್‌ಗಳನ್ನು ಆಸ್ಪತ್ರೆಗೆ ಕೊಡುತ್ತಿಲ್ಲ ಮತ್ತೆ ಗುತ್ತಿಗೆಯ ಮೇಲೆ ಬಂದಿರತಕ್ಕಂಥ ಡಾಕ್ಟರ್‌ಗಳ್ಯಾರು ಮೂರ್ನಾಲ್ಕು ತಿಂಗಳ ಮೇಲೆ ಇರುವುದಿಲ್ಲ ಜೊತೆಗೆ BSIM ಡಾಕ್ಟರ್‌ಗಳನ್ನು ಹಾಕುತ್ತಿದ್ದೀರಿ Night dutyಗೆ ಹಾಕಿ ಪ್ರಿಯಾರಿಟಿ ಮೇಲೆ ಎಂದು ನೈಟ್ ಬರುವ ಪೇಷೆಂಟ್ಸ್ ಯಾರು? ಆದೇಶವನ್ನು ಮಾಡಿದ್ದೀರಿ ಎಮರ್ಜೆನ್ಸಿ ಇರುವಂಥವರು ಪೇಸೆಂಟ್‌ಗಳು ರಾತ್ರಿ ಸಮಯದಲ್ಲಿ ಬರುತ್ತಾರೆ Without MBBS ಇರುವಂತಹವರನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ನೈಟ್ ಡ್ಯೂಟಿ ಮಾಡಿ ಎಂದು ತಾವು ತೀರ್ಮಾನ ತೆಗೆದುಕೊಂಡು ಈ ರಾಜ್ಯದಲ್ಲಿರತಕ್ಕಂಥ ಜನರನ್ನು ಏನು ಮಾಡಬೇಕೆಂದ್ದೀರಿ ಎನ್ನತಕ್ಕಂಥದನ್ನು ಹೇಳಬೇಕಾಗುತ್ತದೆ ಇವತ್ತಿನ ದಿವಸ ಜಿಲ್ಲೆಗಳಲ್ಲಿರತಕ್ಕಂಥ ಆಸ್ಪತ್ರೆಗಳಿಗೆ MBBS ಮಾಡಿರತಕ್ಕಂಥ ಒಬ್ಬ ಡಾಕ್ಟರ್ ಕೂಡ ಗುತ್ತಿಗೆ ಆಧಾರದ ಮೇಲೆ ಬರುತ್ತಿಲ್ಲ ಆದ್ದರಿಂದ ಇದನ್ನು ಯಾವರೀತಿಯಾಗಿ ಇತ್ಯರ್ಥ ಮಾಡುತ್ತೀರಿ ಎಂಬುದನ್ನು ತಾವು ಹೇಳಬೇಕು ಇದು ಕೇವಲ ಅರಸೀಕೆರೆಯ ಸಮಸ್ಯೆಯಲ್ಲ ಇದು ಇಡೀ ರಾಜ್ಯದಲ್ಲಿರತಕ್ಕಂಥ ಸಮಸ್ಯೆಯಾಗಿದೆ ಇವತ್ತಿನದಿವಸ MBBS ಮಾಡಿರತಕ್ಕಂಥ ಡಾಕ್ಟರ್‌ಗಳಿಲ್ಲ ಮತ್ತೆ BSIM ರವರನ್ನು ಇವರು ಅಲೋ ಮಾಡಿದ್ದಾರೆ ಇವತ್ತಿನದಿವಸ ಎಲ್ಲಾ ಪೋಸ್ಟ್‌ಗಳಿಗೆ BSIM ರವರು ಅರ್ಜಿ ಹಾಕಿಕೊಂಡು ಬರುತ್ತಿದ್ದಾರೆ ಅವರಿಗೆ ಸರ್ಜರಿ ಮತ್ತು ಪೋಸ್ಟ್ ಮಾರ್ಟ್‌ಮ್ ಮಾಡುವುದಕ್ಕೂ ಸಹ ಬರುವುದಿಲ್ಲ

ಎಮರ್ಜೆನ್ಸಿ ಕೇಸ್‌ಗಳು ರಾತ್ರಿಯ ಸಮಯದಲ್ಲಿ ಹೆಚ್ಚಾಗಿ ಬರುತ್ತವೆ ಆದ್ದರಿಂದ, ಅವರನ್ನು ನೈಟ್ ಡ್ಯೂಟಿಗೆ ಹಾಕಿ ಎಂದು ತಾವು ಆದೇಶ ಕೊಟ್ಟಿದ್ದೀರಿ ಈ ರೀತಿಯಾದರೆ ರಾಜ್ಯದ ಗತಿ ಏನು?

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಎಲ್ಲೆಲ್ಲಿ MBBS ಮಾಡಿರತಕ್ಕಂಥ ಡಾಕ್ಟರ್‌ಗಳು ಬರುತ್ತಿಲ್ಲವೋ ಅಂಥ ಕಡೆ ಮಾತ್ರ ಆಯುರ್ವೇದ ಡಾಕ್ಟರ್‌ಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ತಾವೂ ಎಲ್ಲೂ ಕೂಡ ಮಾಡಿಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಇವತ್ತಿನ ದಿವಸ ಎಲ್ಲಾ ಕಡೆ BSIM ಮಾಡಿರತಕ್ಕಂಥವರೆ ಇದ್ದಾರೆ How did you allow them to practice in the Hospital? ಇವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮೆಡಿಕಲ್ ಕೌನ್ಸಿಲ್‌ನ ಪರ್ಮಿಷನ್ ಇದೆಯೇ ಎನ್ನತಕ್ಕಂಥದ್ದನ್ನು ತಾವು ಹೇಳಬೇಕು ಇದಕ್ಕೆ Medical Council ಒಪ್ಪಿಕೊಂಡಿದೆಯೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಆಯುರ್ವೇದ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿಕೊಂಡಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು ಒಂದೇ ಸಾರಿ ಎಲ್ಲರೂ ಮಾತನಾಡಿದರೆ ಹೇಗೆ? ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಎಲ್ಲಾ ಪಕ್ಷದ ಮುಖಂಡರ ಸಭೆಯನ್ನು ನಿಮ್ಮ ಛೇಂಬರ್‌ನಲ್ಲಿ ಕರೆದು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಿ ಇದು ಇಡೀ ರಾಜ್ಯ ವ್ಯಾಪ್ತಿಯ ಸಮಸ್ಯೆಯಾಗಿದೆ ಆದ್ದರಿಂದ ಮುಂಖಡರ ಸಭೆ ಮಾಡಿ ಆದಷ್ಟುಬೇಗ ಕ್ರಮ ತೆಗೆದುಕೊಳ್ಳಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಕೊಡದೆ ಅವರು ಕೆಲಸ ಮಾಡುವುದಕ್ಕೆ ಬರುವುದಿಲ್ಲ

ಅಧ್ಯಕ್ಷರು ಮಾನ್ಯ ಮಾಧುಸ್ವಾಮಿಯವರೆ, ನಾನು ಹೇಳುವುದೇನೆಂದರೆ, ಅವರಿಗೆ ಅಲೋ ಮಾಡುತ್ತಾರೆಯೋ ಅಥವಾ ಇಲ್ಲವೋ ಮತ್ತು ಏತಕ್ಕೆ ಈ ರೀತಿಯಾಗಿ ಮಾಡಿದ್ದೀರಿ ಎನ್ನತಕ್ಕಂಥ ವಿಷಯಗಳೆಲ್ಲವನ್ನು ತಾವೆಲ್ಲರೂ ಒಂದು ಸಭೆ ಸೇರಿ ಮಾತನಾಡಿ ಈ ಒಂದು ಉದ್ದೇಶಕ್ಕಾಗಿಯೇ ಎಲ್ಲಾ

ಪಕ್ಷದ ಮುಖಂಡರನ್ನು ಕರೆದು ಸಭೆ ಮಾಡಿ ಎಂದು ನಾನು ಹೇಳಿದ್ದೇನೆ ಈಗ ಸುಮ್ಮನೆ ಗಲಾಟೆ ಮಾಡಿದರೆ ಸಮಸ್ಯೆ ಪರಿಹಾರವಾಗುತ್ತದೆಯೇ? ಪರಿಹಾರವಾಗುವುದಾದರೆ ಮಾಡಿ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಇವತ್ತಿನದಿವಸ ಎಲ್ಲಾ ಕಡೆ ಆಯುರ್ವೇದಿಕ್ ಡಾಕ್ಟರ್‌ಗಳನ್ನು ಹಾಕಿ ಜನರುಗಳನ್ನು ಕೊಲ್ಲಬೇಕೆಂದು ಮಾಡಿದ್ದೀರಾ?

ಶ್ರೀ ಎ ಎಸ್ ಬಸವರಾಜು ಮಾನ್ಯ ಅಧ್ಯಕ್ಷರೆ, ಅರಸೀಕೆರೆಯಲ್ಲಿರುವ ಜೆ ಸಿ ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನಾಗಿ ಮಾರ್ಪಾಡು ಮಾಡಿ ಎಂದು ಪ್ರಸ್ತಾವನೆ ಕೊಟ್ಟು 15 ವರ್ಷಗಳಾಗಿವೆ ಆದರೆ, ಇದೂವರೆಗೂ ಮಾಡಿಲ್ಲ ಸಿಬ್ಬಂದಿ ವರ್ಗ ಹಾಕುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕು?

ಅಧ್ಯಕ್ಷರು ಮಾನ್ಯ ಬಸವರಾಜುರವರೆ, ನಿಮ್ಮ ಪ್ರಶ್ನೆ ಮುಗಿದಿದೆ ಮಾನ್ಯ ಮಂತ್ರಿಗಳು ಎಲ್ಲರನ್ನೂ ಕರೆದು ಈ ವಿಷಯದ ಬಗ್ಗೆ ಚರ್ಚೆ ಮಾಡಿ ಇದಕ್ಕೊಂದು ನೀತಿಯನ್ನು ರೂಪಿಸುತ್ತಾರೆ ದಯಮಾಡಿ ತಾವು ಕುಳಿತುಕೊಳ್ಳಿ

ಶ್ರೀ ಎ ಎಸ್ ಬಸವರಾಜು ನನ್ನ ಕ್ಷೇತ್ರದಲ್ಲಿ ನಾಲ್ಕು ಆಸ್ಪತ್ರೆಗಳಿವೆ ಇವುಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ ಆದರೆ, ಇನ್ನೂ ಮಾಡಿಲ್ಲ ದಯವಿಟ್ಟು ಅದನ್ನು ಮಾಡಿಕೊಡುವುದಕ್ಕೆ - ಹೇಳಿ

ಅಧ್ಯಕ್ಷರು ಎಲ್ಲದಕ್ಕೂ ಅಸ್ತು ಎಂದು ಹೇಳಿಬಿಡಿ ಹೋಗಲಿ ಆಗಲಾದರೂ ಸಮಾಧಾನವಾಗುತ್ತಾರೆ ವಿಷಯವಂತೂ ಮುಕ್ತಾಯವಾಗುವುದಿಲ್ಲ ಮುಂದಿನ ಪ್ರಶ್ನೆ ಮಾನ್ಯ ಬಸವರಾಜ ರಾಯರೆಡ್ಡಿಯವರದು ಅವರು ಬಂದಿಲ್ಲ ಈಗ ಮುಂದಿನ ಪ್ರಶ್ನೆ ಮಾನ್ಯ ಸಿದ್ದು ಸಾವದಿ ಅವರದು

ತಾಲ್ಲೂಕ ಮಟ್ಟದ ಎಲ್ಲಾ ಆಸ್ಪತ್ರೆಗಳಿಗೆ ಸಿಬ್ಬಂದಿಗಳನ್ನು ಒದಗಿಸುವ ಕುರಿತು

36 (140) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು - ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಹಾಗೂ ಇತರೆ ಆಸ್ಪತ್ರೆಗಳ ಸಂಖ್ಯೆ ಎಷ್ಟು, (ಸಂಪೂರ್ಣ . ವಿವರ ಒದಗಿಸುವುದು),

ಆ) ಈ ಎಲ್ಲಾ ಚಿಕಿತ್ಸಾ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಕೊರತೆ ಎಷ್ಟು,

ಇ) ಅದನ್ನು ಯಾವಾಗ ಪೂರೈಸಲಾಗುವುದು ,

ಈ) ಇಲಾಖೆಗೆ ಸಂಬಂಧಿಸಿದ ಸಿಬ್ಬಂದಿ ಆಯಾಕೇಂದ್ರ ಸ್ಥಾನದಲ್ಲಿ ಇರುವಂತೆ ಮಾಡಲು ನಿಯಮಾವಳಿಗಳಿವೆಯೇ ,

ಉ) ಇದ್ದಲ್ಲಿ ಅವುಗಳು ಜಾರಿಯಲ್ಲಿವೆಯೇ ,

ಊ) ಚಿಕಿತ್ಸಾ ಕೇಂದ್ರಗಳಲ್ಲಿ ಯಾವ ವೈದ್ಯರು ಯಾವ ಯಾವ ಚಕಿತ್ಸೆಗಳನ್ನು ನೀಡಬಹುದು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಒಂದು ತಾಲ್ಲೂಕು ಆಸ್ಪತ್ರೆ ಒಂದು ಸಮುದಾಯ ಆರೋಗ್ಯ ಕೇಂದ್ರ ಹಾಗೂ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರದ ಆಸ್ಪತ್ರೆ ಜಮಖಂಡಿ ತಾಲ್ಲೂಕಿನಲ್ಲಿದೆ

ತಾ ಆಸ್ಪತ್ರೆ	ಜಮಖಂಡಿ	100 ಹಾಸಿಗೆ
ಸ ಅ ಕೇಂದ್ರ	ರಬಕವಿ ಬನಹಟ್ಟಿ	30 ಹಾಸಿಗೆ
ಪ್ರಾ.ಆ ಕೇಂದ್ರ	ಗೋಡೆ	6 ಹಾಸಿಗೆ
	ಹಿಪ್ಪರಗಿ	6 ಹಾಸಿಗೆ
	ಚಿಮ್ಮಡ	6 ಹಾಸಿಗೆ
	ಕೊಣ್ಣೂರು	6 ಹಾಸಿಗೆ
	ಲಿಂಗನೂರು	6 ಹಾಸಿಗೆ
	ಸಾವಳಗಿ	6 ಹಾಸಿಗೆ
	ತೇರದಾಳ	6 ಹಾಸಿಗೆ
ಎನ್ ಎಲ್ ಸಿ ಸಿ	ಜಮಖಂಡಿ	

ಆ) ಈ ಎಲ್ಲಾ ಚಿಕಿತ್ಸಾ ಕೇಂದ್ರಗಳಲ್ಲಿರುವ ಸಿಬ್ಬಂದಿಗಳ ಕೊರತೆ 45

ಇ) ವಿಶೇಷ ನೇರ ನೇಮಕಾತಿ ಸಮಿತಿಯಿಂದ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಅಂತಿಮ ಹಂತದಲ್ಲಿದ್ದು ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಎರಡನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು

2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲಾಗುವುದು ಇದಲ್ಲದೇ ಗುತ್ತಿಗೆ ಆಧಾರದ ಮೇರೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

ಈ) ಹೌದು

ಉ) ಜಾರಿಯಲ್ಲಿದೆ

ಊ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಎಲ್ಲಾ ಪ್ರಾಥಮಿಕ ಚಿಕಿತ್ಸೆಗಳನ್ನು ನೀಡುತ್ತಾರೆ

ಸಾರ್ವಜನಿಕ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರದ ಹಾಸಿಗೆಗಳ ಆಸ್ಪತ್ರೆಗಳಲ್ಲಿ ತಜ್ಞತೆಗೆ ತಕ್ಕಂತೆ ತಜ್ಞರು ಚಿಕಿತ್ಸೆ ನೀಡುತ್ತಾರೆ

ಶ್ರೀ ಸಿದ್ದು ಸಾವದಿ ಮಾನ್ಯ ಅಧ್ಯಕ್ಷರೆ, ನಮ್ಮ ಜಮಖಂಡಿ ವಿಧಾನ ಸಭಾ ಕ್ಷೇತ್ರ ಸುಮಾರು ನಾಲ್ಕು ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಮೂರು ದೊಡ್ಡ ಪಟ್ಟಣಗಳನ್ನು ಸಹ ಹೊಂದಿದೆ ಆದರೆ, ಅಲ್ಲಿ ಬೆರಳೆಣಿಕೆಯಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜನರಲ್ ಆಸ್ಪತ್ರೆಗಳಿವೆ ಆದರೂ ಕೂಡ ಇಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಇದೆ ಮಾನ್ಯ ಸಚಿವರ ಗಮನಕ್ಕೆ ಈ ವಿಷಯವನ್ನು ಮೊದಲು ತಂದಿದ್ದೇನೆ ಆದ್ದರಿಂದ, ಕೊರತೆ ಇರುವ ಸಿಬ್ಬಂದಿಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ಮತ್ತೆ ಇಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸ ಬೇಕೆಂದು ಕಳೆದ ಎರಡು ವರ್ಷಗಳಿಂದಲೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಡುತ್ತಾ ಬರುತ್ತಿದ್ದೇನೆ ನಮ್ಮಲ್ಲಿ ಬನಹಟ್ಟಿ ಮತ್ತು ರಬಕವಿ ನಗರ ಸಭೆ ಇದೆ ಇದು ಸುಮಾರು ಒಂದು ಲಕ್ಷ ಜನಸಂಖ್ಯೆ ಹೊಂದಿರತಕ್ಕಂಥ ನಗರವಾಗಿದೆ ಆದರೆ, ಇಲ್ಲಿ ಕೇವಲ 30 ಹಾಸಿಗೆ ಹೊಂದಿರತಕ್ಕಂಥ ಒಂದು ಆಸ್ಪತ್ರೆ ಇದೆ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ 100 ಹಾಸಿಗೆಯ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆ ಆದ್ದರಿಂದ ಸದರಿ ಆಸ್ಪತ್ರೆಯನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುತ್ತದೆ ಹಾಗೆಯೇ, ತೇರದಾಳ್ ಪುರಸಭೆ ವ್ಯಾಪ್ತಿಯಲ್ಲಿ ಕೇವಲ ಪ್ರಾಥಮಿಕ ಚಿಕಿತ್ಸಾ ಕೇಂದ್ರವಿದೆ ಈ ಆಸ್ಪತ್ರೆಯನ್ನು ಸಹ ಮೇಲ್ದರ್ಜೆಗೇರಿಸಿ 30 ಹಾಸಿಗೆಯ ವ್ಯವಸ್ಥೆಯನ್ನು ಮಾಡಿಕೊಡಬೇಕೆಂಬ ಬೇಡಿಕೆಯನ್ನು ನಾನು ಈಗಾಗಲೇ ಇಟ್ಟಿದ್ದೇನೆ

ಆದ್ದರಿಂದ ಈ ಎಲ್ಲಾ ಆಸ್ಪತ್ರೆಗಳನ್ನು ಯಾವಾಗ ಮೇಲ್ದರ್ಜೆಗೇರಿಸ ಲಾಗುತ್ತದೆ ಎನ್ನತಕ್ಕಂಧ ವಿಷಯವನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳುತ್ತೇನೆ ಹಾಗೆಯೇ ಕೊರತೆ ಇರುವ ಸಿಬ್ಬಂದಿಗಳನ್ನು ಯಾವಾಗ ಒದಗಿಸಿ ಕೊಡುತ್ತೀರಿ?

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಗೆ ಕೊಡುವಂತಹ ಸಂದರ್ಭದಲ್ಲಿಯೇ ಸುಮಾರು 500 ಜನ ಡಾಕ್ಟರ್‌ಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ ಅದರ ಜೊತೆಗೆ ಹೊಸದಾಗಿ 63 ತಾಲ್ಲೂಕು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡತಕ್ಕಂಧ ಕೆಲಸವನ್ನೂ ಕೂಡ ಮಾಡುತ್ತಿದ್ದೇವೆ ಮುಂದಿನ ದಿನಗಳಲ್ಲಿ ಒಟ್ಟು 6 ಸಾವಿರಕ್ಕೂ ಮೇಲ್ಪಟ್ಟು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ವಿಶೇಷ ಸಮಿತಿ ನಮಗೆ ಅನುಮತಿಯನ್ನೂ ಸಹ ಕೊಟ್ಟಿದೆ ಡಾಕ್ಟರ್‌ಗಳ ಸಮಸ್ಯೆ ಇವತ್ತು ಬಂದಿರತಕ್ಕಂಧ ಸಮಸ್ಯೆಯಲ್ಲ ಹಲವಾರು ವರ್ಷಗಳಿಂದ ನೇಮಕಾತಿ ನಿಂತು ಹೋಗಿದ್ದರಿಂದ ಮತ್ತು ಸರಿಯಾದ ಸಮಯಕ್ಕೆ ನೇಮಕಾತಿ ಮಾಡದೇ ಇರುವುದರಿಂದ ಈ ಸಮಸ್ಯೆ ಉಂಟಾಗಿದೆ ಆದರೆ, ಈ ಸರ್ಕಾರ ಬಂದ ಮೇಲೆ ನೇಮಕಾತಿಗೆ ವಿಶೇಷ ಆದ್ಯತೆಯನ್ನು ಆರೋಗ್ಯ ಇಲಾಖೆಯಲ್ಲಿ ನಾವು ಕೊಡುತ್ತಿದ್ದೇವೆ 500 ಡಾಕ್ಟರ್ ಜೊತೆಗೆ ಮತ್ತೆ 6800 ಅದಕ್ಕಿಂತ ಹೆಚ್ಚು ವೈದ್ಯಕೀಯ ಸಿಬ್ಬಂದಿಗಳ ಹುದ್ದೆಗಳಿಗೆ ನೇಮಕಾತಿ ಮಾಡುವುದಕ್ಕೆ ವಿಶೇಷ ಅನುಮತಿಯನ್ನು ನಾವು ಪಡೆದುಕೊಂಡಿದ್ದೇವೆ ಆದ್ದರಿಂದ ಈಗ ಡಾಕ್ಟರ್‌ಗಳ ನೇಮಕಾತಿಯಾದ ಮೇಲೆ ಕೊರತೆ ಇರುವ ಕಡೆ ತುಂಬುವುದಕ್ಕೆ ಸರಿಯಾದ ವ್ಯವಸ್ಧೆಯನ್ನು ಮಾಡುತ್ತೇವೆ ಹಾಗೆಯೇ, ತಾಲ್ಲೂಕು ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡುವುದರ ಜೊತೆಗೆ ಅದಕ್ಕೆ ಬೇಕಾಗಿರತಕ್ಕಂಧ ಕಟ್ಟಡದ ವ್ಯವಸ್ಥೆಯನ್ನು ಸಹ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ PHC ಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ತಾವು ಕೇಳಿದ್ದೀರಿ ಅಲ್ಲಿನ ಜನ ಸಂಖ್ಯೆಯ ಆಧಾರದ ಮೇಲೆ ಪರಿಶೀಲಿಸಿ ಇದನ್ನು ಮಾಡಬೇಕಾಗುತ್ತದೆ ಆದ್ದರಿಂದ ಇದನ್ನೂ ಕೂಡ ಮಾಡುವ ವ್ಯವಸ್ಧೆಯನ್ನು ಮಾಡುತ್ತೇವೆ

ಶ್ರೀ ಸಿದ್ದು ಸಾವದಿ ಮಾನ್ಯ ಅಧ್ಯಕ್ಷರೆ, ಪ್ರಾಧಮಿಕ ಚಿಕಿತ್ಸಾ ಕೇಂದ್ರಗಳಲ್ಲಿಯೇ ಸಿಬ್ಬಂದಿ ವರ್ಗ ಇರಬೇಕೆಂದು ಸರ್ಕಾರದ ನಿಯಮಾವಳಿ ಇದ್ದರೂ ಸಹ ಇವತ್ತಿನ ದಿವಸ ವಿಹೆಚ್‌ಸಿಯಲ್ಲಿ ಯಾರೂ ಸಿಬ್ಬಂದಿ ಕೂಡ ಇರುತ್ತಿಲ್ಲ ಇಂಧ ಸಂದರ್ಭದಲ್ಲಿ ಡಿಲಿವರಿ ಪೇಷೆಂಟ್ ಬಂದರೆ ಏನು ಮಾಡಬೇಕು? ಹಳ್ಳಿಗಳಲ್ಲಿ ಇವರ ಅವಶ್ಯಕತೆ ಇಲ್ಲವಾದರೆ, ಇವರನ್ನು

ಪಟ್ಟಣಗಳಿಗೆ ವಾಪಸ್ಸು ಕರೆಸಿಕೊಳ್ಳಿ ಅವರು ಮನೆಯಲ್ಲಿರುತ್ತಾರೆಂದು ಅವರ ಮನೆ ಬಾಗಿಲಿಗೆ ಹೋದರೂ ಕೂಡ ಅಲ್ಲಿ ಯಾರು ಇರುವುದಿಲ್ಲ ಇದರ ಬಗ್ಗೆ ಕೂಡ ನಾನು ಮೇಲದಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ ಅಲ್ಲಿರತಕ್ಕಂಥ ANMಗಳು ಹಳ್ಳಿಯಲ್ಲಿಯೇ ವಾಸ ಮಾಡುವಂಥ ವ್ಯವಸ್ಥೆ ಮಾಡಬೇಕಾಗುತ್ತದೆ ಈ ವಿಷಯಕ್ಕೆ ತಮ್ಮಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ

ಶ್ರೀ ಆರ್ ಅಶೋಕ್ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ THC ಆಧವಾ ಸಮುದಾಯ ಆರೋಗ್ಯ ಕೇಂದ್ರವಿರುವ ಕಡೆ ಡಾಕ್ಟರ್ ಮತ್ತು ಪ್ಯಾರಾ ಮೆಡಿಕಲ್ ಸ್ಟಾಫ್ ವಾಸ ಮಾಡುವುದಕ್ಕೆ ವಸತಿಗಳನ್ನು ನಿರ್ಮಾಣ ಮಾಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ ಮತ್ತೆ ಎಲ್ಲಿ ಆರೋಗ್ಯ ಕೇಂದ್ರಗಳಿವೆಯೋ ಅಲ್ಲಿಯೇ ವಾಸ ಮಾಡಬೇಕೆಂಬ ಆದೇಶವನ್ನು ನಾನು ಈಗಾಗಲೇ ಮಾಡಿದ್ದೇನೆ ಆದರೆ, ಕಟ್ಟಡದ ಕೊರತೆ ಇರತಕ್ಕಂಥದು ನಮ್ಮ ಗಮನಕ್ಕೆ ಬಂದಿದೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ನಾವು ಆದ್ಯತೆಯನ್ನು ಈ ವರ್ಷದಲ್ಲಿ ಕೊಡುತ್ತೇವ

ಅಧ್ಯಕ್ಷರು ಮಾನ್ಯ ಶಂಕರಲಿಂಗೇಗೌಡರೆ, ದಯಮಾಡಿ ಕೇಳಿ, ನಿಮ್ಮ ಪ್ರಶ್ನೆಗೆ ಅವರು 15 ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಇಂತಹ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ಸಮರ್ಧರಾಗದೆ ಹೋದಮೇಲೆ ಇಂತಹ ಅಧಿಕಾರಿಗಳು ಏಕೆ ಬೇಕು? ಆ ಕಡೆ ಕಿತ್ತು ಹಾಕಿ

ಅಧ್ಯಕ್ಷರು ಆಯಿತು

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಇದು ಒಳ್ಳೆಯ ವಿಷಯ, ಪತ್ರಿಕೆಯಲ್ಲಿ ಬರೆದಿದ್ದಾರೆ ನೋಡಿ "ಹಾಸ್ಟೆಲ್‌ಗಳೆಂಬ ನಿತ್ಯ ನರಕ" ಚೆನ್ನಾಗಿ ಬರೆದಿದ್ದಾರೆ ಅದನ್ನು ತರಿಸಿ ಓದಿ ವಿಜಯ ಕರ್ನಾಟಕದವರು ನಿಜವಾಗಿಯೂ ಕೂಡ ವಿಧಿವತ್ತಾಗಿ ಪ್ರಾಮಾಣಿಕವಾಗಿ ಈ ಹಾಸ್ಟೆಲ್‌ಗಳ ದುರ್ನಾತದ ಬಗ್ಗೆ ಅಲ್ಲಿರತಕ್ಕಂಥ ನತದೃಷ್ಟ ವಿದ್ಯಾರ್ಥಿಗಳ ಬಗ್ಗೆ ಎಲ್ಲವನ್ನು ಬರೆದಿರುತ್ತಾರೆ

ಅಧ್ಯಕ್ಷರು ಆಯಿತು, ಅವರು 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ

ಶ್ರೀ ಎಚ್ ಎಸ್ ಶಂಕರಲಿಂಗೇಗೌಡ ಅಧಿಕಾರಿಗಳನ್ನು ಮನೆಗೆ ಹೋಗಿ ಎಂದು ಹೇಳಿ, ಕತ್ತೆ ಮೇಯಿಸಲಿ

ಅಧ್ಯಕ್ಷರು ಈ ಸದನ ಮುಗಿಯುವುದರೊಳಗಡೆ ಆನ್ಸರ್ ಕೊಡಿಸುತ್ತೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಅಲ್ಲಾ ಸರ್, ಇದು ಬಹು ಮುಖ್ಯವಾದ ಕೆಲಸ ಹಾಸ್ಟೆಲ್‌ನಲ್ಲಿರತಕ್ಕಂಥವರು ಬಡ ಜನರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರ ವಿದ್ಯಾರ್ಥಿಗಳು, ಅವರಿಗೆ ಊಟ ಕೊಡುವುದರ ಬದಲಿ ಲದ್ದಿಯನ್ನು ಕೊಡುತ್ತಿದ್ದಾರಲ್ಲಾ ಅದರ ಬಗ್ಗೆ ಬರೆದಿದ್ದಾರೆ

ಅಧ್ಯಕ್ಷರು ಆಯಿತು

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು

41 (194) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಯಾವ ಯಾವ ಪ್ರದೇಶದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ,

ಆ) ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸುವ ಬಗ್ಗೆ ಇದುವರೆವಿಗೆ ನಡೆದಿರುವ ಪತ್ರ ವ್ಯವಹಾರಗಳ ಮತ್ತು ಸರ್ಕಾರದ ಪ್ರಸ್ತಾವನೆಗಳ ವಿವರಗಳೇನು ,

ಇ) ಔರಾದ್‌ನಲ್ಲಿ ಐಟಿಐಯನ್ನು ಪ್ರಾರಂಭಿಸಲು ಪ್ರಕ್ರಿಯೆಗಳು ಮುಗಿದಿದ್ದರೂ ಕೂಡ ಔರಾದ್ ಅನ್ನು ಕಡೆಗಣಿಸಿ ಬೇರೆ ಪ್ರದೇಶಗಳೀಗೆ ಐಟಿಐ ಸ್ಥಾಪನೆಗೆ ಅನುಮತಿ ನೀಡಲು ಕಾರಣಗಳೇನು ,

ಈ) ಹಾಗಿದ್ದಲ್ಲಿ, ಔರಾದ್‌ನಲ್ಲಿ ಐಟಿಐ ಅನ್ನು ಪ್ರಾರಂಭಿಸಲು ಸರ್ಕಾರ ಕೂಡಲೇ ಆದೇಶವನ್ನು ಹೊರಡಿಸಲು ಕ್ರಮ ಕೈಗೊಳ್ಳುವುದೇ ,

ಉ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) 1 ಆಲೂರು ಸಿದ್ದಾಪುರ, ಕೊಡಗು ಜಿಲ್ಲೆ
2 ಕೆ ಆರ್ ಪೇಟೆ, ಮಂಡ್ಯ ಜಿಲ್ಲೆ
3 ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
4 ಪಡವಲಹಿಪ್ಪೆ, ಹೊಳೆನರಸೀಪುರ, ಹಾಸನ ಜಿಲ್ಲೆ

5 ಮುಂಡಗೋಡು, ಕಾರವಾರ ಜಿಲ್ಲೆ

6 ಗಂಗಾವತಿ, ಕೊಪ್ಪಳ ಜಿಲ್ಲೆ

7 ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

ಆ) ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯುವ ಬಗ್ಗೆ ಮತ್ತು ಇತರ ಸ್ಥಳಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುತ್ತದೆ

ಇ) ಆಯವ್ಯಯ ಕೊರತೆಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ

ಈ) ಆಯವ್ಯಯ ಕೊರತಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ

ಉ) ಆಯವ್ಯಯ ಕೊರತೆಯಿಂದ ಪ್ರಸ್ತಾಪಿಸಲಾಗಿರುವ ಎಲ್ಲಾ ಪ್ರದೇಶಗಳನ್ನು ಸ್ಥಾಪಿಸಲು ಪರಿಗಣಿಸಲಾಗಿರುವುದಿಲ್ಲ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದೀರಿ, ದಿ 25 5 2006 ರೊಳಗೆ ಒಂದು ಪ್ರಪೋಸಲ್ ತಮ್ಮ ಹತ್ತಿರ ಬಂದಿತ್ತು ಆಗ ಔರಾದ್ ಎಲ್ಲದರಲ್ಲಿಯೂ ಹಿಂದುಳಿದಿದ್ದು ಎಂದು ಅದನ್ನು ಮೊದಲನೇ ನಂಬರ್‌ದಲ್ಲಿ ಹಾಕಿದ್ದರು ಜಾಯಿಂಟ್ ಡೈರೆಕ್ಟರ್‌ವರು ಪ್ರಪೋಸಲ್‌ನ್ನು ಕೂಡ ಕಳುಹಿಸಿದ್ದರು ಆಮೇಲೆ ಹೋರಾಟ ಸಮಿತಿಯವರು ಬಂದಾಗಲು ಕೂಡ ತಾವು ಬರೆದಿದ್ದೀರಿ ಅದಕ್ಕೆ ಮಾನ್ಯ ಬಂಡೆಪ್ಪನವರು ಒಂದು ಅರ್ಜಿಯನ್ನು ಕೊಟ್ಟಿದ್ದರು ಅದಕ್ಕು ತಾವು ಬರೆದಿದ್ದೀರಿ ಅವರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯನ್ನು ಕೇಳಿದ್ದರು ಆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ, ಪ್ರಪೋಸಲ್ ಇದೆ ನಾವು ಮಾಡುತ್ತೇವೆಂದು ಹೇಳಿ, ಇದ್ದಕ್ಕಿದ್ದ ಹಾಗೆ ಅದನ್ನು ತೆಗೆದು ಬೇರೆ ಊರನ್ನು ಹಾಕಿದ್ದೀರಿ ಬಾಕಿ ಎಲ್ಲಾ ಪ್ರಪೋಸಲ್ ಬಂದಿದೆ, ಔರಾದ್ ಮಾತ್ರ ತೆಗೆದಿದ್ದೀರಿ ಏಕೆ? ಅದು ಅತೀ ಹಿಂದುಳಿದಿದ್ದು ನಾನು ಕಾಂಗ್ರೆಸ್‌ನವನಾಗಿದ್ದಕ್ಕೆ ಅದನ್ನು ತೆಗೆದಿರಬಹುದೆಂದು ನನಗನಿಸಿರುತ್ತದೆ ಬೀದರ್ ಜಿಲ್ಲೆಯಲ್ಲಿ ನಾನೊಬ್ಬನೇ ಕಾಂಗ್ರೆಸ್ ಶಾಸಕನಾಗಿರುವುದು, ಬಾಕಿ ಎಲ್ಲಾ ಬಂದಿದೆ ನನ್ನದೊಂದು ಮಾತ್ರ ಬಂದಿಲ್ಲ ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದೀರಿ ಅದನ್ನು ಏತಕ್ಕಾಗಿ ಮಾಡಿದ್ದೀರಿ ಡಾ ನಂಜುಂಡಪ್ಪ ವರದಿಯ

ಪ್ರಕಾರ ಅತೀ ಹಿಂದುಳಿದ ತಾಲ್ಲೂಕು ಎಂದು ಹೇಳಿದ್ದರೂ ಕೂಡ, ಅದನ್ನು ಪರಿಗಣಿಸದೆ ಈಗ ಸಾಧ್ಯವೇ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದೀರಿ ಮುಂದೆ ಮಾಡುವುದಕ್ಕೆ ಆಗುತ್ತದೆಯೇ ಎಂದು ಕೇಳಿದರೆ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರ ಬಂದಿದೆ ಈ ಉತ್ತರದಿಂದ ಅರ್ಥ ಏನಾಗುತ್ತದೆ ತಮ್ಮ ಉದ್ದೇಶ ಮಾಡುವುದಿಲ್ಲವೆಂದು ಆಗಿದೆ ಉದ್ದೇಶಪೂರ್ವಕವಾಗಿ ಕಾಂಗ್ರೆಸ್‌ನವರಿಗೆ ಸತಾಯಿಸಬೇಕೆಂದು ಇದೆಯಾ? ಸರ್ಕಾರದ ಉದ್ದೇಶ ಏನು ಇದೆ? ಎಲ್ಲಾ ಆರ್ಡರ್‌ಗಳು ಇಲ್ಲಿವೆ ಮತ್ತೆ ಮುಖ್ಯಮಂತ್ರಿಗಳು ಬರೆದಿದ್ದಾರೆ ನಮ್ಮ ಮಾನ್ಯ ವರ್ಮಾರವರು ಇದ್ದಾರೆ ಅವರು ಒಂದು ಲೆಟರ್ ಕೊಟ್ಟಿದ್ದರು ಅವರ ಲೆಟರ್ ಮೇಲೆ ಬರೆದಿದ್ದಾರೆ ITI ಕಾಲೇಜು ಮಾಡಬೇಕೆಂದು ಇಷ್ಟೆಲ್ಲಾ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ ಏತಕ್ಕಾಗಿ ತೆಗೆದಿದ್ದೀರಿ ಪ್ರಪೋಸಲ್ ಇತ್ತು ಎಲ್ಲಾ ಇತ್ತು ಇಷ್ಟೆಲ್ಲಾ ಇದ್ದರೂ ಕೂಡ ಅದೊಂದನ್ನು ತೆಗೆದು ಬೇರೆ ಕಡೆ ಕಾಲೇಜುಗಳನ್ನು ಕೊಟ್ಟಿದ್ದಾರೆ ಅದಕ್ಕೆ ಕಾರಣವೇನು? ಇದು ಏತರ ಸಲುವಾಗಿ?

ಶ್ರೀ ಇಕ್ಬಾಲ್ ಅನ್ಸಾರಿ ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಹಿರಿಯ ಸದಸ್ಯರು ಅವರೇನು ಹೇಳಿದರು, ಔರಾದ್ ತಾಲ್ಲೂಕು ಕಾಂಗ್ರೆಸ್‌ದ್ದು ಅದಕ್ಕಾಗಿ ಅದನ್ನೊಂದೆ ತೆಗೆದಿದ್ದಾರೆಂದು ಹೇಳಿದರು ಅದು ಸುಳ್ಳು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ ಏಕೆಂದರೆ, ಕೈಗಾರಿಕಾ ತರಬೇತಿಗೋಸ್ಕರ ರಾಜ್ಯದಲ್ಲಿ ಈ ವರ್ಷದ ಆಯವ್ಯಯದಲ್ಲಿ 5 ಹೊಸ ಕೇಂದ್ರಗಳನ್ನು ತೆಗೆಯಬೇಕೆಂದು ಬಜೆಟ್‌ನಲ್ಲಿತ್ತು ಆ ಒಂದು ದಿಸೆಯಿಂದ ಔರಾದ್ ತಾಲ್ಲೂಕಿನ ಪ್ರಪೋಸಲ್ ನಮ್ಮ ಮುಂದಿದೆ, ಅದೇ ರೀತಿಯಾಗಿ ಬೇರೆ ಬೇರೆ ತಾಲ್ಲೂಕಿನ ಒಂದು ಪ್ರಸ್ತಾವನೆಯೂ ಸಹಿತ ಸರ್ಕಾರದ ಮುಂದಿದೆ ಆದರೆ ಬಜೆಟ್‌ನಲ್ಲಿ ಹೆಚ್ಚಿನ ಹಣ ಈ ವರ್ಷ ಅಂದರೆ 2006-07 ರಲ್ಲಿ ಲಭ್ಯವಾಗಲಿಲ್ಲ ಎನ್ನುವ ಕಾರಣಕ್ಕೋಸ್ಕರ ಅದು ಮುಂದಿನ ವರ್ಷದ ಬಜೆಟ್‌ಗೆ ಹಾಕಿಕೊಳ್ಳಬೇಕೆಂದು ನಾವು ನಿರ್ಧರಿಸಿಕೊಂಡಿದ್ದೇವೆ ಇನ್ನು ಎರಡನೆಯದಾಗಿ, ಈ ಸಧ್ಯದ ಪರಿಸ್ಥಿತಿಯಲ್ಲಿ ಔರಾದ್ ತಾಲ್ಲೂಕಿನಲ್ಲಿ ಸರ್ಕಾರದ ಅನುದಾನಿತ ಕೈಗಾರಿಕಾ ಸಂಸ್ಥೆ ಒಂದಿದೆ ಅದು ಅಲ್ಲದೆ 5 ಖಾಸಗಿ ಸಂಸ್ಥೆಗಳು ಸಹಿತ ನಡೆಯುತ್ತಿದೆ ಆಕಸ್ಮಾತ್ ಅಲ್ಲಿ ಈ ಕೈಗಾರಿಕಾ ತರಬೇತಿ ಕೇಂದ್ರಗಳು ಇಲ್ಲವೆ ಇಲ್ಲ ಎನ್ನುವ ಸಂದರ್ಭದಲ್ಲಿ ನಾವು ತೀವ್ರಗತಿಯಲ್ಲಿ ಅದನ್ನು ಪರಿಗಣಿಸುವುದಕ್ಕೆ ಸಾಧ್ಯವಾಗುತ್ತದೆ ಈಗಾಗಲೇ ಅಲ್ಲಿ 6 ಕೇಂದ್ರಗಳು ಕೆಲಸವನ್ನು ನಿರ್ವಹಿಸುತ್ತಿವೆ

ಈಗ ಸರ್ಕಾರದ್ದು ಇನ್ನು ಒಂದು ಬೇಕು ಎಂದಾಗ ಅದನ್ನು ಮುಂದಿನ ವರ್ಷದ ಬಜೆಟ್‌ನಲ್ಲಿ ಅಂದರೆ 2007-08 ರಲ್ಲಿ ನಾವು ಆಯವ್ಯಯದಲ್ಲಿ ಹೆಚ್ಚಿನ ಬಜೆಟ್‌ನ್ನು ಕೇಳಿಕೊಂಡು ಅದನ್ನು ಒದಗಿಸಲಿಕ್ಕೆ ನಾನು ಪ್ರಯತ್ನವನ್ನು ಮಾಡಿಕೊಡುತ್ತೇನೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ಏಕೆಂದರೆ ಈ ಮೊದಲು ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ ಅಲ್ಲಿ ಈಗ 6 ಕಾಲೇಜುಗಳು ನಡೆಯುತ್ತವೆಂದು ಹೇಳುತ್ತಿದ್ದಾರೆ ಆದರೆ ಯಾವುದು ಇದೆ, ಯಾರು ಖಾಸಗಿಯವರು ಮಾಡಿದ್ದಾರೆ ಅದು ಯಾವುದು ಉಪಯೋಗವಾಗುವುದಿಲ್ಲ ಅವು ನಡೆಯುತ್ತಿವೆ, ಹಿಂದುಳಿದ ತಾಲ್ಲೂಕಿನ ಜನರು ದಿನ ಬೆಳಿಗ್ಗೆ ಎದ್ದರೆ ಹೋರಾಟ ಮಾಡುತ್ತಿದ್ದಾರೆ ಆ ಹೋರಾಟ ಅವರಿಗೆ ಗೊತ್ತಿದೆ ಅಲ್ಲಿಂದ ಅರ್ಜಿ ಕೂಡ ಬಂದಿದೆ ಆದರೂ ಕೂಡ ಪರಿಗಣಿಸುತ್ತಿಲ್ಲವೆಂದರೆ ಇದಕ್ಕೆ ಏನು ಕಾರಣ? ಡಾ ನಂಜುಂಡಪ್ಪನವರ ವರದಿಯಲ್ಲಿ ಬಂದಾಗಲು ಕೂಡ ತಾವು ಇದನ್ನು ಮಾಡುತ್ತಿಲ್ಲ ಖಾಸಗಿಯವರು donation ಹಣ ತೆಗೆದುಕೊಳ್ಳುತ್ತಾರೆ ಅವರು ಪುಗಸಟ್ಟೆ ಮಾಡುವುದಿಲ್ಲ ಅದಕ್ಕಾಗಿ ಸರ್ಕಾರದಿಂದ ತಾವು ಮಾಡಬೇಕು, ಜನ ಉದ್ಯೋಗವಿಲ್ಲದೆ ಸಾಯುತ್ತಿದ್ದಾರೆ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ತಾವು ಮಾಡುವುದಕ್ಕೆ ಹಿಂದು ಮುಂದು ನೋಡಿದರೆ ಹೇಗೆ? ಬಜೆಟ್ ಶಿಕಾರಿಪುರಕ್ಕೆ ಇದೆ ಬಾಕಿದ್ದಕ್ಕೆ ಬಜೆಟ್ ಇಲ್ಲವೆಂದು ತಾವು ಒಂದು ಆರ್ಡರ್ ಹೊರಡಿಸಿದ್ದೀರಿ ಆ ಆರ್ಡರದಲ್ಲಿ ಏನಿದೆ ಎಂದರೆ ಎಲ್ಲದಕ್ಕು ಬಜೆಟ್ ಇದೆ ಔರಾದ್ ಒಂದಕ್ಕೆ ಬಜೆಟ್ ಇಲ್ಲವೆಂದರೆ, ಇದು ಉದ್ದೇಶಪೂರ್ವವಾಗಿ ಆಗಿದ್ದು ಎಂದು ಅರ್ಥವಾಗುವುದಿಲ್ಲವಾ? ಮುಂಡಗೋಡಕ್ಕೆ ಬಜೆಟ್ ಇದೆ, ಶಿಕಾರಿಪುರಕ್ಕೆ ಬಜೆಟ್ ಇದೆ ಗಂಗಾವತಿಗೆ ಬಜೆಟ್ ಇದೆ ಆದರೆ ಔರಾದ್‌ಗೆ ಇಲ್ಲ ಇದರ ಉದ್ದೇಶ ಏನು? ಇದರ ಅರ್ಥವೇನು? ನೀವು ಮಾಡಿಕೊಳ್ಳುತ್ತೀರಿ, ನಮಗೂ ಒಂದು ಮಾಡಿ ಕೊಡಿ, ನೀವು ಏಕೆ ಮಾಡಿಕೊಂಡಿದ್ದೀರೆಂದು ನಾನು ಕೇಳುತ್ತಿಲ್ಲ ನೀವು ಮಂತ್ರಿಗಳು ಇರುವುದರಿಂದ ಸಂತೋಷವಾಗಿ ಎಲ್ಲಿಯಾದರೂ ಮಾಡಿಕೊಳ್ಳಿ ನಮಗೆ ಏಕೆ ಕೊಡಬಾರದು, ಎಲ್ಲದಕ್ಕು ಹಿಂದುಳಿದ ತಾಲ್ಲೂಕು ಅಲ್ಲಿಗೆ ಕೊಡುವುದಿಲ್ಲವೆಂದರೆ ಏನರ್ಥ? ಉದ್ದೇಶಪೂರ್ವಕವಾಗಿ ಸರ್ಕಾರ ಪರಿಗಣಿಸುತ್ತಿಲ್ಲವೆಂದು ಅರ್ಥವಾಗುತ್ತಿದೆ ಈಗಲಾದರೂ ಕೂಡ ಮುಂದೆ ಮಾಡುತ್ತೇವೆಂದು ಹೇಳಿದರೆ ನಮಗೆ ಸಮಾಧಾನವಾಗುತ್ತಿತ್ತು

ಮಾಡುವುದಿಲ್ಲವೆಂದು ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟರೆ ಅರ್ಥ ಏನಾಗುತ್ತದೆ? ಏನು ಅವರು ನಮ್ಮ ಉಪಕಾರಕ್ಕೆ ಕೊಡುತ್ತಾರಾ?

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಡಾ ನಂಜುಂಡಪ್ಪನವರ ವರದಿ, ರಾಜ್ಯದಲ್ಲಿರತಕ್ಕಂಥ ಎಲ್ಲಾ ಹಿಂದುಳಿದಿರತಕ್ಕಂಥ ತಾಲ್ಲೂಕುಗಳಿಗೆ ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸತಕ್ಕಂಥ ಮಾತನ್ನು ಪದೆ ಪದೆ ಹೇಳುತ್ತಿದ್ದಾರೆ ಇವತ್ತು ನಾನು ಮಾನ್ಯ ಸಚಿವರನ್ನು ಕೇಳತಕ್ಕಂಥದ್ದು ಇಷ್ಟೆ ಔರಾದ್ ಈ ರಾಜ್ಯದ ಕೊನೆಯ ತಾಲ್ಲೂಕು, ಅದರ ಪ್ರಪೋಸಲ್ ಬಂದು ಮಾಡತಕ್ಕಂಥದ್ದನ್ನು ಬಿಟ್ಟು ಸಮ್ಮಿಶ್ರ ಸರ್ಕಾರದಲ್ಲಿ ಯಾರೋ ಹೇಳಿದರು ಎಂದು ಕಾಂಗ್ರೆಸ್ ಪಕ್ಷದವರಿಗೆ ಅನ್ಯಾಯ ಮಾಡತಕ್ಕಂಥದ್ದು ಅಲ್ಲ ಇವತ್ತು ಸದನದಲ್ಲಿ ಪ್ರಶ್ನೆಯನ್ನು ಕೇಳಿದಾಗ ಅಲ್ಲಿ ಅನ್ಯಾಯವಾಗಿದೆ, ಅವರು ಹಿರಿಯ ಸದಸ್ಯರಿದ್ದಾರೆ, ಅವರ ತಾಲ್ಲೂಕಿಗೆ ITI ಕಾಲೇಜನ್ನು ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆ ಅದಕ್ಕೆ ಇವತ್ತು ಕೇಳತಕ್ಕಂಥ ಪ್ರಶ್ನೆಗೆ ನಿರ್ಧಿಷ್ಟವಾದಂಥ ಉತ್ತರ ಸರ್ಕಾರದ ಕಡೆಯಿಂದ ಬರಲೇಬೇಕು ಯಾರದೋ ಮಾತನ್ನು ನೀವು ಕೇಳಿ ಸದನದಲ್ಲಿ ಉತ್ತರವನ್ನು ಕೊಟ್ಟರೆ ಸರಿಹೋಗುವುದಿಲ್ಲ ನೀವು ಡಾ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಆ ಭಾವನೆ ತಮ್ಮ ಮನಸ್ಸಿನಲ್ಲಿ ಇಲ್ಲ ಇವತ್ತು ಹಿಂದುಳಿದ ಪ್ರದೇಶಕ್ಕೆ ಸಹಾಯ ಮಾಡತಕ್ಕಂಥ ಮನಸ್ಸು ಕೂಡ ಇಲ್ಲ ಖಡಾಖಂಡಿತವಾಗಿ ಹೇಳಬೇಕು, ಮುಂದಿನ ಬಜೆಟ್‌ನಲ್ಲಿ ಸೇರಿಸುತ್ತೇವೆ ಎನ್ನತಕ್ಕಂಥದ್ದು ಅಲ್ಲ, ಇವತ್ತು ನನ್ನ ತಾಲ್ಲೂಕಿನಲ್ಲಿ, ನಾನು ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ITI ಕಾಲೇಜು ಕೊಟ್ಟು ಅಲ್ಲಿ ಗ್ರಾಂಟ್ ಕೊಡುವುದರಲ್ಲಿ ತಾರತಮ್ಯ ಅದರ ಬಗ್ಗೆ ನಾನು ಎಂದೂ ನಿಮ್ಮನ್ನು ಕೇಳುವುದಕ್ಕೆ ಹೋಗುವುದಿಲ್ಲ ನಾನು ಎರಡು ಸಲ ನಿಮಗೆ ಫೋನ್ ಮಾಡಿದ್ದೆ, ಇವತ್ತು ನೀವು ಯಾರದೋ ಮಾತು ಕೇಳಿ ಸರ್ಕಾರ ನಡೆಸಬೇಕು, ಇದು ನಡೆಯುತ್ತದೆ ಎನ್ನತಕ್ಕಂಥದ್ದು ಸರಿಯಾದ ರೀತಿಯಲ್ಲಿ ಅಲ್ಲವೇ ಅಲ್ಲ ಇವತ್ತು ಅವರು ಏನು ಕೇಳುತ್ತಾರೆ, ಔರಾದ್ ಹಿಂದುಳಿದ ತಾಲ್ಲೂಕು ಅದಕ್ಕೆ ITI ಕಾಲೇಜು ಕೊಡತಕ್ಕಂಥದ್ದರ ಬಗ್ಗೆ ನಿರ್ಧಿಷ್ಟವಾದ ಉತ್ತರ ಇವತ್ತು ಸದನದಲ್ಲಿ ಕೊಡಬೇಕು

ಶ್ರೀ ಇಕ್ಬಾಲ್ ಅನ್ಸಾರಿ ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಹಿರಿಯರು ಹಾಗೂ ಮಾಜಿ ಮುಖ್ಯಮಂತ್ರಿಗಳು, ಅವರಿಗೆಲ್ಲಾ ಗೊತ್ತಿದೆ ಅವರು ಮುಖ್ಯಮಂತ್ರಿಯಾದಾಗ ಸಹಿತ ಔರಾದ್ ತಾಲ್ಲೂಕಿನ ಬಗ್ಗೆ

ಬೇಡಿಕೆ ಇತ್ತು ನಾವು ಬಂದ ನಂತರ 5 ಹೊಸ ಕಾಲೇಜುಗಳು ತೆಗೆಯಬೇಕೆಂದು ಬಂತು, ಅವಶ್ಯಕತೆಯ ಆಧಾರ ನೋಡಿಕೊಂಡು ಡಾ ನಂಜುಂಡಪ್ಪನವರ ವರದಿಯ ಪ್ರಕಾರ ಮಾಡಬೇಕಾಗಿದೆ ಅದರ ಪ್ರಕಾರ ನಾವು ಮಾಡುತ್ತಿದ್ದೇವೆ ಅದು ಅಲ್ಲದೆ ಕೆಲವೊಂದು ಕಡೆ ಬಡ ವಿದ್ಯಾರ್ಥಿಗಳು ಎಲ್ಲೆಲ್ಲಿ ಇದ್ದಾರೆ ಅದನ್ನು ನೋಡಿಕೊಂಡು 5 ಕಾಲೇಜುಗಳನ್ನು ಈ ವರ್ಷ ಒದಗಿಸಿಕೊಟ್ಟಿದ್ದೇವೆ 2007–08ನೇ ಬಜೆಟ್‌ನಲ್ಲಿ ಔರಾದ್‌ಗೆ ಮಾಡಿಕೊಡುತ್ತೇನೆಂದು ಈಗತಾನೆ ನಾನು ಹೇಳಿದೆ ಮೇಲಾಗಿ ಈಗ 6 ಕಾಲೇಜುಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ ಅಲ್ಲಿ ಕಾಲೇಜುಗಳೇ ಇಲ್ಲ, ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕು ಎನ್ನುವ ಸಮಸ್ಯೆ ಇದ್ದರೆ, ಅದರ ಬಗ್ಗೆ ನಾವು ಪರಿಗಣಿಸಬೇಕಾಗುತ್ತದೆ ಸರ್ಕಾರದ ಅನುದಾನದಿಂದ ಒಂದು ಕೈಗಾರಿಕಾ ತರಬೇತಿ ಕೇಂದ್ರ ನಡೆಯುತ್ತಿದೆ ಆ ಸಂಸ್ಥೆ ರೂರಲ್ ಐ ಟಿ ಐ ಔರಾದ್, ಬೀದರ್ ಜಿಲ್ಲೆ ಎಂದು ಇದೆ ಅದು ಅಲ್ಲದೆ 5 ಖಾಸಗೀ ತರಬೇತಿ ಕೇಂದ್ರಗಳು ಅಲ್ಲಿ ಕೆಲಸವನ್ನು ನಿರ್ವಹಿಸುತ್ತಿವೆ ಸರ್ಕಾರದ್ದೆ ಇನ್ನು ಒಂದು ಹೊಸ ಕಾಲೇಜು ಬೇಕೆಂದರೆ, ನಾವು ಬಜೆಟ್‌ನಲ್ಲಿ ಆಯವ್ಯಯವನ್ನು ಹೆಚ್ಚಿಸಿಕೊಂಡು ನಾನು ಒದಗಿಸಿ ಕೊಡುತ್ತೇನೆಂದು ಹೇಳಿರುತ್ತೇನೆ ಮಾನ್ಯ ಧರ್ಮಸಿಂಗ್ ಸಾಹೇಬರು ಹೇಳಿದರು, ಕಾಂಗ್ರೆಸ್ ಪಕ್ಷದ ತಾಲ್ಲೂಕು ಇದೆ ಎಂದು, ದಯಮಾಡಿ ಅದರ ಬಗ್ಗೆ ತಪ್ಪು ತಿಳಿದುಕೊಳ್ಳುವುದಕ್ಕೆ ಹೋಗಬೇಡಿ ಏಕೆಂದರೆ ಸರ್ಕಾರದಲ್ಲಿ ನಾವು ಕುಳಿತುಕೊಂಡು ಯಾರು ಹೇಳಿದರು ಕೇಳಿದರು ಎಂದು ನಾವು ನೋಡುವುದಿಲ್ಲ, ವರದಿಗಳ ಆಧಾರದ ಮೇಲೆ ಅಲ್ಲಿಯ ಜನಗಳ ಆಧಾರದ ಮೇಲೆ ಬಡ ವಿದ್ಯಾರ್ಥಿಗಳು ಎಲ್ಲೆಲ್ಲಿ ಇದ್ದಾರೆ ಅವಶ್ಯಕತೆ ಎಲ್ಲಿ ಇದೆ, ಬಜೆಟ್ ನೋಡಿಕೊಂಡು ಆಲೋಕೇಶನ್ ಮಾಡಲಾಗಿದೆ ತಪ್ಪು ಭಾವಿಸುವುದಕ್ಕೆ ಹೋಗಬಾರದೆಂದು ನಾನು ಮನವಿಯನ್ನು ಮಾಡುತ್ತೇನೆ

ಅಧ್ಯಕ್ಷರು ದಯಮಾಡಿ ಜಾಸ್ತಿಯಾಗಿ ಹೋಯಿತು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಜಾಸ್ತಿ ಏನು ಆಗಿಲ್ಲ

ಅಧ್ಯಕ್ಷರು ಮಾನ್ಯ ಮಂತ್ರಿಗಳು ಮುಂದಿನ ವರ್ಷವೆಂದು ಹೇಳಿದ್ದಾರೆ ಸ್ಪಷ್ಟವಾಗಿ ಉತ್ತರವನ್ನು ಹೇಳಿದರು ಆದ್ದರಿಂದ ನಾನು ಕ್ಲೋಸ್ ಮಾಡಿದ್ದೇನೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ತಮಗೆ ಇದನ್ನು ಕಳುಹಿಸುತ್ತೇನೆ, ತಾವು ನೋಡಿ 5 ಕಾಲೇಜುಗಳು ಇವೆ ಎಂದು ಹೇಳಿದ್ದಾರೆ

ಅಧ್ಯಕ್ಷರು ಅವರು ಸ್ಪಷ್ಟವಾಗಿ 2007–08ರಲ್ಲಿ ಕನ್ಸೀಡರ್ ಮಾಡುತ್ತೇವೆಂದು ಹೇಳಿದ್ದಾರೆ ಅಷ್ಟು ಹೇಳಿದರೂ ಸಹಿತ, ನೀವು ಹಿರಿಯ ಸದಸ್ಯರು ಹೀಗೆ ಮಾತನಾಡಿದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ನೀವು ನಮ್ಮ ರಕ್ಷಣೆಗೆ ಬರಬೇಕು

ಅಧ್ಯಕ್ಷರು ನೀವು ಈ ತರಹ ಮಾಡುವುದು ಸರಿಯಾದುದು ಅಲ್ಲ ಆಗಲೇ ಒಂದು ಗಂಟೆ ಮುಗಿದು ಹೋಯಿತು ಇನ್ನು 3 ಪ್ರಶ್ನೆಗಳು ಇವೆ ದಯಮಾಡಿ ಕುಳಿತುಕೊಳ್ಳಬೇಕು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ತಾವೇ ಹೇಳಬೇಕು ಇದರ ಬಗ್ಗೆ

ಅಧ್ಯಕ್ಷರು ಮುಂದಿನ ಪ್ರಶ್ನೆ

ಪಶುವೈದ್ಯಾಧಿಕಾರಿಗಳ ನೇಮಕಾತಿ

42 (198) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಶುವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು , (ಜಿಲ್ಲಾವಾರು ಮತ್ತು ವರ್ಗವಾರು ವಿವರ ನೀಡುವುದು) ,

ಆ) ರಾಜ್ಯದ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳು ಎಷ್ಟು,

ಇ) ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು ,

ಈ) ಹಾಗಿದ್ದಲ್ಲಿ, ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೇ ಪ್ರಾರಂಭವಾಗಿದೆಯೇ , ಹಾಗಿಲ್ಲವಾದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ರೇವೂ ನಾಯಕ್ (ಬೆಳಮಗಿ) (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಒಟ್ಟಾರೆ 1985 ಇದ್ದು, ಅದರಲ್ಲಿ 1161 ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಜಿಲ್ಲಾವರು ಅನುಬಂಧದಲ್ಲಿ ನೀಡಿದೆ ಎಲ್ಲವೂ 'ಬಿ' ವರ್ಗದ ಹುದ್ದೆಗಳಾಗಿರುತ್ತವೆ

ಆ) ರಾಜ್ಯದಲ್ಲಿ ಒಟ್ಟು 824 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ

ಇ) ಪಶುವೈದ್ಯಕೀಯ ವಿಶ್ವವಿದ್ಯಾಲಯದಿಂದ ಬಿ ವಿ ಎಸ್ ಸಿ ಪದವಿ ಪಡೆದ ಪದವೀಧರರನ್ನು ನೇರ ನೇಮಕಾತಿ ಮುಖಾಂತರ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ

ಈ) ಹೌದು ಪ್ರಾರಂಭವಾಗಿದೆ

ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ಹುದ್ದೆಗೆ ಆಯ್ಕೆ ಮುಗಿದಿರುತ್ತದೆ ಸದ್ಯದಲ್ಲೇ ಆಯ್ಕೆಯಾದವರಿಗೆ ನೇಮಕಾತಿ ಆದೇಶ ಹೊರಡಿಸಲಾಗುತ್ತದೆ ಮತ್ತು 77 ಪಶುವೈದ್ಯಾಧಿಕಾರಿಗಳ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಕೆ ಪಿ ಎಸ್ ಸಿ ಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ವಿಶೇಷ ನೆಮಕಾತಿ ಪ್ರಕ್ರಿಯೆಯಲ್ಲಿ 577 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈಗಾಗಲೇ 383 ಹುದ್ದೆಗಳ್ನು ಭರ್ತಿ ಮಾಡಲಾಗಿದೆ ಉಳಿದ 194 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯ ಹುದ್ದೆಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	**2**	**3**	**4**	**5**
1	ಬೆಂಗಳೂರು ನಗರ	91	87	04
2	ಬೆಂಗಳೂರು ಗ್ರಾಮಾಂತರ	80	73	07
3	ದಾವಣಗೆರೆ	69	58	11
4	ಶಿವಮೊಗ್ಗ	66	55	11
6	ಕೋಲಾರ	106	84	22
7	ತುಮಕೂರು	112	81	31
8	ಮೈಸೂರು	76	48	28
9	ಚಾಮರಾಜನಗರ	30	11	19
10	ಚಿಕ್ಕಮಗಳೂರು	72	45	27

1	2	3	4	5
11	ಮಂಗಳೂರು	44	27	17
12	ಉಡುಪಿ	34	25	9
13	ಹಾಸನ	88	48	40
14	ಮಡಿಕೇರಿ	32	13	19
15	ಮಂಡ್ಯ	103	66	37
16	ಬೆಳಗಾವಿ	144	82	62
17	ಗದಗ್	55	21	34
18	ಹಾವೇರಿ	72	30	42
19	ಧಾರವಾಡ	55	36	19
20	ಕಾರವಾರ	85	23	62
21	ಬಿಜಾಪುರ	57	38	19
22	ಬಾಗಲಕೋಟೆ	65	41	24
23	ಗುಲ್ಬರ್ಗಾ	136	31	105
24	ಬಳ್ಳಾರಿ	81	24	57
25	ರಾಯಚೂರು	57	15	42
26	ಕೊಪ್ಪಳ	43	21	22
27	ಬೀದರ್	75	45	30
	ಒಟ್ಟು	**1985**	**1161**	**824**

ಶ್ರೀ ಹೊನ್ನಾಳಿಜಬ್ಬಾರ್ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ ಹಲವು ಆಸ್ಪತ್ರೆಗಳಲ್ಲಿ ಎಕ್ಸರೆ ಯಂತ್ರಗಳು ಇವೆ ಅದನ್ನು ಉಪಯೋಗಿಸುವುದಕ್ಕೆ ಸಿಬ್ಬಂದಿ ವರ್ಗದವರು ಇಲ್ಲ ಉದಾ ನನ್ನ ಕ್ಷೇತ್ರದೊಳಗೆ ಈಗಾಗಲೇ 10 ವರ್ಷಗಳು ಕಳೆದರೂ ಕೂಡ ಅಲ್ಲಿ ಎಕ್ಸರೆ ಯಂತ್ರಗಳಿದ್ದರೂ ಕೂಡ ಅಲ್ಲಿ ಸಿಬ್ಬಂದಿ ವರ್ಗದವರು ಇಲ್ಲ ಅಲ್ಲಿ ಯಾವಾಗ appointment

ಮಾಡುತ್ತಾರೋ ಅದನ್ನು ಹೇಳಬೇಕು ಇನ್ನು ಎರಡನೆಯದಾಗಿ ಹೇಳುವುದಾದರೆ, ಬಹಳಷ್ಟು ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆಯಿರುವುದರಿಂದ ಅಲ್ಲಿ ಜಾನುವಾರುಗಳಿಗೆ ಯಾವುದೇ ತರಹದ ಚಿಕಿತ್ಸೆಗಳು ಸಿಗುತ್ತಿಲ್ಲ ಅಲ್ಲಿ ಅದನ್ನು ಜಾನುವಾರು ಆಸ್ಪತ್ರೆ ಎಂದು ಹಾಗೆಯೇ ಬಿಟ್ಟಿರುವುದು ಬಹಳ ಅನ್ಯಾಯವಾಗುತ್ತದೆ ಇನ್ನು ಮೂರನೆಯದಾಗಿ ಹೇಳುವುದಾದರೆ, ಅನೇಕ ಪಶುಸಂಗೋಪನಾ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುತ್ತೇನೆಂದು ಈ ಹಿಂದೆ ಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದನ್ನು ಯಾವಾಗ ಮೇಲ್ದರ್ಜೆಗೇರಿಸುತ್ತಾರೆ, ಮತ್ತು ನನ್ನ ಭಾಗದಲ್ಲಿರುವಂತಹ ವಿಶ್ವವಿದ್ಯಾನಿಲಯದೊಳಗಿರುವ ಪಶುಸಂಗೋಪನಾ ಆಸ್ಪತ್ರೆಯನ್ನು ಯಾವಾಗ ಮೇಲ್ದರ್ಜೆಗೆ ಏರಿಸುತ್ತಾರೆಂಬ ಬಗ್ಗೆ ಹೇಳಬೇಕು

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ ಅವರು ಕೇಳಿದ ಪ್ರಶ್ನೆ (ಅ)ಗೆ ಪಶುಪಾಲನಾ ಮತ್ತು ಪಶು ವೈದ್ಯ ಇಲಾಖೆಯಲ್ಲಿ ಒಟ್ಟಾರೆ 1985 ಹುದ್ದೆ ಇದೆ ಅದರಲ್ಲಿ 1161 ಪಶು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಜಿಲ್ಲಾವಾರು ಅನುಬಂಧದಲ್ಲಿ ನೀಡಿದ ಈ ವರ್ಗದ ಹುದ್ದೆಗಳಾಗಿರುತ್ತದೆ ಮತ್ತೆ ಅವರು ಕೇಳಿದ (ಆ) ಪ್ರಶ್ನೆಗೆ ರಾಜ್ಯದಲ್ಲಿ ಒಟ್ಟು 824 ಪಶುವೈದ್ಯಾಧಿಕಾರಿಗಳು ಖಾಲಿ ಇರುತ್ತದೆ ಅವರು ಕೇಳಿದ (ಇ) ಪ್ರಶ್ನೆಗೆ ಪಶುವೈದ್ಯ ಅಧಿಕಾರಿಗಳನ್ನು ವಿಶ್ವವಿದ್ಯಾನಿಲಯದಿಂದ ಬಿ ವಿ ಎಸ್ ಸಿ ಪದವಿ ಪಡೆದ ಪದವೀಧರರನ್ನು ನೇರ ನೇಮಕಾತಿ ಮುಖಾಂತರ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಮಾಡಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದೇನೆ ಹಾಗೂ (ಈ) ಪ್ರಶ್ನೆಗೆ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು ಹೇಳಿದ್ದೇವೆ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದಿಂದ 41 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಆಯ್ಕೆ ಮುಗಿದಿರುತ್ತದೆ ಸದ್ಯದಲ್ಲೆ ಆಯ್ಕೆಯಾದವರಿಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು 77 ಪಶುವೈದ್ಯಾಧಿಕಾರಿಗಳ ನೇಮಕಾತಿಗಾಗಿ ಪ್ರಸ್ತಾವನೆಯನ್ನು ಕೆಪಿಎಸ್‌ಸಿ ಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ಪ್ರಕ್ರಿಯೆಯಲ್ಲಿ 577 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈಗಾಗಲೇ 383 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಉಳಿದ 194 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಮಾನ್ಯ ಸಚಿವರು ಹೇಳಿದ ಉತ್ತರವನ್ನು ನಾನು ಕೇಳುತ್ತಿಲ್ಲ ನಾನು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡುವುದು ಬಿಟ್ಟು ಈ ರೀತಿ ಉತ್ತರವನ್ನು ಕೊಟ್ಟರೆ ಹೇಗೇ?

ಅಧ್ಯಕ್ಷರು ಮಾನ್ಯ ಹಯಾತ್ ಖಾನ್ ರವರೆ ಈ ಹಿಂದೆ ತಾವು ಮಂತ್ರಿಗಳಾಗಿದ್ದವರು, ಮಾನ್ಯ ಸಚಿವರು ಹೊಸದಾಗಿ ಮಂತ್ರಿಗಳಾಗಿದ್ದಾರೆ ತಾವು ದಯಮಾಡಿ ಅವರ ಹತ್ತಿರ ಕುಳಿತುಕೊಂಡು ಇದನ್ನು ಬಗೆಹರಿಸಿ ಕೊಳ್ಳಬಹುದು

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದು ಅಲ್ಲಿ x-ray machine ಬಂದು 10 ವರ್ಷಗಳಾಯಿತು ಸಿಬ್ಬಂದಿವರ್ಗದವರು ಇಲ್ಲ, ಅವರನ್ನು ಯಾವಾಗ appointment ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ ನನ್ನ ಕ್ಷೇತ್ರದಲ್ಲಿರುವಂತಹ ಪಶುಸಂಗೋಪನಾ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಎರಿಸುತ್ತೇನೆಂದು ಹೇಳಿದ್ದರು ಅದನ್ನು ಯಾವಾಗ ಮಾಡುತ್ತೀರೆಂದು ನಾನು ಕೇಳುತ್ತಿದ್ದೇನೆ ಬಹಳ ವರ್ಷದಿಂದ ಹುದ್ದೆಗಳು ಭರ್ತಿಯಾಗದೆ ಹಾಗೆಯೇ ಇದೆ ಅದನ್ನು ಯಾವಾಗ ಭರ್ತಿ ಮಾಡುತ್ತೀರೆಂದು ನಾನು ಕೇಳುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ, ತಾವು ಅವರ ಪಕ್ಕದಲ್ಲಿ ಕುಳಿತುಕೊಂಡು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ

ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ ಹೊಸದಾಗಿ ಮಂತ್ರಿಯಾಗಿ ಬಂದವರಿಗೆ ಪ್ರಶ್ನೆ ಕೇಳಬೇಡಿಯೆಂದು ಮಾಡಿ

ಅಧ್ಯಕ್ಷರು ಮಾನ್ಯ ಮಂತ್ರಿಗಳೇ ತಮ್ಮ ಹತ್ತಿರ ಏನು ಉತ್ತರವಿದೆಯೋ ಅದನ್ನು ಹೇಳಿ

ಶ್ರೀ ರೇವೂ ನಾಯಕ್ ಬೆಳಮಗಿ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ ಅವರೇನಾದರು ಲಿಖಿತ ಮೂಲಕ ಕಳುಹಿಸಿದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಈಗ ಒಟ್ಟಾರೆ 824 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತದೆ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ ಆ ಮಾಹಿತಿ ನನಗೆ ಬೇಕಾಗಿಲ್ಲ ಅದರ ಬಗ್ಗೆ ಇಲ್ಲಿ ಉತ್ತರವಿದೆ

ಶ್ರೀ ರೇವೂ ನಾಯಕ್ ಬೆಳಮಗಿ 15 ದಿವಸಗಳಲ್ಲಿ ಆದೇಶವನ್ನು ಹೊರಡಿಸಿದ್ದೇವು ವಿಶೇಷ ನೇಮಕಾತಿಯಡಿಯಲ್ಲಿ 194 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಯನ್ನು ಸ್ವೀಕರಿಸಿದ್ದೆವು 77 ಹುದ್ದೆಗಳನ್ನು ಕೆಪಿಎಸ್‌ಸಿಯಿಂದ ಆಯ್ಕೆ ಮಾಡಿದ ಪಟ್ಟಿಯನ್ನು ಈ ತಕ್ಷಣವೆ ಬಿಡುಗಡೆ ಮಾಡುತ್ತೇವೆ ಉಳಿದ 515 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ

ಅಧ್ಯಕ್ಷರು ಆಯಿತು

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷದಿಗಳ ಕೊರತೆ

43 (178) ಶ್ರೀ ಜಿ ವಿ ಶ್ರೀರಾಮರೆಡ್ಡಿ (ವಿಧಾನಸಭಾ ಸದಸ್ಯರು) (ಬಾಗೇಪಲ್ಲಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿಂದಾಗಿ ಬಡ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರ ಕಲ್ಪಿಸಿದೆಯೇ ,

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಹುತೇಕ ಆಸ್ಪತ್ರೆಗಳಲ್ಲಿ ಔಷಧಿಗಳಲ್ಲಿ ಕೊರತೆ ಇರುವುದಿಲ್ಲ ಆದರೆ ಕೆಲವು ಆಸ್ಪತ್ರೆಗಳಲ್ಲಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಹೌದು ಈ ದಿಸೆಯಲ್ಲಿ ಅಗತ್ಯ ಹಾಗೂ ಬೇಡಿಕೆಗಳಿಗನುಗುಣವಾಗಿ ಔಷಧಿ ಪೂರೈಕೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ

ಇ) ಸರ್ಕಾರದ ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಉಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ ಆಸ್ಪತ್ರೆಗಳಿಗೆ ಬೇಕಾಗಿರುವ ಔಷಧಿಗಳು ಆ ಜಿಲ್ಲಾ ಉಗ್ರಾಣದಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಔಷಧಿ ಲಭ್ಯವಿರುವ ಬೇರೆ ಜಿಲ್ಲೆಯ ಔಷಧ ಉಗ್ರಾಣಗಳಿಂದ ಪಡೆದು ಔಷಧಿ

100 PM

ಪೂರೈಸಿದ್ದು ಬಡ ರೋಗಿಗಳ ಚಿಕಿತ್ಸೆಗೆ ಯಾವುದೇ ತೊಂದರೆ ಉಂಟಾಗದಂತೆ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗಿದೆ

ಈಗಾಗಲೇ ಇಲಾಖೆಯಲ್ಲಿರು 228 ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳಿಗೆ ದರಗುತ್ತಿಗೆ ಜೊತೆಗೆ 2006–08ನೇ ಸಾಲಿಗೆ 317 ಔಷಧಿಗಳಿಗೆ ಹೊಸ ದರಗುತ್ತಿಗೆ ಅಂತಿಮಗೊಳಿಸಿದ್ದು, ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾಗಿರುವ ಎಲ್ಲಾ ಔಷಧಿಗಳನ್ನು ಪೂರೈಸುವ ಉದ್ದೇಶ ಹೊಂದಲಾಗಿದೆ ಪ್ರತಿ ಆಸ್ಪತ್ರೆಗೂ ಈ ಹಿಂದೆ ಇದ್ದ ಪೂರೈಕೆಗಿಂತಲೂ 2 ಹಾಗೂ 3 ರಷ್ಟು ಹೆಚ್ಚು ಔಷಧಿ ಪೂರೈಸಲು ಅನುದಾನ ನಿಗಧಿಗೊಳಿಸಲಾಗಿದೆ ಈ ಬಗ್ಗೆ ಈ ವರ್ಷ 26 ಕೋಟಿ ರೂ ಗಳ ಹೆಚ್ಚಿನ ಅನುದಾನ ಒದಗಿಸಲಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವುದು ಸರಿಯಾದಂತಹ ಮಾಹಿತಿಯಲ್ಲ ನಾನು ಕೇಳಿದ (ಅ) ಪ್ರಶ್ನೆಗೆ ಬಹುತೇಕ ಆಸ್ಪತ್ರೆಗಳಲ್ಲಿ ಇಲ್ಲ ಕೆಲವು ಆಸ್ಪತ್ರೆಗಳಲ್ಲಿ ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ ಇವರ ಸರ್ಕಾರದಲ್ಲಿ ಕಳೆದ ವರ್ಷದ ಬಜೆಟ್‌ನಲ್ಲಿ ಕೊಟ್ಟಿರುವುದು ಶೇಕಡ 60% ಆಸ್ಪತ್ರೆಗಳಿಗೆ ರಾಜ್ಯದಲ್ಲಿ ಕನಿಷ್ಟ 20% ಔಷಧಿಗಳು ಸರಬರಾಜಾಗುತ್ತಿಲ್ಲ ಎನ್ನುವಂತಹ ವರದಿಯನ್ನು ಇವರ ಸರ್ಕಾರದ ಮೂಲಕವೇ ಕೊಟ್ಟಿದ್ದಾರೆ ಈಗ ಇಲ್ಲಿಗೆ ಬಂದು ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲವೆಂದು ಉತ್ತರವನ್ನು ಕೊಡುತ್ತಿದ್ದಾರೆ ಮಂತ್ರಿಗಳಾದವರು ಈ ರೀತಿಯಾಗಿ ಉತ್ತರವನ್ನು ಕೊಡುವುದು ಸರಿಯಲ್ಲ ನಾನು ಕೇಳಿದ (ಆ) ಪ್ರಶ್ನೆಗೆ ಅಗತ್ಯವಿರುವುದನ್ನು ಸರಬರಾಜು ಮಾಡುತ್ತಿದ್ದೇವೆಂದು ಹೇಳಿದ್ದಾರೆ ಇದಕ್ಕಿಂತ ಬೇಜವಾಬ್ದಾರಿ ಉತ್ತರ ಬೇರೆ ಇಲ್ಲ, ಏಕೆಂದರೆ ಸರ್ಕಾರವೇ ಹಲವಾರು ಸಂದರ್ಭಗಳಲ್ಲಿ ಹೇಳುತ್ತದೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಸರ್ಕಾರಿ ಆಸ್ಪತ್ರೆಗಳಿಗೆ ಒಂದು ವರ್ಷಕ್ಕೆ ಎಷ್ಟು ಔಷಧಿಗಳು ಅಗತ್ಯವಿದೆಯೆಂದು, ಹಾಗೂ ಶೇಕಡ 25 ರಷ್ಟು ಔಷಧಿಗಳು ಸರಬರಾಜಾಗುತ್ತಿಲ್ಲವೆನ್ನುವ ಬಗ್ಗೆ ಮಾಹಿತಿ ಸರ್ಕಾರಕ್ಕೆ ಇದೆ ಹಲವಾರು ಕಡೆಗಳಲ್ಲಿ ಮಂತಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ ಇದನ್ನು ನಾವು ಆಸ್ಪತ್ರೆಗಳಲ್ಲಿ ದಿನನಿತ್ಯವೂ ನೋಡುತ್ತಿದ್ದೇವೆ ಡಾಕ್ಟರುಗಳು ಹೇಳುವುದನ್ನು ನಾವು ಕೇಳುತ್ತಿದ್ದೇವೆ ಒಂದು ವರ್ಷಕ್ಕೆ ಎಷ್ಟು ಔಷಧಿಗಳು ಬೇಕೋ ಅದರಲ್ಲಿ ಶೇಕಡ 25ರಷ್ಟು ಔಷಧಿಗಳು ಸರಬರಾಜಾಗುತ್ತಿಲ್ಲ ಅಗತ್ಯವಿರುವ ಔಷಧಿಗಳನ್ನು ಪೂರೈಸುತ್ತಿದ್ದೇವೆಂದು ಹೇಳುತ್ತಿದ್ದೇವೆ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಗಳಿಗೆ

ಬೇಕಾಗಿರುವ ಹಣ ಎಷ್ಟು ಬೇಕು, ಇಡೀ ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಒಂದು ವರ್ಷಕ್ಕೆ ಎಷ್ಟು ಹಣ ಬೇಕು, ಅದನ್ನು ಕೇಳಿದರೆ ಇವರ ಹತ್ತಿರ ಆ ಮಾಹಿತಿ ಇಲ್ಲ 26 ಕೋಟಿ ರೂ ಹೆಚ್ಚಿನ ಅನುದಾನವನ್ನು ಕೇಳಿದ್ದೇವೆಂದು ಇವರು ಹೇಳುತ್ತಾರೆ ಇವತ್ತು ಕರ್ನಾಟಕ ರಾಜ್ಯದಲ್ಲಿರುವಂತಹ ಹಳ್ಳಿಗಾಡಿನಲ್ಲಿರುವಂತಹ ಪ್ರತ್ಯೇಕವಾದ ಆಸ್ಪತ್ರೆಗಳಿಗೆ ಇವರೇನಾದರೂ ಅಗತ್ಯವಿರುವಂತಹ ಸಂಪೂರ್ಣವಾದ ಔಷಧಿಯನ್ನು ಒದಗಿಸಬೇಕಾದರೆ; ಒಂದು ವರ್ಷಕ್ಕೆ ಸುಮಾರು 200 ಕೋಟಿ ರೂಗಳು ಬೇಕಾಗುತ್ತದೆ ಈಗ ಸರ್ಕಾರ ಸದ್ಯಕ್ಕೆ ಕೊಡುತ್ತಿರುವುದು not even 50 crores ಅದಕ್ಕೆ ಇನ್ನು ಹೆಚ್ಚಿಗೆ 26 ಕೋಟಿ ರೂಗಳನ್ನು ಕೇಳಿದ್ದೇವೆಂದು ಹೇಳುತ್ತಿದ್ದಾರೆ ಇದರಿಂದಾಗಿ ಇಡೀ ರಾಜ್ಯದಲ್ಲಿ ಔಷಧಿಗಳ ಪರಿಸ್ಥಿತಿ ಗಂಭೀರವಾಗಿದೆ, ಇದರ ಬಗ್ಗೆ ಸರ್ಕಾರ ಸರಿಯಾದಂತಹ ಮಾಹಿತಿಯನ್ನು ತೆಗೆದುಕೊಂಡು ಮಾಡಬೇಕು ನಾನು ಕೇಳುತ್ತಿರುವುದು ಇಷ್ಟೇ, ಎಲ್ಲಾ ಆಸ್ಪತ್ರೆಗಳಿಗೆ ಅಗತ್ಯವಿರುವಂತಹ ಔಷಧಿಗಳನ್ನು ನೀವು ಸಂಪೂರ್ಣವಾಗಿ ಪೂರೈಕೆ ಮಾಡಬೇಕು ಅದನ್ನು ನೀವು ಮಾಡುತ್ತೀರೋ ಅಥವಾ ಇಲ್ಲವೋ? ಅದಕ್ಕೆ ಬೇಕಾಗಿರುವಂತಹ ಬಜೆಟ್ ಎಷ್ಟು? ಇದರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದೆಯೇ? ಎಷ್ಟು ಆಸ್ಪತ್ರೆಗಳು ಇವೆ, ಈಗ ನೀವು ವಾಸ್ತವವಾಗಿ ಔಷಧಿಗಳಿಗೆ ಖರ್ಚು ಮಾಡುತ್ತಿರುವಂತಹದ್ದರ ಬಗ್ಗೆ ಹೇಳಬೇಕು ಬೇರೆ ಸಲಕರಣೆಗಳನ್ನು ಸೇರಿಸಿ ಹೇಳಬೇಡಿ ಬೆಡ್, ಬೆಡ್‌ಶೀಟ್, ಕಾಟನ್, ಬ್ಯಾಂಡೇಜ್, ಇವೆಲ್ಲವನ್ನು ಕೊಟ್ಟಿದ್ದೇವೆಂದು ಸೇರಿಸಿ ಹೇಳಬೇಡಿ ನಾನು ನಿರ್ದಿಷ್ಟವಾಗಿ ಔಷಧಿಗಳ ಬಗ್ಗೆ ಕೇಳುತ್ತಿದ್ದೇನೆ ನಮ್ಮ ರಾಜ್ಯದಲ್ಲಿರುವಂತಹ ಆಸ್ಪತ್ರೆಗಳಿಗೆ ಔಷಧಿಗಳಿಗಾಗಿ ಅಗತ್ಯವಿರುವಂತಹ ಔಷಧಿಗಳಿಗೆ ಎಷ್ಟು ಹಣ ಬೇಕೆಂದು ಅದರ ಬಗ್ಗೆ ನೀವು ಉತ್ತರವನ್ನು ಕೊಡಬೇಕು

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಔಷಧಿಗಳ ಕೊರತೆ ಇಲ್ಲ ಈಗಾಗಲೇ ಔಷಧಿಗಳ ಕೊರತೆಯನ್ನು ಸರಿ ಮಾಡಬೇಕೆಂದು ಕಳೆದ ಸಾಲಿನ ಬಜೆಟ್‌ನಲ್ಲಿ 43 ಕೋಟಿ ರೂಗಳು ಇತ್ತು ಇನ್ನು ಅಡಿಷನಲ್ ಆಗಿ 28 ಕೋಟಿ ರೂಗಳು ಗ್ರಾಂಟ್‌ನ್ನು ತೆಗೆದುಕೊಂಡುಬಿಟ್ಟಿದ್ದೇವೆ ಅವರು ಕೊಡುತ್ತಾರೆ ಅಂತ, ನಾವು ಅನುದಾನವನ್ನು ಕೇಳಲಿಲ್ಲ ಅನುದಾನವನ್ನು ತೆಗೆದುಕೊಂಡುಬಿಟ್ಟಿದ್ದೇವೆ ಕಳೆದ ಬಾರಿ ನಮ್ಮ ಪಾಲಿಸಿ ಏನಿತ್ತು

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಆಧ್ಯಕ್ಷರೆ, ಈ ಉತ್ತರಗಳನ್ನು ಇವರ departmentನವರು ಕೊಡುವುದಿಲ್ಲ ಯಾರು ಮಂತ್ರಿಗಳಾಗಿದ್ದವರು ಅಗತ್ಯವಿರುವ ಮಾಹಿತಿಯನ್ನು ಕೊಡಬೇಕಾಗುತ್ತದೆ ಇಲ್ಲಿ ವಾಸ್ತವಾಂಶವೇನೆಂದರೆ, ಈ ಸರ್ಕಾರ, ಆ ಸರ್ಕಾರವೆನ್ನುವಂತಹ ಪ್ರಶ್ನೆಯಲ್ಲ ನಮ್ಮ ವ್ಯವಸ್ಥೆಯಲ್ಲಿ ಸರ್ಕಾರಿ hospitals, ಈ Medical stores ಎದರುಬದಿರಿಗೆ ಇರುತ್ತದೆ ಯಾವ ಔಷಧಿಯು ಬಡವರಿಗೆ ಬೇಕಾಗಿದ್ದರೂ ಕೂಡ ಇವರು slipನ್ನು ಬರೆದುಕೊಡುವುದು ಸಹಜ ಅದು ಅವರಿಗೊಂದು ರೀತಿಯಲ್ಲಿ understanding ಇರುತ್ತದೆ ಈ Physicians sample ಕೊಡುತ್ತಾರಲ್ಲಾ ಅವುಗಳನ್ನೂ ಸಹ ಮಾರಿಕೊಳ್ಳುತ್ತಾರೆ, ಆಮೇಲೆ ಈ ಡಾಕ್ಟರ್ ನೇರವಾಗಿ ದುಡ್ಡು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಆ ದುಡ್ಡು, ಇಂಜೆಕ್ಷನ್ಸ್ ದುಡ್ಡು ಇವೆಲ್ಲವನ್ನೂ ಡಿ ಗ್ರೂಪ್ ಸರ್ವೆಂಟ್ಸ್ ಕೈಗೆ ಕೊಡಬೇಕು ಅವನು ಸಂಜೆ ಟೋಟಲ್ ಕಲೆಕ್ಷನ್ಸ್ ಅನ್ನು ಡಾಕ್ಟರ್ಸ್‌ಗೆ ಅವರಿಗೆ ಇವರಿಗೆ ಎಲ್ಲರಿಗೂ ಕೊಡುತ್ತಾನೆ ಈಗ ನೀವು ಕೊಡುತ್ತಿರುವ ಉತ್ತರ earnest ಆಗಿ ನಿಮ್ಮ ಇಲಾಖೆಯವರು ಏನು ಸಪ್ಲೈ ಮಾಡಿರುತ್ತಾರೆ ಆ information ತಾವು ಕೊಡುತ್ತೀರಿ ಅವರು ಹೇಳುತ್ತಿರುವಂಥದ್ದು ವಾಸ್ತವಾಂಶ ನಾನು ಈಗ ಒಬ್ಬ ಬಡವ ನನಗೆ ಒಂದು ಕೆಟ್ಟ ಕಾಯಿಲೆ ಬಂದಿದೆ ಪ್ರೈವೇಟ್ ನರ್ಸಿಂಗ್ ಹೋಮ್‌ಗೆ ಹೋಗಲು ನನಗೆ ಶಕ್ತಿಯಿಲ್ಲ ಅಲ್ಲಿಗೆ ಹೋದರೆ ಇರುವ ಔಷಧಿಯನ್ನು ಕೊಡಲಿಕ್ಕೂ ಸಹ ಅವರು ಒಂದು ಸ್ಲಿಪ್ ಬರೆದು ಕೊಡುತ್ತಾರೆ ಇದಕ್ಕೆ ವಿಜಿಲೆನ್ಸ್ ಬೇಕಾಗಿದೆ ಅಂತಹ ಡಾಕ್ಟರುಗಳನ್ನು ಹಿಡಿಯಬೇಕಾಗುತ್ತದೆ ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ ಆಡಳಿತದಲ್ಲಿ ನಿಮ್ಮ ಡಿ ಹೆಚ್ ಓ ಗಳಿದ್ದಾರೆ ಅವರು ಸೆಂಟ್ರಲೈಸ್ಡ್ ಚೆಕಿಂಗ್ ಮಾಡುತ್ತಾರೆ ತಿಂಗಳಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಒಂದೆರಡು ರೌಂಡ್ ಹೋಗಿ ಆ ಡಾಕ್ಟರುಗಳು ಕೊಡುವ ಹಣದಿಂದ ಅವರು ಜೀವನ ಮಾಡುತ್ತಾರೆ ಹೆಡ್ ಆಫೀಸ್‌ನಲ್ಲಿ, ಡೈರೆಕ್ಟರ್ ಆಫೀಸ್‌ನಲ್ಲಿ ಈ ಡಿ ಹೆಚ್ ಒ ಗಳು ಕೊಡುವ ಪೂಲ್‌ಗಳಿಂದ ಇವರು ಬದುಕುವುದು ನಾನು ಈ ಸರ್ಕಾರದಲ್ಲಿ ನೀವು ಮಂತ್ರಿಯಾಗಿದ್ದೀರಿ ಎಂದು ಹೇಳುತ್ತಿಲ್ಲ Let me make it very very clear ಇದು ವರ್ಷಾನುಗಟ್ಟಲೆಯಿಂದ ನಡೆದುಕೊಂಡು ಬಂದಿದೆ ನೀವು ಇನ್ನೂ ಚಿಕ್ಕವಯಸ್ಸಿನವರು ಬಹಳ ಉತ್ಸಾಹದಿಂದ ಇದ್ದೀರಿ ನೀವೇನಾದರೂ ದೊಡ್ಡ ಮನಸ್ಸು ಮಾಡುವುದಾದರೆ ಆ ವರ್ಗದ ಜನರ ಮೇಲೆ ನಿಮಗೆ ಏನಾದರೂ ವಾತ್ಸಲ್ಯ ಇದ್ದರೆ you will have to act very boldly, ಈ reply ಓದಲಿಕ್ಕೆ ಹೋಗಬೇಡಿ ಇಲಾಖೆಯವರು ಕೊಟ್ಟ ಉತ್ತರವನ್ನು ಓದದೆ ಅದನ್ನು ತೆಗದು ಬಿಸಾಕಿ surprising inspections ಮಾಡಿ, ಸಿಕ್ಕಿದವರನ್ನೆಲ್ಲಾ ಅಲ್ಲಲ್ಲೇ ಬಲಿ ಹಾಕುವುದಾದರೆ you would be creating a history ಜನರ ಮನಸ್ಸಿನಲ್ಲಿ ನೀವು ಉಳಿಯುತ್ತಿರಿ ಇಲ್ಲದೇ ಹೋದರೆ ನೂರಾರು ಜನ ಮಂತ್ರಿಗಳು ಬಂದು ಹೋಗುವ ಹಾಗೆ ನೀವು ಕೂಡ come and go ಆಗುತ್ತೀರಿ ಅಷ್ಟೆ Don t read that reply, because it is not convincing

ಶ್ರೀ ಎನ್ ಯೋಗೀಶ್ ಭಟ್ ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳ ಹಿಂದೆ 40 00 ಲಕ್ಷ ರೂಪಾಯಿಗಳ ಔಷಧಿಯನ್ನು ಈ ಪಿ ಹೆಚ್ ಸಿ ಗಳಿಗೆ ಹೋಗುವಂತಹದ್ದನ್ನು ಡಿ ಹೆಚ್ ಓ ಆಫೀಸ್‌ಗಳಲ್ಲಿ ಅನಧಿಕೃತವಾಗಿ ಗೋಡೌನ್‌ನಲ್ಲಿ ಇಟ್ಟುಕೊಂಡಂಥ ಔಷಧಿಯನ್ನು ಪತ್ತೆ ಹಚ್ಚಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಎಲ್ಲಿ ಬಡರೋಗಿಗಳಿಗೆ ಸಿಗಬೇಕಾದ ಔಷಧಿ ಅಲ್ಲಿ ಸಿಗುತ್ತಿಲ್ಲ ಎರಡನೆಯದಾಗಿ ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಲಾಗಿದೆಯೆಂದು ತಾವೇ ಹೇಳಿದ್ದೀರಿ ತಾವು ಹಣವನ್ನು ಬಿಡುಗಡೆ ಮಾಡಿರಬಹುದು ಈ ಲಾಜಿಸ್ಟಿಕ್ ಸೊಸೈಟಿಗಳ ಫಂಕ್ಷನ್ಸ್ ಅನ್ನು ಸ್ವಲ್ಪ ತಾವು ವಾಚ್ ಮಾಡಬೇಕು ಉದಾಹರಣೆಗೆ ನಮ್ಮ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಕೋಟಿ ರೂ ಗಳಷ್ಟು ಔಷಧಿ ಸರಬರಾಜು ಆಗಬೇಕಾಗಿತ್ತು ನಲವತ್ತು ಲಕ್ಷ ರೂ ಗಳಷ್ಟು ಔಷಧಿಗಳು ಕೂಡ ಸರಬರಾಜು ಆಗಿಲ್ಲ ಇಲ್ಲಿ ಬಜೆಟ್‌ನಲ್ಲಿ ಹಣ ಬಿಡುಗಡೆಯಾದರೂ ಸಹ ಅವರು ಅಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ ಇವರು ಹಾಕಿರುವ ಆರ್ಡರ್ ಒಂದು, ಅವರು ಸಪ್ಲೈ ಮಾಡಿರುವುದು ಇನ್ನೊಂದು ಈ ನಿಟ್ಟಿನಲ್ಲಿ ನಿಜವಾದ ಬಡರೋಗಿಗಳಿಗೆ ಆಸ್ಪತ್ರೆಗಳಲ್ಲಿ ಔಷಧಿಗಳು ಕೊರತೆಯಾಗುತ್ತಿದೆ ಈ ಹಿನ್ನೆಲೆಯಲ್ಲಿ ತಾವು ವಿಶೇಷವಾಗಿ ಒಂದು ವಿಜಿಲೆನ್ಸ್ ಅನ್ನು ಇಂತಹ ಲಾಜಿಸ್ಟಿಕ್ ಸೊಸೈಟಿಯಲ್ಲಿ ಕೂಡ ಮಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ

ಶ್ರೀ ಆರ್ ಅಶೋಕ್(ಆರೋಗ್ಯ ಸಚಿವರು) ಈಗ ಸನ್ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವಂತಹದ್ದು ವಾಸ್ತವಿಕ ವಿಷಯವಾಗಿದೆ ಅದನ್ನು ನಾನು ಸಹ ಒಪ್ಪುತ್ತೇನೆ ಅದರ ಬಗ್ಗೆ ನನ್ನ ಭೇದವೇನೂ ಇಲ್ಲ ಸರ್ಕಾರ ಔಷಧಿ ಕೊಡುವುದರಲ್ಲಿ ಸ್ವಲ್ಪ ಕೊರತೆ ಮಾಡಿದರೆ ಅಥವಾ ಔಷಧಿ ಹೆಚ್ಚಿಗೆ ಕೊಟ್ಟರೂ ಸಹ ಜನರಿಗೆ ಸರಿಯಾಗಿ ರೀಚ್ ಆಗುತ್ತಿಲ್ಲವೆಂಬುದು ನನ್ನ

ಭಾವನೆ ನಾನು ಈ ಖಾತೆ ವಹಿಸಿಕೊಂಡ ಮೇಲೆ ಫಸ್ಟ್ ಇದೇ ಒಂದು ಮೂಲಭೂತವಾದ ಪ್ರಶ್ನೆ ನನಗೆ ಕಂಡು ಬಂದಿದ್ದು ಸರ್ಕಾರ ಬಜೆಟ್ಟಿನಲ್ಲಿ ಹೋದ ಸಾರಿ 43 00 ಕೋಟಿ ರೂ ಗಳನ್ನು ತೋರಿಸಿತ್ತು ಆ 43 00 ಕೋಟಿ ಆ ಬಡವನಿಗೆ ದೊರೆಯುತ್ತಿರಲಿಲ್ಲ, ಆ ವಿಷಯ ನನಗೆ ಗೊತ್ತಿದೆ ಅದಕ್ಕೆ ಈ ಸಾರಿ ನಾನು ಬಂದ ಮೇಲೆ ಈ ಚೀಟಿ ಬರೆದುಕೊಡುವಂತಹ ಲಾಬಿ ಏನಿದೆ ಈ ಚೀಟಿ ಬರೆದುಕೊಡುವಂತಹ ಸಂಸ್ಕೃತಿ ನಮ್ಮ ಡಾಕ್ಟರ್ಸ್‌ಗೆ ಅಭ್ಯಾಸವಾಗಿ ಹೋಗಿದೆ ನಮ್ಮ ಸರ್ಕಾರ ಔಷಧಿಗಳನ್ನು ಸಪ್ಲೈ ಮಾಡಿದ್ದು ಅದು ಗೋಡೌನ್‌ನಲ್ಲಿದ್ದರೂ ಸಹ ಔಷಧಿಗಳನ್ನು ಕೊಡುವಂತಹ ಪ್ರವೃತ್ತಿ ನಮ್ಮ ಡಾಕ್ಟರ್‌ಗಳಿಗೆ ಇರಲಿಲ್ಲ ಚೀಟಿ ಬರೆದುಕೊಡುವುದು ತಾವು ಹೇಳಿದಿರಲ್ಲಾ, ಎದುರುಗಡೆ ಯಾವನೋ ಒಬ್ಬ ಅಂಗಡಿಯವನ ಜೊತೆಗೆ ಒಂದು ಲಾಬಿ ಮಾಡಿಕೊಂಡಿರುತ್ತಾರೆ, ಈ ಪ್ರವೃತ್ತಿ ನಮ್ಮಲ್ಲಿದೆ ಅದಕ್ಕೋಸ್ಕರವೇ ನಾನು ಬಂದ ಮೇಲೆ ನಲವತ್ತು ಬಾರಿ surprise visit ಮಾಡಿದ್ದೇನೆ ಯಾವುದೇ protocol ನಾನು ಬರುತ್ತೇನೆಂದು ಎಲ್ಲಿಯೂ ಹೇಳುತ್ತಿರಲಿಲ್ಲ ಹಾಗೆಯೇ surprise visit ಮಾಡಿದ್ದೇನೆ ಸುಮಾರು 40ಕ್ಕೂ ಮೇಲ್ಪಟ್ಟು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ ನಿನ್ನೆಯೂ ಸಹ ಗುಲ್ಬರ್ಗಾದಲ್ಲಿರುವ ಚೀಫ್ ಫಾರ್ಮಾಸಿಸ್ಟ್ ರವರನ್ನು ಸಸ್ಪೆಂಡ್ ಮಾಡಿದ್ದೇನೆ ನಿನ್ನೆ ಹಾವೇರಿಗೆ ಹೋಗಿದ್ದೆ, ಸರಿಯಾಗಿ ಔಷಧಿಗಳನ್ನು ಸರಬರಾಜು ಮಾಡಿಲ್ಲವೆನ್ನುವ ಕಾರಣಕ್ಕೆ ಹಾಗೆ ಮಾಡಿದ್ದೇನೆ ಮೊನ್ನೆ ಇಬ್ಬರನ್ನು ಸಸ್ಪೆಂಡ್ ಮಾಡಿದ್ದೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಮಂತ್ರಿಗಳೆ, I want you help you, ದಯಮಾಡಿ ಕೇಳಿ ಈ ಸಸ್ಪೆನ್‌ಷನ್ ಇದೆಯೆಲ್ಲಾ, ಮಾನ್ಯ ರೆಡ್ಡಿಯವರೇ ನಿಮ್ಮ ಪ್ರಶ್ನೆಗೆ ಉತ್ತರ ಹೇಳುತ್ತಾರೆ

ಶ್ರೀ ಆರ್ ಅಶೋಕ್ ಮಾನ್ಯ ಶಾಸಕರುಗಳು ನೀವಿಬ್ಬರೂ ಒಂದೇ ಜಿಲ್ಲೆಯವರು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಸಚಿವರು, ನೀವು ದಯವಿಟ್ಟು ಒಂದರ್ಥ ಮಾಡಿಕೊಳ್ಳಿ ನೀವು ಔಷಧಿಗಳನ್ನು, ಮೂಲ ಪ್ರಶ್ನೆ ಕೇಳಿದ್ದೇನೆ, ಸರ್ಕಾರಿ ಆಸ್ಪತ್ರೆಗಳಿಗೆ ನೀವು ಏನು ಔಷಧಿಗಳನ್ನು ಕೊಡುತ್ತಿದ್ದೀರಿ, ಅದು 25% ಗಿಂತ ಹೆಚ್ಚಿಗೆ ಹೋಗುತ್ತಿಲ್ಲ ಅದಕ್ಕೆ ಇವತ್ತೇನಾಗುತ್ತಿದೆ ಎಂದರೆ ಆ 25% ಔಷಧಿಗಳು ಜನಕ್ಕೆ ಸೇರುತ್ತಿಲ್ಲವೆಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳುತ್ತಿರುವಂಥಾದ್ದು ನಾನು ಹೇಳುತ್ತಿರುವಂಥಾದ್ದು ಏನೆಂದರೆ, ಕೊಡುತ್ತಿರುವ

25% ಔಷಧಿ ಜೊತೆಗೆ ಇನ್ನು 75% ಔಷಧಿಗಳು ಸಹ ಹೋಗುತ್ತಿಲ್ಲ ಅದಕ್ಕೆ ಬೇಕಾಗುವ ಬಜೆಟ್ ಸಹ ನಿಮ್ಮ ಹತ್ತಿರ ಇಲ್ಲ ಅದಕ್ಕೆ ನೀವು ಏನು ಕೊಡುತ್ತಿದ್ದೀರಿ ಅದು ರಮೇಶ್‌ಕುಮಾರ್ ಹೇಳಿದ್ದು ಸತ್ಯ ನೀವು ಏನು ಕೊಡುತ್ತಿದ್ದೀರಿ ಅದರಲ್ಲಿ ಹೆಚ್ಚಿನ ಭಾಗ ಡಾಕ್ಟರ್, ಮೆಡಿಕಲ್ ಸ್ಟೋರ್ಸ್ ಇನ್ನೂ ಯಾರ್ಯಾರಿಗೋ ಹೋಗುತ್ತಿದೆ ನನ್ನ ಪ್ರಶ್ನೆ ಏನೆಂದರೆ ನಿಮ್ಮ ಸರ್ಕಾರದ ಯೋಜನೆಯೇ ಸಾಮಾನ್ಯ ಜನರ ಆರೋಗ್ಯಕ್ಕೆ ವ್ಯವಸ್ಥೆ ಮಾಡುವುದರ ಪರವಾಗಿಲ್ಲ ಎಂದು ನಿಮ್ಮ ಅಂಕಿ ಅಂಶಗಳನ್ನು ನೀವೇ ಹೇಳುತ್ತಿದ್ದೀರಿ 43 00 ಕೋಟಿ ರೂ ಗಳಿದ್ದರೆ, ದಿವಸಕ್ಕೆ ಆಸ್ಪತ್ರೆಗಳಿಗೆ ಬರುವ ನಿಮ್ಮ ರೋಗಿಗಳ ಸಂಖ್ಯೆ ಎಷ್ಟು? ಅದಕ್ಕೆ ಎಷ್ಟು ಹಣ ಬೇಕು? ಅದರ ಲೆಕ್ಕ ನಿಮ್ಮ ಹತ್ತಿರವಿದೆಯೇ? ನನಗೆ ಅದಕ್ಕೆ ನೀವು ಮೊದಲು ಉತ್ತರ ಹೇಳಬೇಕು

ಶ್ರೀ ಆರ್ ಅಶೋಕ್ ಮಾನ್ಯ ರಮೇಶ್‌ಕುಮಾರ್‌ರವರ ಪ್ರಶ್ನೆಗೆ ಉತ್ತರ ನೀಡಿ ಈಗ ನಾನು ತಮಗೆ ಉತ್ತರಿಸುತ್ತಿದ್ದೇನೆ ಈ ಸಿಸ್ಟಮ್ ಅನ್ನು ಸರಿಪಡಿಸಬೇಕೆಂದೇ ಈಗ ಉಚಿತವಾಗಿ ಔಷಧಿಗಳು ದೊರೆಯುವಂತಹ open glass ಮಳಿಗೆಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮಾಡಿದ್ದೇವೆ ಮೊದಲು ನಾವು ನೀಡಿದಂತಹ ಔಷಧಿಗಳು ಗೋಡೌನ್‌ಗೆ ಹೋಗುತಿತ್ತು ಅಲ್ಲಿಂದ ನೇರವಾಗಿ ಎಲ್ಲಿಗೆ ಹೋಗುತ್ತಿತ್ತು ಎನ್ನುವ ಪ್ರಶ್ನೆ ಬೇರೆ ಆದರೆ ಈಗ ನಾವು ಕೊಡುವ ಔಷಧಿಗಳು open storageನಲ್ಲಿ glass house ನಲ್ಲಿಡಬೇಕು ನೀವು ಎಲ್ಲೇ ಹೋಗಿ ಪರೀಕ್ಷೆ ಮಾಡಿ ಯಾವುದೇ ಜಿಲ್ಲಾ ಕೇಂದ್ರಕ್ಕೆ ನೀವು ಹೋಗಿ ಎಲ್ಲಾ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ನೀವು ಹೋಗತಕ್ಕಂಥ ಆಸ್ಪತ್ರೆಗಳ ಮುಂಭಾಗದಲ್ಲಿ ಉಚಿತವಾಗಿ ಔಷಧಿ ದೊರೆಯುವಂತಹ ಗೋಡೌನ್ ಅನ್ನು ಮಾಡಿಸಿದ್ದೇನೆ ಮತ್ತೆ transparent ಆಗಿ ಔಷಧಗಳು ಕಾಣುವ ರೀತಿ ಸುತ್ತಲೂ ಗ್ಲಾಸ್ ಹಾಕಿದ್ದೇವೆ ನೀವು ರಾಜ್ಯದ ಯಾವುದೇ ಭಾಗದಲ್ಲಿ ಹೋಗಿ ನೋಡಿ ಈ ಸರ್ಕಾರ ಬಂದ ಮೇಲೆ ನಾವು ಮಾಡಿದ್ದೇವೆ ನೀವು ಪರೀಕ್ಷೆ ಮಾಡಿ ನೋಡಿ

ಡಾ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ ಮಾನ್ಯ ಸಚಿವರೆ, ಅದು ಇನ್ನೂ ಕಾರ್ಯಗತವಾಗಿಲ್ಲ

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ರೀತಿಯಾಗಿ ಔಷಧಿಗಳನ್ನು ಸ್ಟಾಕ್ ಮಾಡುವುದನ್ನು ನಾವು ಮಾಡಿದ್ದೇವೆ ಎರಡನೆಯದಾಗಿ ಮಾನ್ಯ ಶ್ರೀರಾಮರೆಡ್ಡಿಯವರು ಮೂಲತ ನೀವು ಬಜೆಟ್

ಅನ್ನೇ ಅದಕ್ಕೆ ಅಲಾಟ್ ಮಾಡಿಲ್ಲವೆಂದು ಹೇಳಿದ್ದಾರೆ ಈ ಬಾರಿಯ ಬಜೆಟ್‌ನಲ್ಲಿ ನಾವು ಮಾಡಿರುವಂಥಹದ್ದು, ಕಳೆದ ಮೂರು ತಿಂಗಳುಗಳಿಂದ ಮಾಡಿದ್ದೇವೆ ಮೊದಲೆಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರವೆಂದರೆ 30,000 ರೂ ಗಳ ಅನುದಾನವನ್ನು ಕೊಡುತ್ತಿದ್ದೆವು ಇದನ್ನು ಈಗ ವರ್ಷಕ್ಕೆ 30,000 ರೂ ಗಳಿಂದ 60,000 ರೂ ಗಳಿಗೆ ಹೆಚ್ಚು ಮಾಡಿದ್ದೇನೆ ಪಿ ಹೆಚ್ ಯುಗೆ 75,000 ರೂ ಗಳಿಂದ 1 00 ಲಕ್ಷ ರೂ ಗಳಿಗೆ ಏರಿಕೆ, ಸಿ ಎಸ್ ಸಿ ಗೆ 2 00 ಲಕ್ಷ ರೂ ಗಳಿಂದ 3 00 ಲಕ್ಷರೂ ಗಳಿಗೆ ಏರಿಕೆ, ತಾಲ್ಲೂಕು ಆಸ್ಪತ್ರೆಗಳಿಗೆ 2 00 ಲಕ್ಷ ರೂ ಗಳಿಂದ 6 00 ಲಕ್ಷರೂ ಗಳಷ್ಟು ಹೆಚ್ಚಿಗೆ ಮಾಡಲಾಗಿದೆ ಅದೇರೀತಿ 100 ಬೆಡ್ಸ್ ಇರುವಂಥ ಆಸ್ಪತ್ರೆಗಳಿಗೆ 20 00 ಲಕ್ಷ ರೂ ಗಳು, 150 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 30 00 ಲಕ್ಷ ರೂ ಗಳು, 200 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 40 00 ಲಕ್ಷರೂ ಗಳು , 500 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 1 00 ಕೋಟಿ ರೂ ಗಳಷ್ಟು , 1000 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 2 00 ಕೋಟಿ ರೂ ಗಳನ್ನು ಕೊಡಬೇಕೆಂದು ಮಾಡಿದ್ದೇವೆ ಮೊದಲು ಈ ಪಾಲಿಸಿ ಇರಲಿಲ್ಲ ಯಾರು ಪ್ರಭಾವ ಬೀರುತ್ತಾರೋ, ಯಾರು ಮಂತ್ರಿಗಳ, ಎಂ ಎಲ್ ಎ ಗಳು ಪ್ರಭಾವ ಬೀರಿದರೆ ಅವರಿಗೆ ಬಜೆಟ್ ಅಲೋಕೇಷನ್ ಆಗುತ್ತಿತ್ತು ಈಗ ಆ ರೀತಿ ಇಲ್ಲ, ಇಡೀ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಒಂದೇ ನಿಯಮ ಎಷ್ಟು ಬೆಡ್ಸ್ ಇದೆ ಎನ್ನುವುದರ ಮೇಲೆ ಔಷಧಿಗಳ ವಿತರಣೆಯನ್ನು ಮಾಡಿದ್ದೇವೆ almost all double ಕಳೆದ ವರ್ಷದ ಬಜೆಟ್‌ಗಿಂತ ದುಪ್ಪಟ್ಟು ಔಷಧಿಯನ್ನು ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾನು ಕೇಳಿದ್ದು ಬೇರೆ, ನೀವು ಕೊಟ್ಟಿರುವ ಹಣ ಸರಿ, ಆದರೆ ಅವಶ್ಯಕತೆ ಎಷ್ಟು? ಈಗ ಒಂದು ವರ್ಷಕ್ಕೆ 30,000 ರೂ ಗಳಿಂದ 60,000 ರೂಗಳಿಗೆ ಅನುದಾನವನ್ನು ಹೆಚ್ಚು ಮಾಡಲಾಗಿದೆಯೆಂದು ಹೇಳುತ್ತಿದ್ದೀರಿ

ಅಧ್ಯಕ್ಷರು – ಮಾನ್ಯ ರೆಡ್ಡಿಯವರೇ ಬಹಳ ಸಮಯವಾಯಿತು ಇನ್ನೂ ಒಂದು ಪ್ರಶ್ನೆ ಇದೆ ಒಂದೂ ಕಾಲು ಗಂಟೆ ಆಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಸಚಿವರು ನೀವು 30,000 ರೂ ಗಳಿಂದ 60,000 ರೂ , 1 00 ಲಕ್ಷರೂ ಗಳಿಂದ 2 00 ಲಕ್ಷ ರೂ ಮಾಡಿದ್ದೇವೆಂದು ಹೇಳುತ್ತಿದ್ದೀರಿ, ನಿಜ, ಆದರೆ ನನ್ನ ಪ್ರಶ್ನೆ ಏನೆಂದರೆ ಒಂದು ವರ್ಷಕ್ಕೆ ನೀವು 30,000 ದಿಂದ 60,000 ರೂ ಗಳ ಪ್ರಶ್ನೆ ಒಂದು

ಕಡೆಯಾದರೆ, ಆ ಆಸ್ಪತ್ರೆಗಳಿಗೆ ಬರತಕ್ಕಂಥ ರೋಗಿಗಳ ಸಂಖ್ಯೆ ಮತ್ತು ಅದಕ್ಕೆ ಬೇಕಾಗುವ ಅಗತ್ಯತೆ ಎಷ್ಟು? ಅದಕ್ಕೆ ಪೂರಕವಾಗಿ, ಪ್ರಮಾಣವಾಗಿ ಹಣವನ್ನು ಹಂಚುತ್ತಿರುವಿರಾ ಎಂಬುದು ನನ್ನ ಪ್ರಶ್ನೆ ಆ ರೀತಿ ಹಣ ಹಂಚಿಕೆಯಾಗುತ್ತಿಲ್ಲ

ಅಧ್ಯಕ್ಷರು – ಆಯಿತು ಈ ಪ್ರಶ್ನೆಗೆ ಆಗಲೇ 10 ನಿಮಿಷ ಆಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನೀವು ಮಂತ್ರಿಯಾದರೆ 50,000 ರೂ ಗಳನ್ನು ಜಾಸ್ತಿ ಮಾಡುತ್ತೀರಿ ಇನ್ನೊಬ್ಬರು ಬಂದಾಗ ಅವರು ಜಾಸ್ತಿ ಮಾಡುತ್ತಾರೆ, ನೀವು ಜನರಿಗೆ ಅಗತ್ಯತೆ, ಅವಶ್ಯಕತೆ ಇರುವಂತಹ ಔಷಧಿಗಳನ್ನು ಪೂರೈಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ , ಅದಕ್ಕೆ ಉತ್ತರ ಹೇಳಿ

ಶ್ರೀ ಆರ್ ಅಶೋಕ್ – ಮಾನ್ಯ ಅಧ್ಯಕ್ಷರೆ, ಸ್ಥಳೀಯ ಮಟ್ಟದಲ್ಲಿ ಬರುವ ಬೇಡಿಕೆಗಳ ಅವಶ್ಯಕತೆಗೆ ತಕ್ಕಂತೆ ನಾವು ಔಷಧಿಗಳನ್ನು ಕೊಡುತ್ತಿದ್ದೇವೆ ಆಕಸ್ಮಾತ್ ನಿಮ್ಮ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಏನಾದರೂ ತಪ್ಪಾಗಿದ್ದರೆ ಆ ಮಾಹಿತಿ ಕೊಟ್ಟರೆ ಅದನ್ನು ಸರಿಪಡಿಸಲಿಕ್ಕೆ ನಾವು ಸಿದ್ಧರಿದ್ದೇವೆ

ಅಧ್ಯಕ್ಷರು – ಮಾನ್ಯ ಎಸ್ ಎಸ್ ಪಾಟೀಲರು, ಈಗಾಗಲೇ 10 ನಿಮಿಷ ಆಗಿ ಹೋಯಿತು ಮತ್ತೆ ಎಲ್ಲರೂ ಕೇಳಿದರೆ ಹೇಗೆ?

ಶ್ರೀ ಆರ್ ರೋಷನ್ ಬೇಗ್ – ಮಾನ್ಯ ಮಂತ್ರಿಗಳು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಔಷದಿಗಳ ವಿತರಣೆ ಬಗ್ಗೆ ಏನು ಹೇಳಿದ್ದಾರೆ, ಊರುಗಳು ಬಿಡಿ, ಬೆಂಗಳೂರು ನಗರದಲ್ಲಿ ಬೋರಿಂಗ್ , **ವಾಣಿವಿಲಾಸ್** , ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಮೆಡಿಸನ್ಸ್ ಸಿಗುತ್ತಿಲ್ಲ ಲೈಫ್ ಸೇವಿಂಗ್ ಡ್ರಗ್ಸ್ ಅಲ್ಲಿ ಇಲ್ಲ

ಶ್ರೀ ಆರ್ ಅಶೋಕ್ – ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯ ಮೆಡಿಕಲ್ ಎಜುಕೇಷನ್‌ಗೆ ಬರುತ್ತದೆ, ನೀವು ಬೇರೆ ಪ್ರಶ್ನೆಯನ್ನು ಹಾಕಿ

ಶ್ರೀ ಆರ್ ರೋಷನ್‌ಬೇಗ್ – ಮಾನ್ಯ ಮಂತ್ರಿಗಳು ನೀವು ನೋಡಿದರೆ ಅಲ್ಲಿ ಮೆಡಿಸಿನ್ಸ್ ಸಿಗುತ್ತದೆಂದು ಹೇಳುತ್ತಿದ್ದೀರಿ ಬೆಂಗಳೂರು ನಗರದಲ್ಲೇ ಮೆಡಿಸಿನ್ಸ್ ಇಲ್ಲವೇ ಇಲ್ಲ ಬೇರೆ ಕಡೆ ಎಲ್ಲಿ ಸಿಗುತ್ತದೆ ಒಂದು ಲೈಫ್ ಸೇವಿಂಗ್ ಡಗ್ ಸಿಗುತ್ತಿಲ್ಲ ಈಗ ಬೋರಿಂಗ್ ಆಸ್ಪತ್ರೆಗೆ ಹೋಗಿ ನೋಡಿ ಅಲ್ಲಿನ ರೋಗಿಗಳಿಗೆ ಚೀಟಿ ಬರೆದು ಕೊಟ್ಟು ಹೊರಗಿನಿಂದ ಔಷಧಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ when this is the situation in Bangalore city, ಬೇರೆ ಕಡೆ ದೇವರೇ ಕಾಪಾಡಬೇಕು

ಶ್ರೀ ಆರ್ ಅಶೋಕ್ – ಮಾನ್ಯ ಸದಸ್ಯರು ಮೆಡಿಕಲ್ ಎಜುಕೇಷನ್ ಮಿನಿಸ್ಟರ್‌ಗೆ ಪ್ರಶ್ನೆಯನ್ನು ಹಾಕುವ ಮುಖಾಂತರ ಅಲ್ಲಿಂದ ವರದಿಯನ್ನು ತರಿಸಿಕೊಳ್ಳಬೇಕು

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದು

44 (216) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ,

ಆ) ಸಮುದಾಯ ಆರೋಗ್ಯ ಕೇಂದ್ರಗಳು ಇರದಿದ್ದರೆ ಡಂಬಳ, ಬಾಗೇವಾಡಿ, ಲಕ್ಕುಂಡಿ ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೇ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದೇ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮುಂಡರಗಿ ಕ್ಷೇತ್ರದಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ

ಆ) ಮುಳಗುಂದ ಹಾಗೂ ಡಂಬಳ ಪ್ರಾ.ಆ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಬಂದಿದ್ದು ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ ಎಂದು ಹೇಳಿದ್ದೀರಿ ಅದು ಯಾವುದು? ಎಂದು ಹೇಳಬೇಕು ಆ ನಂತರ ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೆ ಅದರಲ್ಲಿ ಎರಡು ಪ್ರಶ್ನೆಗಳು ಮಾತ್ರ ಬಂದಿವೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ, ಮಾರ್ಗಸೂಚಿ ಅಂದರೆ ಏನು? ಈಗ ಮಾಡಿದಂತಹ ಸಿ ಹೆಚ್ ಸಿಗಳನ್ನು ಕೂಡ ಮಾರ್ಗಸೂಚಿ ಪ್ರಕಾರ ಮಾಡಿದ್ದೀರಾ? ಎನ್ನುವುದರ ಬಗ್ಗೆ ಉತ್ತರ ಕೊಡಬೇಕು

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಸದಸ್ಯರ ಕ್ಷೇತ್ರದ ತಾಲೂಕು ಆಸ್ಪತ್ರೆಯನ್ನು Hundred bed ಆಗಿ up-grade ಮಾಡಿದ್ದೇವೆ ಅದರ ಜೊತೆಗೆ ತಾವೇನು ಈಗ ಬೇಡಿಕೆಯನ್ನು ಸಲ್ಲಿಸಿದ್ದೀರಾ ಡಂಬಳ, ಬಾಗೇವಾಡಿ ಲಕ್ಕುಂಡಿ, ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು, ಮೇಲ್ದರ್ಜೆಗೇರಿಸಬೇಕಾದರೆ ಕೇಂದ್ರ ಸರ್ಕಾರ ಜನಗಣತಿಯ ಆಧಾರದ ಮೇಲೆ up-grade ಮಾಡಬೇಕು ಅಂತ ಸೂಚನೆ ಇದೆ ಅವರ ಮಾರ್ಗಸೂಚಿ ಪ್ರಕಾರ ಒಂದು ಲಕ್ಷ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರ ನೀಡಬೇಕು ಅಂತ ಮಾರ್ಗಸೂಚಿ ಇದೆ ಅದರ ಪ್ರಕಾರ ನೀವು ಕೊಟ್ಟಂತಹ ಮನವಿಯನ್ನು ಪರಿಗಣಿಸಿದ್ದೇವೆ ಅದರ ಮೇಲೆ ನಾವು ಸಮೀಕ್ಷೆ ಮಾಡಿಸಿ ಮಾಡುತ್ತೇವೆ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಸಚಿವರು ತಾವು ಒಂದು ಸಮುದಾಯ ಕೇಂದ್ರ ಇದೆ ಎಂದು ಹೇಳಿದ್ದೀರಿ ಯಾವುದು ಅಂತ ನಾನು ಕೇಳಿದೆ ಅದನ್ನು ತಾವು ಹೇಳಲಿಲ್ಲ ಸಮುದಾಯ ಕೇಂದ್ರಗಳೇ ಇಲ್ಲ ನಮ್ಮ ತಾಲ್ಲೂಕಿನಲ್ಲಿ ತಾಲೂಕು ಆಸ್ಪತ್ರೆ ಒಂದೇ ಇರುವುದು ಅದನ್ನೇ ಸಮುದಾಯ ಆಸ್ಪತ್ರೆ ಎಂದು ನಿಮ್ಮವರು ಉತ್ತರ ಕೊಟ್ಟಿರಬೇಕು ಸಮುದಾಯ ಆರೋಗ್ಯ ಕೇಂದ್ರಗಳೇ ಇಲ್ಲ ನಿಮ್ಮ ಪ್ರಕಾರ ಹೋದರೆ ಜನಸಂಖ್ಯೆ ಆಧಾರದ ಮೇಲೆ ಹೋದರೆ ಒಂದು ಸಹ ಕೊಡುವುದಕ್ಕೆ ಆಗುವುದಿಲ್ಲ ನಮ್ಮಲ್ಲಿ ಇರುವುದೇ ಒಂದು ಲಕ್ಷ ಜನಸಂಖ್ಯೆಗಿಂತ ಕಡಿಮೆ ನಿಮಗೆ ಕೊಡುವುದಿಲ್ಲವೆಂದು ಹೇಳಿದ ಹಾಗೆ ಆಯಿತು ಆದರೆ ನಾನು ನಿಮಗೆ ಹೇಳುತ್ತೇನೆ ನಮ್ಮಲ್ಲಿ ಬಹಳಷ್ಟು ಹಿಂದುಳಿದಂತಹ ತಾಲ್ಲೂಕುಗಳು ಇವು ನೀವು ಜನಸಂಖ್ಯೆ ಆಧಾರ ಹಿಡಿದರೆ ಹಳ್ಳಿಗಳಿಗೆ ಆಸ್ಪತ್ರೆಗಳೇ ಕೊಡುವುದಕ್ಕೆ ಆಗುವುದಿಲ್ಲ ದವಾಖಾನೆಗಳಲ್ಲಿ ಈಗಲೇ ಡಾಕ್ಟರ್‌ಗಳೇ ಇಲ್ಲ ಆ ಕಾರಣದಿಂದ ಸಮುದಾಯ ಆರೋಗ್ಯ ಕೇಂದ್ರಗಳು ನಮ್ಮ ತಾಲೂಕಿನಲ್ಲಿಯೇ ಇಲ್ಲ ನಮ್ಮ ಕ್ಷೇತ್ರದಲ್ಲಿಯೇ ಇಲ್ಲ ಗದಗ್ ಕ್ಷೇತ್ರಕ್ಕೂ ಸಹ ನನ್ನ ಕ್ಷೇತ್ರ ಬರುತ್ತದೆ ನಮ್ಮ ಕ್ಷೇತ್ರದಲ್ಲಿ ಒಂದೂ ಸಮುದಾಯ ಆರೋಗ್ಯ ಕೇಂದ್ರ ಇಲ್ಲ ಆದರೂ ಒಂದು ಇದೆ ಎಂದು ಉತ್ತರದಲ್ಲಿ ಹೇಳುತ್ತಾರೆ ತಾಲೂಕು ಆಸ್ಪತ್ರೆಯನ್ನೇ ನೀವು ಸಮುದಾಯ ಕೇಂದ್ರ ಅಂದರೆ ನನ್ನ ತಕರಾರು ಇಲ್ಲ ಒಂದೂ ಇಲ್ಲ ನನ್ನ ಕ್ಷೇತ್ರದಲ್ಲಿ ತಪ್ಪು ಉತ್ತರವನ್ನು ನಿಮ್ಮ ಅಧಿಕಾರಿಗಳು ಕೊಡುತ್ತಿದ್ದಾರೆ ಆ ತಾಲೂಕು ಆಸ್ಪತ್ರೆಯಾದರೂ ಕೂಡ ಅಲ್ಲಿ ಸರಿಯಾದ ಡಾಕ್ಟರ್ಸ್ ಇಲ್ಲ ಆದರೂ ಅದನ್ನು hundred bed ಆಸ್ಪತ್ರೆಯನ್ನಾಗಿ

ಮಾಡಿದ್ದೀರಿ ಇದು ಏನಾಗಿದೆ ಎಂದು ನನಗೆ ಉತ್ತರ ಕೊಡಬೇಕು ಕನಿಷ್ಠ ಈ ಎರಡು ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ – ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ ಇದು Backward area ಮಾನ್ಯ ಡಾ ನಂಜುಂಡಪ್ಪನವರ ವರದಿ ಪ್ರಕಾರ Backward Taluk ಎಂದು ಏನು ಗುರುತು ಮಾಡಿದೆ ಆ ಭಾಗದಲ್ಲಿ ವಿಶೇಷವಾದಂತಹ ಒಂದು ಗಮನವನ್ನು ಕೊಡಬೇಕು ಎಂದು ಸರ್ಕಾರಕ್ಕೆ ಇಚ್ಛೆ ಇದೆ ಆ ದೃಷ್ಟಿಯಿಂದ ನಾನೀಗ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ ಈ ಬಜೆಟ್‌ನಲ್ಲಿ ಈಗಾಗಲೇ most backward ಎಂದು ಏನು ಗುರುತು ಆಗಿವೆ ಅಲ್ಲಿ, ಈಗಾಗಲೇ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ 30 ಸಾವಿರ ಜನಸಂಖ್ಯೆಗೆ ಒಂದು ಪಿ ಹೆಚ್ ಸಿ ಯನ್ನು ಕೊಡಬೇಕು ಎಂದು ಪಾಲಿಸಿ ಮಾಡಿದೆ ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದಿನ ನಮ್ಮ ಆರೋಗ್ಯ ಮಂತ್ರಿಗಳು 25 ಸಾವಿರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಟ್ಟಿದ್ದಾರೆ ಕೇಂದ್ರ ಸರ್ಕಾರದ ಪಾಲಿಸಿಯ ಪ್ರಕಾರ ನಾವು ಇನ್ನು ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ ಆದರೆ ವಿಶೇಷವಾಗಿ ಈ ಭಾಗದಲ್ಲಿ ಹೆಚ್ಚಿನ ಅವಶ್ಯಕತೆ ಇದೆ ಬಡವರಿಗಾಗಿ ಮುಂದಿನ ವರ್ಷದಲ್ಲಿ ಈ ಭಾಗದಲ್ಲಿ ಹೆಚ್ಚಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಕೊಡಬೇಕೆನ್ನುವ ದೃಷ್ಟಿಯಿಂದ ಆ ಭಾಗಕ್ಕೆ ವಿಶೇಷವಾದಂತಹ ಒಂದು ವ್ಯವಸ್ಥೆ ಮಾಡಬೇಕು, ಹೆಚ್ಚಿನ ಪಿ ಹೆಚ್ ಸಿಗಳನ್ನಾದರೂ ತೆರೆಯಬೇಕು ಅಥವಾ ಇರುವ ಪಿ ಹೆಚ್ ಸಿಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮಾಡುವ ಬಗ್ಗೆ ನಾನು ಹೆಚ್ಚಿನ ಆದ್ಯತೆಯನ್ನು ಕೊಡುತ್ತೇನೆ

ಅಧ್ಯಕ್ಷರು ಮಾನ್ಯ ಸದಸ್ಯರ ಪ್ರಶ್ನೆಗೆ ಎರಡು ವಾರಗಳ ಕಾಲಾವಕಾಶವನ್ನು ಕೋರಿದ್ದಾರೆ ಮುಂದೆ ತೆಗೆದುಕೊಳ್ಳೋಣ ಈಗ ಪ್ರಶ್ನೋತ್ತರ ವೇಳೆ ಮುಗಿಯಿತು

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಅನುಬಂಧ–I)

ಶ್ರೀ ಕೆ ಎಸ್ ಈಶ್ವರಪ್ಪ– ಮಾನ್ಯ ಅಧ್ಯಕ್ಷರೆ, ದಿನಾಂಕ 1ನೇ ಫೆಬ್ರವರಿ 2007 ರಂದು 3ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ

ಆದ್ಯಕ್ಷರು – ಮಂಡಿಸಲಾಗಿದೆ

4 ಕಾರ್ಯದರ್ಶಿಯವರ ವರದಿ

ಶ್ರೀ ಎಸ್ ಬಿ ಪಾಟೀಲ್ – ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಅದವಾ ರಾಜ್ಯಪಾಲರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ

ಅಧ್ಯಕ್ಷರು – ಮಂಡಿಸಲಾಗಿದೆ

5 ಸಭೆಯ ಮುಂದಿಡಲಾದ ಕಾಗದ ಪತ್ರಗಳು

I ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8 (3)ರ ಪ್ರಕರಣದ ಮೇರೆಗೆ

1. 1957ರ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳ ನಿಯಮ 10ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18 08 2006ರಂದು ಹೊರಡಿಸಲಾದ ಡಿಪಿಎಆರ್ 14 ಎಸ್‌ಎಸ್‌ಆರ್ 2006ನೇ ಸಂಖ್ಯೆಯ ಅಧಿಸೂಚನೆ

2. 1974ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ 1ಕ್ಕೆ ತಿದ್ದುಪಡಿ ಮಾಡಿ ದಿನಾಂಕ 28 08 2006ರಂದು ಹೊರಡಿಸಲಾದ ಡಿಪಿಎಆರ್ 35 ಎಸ್‌ಎಸ್‌ಆರ್ 2004ನೇ ಸಂಖ್ಯೆಯ ಅಧಿಸೂಚನೆ

3. 2006ರ ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿದ ದಿನಾಂಕ 11 10 2006ರಂದು ಹೊರಡಿಸಲಾದ ಡಿಪಿಎಆರ್ 139 ಎಸ್‌ಆರ್‌ಡಿ 2005ನೇ ಸಂಖ್ಯೆಯ ಅಧಿಸೂಚನೆ

4. 2006ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) (2ನೇ ತಿದ್ದುಪಡಿ) ನಿಯಮಗಳ ನಿಯಮ 7ಕ್ಕೆ ತಿದ್ದುಪಡಿ ಮಾಡಿ ದಿನಾಂಕ

12 10 2006ರಂದು ಹೊರಡಿಸಲಾದ ಡಿಪಿಎಆರ್ 85 ಎಸ್‌ಆರ್‌ಆರ್ 2006ನೇ ಸಂಖ್ಯೆಯ ಅಧಿಸೂಚನೆ

5 2006ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ' ಭಾಷೆ ಪರೀಕ್ಷೆಗಳು) (2ನೇ .ತಿದ್ದುಪಡಿ) ನಿಯಮಗಳ ಅನುಸೂಚಿ 1ಕ್ಕೆ ತಿದ್ದುಪಡಿ ಮಾಡಿ ದಿನಾಂಕ 15 11 2006ರಂದು ಹೊರಡಿಸಲಾದ ಡಿಪಿಎಆರ್ 24 ಎಸ್‌ಎಸ್‌ಆರ್ 2006ನೇ ಸಂಖ್ಯೆಯ ಅಧಿಸೂಚನೆ

6 1957ರ ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 15ಕ್ಕೆ ತಿದ್ದುಪಡಿ ಮಾಡಿ ದಿನಾಂಕ 16 11 2006ರಂದು ಹೊರಡಿಸಲಾದ ಡಿಪಿಎಆರ್ 5 ಎಸ್‌ಡಿಇ 2006ನೇ ಸಂಖ್ಯೆಯ ಅಧಿಸೂಚನೆ

7 2000ರ ಕರ್ನಾಟಕ ನಾಗರೀಕ ಸೇವೆಗಳು (ಕಾರ್ಯನಿರ್ವಹಣಾ ವರದಿಗಳು) ನಿಯಮಗಳ ನಿಯಮ 5ಎ ಅನ್ನು ಸೇರಿಸಿ ದಿನಾಂಕ 14 11 2006ರಂದು ಹೊರಡಿಸಲಾದ ಡಿಪಿಎಆರ್ 3 ಎಸ್‌ಸಿಆರ್ 2005ನೇ ಸಂಖ್ಯೆಯ ಅಧಿಸೂಚನೆ

1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 130ರ ಪ್ರಕರಣದ ಮೇರೆಗೆ

1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಯ ನಿಯಮ 12ಎ, 12ಬಿ, 14, 14ಎ, 17, 18, 21ಎ ಮತ್ತು 52ಕ್ಕೆ ತಿದ್ದುಪಡಿ ಮಾಡಿ ದಿನಾಂಕ 06 07 2006ರಂದು ಹೊರಡಿಸಲಾದ ಸಿಓ 226 ಸಿಎಲ್‌ಎಂ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

II ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು) ಅವರ ಪರವಾಗಿ

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ)ಗೆ ಸಂಬಂಧಿಸಿದಂತೆ ಹೊರಡಿಸಿರುವ ಸಂವ್ಯಶಾಇ 18 ಶಾಸನ 2006 ದಿನಾಂಕ 27 11 2006ರ ಅಧ್ಯಾದೇಶ–ಸಂಖ್ಯೆ 2

1979ರ ಕರ್ನಾಟಕ ವೃತ್ತಿ ತೆರಿಗೆಗಳು, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ಕಾಯ್ದೆಯ ಕಲಂ 33ರ ಪ್ರಕರಣದ ಮೇರೆಗೆ

2006–07ರ ಆಯವ್ಯಯ ಮಂಡನೆಯನುಸಾರ 1976ರ ಕೆಪಿಟಿಸಿಇಯ ನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 17 08 2006ರಂದು ಹೊರಡಿಸಲಾದ ಎಫ್‌ಡಿ 149 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಕಲಂ 39ರ ಪ್ರಕರಣದ ಮೇರೆಗೆ

1 1957ರ ಕರ್ನಾಟಕ ಕೇಂದ್ರ ಮಾರಾಟ ತೆರಿಗೆ ಕಾಯ್ದೆಯ ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 17 08 2006ರಂದು ಹೊರಡಿಸಲಾದ ಎಫ್‌ಡಿ 201 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

2 ಮೀನುಗಾರರ ಮೀನು ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006 (2)ನೇ ಸಂಖ್ಯೆಯ ಅಧಿಸೂಚನೆ

3 ಅಧಿಸೂಚನೆ ಸಂಖ್ಯೆ ಎಫ್‌ಡಿ 156 ಸಿಎಸ್‌ಎಲ್ 2002 (ಪಿ) (2) ದಿನಾಂಕ 05 08 2002ನ್ನು ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(2)ನೇ ಸಂಖ್ಯೆಯ ಅಧಿಸೂಚನೆ

4 ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ದಿನಾಂಕ 31 03 2005ಕ್ಕೆ ಅಂತ್ಯಗೊಳ್ಳುವಂತೆ ಯಾವುದೇ ವಷಾಂತ್ಯದಲ್ಲಿ ಪಾವತಿಸಲಾಗುವ ತೆರೆಗೆಯ ಬಗ್ಗೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(3)ನೇ ಸಂಖ್ಯೆಯ ಅಧಿಸೂಚನೆ

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಕಲಂ 89ರ ಪ್ರಕರಣದ ಮೇರೆಗೆ

1 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ಕೆಳಕಂಡ ಅಧಿಸೂಚನೆಗಳನ್ನು ರದ್ದುಗೊಳಿಸುವ ಬಗ್ಗೆ

1 ಎಫ್‌ಡಿ 55 ಸಿಎಸ್‌ಎಲ್ 2005(4), ದಿನಾಂಕ 23ನೇ ಮಾರ್ಚ್ 2005

2 ಎಫ್‌ಡಿ 55 ಸಿಎಸ್‌ಎಲ್ 200596), ದಿನಾಂಕ 23ನೇ ಮಾರ್ಚ್ 2005

3 ಎಫ್‌ಡಿ 55 ಸಿಎಸ್‌ಎಲ್ 2005(7), ದಿನಾಂಕ 23ನೇ ಮಾರ್ಚ್ 2005

4 ಎಫ್‌ಡಿ 91 ಸಿಎಸ್‌ಎಲ್ 2005(3), ದಿನಾಂಕ 31ನೇ ಮಾರ್ಚ್ 2005

5 ಎಫ್‌ಡಿ 197 ಸಿಎಸ್‌ಎಲ್ 2005 (1), ದಿನಾಂಕ 30ನೇ ಏಪ್ರಿಲ್ 2005

6 ಎಫ್‌ಡಿ 197 ಸಿಎಸ್‌ಎಲ್ 2005(3), ದಿನಾಂಕ 30ನೇ ಏಪ್ರಿಲ್ 2005

7 ಎಫ್‌ಡಿ 197 ಸಿಎಸ್‌ಎಲ್ 2005(3), ದಿನಾಂಕ 30ನೇ ಏಪ್ರಿಲ್, 2005

8 ಎಫ್‌ಡಿ 197 ಸಿಎಸ್‌ಎಲ್ 2005(4), ದಿನಾಂಕ 30ನೇ ಏಪ್ರಿಲ್ 2005

9 ಎಫ್‌ಡಿ416 ಸಿಎಸ್‌ಎಲ್ 2005(1), ದಿನಾಂಕ 16ನೇ ಸೆಪ್ಟೆಂಬರ್ 2005

10 ಎಫ್‌ಡಿ 416 ಸಿಎಸ್‌ಎಲ್ 2005(2), ದಿನಾಂಕ 16ನೇ ಸೆಪ್ಟೆಂಬರ್ 2005

2 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ 01 04 2006 ರಿಂದ 30 09 2006 ರವರೆಗೆ ಜಾರಿಗೆ ಬರುವಂತೆ ವರ್ತಕರು ಮಾರಾಟ ಮಾಡುವ ಭತ್ತ ಮತ್ತು ಅಕ್ಕಿ, ಗೋಧಿ, ದಿನಸಿಗಳು, ಕಾಳುಗಳು ಮುಂತಾದವುಗಳ ಮೇಲೆ ವಿನಾಯಿತಿ ನೀಡಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(5)ನೇ ಸಂಖ್ಯೆಯ ಅಧಿಸೂಚನೆ

3 ಬೇಸಾಯದ ಧೂಳು ತೆಗೆಯುವ ಉಪಕರಣ, ಸಿಂಪಡಣೆ ಮತ್ತು ಹನಿ ನೀರಾವರಿ ಉಪಕರಣಗಳು ಹಾಗೂ ಅದರ ಭಾಗಗಳು ಮುಂತಾದ ವಸ್ತುಗಳ ಮೇಲೆ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ತೆರಿಗೆಯನ್ನು ಕಡಿಮೆಗೊಳಿಸಿ ದಿನಾಂಕ 31ನೇ ಮಾರ್ಚ್ 2006ರಂದು

ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(6)ನೇ ಸಂಖ್ಯೆಯ ಅಧಿಸೂಚನೆ

4 ಉತ್ಪಾದಿಸಲಾದ ಅಥವಾ ಇನ್ಯಾವುದೇ ಕಾರಣದಿಂದ ಪುನರ್ ರಫ್ತು ಮಾಡಲು ಕಸ್ಟಮ್ ಬಾಂಡ್ ಅವರಿಂದ ಪಡೆದ ವಸ್ತುಗಳು, ಕಂದಸಾರಿ ಸಕ್ಕರೆ ಮತ್ತು ಕಾಕಂಬಿಗಳ ಮೇಲೆ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(7)ನೇ ಸಂಖ್ಯೆಯ ಅಧಿಸೂಚನೆ

5 ಬಂಡವಾಳ ವಸ್ತುಗಳ ಮೇಲಿನ ಉದ್ದೇಶದಿಂದ ಮೌಲ್ಯವರ್ಧಿತ ತೆರಿಗೆಯ ಪ್ರವೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ದಿನಾಂಕ 31ನೇ ಮಾರ್ಚ್ 2006ರಿಂದ ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006 (8)ನೇ ಸಂಖ್ಯೆಯ ಅಧಿಸೂಚನೆ

6 ದಿನಾಂಕ 30 06 2005ರ ಅಧಿಸೂಚನೆ ಸಂಖ್ಯೆ ಎಫ್‌ಡಿ 197 ಸಿಎಸ್‌ಎಲ್ 2005(7)ರಲ್ಲಿ ಕೆಲವು ಸರಕುಗಳನ್ನು ಮಾಹಿತಿ ತಂತ್ರಜ್ಞಾನ ಉತ್ಪನ್ನಗಳಾಗಿ ನಿರ್ದಿಷ್ಟಪಡಿಸಿರುವ ಬಗ್ಗೆ ದಿನಾಂಕ 31ನೇ ಮಾರ್ಚ್ 2006 ರಂದು ಹೊರಡಿಸಲಾದುದು ಎಫ್‌ಡಿ 116 ಸಿಎಸ್‌ಎಲ್ 2006(9)ನೇ ಸಂಖ್ಯೆಯ ಅಧಿಸೂಚನೆ

7 ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ಬೀರ್, ಫೆನ್ನಿ, ಲಿಕ್ಕರ್ ಮತ್ತು ವೈನ್ ಸೇರಿದಂತೆ ಮದ್ಯಪಾನೀಯಗಳು, ನಿದ್ರಾಜನಕ ವಸ್ತುಗಳು, ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ಗಳ ಮೇಲೆ ವರ್ತಕರು ಪಾವತಿಸಬೇಕಾದ ನಿವ್ವಳ ತೆರಿಗೆಯನ್ನು ಕಡಿತಗೊಳಿಸುವಂತೆ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 1116 ಸಿಎಸ್‌ಎಲ್ 2006(10)ನೇ ಸಂಖ್ಯೆಯ ಅಧಿಸೂಚನೆ

8 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ 15 ಲಕ್ಷ ರೂಪಾಯಿಗಳ ವಹಿವಾಟನ್ನು ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(1)ನೇ ಸಂಖ್ಯೆಯ ಅಧಿಸೂಚನೆ

9 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ಕೆಲವು ಸರಕುಗಳನ್ನು ಕೈಗಾರಿಕ ಕಚ್ಚಾ

ವಸ್ತುಗಳನ್ನಾಗಿ ಮತ್ತು ಪ್ಯಾಕಿಂಗ್ ವಸ್ತುಗಳಾಗಿ ನಿರ್ದಿಷ್ಟಪಡಿಸಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದುದು ಎಫ್ ಡಿ 116 ಸಿಎಸ್‌ಎಲ್ 2006 (12)ನೇ ಸಂಖ್ಯೆಯ ಅಧಿಸೂಚನೆ

10 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ವರ್ತಕರು ರಾಜಿ ತೆರಿಗೆಯಾಗಿ ಪಾವತಿಸಬೇಕಾದ ಮೊತ್ತವನ್ನು ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(13)ನೇ ಸಂಖ್ಯೆಯ ಅಧಿಸೂಚನೆ

11 ರೆಜಿಮೆಂಟಲ್‌ನ ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್ ಅಥವಾ ಯೂನಿಟ್ ರನ್ ಕ್ಯಾಂಟೀನ್, ಸೇನಾ ತುಕಡಿಗಳ ಸದಸ್ಯರುಗಳಿಗೆ ಕ್ಯಾಂಟೀನ್ ಸ್ಟೋರ್ಸ್ ಡಿಪಾರ್ಟ್‌ಮೆಂಟ್, ಮುಂತಾದವುಗಳ ಮಾರಾಟದ ಮೇಲೆ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ಶೇ 4ರಷ್ಟು ಕಡಿಮೆಗೊಳಿಸಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006 (14)ನೇ ಸಂಖ್ಯೆಯ ಅಧಿಸೂಚನೆ

12 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 197 ಸಿಎಸ್‌ಎಲ್ 2005(5) ದಿನಾಂಕ 30 04 2005ನ್ನು ತಿದ್ದುಪಡಿ ಮಾಡಿ ದಿನಾಂಕ 31ನೇ ಮಾರ್ಚ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(15)ನೇ ಸಂಖ್ಯೆಯ ಅಧಿಸೂಚನೆ

13 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ಭತ್ತ ಮತ್ತು ಅಕ್ಕಿ, ಗೋಧಿ ಕಾಳುಗಳು, ಹಿಟ್ಟು ಮತ್ತು ಗೋಧಿಯಿಂದ ಮಾಡಲಾದ ರವೆ, ಗೋಧಿಯಿಂದ ಮಾಡಲ್ಪಟ್ಟ ಮೈದಾಗಳು 31ನೇ ಮಾರ್ಚ್2007ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 03 10 2006ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 365 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

14 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ದಿನಾಂಕ 31 03 2006ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 374 ಸಿಎಸ್‌ಎಲ್ 2006ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20 11 2006ರಂದು ಹೊರಡಿಸಲಾದ ಎಫ್‌ಡಿ 374 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

15 ರಾಸಾಯನಿಕ ಗೊಬ್ಬರದ ಉತ್ಪಾದನೆಯಲ್ಲಿ ನಿರತರಾಗಿರುವ ವರ್ತಕರು ಕಲುಮೆ ಎಣ್ಣೆಯನ್ನು ಕ್ಯಾಪಿಟಿವ್ - ಪವರ್ ಜನರೇಷನ್‌ಗೆ ಬಳಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 15 12 2006ರಂದು ಹೊರಡಿಸಲಾದ ಎಫ್‌ಡಿ 373 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

16 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ಫ್ರೆಂಚ್ ಕಾಫಿ ಸೇರಿದಂತೆ ಕಾಫಿ ಪುಡಿಯನ್ನು ಮಾರಾಟ ಮಾಡುವಲ್ಲಿ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ಶೇ 4ರಷ್ಟು ಕಡಿಮೆ ಮಾಡಿ ದಿನಾಂಕ 11 12 2008 ರಂದು ಹೊರಡಿಸಲಾದ ಎಫ್‌ಡಿ 166 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

17 2003ರ ಕರ್ನಾಟಕ ಮೌಲ್ಯ ವರ್ಧಿತ ವಿವಿಧ ಬೇರಿಂಗ್ಸ್‌ಗಳ ಮತ್ತು ಇತರ ಸಾಮಗ್ರಿಗಳ ಮಾರಾಟದ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶೇ 4ರಷ್ಟು ಕಡಿಮೆ ಮಾಡಿ ದಿನಾಂಕ 29 11 2006ರಂದು ಹೊರಡಿಸಲಾದ ಎಫ್‌ಡಿ 221 ಸಿಎಸ್‌ಎಲ್ 2006ನೇ ಸಂಖ್ಯೆಯ ಅಧಿಸೂಚನೆ

18 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ಕೆಲವು ಸರಕುಗಳನ್ನು ಮಾಹಿತಿ ತಂತ್ರಜ್ಞಾನ ಉತ್ಪನ್ನಗಳಾಗಿ ನಿರ್ದಿಷ್ಟಪಡಿಸಿರುವ ಬಗ್ಗೆ ದಿನಾಂಕ 06ನೇ ಏಪ್ರಿಲ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 2006(16)ನೇ ಸಂಖ್ಯೆಯ ಅಧಿಸೂಚನೆ

19 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ ಸಿಎಸ್‌ಎಲ್ 2006 (16) ದಿನಾಂಕ 06ನೇ ಏಪ್ರಿಲ್ 2006ನ್ನು ತಿದ್ದುಪಡಿ ಮಾಡಿ ದಿನಾಂಕ 29ನೇ ಏಪ್ರಿಲ್ 2006ರಂದು ಹೊರಡಿಸಲಾದ ಎಫ್‌ಡಿ 116 ಸಿಎಸ್‌ಎಲ್ 06 (17)ನೇ ಸಂಖ್ಯೆಯ ಅಧಿಸೂಚನೆ

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ ಕಲಂ 15(3) ಪ್ರಕರಣದ ಮೇರೆಗೆ

1 2004ರ ಕರ್ನಾಟಕ ಕೆಲವು ಸರಕುಗಳ ಮೇಲಿನ ವಿಶೇಷ ತೆರಿಗೆ ಕಾಯ್ದೆಯು ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 25 10 2006ರಂದು ಹೊರಡಿಸಲಾದ ಎಫ್‌ಡಿ 25 ಸಿಇಟಿ 2006ನೇ ಸಂಖ್ಯೆಯ ಅಧಿಸೂಚನೆ

2 - 2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ನಿಯಮಾವಳಿಯ ನಿಯಮ 2,3 ಮತ್ತು 4ಕ್ಕೆ ತಿದ್ದುಪಡಿ ಮಾಡಿ ದಿನಾಂಕ11 10 2006ರಂದು ಹೊರಡಿಸಲಾದ ಎಫ್‌ಡಿ 17 ಸಿಇಟಿ 2006ನೇ ಸಂಖ್ಯೆಯ ಅಧಿಸೂಚನೆ

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ

1 1979ರ ಕರ್ನಾಟಕ ಪ್ರವೇಶ ತೆರಿಗೆ ನಿಯಮಗಳ ನಿಯಮ 3, 4, 7, 8, 8–AA, 9, 9–A, 12–A ಮತ್ತು 100ಕ್ಕೆ ತಿದ್ದುಪಡಿ ಮಾಡಿ ದಿನಾಂಕ 09 10 2006ರಂದು ಹೊರಡಿಸಲಾದ ಎಫ್‌ಡಿ 15 ಸಿಇಟಿ 2006ನೇ ಸಂಖ್ಯೆಯ ಅಧಿಸೂಚನೆ

2 ವರ್ತಕರು ಪಾವತಿಸಬೇಕಾದ ಪ್ರವೇಶ ತೆರಿಗೆಯನ್ನು ದಿನಾಂಕ 31 03 2005ರ ಅಂತ್ಯಕ್ಕೆ ಅನ್ವಯವಾಗುವಂತೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 8 ಸಿಇಟಿ 2006 (1)ನೇ ಸಂಖ್ಯೆಯ ಅಧಿಸೂಚನೆ

3 ಅಲ್ಯೂಮಿನಿಯಂ ರಾಡ್ಸ್‌ಗಳೂ, ಡೀಸೆಲ್ ಮತ್ತು ಮೋಟಾರ್ ವಾಹನಗಳ ಸ್ಟ್ರಿಂಗ್ ಲೀವ್ಸ್‌ಗಳ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಯನ್ನು 01 04 2006 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 31 03 2006 ರಂದು ಹೊರಡಿಸಲಾದ ಎಫ್‌ಡಿ 8 ಸಿಇಟಿ 2006(2)ನೇ ಸಂಖ್ಯೆಯ ಅಧಿಸೂಚನೆ

4 ದಿನಾಂಕ 31 03 2002ರ ಅಧಿಸೂಚನೆ ಸಂಖ್ಯೆ ಎಫ್‌ಡಿ 11 ಸಿಇಟಿ 2002 (I)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 8 ಸಿಇಟಿ 2006 (3)ನೇ ಸಂಖ್ಯೆಯ ಅಧಿಸೂಚನೆ

5 ಸಾರ್ವಜನಿಕ ಹಿತದೃಷ್ಟಿಯಿಂದ ಬೀಡಿ ಎಲೆಗಳ ಪ್ರವೇಶಕ್ಕೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 01 04 2006ರಿಂದ ಜಾರಿಗೆ ಬರುವಂತೆ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 8 ಸಿಇಟಿ 2006 (4)ನೇ ಸಂಖ್ಯೆಯ ಅಧಿಸೂಚನೆ

6 ದಿನಾಂಕ 31 03 2006ರ ಅಧಿಸೂಚನೆ ಸಂಖ್ಯೆ ಎಫ್‌ಡಿ 37 ಸಿಇಟಿ 2000 (8)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 01 04 2006ರಂದು ಜಾರಿಗೆ ಬರುವಂತೆ ದಿನಾಂಕ 31 03 2006ರಂದು ಹೊರಡಿಸಲಾದ ಎಫ್‌ಡಿ 8 ಸಿಇಟಿ 2006 (5)ನೇ ಸಂಖ್ಯೆಯ ಅಧಿಸೂಚನೆ

1965ರ ಕರ್ನಾಟಕ ಅಬಕಾರಿ ಕಾಯ್ದೆ 71 (4)ರ ಪ್ರಕರಣದ ಮೇರೆಗೆ

1 1968ರ ಕರ್ನಾಟಕ ಅಬಕಾರಿ ಸನ್ನದ್ದುಗಳ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ಅನುಸೂಚಿ ಸಿಗೆ ತಿದ್ದುಪಡಿ ಮಾಡಿ ದಿನಾಂಕ

06 09 2006ರಂದು ಎಫ್‌ಡಿ 06 ಪಿಇಎಸ್ 2006ನೇ ಸಂಖ್ಯೆಯ ಅಧಿಸೂಚಿಸುತ್ತೇನೆ

2 1968ರ ಕರ್ನಾಟಕ ಅಬಕಾರಿ ಸನ್ನದ್ದುಗಳ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ಅನುಸೂಚಿ ಡಿ ಗೆ ತಿದ್ದುಪಡಿ ಮಾಡಿ ದಿನಾಂಕ 09 08 2006ರಂದು ಹೊರಡಿಸಲಾದ ಎಫ್‌ಡಿ 03 ಪಿಇಎಸ್ 2006ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

III ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನುನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರುಗಳು) ಅವರ ಪರವಾಗಿ

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಪ್ರಾಧಿಕಾರದ ಅಧಿನಿಯಮದ ಕಲಂ 8 (3)ರ ಪ್ರಕರಣೆ ಮೇರೆಗೆ

2001ರ ಕರ್ನಾಟಕ ಸಾಮಾನ್ಯ ಸೇವಾ (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) (ತಿದ್ದುಪಡಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 26 10 2006ರಂದು ಹೊರಡಿಸಲಾದ ಡಿಪಿಎಎಲ್ 32 ಬಿಹೆಚ್‌ಎಎನ್‌ಐವಿಪಿ 2005ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ

IV ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಅವರ ಪರವಾಗಿ

ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಸಂಬಂಧಿಸಿದಂತೆ ಹೊರಡಿಸಲಾದ ಸಂವ್ಯಶಾಇ 13 ಶಾಸನ 2006 ದಿನಾಂಕ 14 12 2006ರ ಅಧ್ಯಾದೇಶ ಸಂಖ್ಯೆ 4

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ–1) 145 (4)ರ ಪ್ರಕರಣದ ಮೇರೆಗೆ

1 1998ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳು) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 16 09 2006ರಂದು ಹೊರಡಿಸಲಾದ ಇಡಿ 32 ಎಸ್‌ಇಪಿ 2006ನೇ ಸಂಖ್ಯೆಯ ಅಧಿಸೂಚನೆ

2 2006ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪರಿಶೀಲನೆ, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವಿವರ ಪಟ್ಟಿಕೆ) ನಿಯಮವನ್ನು ರಚಿಸಿ ದಿನಾಂಕ 14 08 2006ರಂದು ಹೊರಡಿಸಲಾದ ಇಡಿ 74 ವಿವಿಧ 2004ನೇ ಸಂಖ್ಯೆಯ ಅಧಿಸೂಚನೆ

3 2005ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ವಹಿಸಿಕೊಳ್ಳುವುದು, ಅಧಿಯಾಚನೆ ಮತ್ತು ಸ್ವಾಧೀನತೆ (Takingover of Management, Requistioning and Acquisition) ನಿಯಮವನ್ನು ದಿನಾಂಕ 28 10 2006ರಂದು ಹೊರಡಿಸಲಾದ ಇಡಿ 43 ವಿವಿಧ 2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

V ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ಅವರ ಪರವಾಗಿ

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ

1 ಕರ್ನಾಟಕ ಭೂ ಕಂದಾಯ (ತಿದ್ದುಪಡಿ)ಗೆ ಸಂಬಂಧಿದಂತೆ ಹೊರಡಿಸಲಾದ ಸಂವ್ಯಶಾಇ 68 ಶಾಸನ 2005 ದಿನಾಂಕ 26 12 2006ರ ಅಧ್ಯಾದೇಶ ಸಂಖ್ಯೆ 3

2 ಕರ್ನಾಟಕ ಭೂ ಕಂದಾಯ ಮತ್ತು ಕೆಲವು ಇತರೆ ಕಾನೂನುಗಳು (ತಿದ್ದುಪಡಿ)ಗೆ ಸಂಬಂಧಿಸಿದಂತೆ ದಿನಾಂಕ 27 12 2006ರಂದು ಹೊರಡಿಸಲಾದ ಸಂವ್ಯಶಾಇ 23 ಶಾಸನ 2006ರ ಅಧ್ಯಾದೇಶ ಸಂಖ್ಯೆ 5ನ್ನು ಮಂಡಿಸುತ್ತೇನೆ

6 ವರದಿಗಳನೊಪ್ಪಿಸುವುದು

1 **ಶ್ರೀ ಎ ಬಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 2005-06ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 7 ಮತ್ತು 8 ನೇ ವರದಿಗಳನ್ನೊಪ್ಪಿಸುತ್ತೇನೆ

2 **ಅಧ್ಯಕ್ಷರು ಡಾ ಕೆ ಅನ್ನದಾನಿ (ಮಾನ್ಯ ಸದಸ್ಯರು ಇಲ್ಲದೆ ಇರುವುದರಿಂದ ಅವರ ಪರವಾಗಿ)** 2005-06ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ನಾಲ್ಕನೇ ವರದಿಯನ್ನು ಒಪ್ಪಿಸುತ್ತೇನೆ

3 **ಶ್ರೀ ಎ ಟಿ ರಾಮಸ್ವಾಮಿ** – ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ/ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಕುರಿತು ಜಂಟಿ ಸದನ ಸಮಿತಿಯ ಮಧ್ಯಂತರ (ಭಾಗ–1) ವರದಿಯನ್ನು ಒಪ್ಪಿಸುತ್ತೇನೆ

4 **ಶ್ರೀ ಶಿವಶಂಕರರೆಡ್ಡಿ** ಮಾನ್ಯ ಅಧ್ಯಕ್ಷರೆ, ಸಮಿತಿಯ ಅಧ್ಯಕ್ಷರ ಪರವಾಗಿ 2005–06ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 24ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು – ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ ಈಗ ಸಭೆಯನ್ನು ಊಟಕ್ಕೆ ಮುಂದೂಡಲಾಗಿದೆ

(ಸಭೆಯು ಮಧ್ಯಾಹ್ನ1 30 ಗಂಟೆಗೆ ಮುಕ್ತಾಯಗೊಂಡು ಮಧ್ಯಾಹ್ನ 2 30 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನ ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು

ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

7 ಅಧ್ಯಕ್ಷರ ಅಪ್ಪಣೆ ಮೇರೆಗೆ

ಮಾನ್ಯ ಮುಖ್ಯಮಂತ್ರಿಗಳು, ಶಾಸಕರು ಹಾಗೂ ಅಧಿಕಾರಿಗಳು ಸದನದಲ್ಲಿ ಹಾಜರಿಲ್ಲದಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ತಾವು 2 ಗಂಟೆ 30 ನಿಮಿಷಕ್ಕೆ ಸಬೆ ಕರೆದಿದ್ದೀರಿ ಸದನ ಸೇರುತ್ತಿರುವ ಮೊದಲನೆ ದಿವಸದಲ್ಲೇ ಮಂತ್ರಿಗಳು ಯಾರೂ ಇಲ್ಲ, ಅಧಿಕಾರಿಗಳೂ ಇಲ್ಲ, ಸಕರೂ ಇಲ್ಲ ಏನಿದು ಪರಿಸ್ಥಿತಿ? ಏನು ದುರಂತ ಇಂತಹ ಪರಿಸ್ಥಿತಿ ಸದನಕ್ಕೆ ಎಂದಿಗೂ ಬರಬಾರದು ಈ ಸದನದ ಗೌರವ, ಗಾಂಭೀರ್ಯ ನಾಶವಾಗಿದೆ ನಿಮ್ಮ ಶಾಸಕರು ಎಲ್ಲಿ ಹೋಗಿದ್ದಾರೆ? ಅಧಿಕಾರಿಗಳು ಎಲ್ಲಿ ಹೋದರು? ಶಾಸಕರು ಎಲ್ಲಿ ಹೋದರು? ಸತ್ತುಹೋದ ನಿಗಮ, ಮಂಡಳಿಗಳಿಗೆ ಅವರೆಲ್ಲರೂ ಕಾಯ್ದುಕೊಂಡು ಕುಳಿತಿರಬೇಕು ನಿಮಗೆ ನಾನು ಇದರ ಬಗ್ಗೆ ಎಷ್ಟು ಸಾರಿ ಹೇಳಬೇಕು? ಇದು ನನಗೆ ಅರ್ಧವಾಗುತ್ತಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಸದನ ಪ್ರಾರಂಭವಾಗುತ್ತಿರುವ ಮೊದಲನೇ ದಿವಸವೇ ಹೀಗೆ ಆದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ ಹೊಸ ವರ್ಷದಲ್ಲಿ ಸದನ ಪ್ರಾರಂಭವಾಗಿರುವ ಮೊದಲನೇ ದಿವಸ ಇದಾಗಿದೆ ಇವೊತ್ತಿನ ದಿವಸವೇ ಇಂತಹ ಪ್ರೇತಕಳೆ! ಇಂತಹ ಪರಿಸ್ಥಿತಿ ಬರಬಾರದು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಂತ್ರಿಗಳು ಕಡಿಮೆ ಇದ್ದಾರೆಂದು ಮಂತ್ರಿಮಂಡಲದ ವಿಸ್ತರಣೆ ಮಾಡಿದರು ಇದೇನು ಕತೆ? ಹೊಸ ಮಂತ್ರಿಗಳಾದರೂ ಬಂದು ಕುಳಿತುಕೊಳ್ಳಬೇಡವೇ?

ಅಧ್ಯಕ್ಷರು ಮಾನ್ಯ ನಾಗರಾಜ್‌ರವರೆ, ನಾವೇನೂ ಹೇಳುವುದಕ್ಕೆ ಸಾಧ್ಯವಿಲ್ಲ ಪ್ರತಿಯೊಬ್ಬರೂ ಅವರವರ ಜವಾಬ್ದಾರಿಯನ್ನು ತಿಳಿದುಕೊಳ್ಳಬೇಕು ಅಷ್ಟನ್ನು ಮಾತ್ರ ನಾವು ಹೇಳಲು ಸಾಧ್ಯ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ರಾಜಕೀಯವಾಗಿ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳಿಗೂ ಒಬ್ಬರಿಗೊಬ್ಬರಿಗೆ ಆಗುತ್ತಿಲ್ಲ ಸಮ್ಮಿಶ್ರ ಸರ್ಕಾರದಲ್ಲಿ ಬಿರುಕು ಬಿಟ್ಟಿದೆ ಸಮ್ಮಿಶ್ರ ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ ಅವರ ಪರಿಸ್ಥಿತಿ ಏನು? ಮುಂದೆ ಆಡಳಿತದ ಗತಿಯೇನು? ಅಧಿಕಾರಿಗಳ ಪರಿಸ್ಥಿತಿ ಈ ರೀತಿಯಾದರೆ ನಾಳೆ ಆಡಳಿತದ ಪರಿಸ್ಥಿತಿ ಏನು? ಅಧಿಕಾರಿಗಳಿಗೆ ಈ ವ್ಯವಸ್ಥೆಯೇ ಸಾಕು ಇದೊಂದು ದುರಂತ ಇದು ಒಳ್ಳೆಯ ಸೂಚನೆಯಲ್ಲ ಸದನವನ್ನು ತಾವು ಮುಂದಕ್ಕೆ ಹಾಕಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ? ಮಂತ್ರಿಗಳು ಇದ್ದಾರೆಂದು ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿದ್ದಾರೆ ವಿಸ್ತರಣೆಯಾದ ನಂತರವೂ ಹೊಸಬರಾದರೂ ಇಲ್ಲಿ ಬಂದು ಕುಳಿತುಕೊಳ್ಳಬಾರದೇ?

ಅಧ್ಯಕ್ಷರು ಮಾನ್ಯ Chief Whip ಇದ್ದಾರೇನ್ರಿ? ನೋಡಿ, ನಿಮ್ಮ ಶಾಸಕರುಗಳಿಲ್ಲ ಬಹಳಷ್ಟು ಕುರ್ಚಿಗಳು ಖಾಲಿ ಇವೆ ನಿಮ್ಮ ಬಹಳಷ್ಟು ಮಂತ್ರಿಗಳೂ ಇಲ್ಲ ಒಂದಿಬ್ಬರು, ಮೂವರು ಮಂತ್ರಿಗಳಿದ್ದಾರೆ ಇದು ಯಾರಿಗೂ ಶೋಭೆ ತರತಕ್ಕಂಥಾದ್ದಲ್ಲ ಅವರನ್ನು ಬೇಗ ಕರೆಸಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಹತ್ವವಾದ ಚರ್ಚೆ ಪ್ರಾರಂಭ ಮಾಡುವುದಕ್ಕೆ ಹೋಗುತ್ತಿದ್ದೇವೆ ನೀವು ಚಳಿಗಾಲದ ಅಧಿವೇಶನವನ್ನು ನಡೆಸಬೇಕಾಗಿತ್ತು ಅದೂ ಕೂಡ ನಡೆಯಲಿಲ್ಲ ರಾಜ್ಯದ ಬಹಳಷ್ಟು ಮಹತ್ವದ ವಿಚಾರಗಳ ಬಗ್ಗೆ ನಾವೆಲ್ಲರೂ ಪ್ರಸ್ತಾಪಿಸಿ ಹೇಳಿದ್ದೇವೆ ಈಗಾಗಲೇ 2005ರಲ್ಲಿ ಒಂದು Act ಪಾಸ್ ಮಾಡಿದ್ದೇವೆ Atleast, 60 ದಿವಸಗಳಾದರೂ ಸದನವನ್ನು ನಡೆಸಬೇಕು ಬಹಳ ದಿವಸಗಳಾದ ನಂತರ ಇವೊತ್ತು ಸದನ ಸೇರುತ್ತಿದೆ ಇವೊತ್ತು ವಿರೋಧ ಪಕ್ಷದ ಸ್ನೇಹಿತರೆಲ್ಲರೂ ಹೇಳಿದಂತೆ, ಕುರ್ಚಿಗಳೆಲ್ಲವೂ ಖಾಲಿ ಇವೆ

ಯಾರಾದರೂ ಜವಾಬು ಕೊಡತಕ್ಕಂಥ ರೀತಿಯಲ್ಲಿ, ಸರ್ಕಾರದ ಜವಾಬ್ದಾರಿಯುತರಾದವರು ಯಾರೂ ಇಲ್ಲ ಇಂತಹ ಮಹತ್ವವಾದ ಬರಗಾಲದ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಇಡೀ ರಾಜ್ಯದ ಎಲ್ಲಾ ಕಡೆಗಳಲ್ಲೂ ಸ್ಮಶಾನದ ರೀತಿಯಲ್ಲಿ ವಾತಾವರಣ ನಿರ್ಮಾಣವಾಗಿದೆ ಪತ್ರಿಕೆಗಳಲ್ಲಿನ ಹೇಳಿಕೆ ಮುಖಾಂತರ ಹೇಳಬಹುದು ಇವೊತ್ತು ಕನ್ನಡ ಪ್ರಭದಲ್ಲಿ ಹಿರಿಯ ಪತ್ರಕರ್ತರಾದ ಸತ್ಯರವರೂ ಕೂಡ ಬರೆದಿದ್ದಾರೆ ಎಲ್ಲಾ ಕಡೆ ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ ಅದರ ಬಗ್ಗೆ ಇವೊತ್ತು ಪ್ರಸ್ತಾಪ ಮಾಡಲು ನಿಂತಿದ್ದೇನೆ 128 ತಾಲ್ಲೂಕುಗಳಲ್ಲಿ ಇರತಕ್ಕಂಥ ಬರದ ಪರಿಸ್ಥಿತಿ, ಕೇಂದ್ರದಿಂದ ಬಂದಂಥ ಹಣ, ಇವೆಲ್ಲದರ ಬಗ್ಗೆಯೂ ನಾವು ಸಮಗ್ರವಾಗಿ ಚರ್ಚೆ ಮಾಡಬೇಕಾಗಿದೆ ನಾನು ಈಗ ಹೇಳುವುದೇನೆಂದರೆ, ತಾವು ಸದನವನ್ನು ಮುಂದೂಡಬೇಕು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳನ್ನು ಕರೆಸಿರಿ ಈ ಸದನದಲ್ಲಿ ಎಲ್ಲಾ ಮಂತ್ರಿಗಳಿದ್ದರೆ ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ ಈ ತರಹ empty chairs ಯಾವ ಕಾಲದಲ್ಲೂ ಆಗಿಲ್ಲ ನಿಮ್ಮ ಕಾಲದಲ್ಲಿ ಈ ತರಹದ ಘಟನೆ ನಡೆಯುತ್ತಿದೆ ಬಹಳಷ್ಟು ರಾಜಕೀಯ ವಿಷಯಗಳಿದ್ದರೂ ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ನಿಂತಿಲ್ಲ ಇವೊತ್ತು ನಮ್ಮ ರಾಜ್ಯದ ರೈತರು ಮತ್ತು ಬಡವರ ಕಷ್ಟಗಳನ್ನು ಈ ಸರ್ಕಾರಕ್ಕೆ ತಿಳಿಸುವುದಕ್ಕೆ ನಿಂತಿದ್ದೇನೆ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಿನ್ನೆಯ ಪತ್ರಿಕೆಗಳಲ್ಲಿ ಸಾಕಷ್ಟು ಬಂದಿದೆ ಅದರ ಬಗ್ಗೆ ನಾವು ಪ್ರಸ್ತಾಪ ಮಾಡುವುದಿಲ್ಲ ಏಕೆಂದರೆ, ಇದರ ಬಗ್ಗೆ ಪೂರ್ತಿ ಪರಿಣಾಮ ಏನಾಗುತ್ತದೆ ಎಂಬುದು ಗೊತ್ತಿದೆ ಅದಕ್ಕೋಸ್ಕರ, ಸದನವನ್ನು ಮುಂದೂಡಿ ತಮ್ಮ ಕೊರಡಿಗೆ ಎಲ್ಲರನ್ನೂ ಕರೆಸಿರಿ ಗಂಭೀರವಾದ ಚರ್ಚೆ ಆಗಬೇಕು If they are very serious about running the Government, they must come and sit and listen whatever we are telling

ಶ್ರೀ ಜಗದೀಶ್ ಶೆಟ್ಟರ್ ಸನ್ಮಾನ್ಯ ಅಧ್ಯಕ್ಷರೆ, ಸದನದಲ್ಲಿ 6–7 ಸಚಿವರುಗಳಿದ್ದೇವೆ ಸರ್ಕಾರದ ಪರವಾಗಿ ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ ಬರದ ಬಗ್ಗೆ ಪ್ರತಿಪಕ್ಷದ ನಾಯಕರು ಯಾವ ರೀತಿ ಗಂಭೀರವಾಗಿ ತೆಗೆದುಕೊಂಡಿದ್ದಾರೋ, ನಾವು ಕೂಡ ಅಷ್ಟೇ ಗಂಭೀರವಾಗಿ ತೆಗೆದುಕೊಂಡಿದ್ದೇವೆ ಅದಕ್ಕೋಸ್ಕರ, ಚರ್ಚೆಗೆ ಎಲ್ಲಾ ರೀತಿಯಿಂದಲೂ ಉತ್ತರ

ಕೊಡುವುದಕ್ಕೆ ತಯಾರಿದ್ದೇವೆ ಅವರು ಚರ್ಚೆ ಮಾಡಲಿ ಮುಖ್ಯಮಂತ್ರಿಗಳು ಬರುತ್ತಾರೆ ಉತ್ತರ ಕೊಡುವುದಕ್ಕೆ ನಾವಿದ್ದೇವೆ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಸದನದಲ್ಲಿ ರೆವಿನ್ಯೂ ಮಂತ್ರಿಗಳು ಮತ್ತು ಇನ್ನಿತರ 2–3 ಸಚಿವರುಗಳಿದ್ದಾರೆ ಸದನ ನಡೆಸುವುದರ ಬಗ್ಗೆ ನೀವೂ ಕೂಡ ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳಬಾರದು ನೀವು ಅವರಿಗೆ ನಗುತ್ತಾ ಹೇಳಿದರೆ ಅವರಿಗೆ ಎಲ್ಲಿ ಗಾಂಭೀರ್ಯ ಬರುತ್ತದೆ? ನಾವೂ ಈ ಕಡೆ ನಗುತ್ತಿದ್ದೇವೆ ಅತ್ತ ಕಡೆ ನೋಡಿ ನೀವೂ ನಗುತ್ತಿದ್ದೀರಿ ನಮಗೆ ಇಲ್ಲಿ ಕತೆ ಏನಾಗಿದೆಯೆಂದರೆ, this is a serious matter

ಅಧ್ಯಕ್ಷರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಳುವ ಪಕ್ಷವಾಗಲಿ, ಪ್ರತಿಪಕ್ಷವಾಗಲಿ, ಅವರವರ ಜವಾಬ್ದಾರಿ ಅವರವರಿಗೆ ಗೊತ್ತಿರಬೇಕು ಜವಾಬ್ದಾರಿ ಗೊತ್ತಿರದಿದ್ದರೆ, ಮುಂದೆ ಜನರು ನಿರ್ಧಾರ ಮಾಡುತ್ತಾರೆ ಅವರು ತಪ್ಪು ಮಾಡಿದರೂ ಅಷ್ಟೆ, ಇವರು ತಪ್ಪು ಮಾಡಿದರೂ ಅಷ್ಟೇ, ಎರಡೂ ಒಂದೇ ಇನ್ನೇನು ಹೇಳೋಣ? ಅವರನ್ನು ಕರೆಸಬೇಕೆಂದು ನಾನು ಹೇಳಿದೆ ನಿಮ್ಮ ಶಾಸಕರುಗಳಿಲ್ಲ, ಮಂತ್ರಿಗಳಿಲ್ಲ, ಕರೆಸಿರಿ ಎಂದು ಹೇಳಿದ್ದೇನೆ ಇನ್ನೇನು ಹೇಳಬೇಕು?

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, With due respect to your Chair

ಅಧ್ಯಕ್ಷರು ನಾವು respect ಕೊಟ್ಟೇ ಮಾತನಾಡುವುದು

ಶ್ರೀ ಸಿದ್ದರಾಮಯ್ಯ ನೀವು ಹಾಗೆ ಹೇಳುವುದಕ್ಕಾಗುವುದಿಲ್ಲ ಜನರು ಉತ್ತರ ಕೊಡುತ್ತಾರೆಂದು ಚುನಾವಣೆಯಲ್ಲಿ ಏನಾಗುತ್ತದೆ ನೀವು ಈ ಸದನದ ಘನತೆ– ಗಾಂಭೀರ್ಯವನ್ನು ಎತ್ತಿ ಹಿಡಿಯಬೇಕಾದವರು

ಅಧ್ಯಕ್ಷರು ನಿಮ್ಮೆಲ್ಲರನ್ನೂ ಜನರು ಆರಿಸಿ ಕಳಿಸಿದ್ದಾರೆ ನಿಮಗೆ ಜವಾಬ್ದಾರಿ ಇರಬೇಕು

ಶ್ರೀ ಸಿದ್ದರಾಮಯ್ಯ ನಾವು ನಿಮ್ಮ ಮೇಲೆ ವಿಶ್ವಾಸವಿಡಬೇಕಾಗುತ್ತದೆ ಅದಕ್ಕೋಸ್ಕರ, ಸರ್ಕಾರ ನಡೆಸುವವರಿಗೆ ನೀವು ಸ್ಪಷ್ಟವಾಗಿ ಹೇಳಬೇಕು

ಅಧ್ಯಕ್ಷರು ನಾನು ಸ್ಪಷ್ಟವಾಗಿ ಹೇಳಿಲ್ಲವೇ? ನಾನು ಇನ್ನಾವ ಪದಗಳಲ್ಲಿ ಹೇಳಬೇಕು?

ಶ್ರೀ ಸಿದ್ದರಾಮಯ್ಯ ಇವೊತ್ತು ಅತ್ಯಂತ ಪ್ರಮುಖವಾಗಿ ಜನತೆಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೇ ಅಥವ ಬೇಡವೇ?

3 00 P M

ಅಧ್ಯಕ್ಷರು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದನ್ನು ನಾನು ಒಪ್ಪುತ್ತೇನೆ ಅದಕ್ಕೋಸ್ಕರವೇ, ನಾನು ಕರೆದುಕೊಂಡು ಬನ್ನಿ ಎಂದು ಹೇಳಿದ್ದು

ಶ್ರೀ ಸಿದ್ದರಾಮಯ್ಯ ಆರು ತಿಂಗಳ ನಂತರ ನಾವು ಸೇರುತ್ತಿರುವುದು ಈಗಲೂ ಇದರ ಬಗ್ಗೆ ಸರ್ಕಾರಕ್ಕೆ seriousness ಇಲ್ಲವೆಂದರೆ, ಮತ್ತೆ ಸಮಸ್ಯೆಗಳನ್ನು ಎಲ್ಲಿ ಚರ್ಚೆ ಮಾಡುವುದು? ಸದನ ಏಕೆ ಕರೆಯಬೇಕು? ಸುಮ್ಮನೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿಕೊಂಡು, ಅವರೂ ಮಾಡಿಕೊಂಡು ಇದ್ದರೆ ಮುಗಿದುಹೋಯಿತು ಈ ಸದನವೂ ಬೇಕಾಗಿಲ್ಲ, ಚರ್ಚೆಯೂ ಮಾಡಬೇಕಾಗಿಲ್ಲ ಒಂದು ಆಕ್ಟ್ ಅನ್ನು ನಾವು ಪಾಸ್ ಮಾಡಿದ್ದೇವೆ ಇಂತಿಷ್ಟು ದಿವಸ ಸದನ ನಡೆಯಬೇಕೆಂದು ಇಲ್ಲಿಯೇ ಕಾನೂನು ಮಾಡಿದ್ದೇವೆ ಕಾನೂನು ಗಾಳಿಗೆ ತೂರಿ ಹೋಗುತ್ತದೆ ಅದನ್ನು protect ಮಾಡುವವರು ಯಾರು? ಅದನ್ನು implement ಮಾಡಬೇಕಾಗಿರುವವರು ಯಾರು? ನೀವೇ ಮಾಡಬೇಕು ಅದಕ್ಕೋಸ್ಕರ, ನಿಮ್ಮಲ್ಲಿ ಮನವಿ ಏನೆಂದರೆ, ನಿಮ್ಮ ಆದೇಶವನ್ನಾದರೂ ಸರ್ಕಾರ serious ಆಗಿ ತೆಗೆದುಕೊಳ್ಳಬೇಕೇ ಬೇಡವೇ? ಅದನ್ನು ಮಾಡಬೇಕೆನ್ನುವುದೇ ನಮ್ಮ ಮನವಿ ಅದನ್ನು ನೀವು ದಯವಿಟ್ಟು ಮಾಡಬೇಕು

ಅಧ್ಯಕ್ಷರು ಹೇಳಿ ಕಳುಹಿಸಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಈ ಸದನದ ಗಾಂಭೀರ್ಯ ಮತ್ತು ಪಾವಿತ್ರತೆಯನ್ನು ಕಾಪಾಡಬೇಕಾದ್ದು ತಮ್ಮ ಕರ್ತವ್ಯ ಈ ಸದನಕ್ಕೆ ಬಹಳ ಪ್ರಾಮುಖ್ಯವಾಗಿ ಇರತಕ್ಕವರು ಅಧ್ಯಕ್ಷರಾದ ತಾವು ಈ ಪರಿಸ್ಥಿತಿಯಾದಾಗ ಸದಸ್ಯರುಗಳಿಗೆ ಒಂದು ಸಲ ಯಾವಾಗಲಾದರು ತಾವು ಬಿಸಿಯನ್ನು ಮುಟ್ಟಿಸಿದರೆ ಈ ಸದನ ಸರಿಯಾಗುತ್ತದೆ ನಾನು 1967ರಿಂದ ಇಲ್ಲೇ ಕುಳಿತಿದ್ದೇನೆ ಇದೇ ರೀತಿ ಕುಳಿತಿದ್ದೇನೆ

ಅಧ್ಯಕ್ಷರು ಬಿಸಿ ಎಂದರೆ ಹೇಗೆ ಮುಟ್ಟಿಸಬೇಕು? ಅವರಿಗೆ ಹೇಳಬಹುದು ಎಲ್ಲರಿಗೂ ಜವಾಬ್ದಾರಿ ಇಲ್ಲವೆ? ಜನರು ಅವರನ್ನೆಲ್ಲ ಆರಿಸಿ ಕಳುಹಿಸಿಲ್ಲವೇ? ಎರಡು ಲಕ್ಷ ಮತದಾರರು ಅವರನ್ನು ಆರಿಸಿ ಕಳುಹಿಸಿಲ್ಲವೇ? ಅವರು ಸದನಕ್ಕೆ ಬರಬಾರದೇ? ಕುಳಿತುಕೊಳ್ಳಬಾರದೇ? ಅವರು ಕೇಳಬಾರದೇ?

ಶ್ರೀ ಸಿದ್ಧರಾಮಯ್ಯ ನಿಮ್ಮ ಕೈಯಲ್ಲಿ ಆಗುವುದಿಲ್ಲವೆಂದರೆ ಸದನವನ್ನು ನಡೆಸುವುದೇ ಬೇಡ ಬಿಡಿ ಹಾಗಾದರೆ adjourn ಮಾಡಿ

(ಗೊಂದಲ)

ಅಧ್ಯಕ್ಷರು ಮಾನ್ಯ ಸದಸ್ಯರು ದಯಮಾಡಿ ಕೇಳಿ, ಪ್ರತಿಯೊಬ್ಬರಿಗೂ ಜವಾಬ್ದಾರಿ ಇದೆ ಈ ಕಡೆಯವರಿಗೂ ಇದೆ ಆ ಕಡೆಯವರಿಗೂ ಇದೆ ಆಳುವ ಪಕ್ಷದವರು ಜಾಸ್ತಿ ಜನ ಇಲ್ಲ, ಮಂತ್ರಿಗಳು ಇಲ್ಲ, ಕರೆದುಕೊಂಡು ಬನ್ನಿ ಎಂದು ಹೇಳಿದ್ದೇನೆ ಅವರು ಬರುತ್ತಾರೆ ದಯಮಾಡಿ ಆರಂಭ ಮಾಡಿ

ಶ್ರೀ ಆರ್ ವಿ ದೇಶ್‌ಪಾಂಡೆ ಮಾನ್ಯ ಅಧ್ಯಕ್ಷರೆ, ತಾವು ಬಹಳ ಗೌರವ ಸ್ಥಾನದಲ್ಲಿ ಕುಳಿತಿದ್ದೀರಿ ಈ ಮನೆಯನ್ನು ನಡೆಸುವ ಜವಾಬ್ದಾರಿ ನಿಮ್ಮ ಮೇಲಿದೆ ಅದು ನಮ್ಮ ಮೇಲೆ ಇಲ್ಲ ನಾವು ತಪ್ಪು ಮಾಡಿದ್ದರೂ ಅವರು ತಪ್ಪು ಮಾಡಿದ್ದರೂ ತಾವು ಹೇಳಬೇಕಾಗುತ್ತದೆ ಸಾಲ ಮನ್ನಾ ಮಾಡುತ್ತೇವೆ, ಮತ್ತೊಂದನ್ನು ಮಾಡುತೇವೆಂದು ಹೊರಗಡೆ ಹೇಳುತ್ತಾರೆ ಆದರೆ ಸದನ ಕರೆದ ನಂತರ ಮೊದಲನೆಯ ದಿವಸವೇ ಈ ರೀತಿಯ ಪರಿಸ್ಥಿತಿಯಾದರೆ ಸದನವನ್ನು ಹೇಗೆ ನಡೆಸಬೇಕು? ಈ ರೀತಿಯಾದರೆ ಸದನವನ್ನು ನಡೆಸುವ ಅವಶ್ಯಕತೆ ಏನಿದೆ? ಆದ್ದರಿಂದ ತಾವು pull-up ಮಾಡಬೇಕಾಗುತ್ತದೆ

ಶ್ರೀ ಆರಗಜ್ಞಾನೇಂದ್ರ ನಾವು ಇಷ್ಟು ಜನ ಶಾಸಕರು ಇದ್ದೇವೆ 8–9 ಜನ ಮಂತ್ರಿಗಳು ಇದ್ದಾರೆ ಇನ್ನೂ ಎಷ್ಟು ಜನ ಮಂತ್ರಿಗಳು ಭಾಷಣಕ್ಕೆ ಬೇಕು? ಕೋರಂ ಇದ್ದರೆ ಆಯಿತು ಕೋರಂ ಎಂದು ಏಕೆ ಮಾಡಿದರು?

(ಗೊಂದಲ)

ಅಧ್ಯಕ್ಷರು ಮಾನ್ಯ ಜ್ಞಾನೇಂದ್ರರವರೇ, ಅವರು ಏನು ಹೇಳುತ್ತಿದ್ದಾರೆಂದರೆ, ಆಳುವ ಪಕ್ಷಕ್ಕೆ ವಿರೋಧ ಪಕ್ಷಕ್ಕಿಂತ ಹೆಚ್ಚಿನ ಜವಾಬ್ದಾರಿ ಇದೆ ಆ ಜವಾಬ್ದಾರಿ ಎದ್ದು ಕಾಣುತ್ತಿಲ್ಲ ಎಂಬುದು ಅವರ ಪದಗಳಿಂದ ವೇದ್ಯವಾಗುತ್ತದೆ ಅದು ತಮಗೂ ಅರ್ಥವಾಗಿದೆ ಆದ್ದರಿಂದ ಶಾಸಕರುಗಳು ಈ ಕಡೆಯೂ ಇಲ್ಲ ಆ ಕಡೆಯೂ ಇಲ್ಲ, ಊಟ ಮಾಡಿ ಮಲಗಿಬಿಟ್ಟಿದ್ದಾರೋ ಏನೋ ಗೊತ್ತಿಲ್ಲ! ಸ್ವಲ್ಪ rest ತೆಗೆದುಕೊಂಡು ಬರುತ್ತಾರೆ ಸಂಬಂಧಪಟ್ಟಂಥ ಮಂತ್ರಿಗಳಾದರೂ ಇರಬೇಕಲ್ಲ?

ಶ್ರೀ ಆರ್ ವಿ ದೇಶ್‌ಪಾಂಡೆ ಮಾನ್ಯ ಜ್ಞಾನೇಂದ್ರರವರೆ, ತಾವು ಇಲ್ಲಿ ಇದ್ದಾಗ ಅದನ್ನೇ ಮಾಡುತ್ತಿದ್ದಿರಿ Officers galleryನ್ನು ನೋಡಿ, ಒಬ್ಬರಾದರೂ revenue officer ಇದ್ದಾರ ನೋಡಿ? Revenue Department ನವರು ಎಷ್ಟು ಅಧಿಕಾರಿಗಳು ಇದ್ದಾರೆ ನೋಡಿ? Note ತೆಗೆದುಕೊಳ್ಳುವವರು ಯಾರು? Record ಮಾಡುವವರು ಯಾರು ಹೇಳಿ?

ಅಧ್ಯಕ್ಷರು ನಾನು ಹೇಳಿ ಕಳುಹಿಸಿದ್ದೇನೆ ಈಗ ಕಂದಾಯ ಸಚಿವರು ಇದ್ದಾರೆ ತಾವು ಚರ್ಚೆಯನ್ನು ಆರಂಭ ಮಾಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ತಾವು ಇಷ್ಟೊಂದು ಲಘುವಾಗಿ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು ಬಹಳ ಜನ ಶಾಸಕರು ಈ ಕಡೆ ಮತ್ತು ಆ ಕಡೆ ಎರಡೂ ಕಡೆಯೂ ಇಲ್ಲ ಬರುತ್ತಾರೆ

ಶ್ರೀ ಸಿದ್ಧರಾಮಯ್ಯ ಈ ಕಡೆ ಆ ಕಡೆ ಎಂದು ತಾವು compare ಮಾಡುವುದಲ್ಲ

ಅಧ್ಯಕ್ಷರು ನಾನು ಬೇರೆ ಮಂತ್ರಿಗಳನ್ನೂ ಕರೆಸಿ ಎಂದು ಹೇಳಿದ್ದೇನೆ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಆರಂಭ ಮಾಡಿ

ಶ್ರೀ ಸಿದ್ಧರಾಮಯ್ಯ ಇಲ್ಲ ಕೊನೆಯ ಪಕ್ಷ Revenue Secretary ಇಲ್ಲ, Chief Secretary ಎಲ್ಲಿ? Revenue Secretary ಎಲ್ಲಿ? Where is the Chief Secretary? Where is the Revenue Commissioner?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ ಅವರು ಬರುತ್ತಾರೆ ತಾವು ಪ್ರಾರಂಭ ಮಾಡಿ

ಶ್ರೀ ಸಿದ್ದರಾಮಯ್ಯ ನಿಮ್ಮ ಅಧಿಕಾರಿಗಳು ಬಂದು ಏನು ಮಾಡುತ್ತಾರೆ?

ಶ್ರೀ ಜಗದೀಶ್ ಶೆಟ್ಟರ್ ಮಂತ್ರಿಗಳಿದ್ದೇವೆ ಮಾನ್ಯ ಮುಖ್ಯ ಮಂತ್ರಿಯವರು ಬರುತ್ತಾರೆ ಚರ್ಚೆ ಪ್ರಾರಂಭ ಮಾಡಿ

ಅಧ್ಯಕ್ಷರು ಮಂತ್ರಿಗಳು ಒಬ್ಬೊಬ್ಬರೇ ಬರುತ್ತಿದ್ದಾರೆ ಮಾತನಾಡಿ ದಯಮಾಡಿ ವಿರೋಧ ಪಕ್ಷಕ ನಾಯಕರು ಆರಂಭ ಮಾಡಿ

ಶ್ರೀ ಆರಗಜ್ಞಾನೇಂದ್ರ ವಿಷಯ ಪ್ರಸ್ತಾಪ ಮಾಡಲು ಹೇಳಿ

ಶ್ರೀ ರೋಷನ್ ಬೇಗ್ ಮಾನ್ಯ ಅಧ್ಯಕ್ಷರೆ, Chief Secretary ಇಲ್ಲ Principal Secretary, Revenue ಇಲ್ಲ

ಶ್ರೀ ಜಗದೀಶ್ ಶೆಟ್ಟರ್ ಇದ್ದಾರೆ

ಶ್ರೀ ಆರ್ ರೋಷನ್ ಬೇಗ್ ಎಲ್ಲಿದ್ದಾರೆ? ಜಾಮ್‌ದಾರ್ ರವರು ಎಲ್ಲಿದ್ದಾರೆ?

ಶ್ರೀ ಜಗದಿಶ್ ಶೆಟ್ಟರ್ ಬರಗಾಲದ ವಿಷಯದ ಬಗ್ಗೆ ಏನು ಒಂದು ಸಮಸ್ಯೆ ಇದೆ ಅದರ ಚಿಂತನೆಯಲ್ಲಿ ಅವರು ಇದ್ದಾರೆ ಬರಗಾಲ ನಿರ್ವಹಣೆಯ ಬಗ್ಗೆ Secretary ಬೇರೆ ಇದ್ದಾರೆ ಅವರು ಇದ್ದಾರೆ

ಶ್ರೀ ಸಿದ್ದರಾಮಯ್ಯ ಅಧಿಕಾರಿಗಳು ಇರಬೇಕೆಂದು ಹೇಳುತ್ತಿರೋ, ಬೇಡ ಎಂದು ಹೇಳುತ್ತೀರೋ?

ಶ್ರೀ ಜಗದೀಶ್ ಶೆಟ್ಟರ್ ಇರಬೇಕು

ಶ್ರೀ ಸಿದ್ದರಾಮಯ್ಯ ಮತ್ತೆ? ಹೇಳಿ ಕರಯಿಸಿ

ಶ್ರೀ ಜಗದೀಶ್ ಶೆಟ್ಟರ್ ಬಂದಿದ್ದಾರೆ

ಶ್ರೀ ಸಿದ್ದರಾಮಯ್ಯ ತಾವು ವಿರೋಧ ಪಕ್ಷದ ನಾಯಕರಾಗಿದ್ದವರು ಅಧಿಕಾರಿಗಳು ಇರಬೇಕೋ ಬೇಡವೋ?

ಶ್ರೀ ಎಂ ಪಿ ರೇಣುಕಾಚಾರ್ಯ ಇಲ್ಲಿ ವಿರೋಧ ಪಕ್ಷದ ನಾಯಕರು ಎಂಬ ಬಗ್ಗೆ ಚರ್ಚೆ ಬೇಕಾಗಿಲ್ಲ ಕಾಲಹರಣ ಮಾಡಿ ಸಭಾತ್ಯಾಗ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಮ್ಮ ಜಾಗ ಯಾವುದು? ಸದನದಲ್ಲಿ ಎಲ್ಲೆಂದರಲ್ಲಿ ನಿಂತುಕೊಂಡು ಮಾತನಾಡಿಬಿಡುವುದೇ? ಅವರ ಜಾಗ ಯಾವುದು? ಅವರು ಮಾತನಾಡುವುದು ಎಲ್ಲಿ? ಈ ಸದನಕ್ಕೇನು ಘನತೆ ಗೌರವ ಇಲ್ಲವೇ? ಆ ರೀತಿ ಮಾಡಬಾರದು

ಅಧ್ಯಕ್ಷರು ನಾವು ತರಬೇತಿಯನ್ನು ಕೊಟ್ಟೆವು ಇನ್ನೇನು ಮಾಡಲು ಆಗುತ್ತದೆ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಸರಿಯಲ್ಲ ಈ ಸದನಕ್ಕೆ ಘನತೆ ಗೌರವವಿದೆ ಅವರು ನಿಂತುಕೊಂಡು ಮಾತನಾಡುವುದು ಎಲ್ಲಿ?

ಅಧ್ಯಕ್ಷರು ಈಗ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಆರಂಭ ಮಾಡಿ

ಶ್ರೀ ಎನ್ ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅದ್ಯಕ್ಷರೆ, ತಾವು light ಆಗಿ ತೆಗೆದುಕೊಳ್ಳಬೇಡಿ ಮುಖ್ಯಮಂತ್ರಿಯವರು ಮತ್ತು ಉಪ ಮುಖ್ಯಮಂತ್ರಿಯವರೂ ಇಲ್ಲ ಉಪಮುಖ್ಯಮಂತ್ರಿಯವರೇ ಹಣಕಾಸಿನ ಮಂತ್ರಿಗಳಾಗಿದ್ದಾರೆ ಇವತ್ತು Revenue minister ರವರು ಬಂದಿದ್ದಾರೆ ಅದನ್ನು ಒಪ್ಪುತ್ತೇವೆ Chief secretary ಎಲ್ಲಿ? Principal Secretary

ಇಲ್ಲ? ಸಂಬಂಧಪಟ್ಟ ಅಧಿಕಾರಿಗಳ್ಯಾರೂ ಗ್ಯಾಲರಿಯಲ್ಲಿ ಕಾಣುತ್ತಿಲ್ಲ ನಾವು ಯಾರಿಗೆ ಹೇಳಬೇಕು? ನಿಮಗೆ ಹೇಳಬೇಕೆ? ನಿಮ್ಮ ಮೂಲಕ ಈ ಸರ್ಕಾರಕ್ಕೆ ಹೇಳಬೇಕಾದರೆ ಜವಾಬ್ದಾರಿ ಸ್ಧಾನದಲ್ಲಿರುವ ಎಲ್ಲರೂ ಬೇಕು ಯಾವಾಗ ಅವರು ಇಲ್ಲ ಎಂದರೆ ಚರ್ಚೆ ನಿರರ್ಧಕವಾಗುತ್ತದೆ ಚರ್ಚೆಗೆ ಏನು ಮಹತ್ವ ಬರುತ್ತದೆ?

ಅಧ್ಯಕ್ಷರು ಮಾನ್ಯ ಕಂದಾಯ ಸಚಿವರು ಇದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿ

ಶ್ರೀ ಎನ್ ಧರ್ಮ್‌ಸಿಂಗ್ ಮಾನ್ಯ ಅಧ್ಯಕ್ಷರೆ, ಆದ್ದರಿಂದ ಸದನವನ್ನು ಮುಂದೂಡಿ ಎಲ್ಲರೂ ಬರಬೇಕು ಚರ್ಚೆಯಲ್ಲಿ ಪಾಲ್ಗೋಳ್ಳಬೇಕು ಇಲ್ಲದಿದ್ದರೆ ಮಾಡಲು ಆಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಕೌನ್ಸಿಲ್‌ನಲ್ಲಿ ಸಹ ಕೆಲವು ಭಿನ್ನಾಭಿಪ್ರಾಯ ಇದ್ದದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜನ ಖರ್ಗೆಯವರೋಂದಿಗೆ ಮಾನ್ಯ ಮುಖ್ಯಮಂತಿಯವರು ಮಾತನಾಡಿದರೆ ಏನಾದರು ಪರಿಹಾರವನ್ನು ಕಂಡುಹಿಡಿಯಬಹುದು ಎಂದು ಅಲ್ಲಿಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಬೇಡಿಕೊಂಡರು ಈವತ್ತು ಇಲ್ಲಿ Adjournment motion ಇರುವುದರಿಂದ ಪ್ರಾಯಶ ಇಲ್ಲಿ ಸಿಕ್ಕುತ್ತಾರೆ, ಸಿಕ್ಕಿದರೆ ಮಾತನಾಡೋಣವೆಂದು ಅಲ್ಲಿ ನಿಂತುಕೊಂದ್ದೆವು ಆದ್ದರಿಂದ ಸದನ ನಡೆಯಲಿ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ, Leader of the Opposition ಬಹಳ ಮಹತ್ವದ ವಿಚಾರ ಹೇಳುತ್ತಿದ್ದಾರೆ Finance Minister ಇಲ್ಲ Revenue Minister ಇದ್ದಾರೆ Finance Minister ಇಲ್ಲ Chief Secretary , Principal Secretary, Revenue Secretary ಯವರು ಇಲ್ಲ ಹೀಗಾದರೆ ಯಾರಿಗೆ ಹೇಳಬೇಕು? Leader of the Opposition ಯಾರಿಗೆ ಹೇಳಬೇಕು?

ಶ್ರೀ ಎಂ ಪಿ ಪ್ರಕಾಶ್ ಕಂದಾಯ ಕಾರ್ಯದರ್ಶಿಗಳು ಇದ್ದಾರೆ

ಶ್ರೀ ಸಿದ್ಧರಾಮಯ್ಯ ಮಾನ್ಯ ಅಧ್ಯಕ್ಷರೆ Principal Secretary, Chief Secretary ಏಕೆ ಬರುವುದಿಲ್ಲ? An important matter has been raised by the Leader of the Opposition that too about moving the adjournment motion regarding the drought ಇಂಧ

ವಿಚಾರವನ್ನು ಹೇಳುವಾಗ ಒಬ್ಬರೂ ಇಲ್ಲ ಎಂದರೆ ಸರ್ಕಾರಕ್ಕೆ ಜಾವಾಬ್ದಾರಿ ಇದೆಯೋ ಇಲ್ಲವೋ ಎಂದು ಪ್ರಶ್ನೆ ಮಾಡಬೇಕಾಗುತ್ತದೆ ತಾವು ಈ ಹಿಂದೆ Revenue ಮಂತ್ರಿಯಾಗಿದ್ದವರು ಈಗ ಸಂಸದೀಯ ಸಚಿವರಾಗಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಿದ್ದರಾಮಯ್ಯನವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಈಗ ಯಾರ್‍ಯಾರು ತಮ್ಮತಮ್ಮ ಕೆಲಸಕಾರ್ಯಗಳೊಳಗಡೆ ಮೊದಲ ಸಂದರ್ಭದಲ್ಲಿ ಇದ್ದಂಥ ರೀತಿಯಲ್ಲೇ ಒಬ್ಬ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಕೂಡ ಇಟ್ಟಿರುತ್ತೇವೆ ಅವರು ಬೇರೆಯವರು ಕೂಡ ಇದ್ದಾರೆ ಇದರ ಜೊತೆಗೆ Revenue Secretaryಯವರು ಬೆಳಿಗ್ಗೆಯಿಂದಲೂ ಇದ್ದಾರೆ ನಾನು ಬರಗಾಲ ಕಾಮಗಾರಿಯ ಉಸ್ತುವಾರಿಯನ್ನೂ, ಸಚಿವಸಂಪುಟ ಸಭೆಯ ಅಧ್ಯಕ್ಷನಾಗಿಯೂ ಕೆಲಸ ನಿರ್ವಹಿಸುತ್ತಿದ್ದೇನೆ ಈ ವಿಚಾರದಲ್ಲಿ ಕಂದಾಯ ಮಂತ್ರಿಗಳೂ ಉತ್ತರ ಕೊಡಲು ಸಿದ್ಧರಾಗಿ ಬಂದಿದ್ದಾರೆ ಈಗ admissibility ಮೊದಲಾದ ವಿಷಯಗಳನ್ನು ಕೂಡ Adjournment Motion ವಿಷಯದಲ್ಲಿ ಚರ್ಚೆ ಮಾಡಬೇಕಾಗಿದೆ ಬೇರೆ ಹಿರಿಯರು ಬರಲಿ ಎಂದು ಹೇಳಿಕಳುಹಿಸುತ್ತಿದ್ದೇವೆ ಈ ಸಂದರ್ಭದಲ್ಲಿ Finance Minister ಇದ್ದೇ ತೀರಬೇಕೆಂದೇನಿಲ್ಲ ಅದಕ್ಕೆ ಏನೇನು ಖರ್ಚುಮಾಡಿದ್ದೇವೆ ಎಂಬ ಬಗ್ಗೆ ಸಹ ಹೇಳಲು ತಯಾರಿದ್ದೇವೆ ಆದರೆ ತಾವು ಹೇಳಿದಂತೆ ಕಾರ್ಯದರ್ಶಿಗಳು, ಮುಖ್ಯಕಾರ್ಯದರ್ಶಿಗಳು ಯಾರಿದ್ದಾರೆ ಅವರನ್ನು ಕರೆಸಲು ನಾನು ಪ್ರಯತ್ನ ಮಾಡುತ್ತೇನೆ ದಯವಿಟ್ಟು ತಾವು ಒಪ್ಪಿಗೆಯನ್ನು ಕೊಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು initiate ಮಾಡಲಿ ಇದು ಎಲ್ಲಾ ಕಾಲದಲ್ಲೂ ಇರುವುದೇ I understand

ಶ್ರೀ ಸಿದ್ಧರಾಮಯ್ಯ ನಮ್ಮ ಸಮಾಧಾನಕ್ಕೋಸ್ಕರ ಉತ್ತರ ಕೊಡುವುದು ಬೇರೆ ನಾನು ಇದ್ದೇನೆ, ನಾನು ಆ ಸಮಿತಿಯ ಅಧ್ಯಕ್ಷನಾಗಿದ್ದೇನೆ, ನಾನು ಉತ್ತರ ಕೊಡಬಲ್ಲೆ, ಅವರು ಉತ್ತರ ಕೊಡಬಲ್ಲರು, ಯಾರು ಇಲ್ಲದಿದ್ದರೂ ನಡೆಯುತ್ತದೆ ಅಧಿಕಾರಿಗಳು ಇಲ್ಲದಿದ್ದರೂ ನಡೆಯುತ್ತದೆ ನೀವೂ ಉತ್ತರವನ್ನು ಕೊಡಬಹುದು ಆದರೆ, ಪ್ರಶ್ನೆ ಇರುವುದೇನೆಂದರೆ ಅತ್ಯಂತ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡುವಾಗ ಸರ್ಕಾರ ಇದನ್ನು ಗಂಬೀರವಾಗಿ ಪರಿಗಣಿಸಬೇಕು ಸರ್ಕಾರಕ್ಕೆ ಹೆಚ್ಚು ಕಾಳಜಿ ಇರಬೇಕು ಎಂಬುದು ಬಹಳ ಮುಖ್ಯ ಆ ರೀತಿಯ ಕಾಳಜಿ ವ್ಯಕ್ತವಾಗುತ್ತಿಲ್ಲವೆಂಬುದು ನಮ್ಮ ಆರೋಪ

ಶ್ರೀ ಎಂ ಪಿ ಪ್ರಕಾಶ್ ಅದನ್ನು ಒಪ್ಪಿಕೊಳ್ಳುತ್ತೇನೆ ತಾವು ಪ್ರಾರಂಭ ಮಾಡಿ

ಶ್ರೀ ಎಂ ಪಿ ಪ್ರಕಾಶ್ ತಾವು Please co-operate ತಾವು ದಯವಿಟ್ಟು initiate ಮಾಡಿ

ಶ್ರೀ ವಾಟಾಳ್ ನಾಗರಾಜ್ ಎಲ್ಲಾ ಕಾಲದಲ್ಲೂ ಹೀಗೆ ನಡೆದುಕೊಂಡು ಬಂದಿದೆ ಎಂಬ ಮಾತನ್ನು ತಾವು ಹೇಳಿದಾಗ ನನಗೆ ಎಲ್ಲೋ ಒಂದು ಕಡೆ ನೋವಾಯಿತು ಎಲ್ಲಾ ಕಾಲದಲ್ಲೂ ಹೀಗೆಯೇ ನಡೆದುಕೊಂಡು ಬಂದಿದೆ, ಈಗಲೂ ಹಾಗೆಯೇ ನಡೆದುಕೊಂಡು ಹೋಗೋಣ ಬಿಡಿ ಎಂದು ತಾವು ಹೇಳಿಬಿಟ್ಟರೆ ನಮ್ಮ ಗತಿ ಏನು? ಪರಿಸ್ಥಿತಿ ಏನು?

ಶ್ರೀ ಎಂ ಪಿ ಪ್ರಕಾಶ್ ತಾವು 1967ರಿಂದಲೂ ನೋಡುತ್ತಲೇ ಇದ್ದೀರಿ ಇಲ್ಲಿ ಹೀಗೆಯೇ ನಡೆದುಕೊಂಡು ಬರುತ್ತಿದೆ ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಏನಾದರೂ ಬದಲಾವಣೆ ಆಗಿದೆಯೇ? ಎಂಬ ಬಗ್ಗೆ ತಾವೇ ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗಾದರೆ ಬದಲಾವಣೆ ಆಗುವುದು ಬೇಡವೇ?

ಶ್ರೀ ಎಂ ಪಿ ಪ್ರಕಾಶ್ ಬದಲಾವಣೆ ಬೇಕು, ನಿಜ ಆದರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಯಾರಾದರೂ ಒಬ್ಬರು ಅದಕ್ಕೆ ಚಾಲನೆ ಕೊಡಬೇಕಲ್ಲವೇ?

ಶ್ರೀ ಎಂ ಪಿ ಪ್ರಕಾಶ್ ವಸ್ತುಸ್ಥಿತಿಗೆ ನಾವೆಲ್ಲರೂ ಹೊಂದಿಕೊಳ್ಳಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದು ಸರಿ ಆದರೆ ಬದಲಾವಣೆ ಆಗಬೇಕೆಂದು ಪ್ರಾಮಾಣಿಕವಾಗಿ ಬಯಸುವವರು ಯಾರಾದರೂ ಒಬ್ಬರು ಅದನ್ನು ಪ್ರಾರಂಭ ಮಾಡಬೇಕಲ್ಲವೇ? ಎಲ್ಲರೂ ಹೀಗೆಯೇ ಹೇಳಿಕೊಂಡು ಹೋದರೆ ಹೇಗೆ?

ಶ್ರೀ ಎಂ ಪಿ ಪ್ರಕಾಶ್ ಈಗ ಅದಕ್ಕೆ ನಾವು ಪ್ರಯತ್ನ ಮಾಡುತ್ತೇವೆ

ಶ್ರೀ ವಾಟಾಳ್ ನಾಗರಾಜ್ 1967ರಲ್ಲಿ ಕೇವಲ 3 ಅಥವಾ 4 ಸದಸ್ಯರು ಮಾತ್ರ ಗೈರು ಹಾಜರಾಗಿರುತ್ತಿದ್ದರು 200 ಸದಸ್ಯರಾದರೂ ಇಲ್ಲಿ ಕುಳಿತಿರುತ್ತಿದ್ದರು

ಶ್ರೀ ಎಂ ಪಿ ಪ್ರಕಾಶ್ ಈಗ ಇಲ್ಲಿ ಸದಸ್ಯರೂ ಸಹ ಕುಳಿತುಕೊಳ್ಳುತ್ತಿಲ್ಲ

ಶ್ರೀ ವಾಟಾಳ್ ನಾಗರಾಜ್ ಮಾತನಾಡಲು ಸದಸ್ಯರು ಅಂದು ತುದಿಗಾಲಿನಲ್ಲೇ ನಿಂತಿರುತ್ತಿದ್ದರು

ಶ್ರೀ ಎಂ ಪಿ ಪ್ರಕಾಶ್ ದಯಮಾಡಿ ಮಾತನಾಡಿ

ಶ್ರೀ ಧರ್ಮಸಿಂಗ್ [ವಿರೋಧ ಪಕ್ಷದ ನಾಯಕರು] ನನಗೆ ಮಾತನಾಡಿ ಎಂದು ಹೇಳಿ ತಾವೇ ಈಗ ಹೊರಡುತ್ತಿದ್ದೀರಲ್ಲಾ?

ಶ್ರೀ ಎಂ ಪಿ ಪ್ರಕಾಶ್ ಅಧಿಕಾರಿಗಳ ಜೊತೆಗೆ ಮಾತನಾಡಲು ತೆರಳುತ್ತಿದ್ದೇನೆ

ಶ್ರೀ ಧರ್ಮಸಿಂಗ್ ಮಾನ್ಯ ಪ್ರಕಾಶ್‌ರವರು ಕೂಡ ಹೋದರೆ ನಾವು ಇಲ್ಲಿ ನಿಂತು ಏನು ಮಾತನಾಡೋಣ? ನಾವು ಪ್ರಸ್ತಾಪ ಮಾಡುವುದನ್ನು ಮುಂದಕ್ಕೆ ಹಾಕುತ್ತೇವೆ ನಾಳೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬನ್ನಿ, ಮಾನ್ಯ ಯಡಿಯೂರಪ್ಪನವರೂ ಬರಲಿ, ಜೊತೆಗೆ ತಾವೂ ಇರಿ ತಾವು ಬರಗಾಲ ಸಮಿತಿಯ ಅಧ್ಯಕ್ಷರಾಗಿದ್ದೀರಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಹಣಕಾಸಿನ ಸಚಿವರಾದ ಯಡಿಯೂರಪ್ಪನವರು ಈ ಚರ್ಚೆ ಸಂದರ್ಭದಲ್ಲಿ ಇಲ್ಲಿ ಇರಬೇಕಾದಂತಹ ಅಗತ್ಯವಿಲ್ಲ I am just trying to see some important officials concerned with this ಇಲ್ಲಿ Revenue ಕಾರ್ಯದರ್ಶಿಗಳಿದ್ದಾರೆ, ಮಂತ್ರಿಗಳಿದ್ದಾರೆ, ನಾವಿದ್ದೇವೆ With regard to the maintainability of the Adjournment Motion itself we have our own reservation

ಶ್ರೀ ಧರ್ಮಸಿಂಗ್ ತಾವು You are a senior Minister of the State ನೀವೆಲ್ಲಾ ಹೀಗೆ ಮಾಡಿದರೆ ಹೇಗೆ? ಮೊದಲನೇ ದಿವಸವೇ ಹೀಗೆ ಆದರೆ ಹೇಗೆ? ಸದನವನ್ನು ಕರೆಯಲಿಕ್ಕೇ ನೀವು ಬಹಳ ಲೆಕ್ಕಾಚಾರ ಹಾಕಿದಿರಿ ಮಂತ್ರಿ ಮಂಡಲ ವಿಸ್ತರಣೆ ಮತ್ತು ನಿಗಮ/ಮಂಡಳಿ ನೇಮಕಾತಿ ಬಗ್ಗೆಯೇ ನೀವೆಲ್ಲಾ ಮಾತನಾಡಿಕೊಂಡು ಕುಳಿತಿದ್ದೀರಿ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಸರ್ಕಾರ ಏನು ಮಾಡುತ್ತಿದೆ? ಬರಗಾಲ ಸಮಸ್ಯೆ ನೀಗುವ ಬಗ್ಗೆ ನಿಮ್ಮ ಧೋರಣೆ ಏನು? ಎಂಬ ಬಗ್ಗೆ ತಿಳಿದುಕೊಳ್ಳಲು ಆ ವಿಚಾರವನ್ನು ಇಂದು ನಾವು ಸರ್ಕಾರದ ಗಮನಕ್ಕೆ ತರಬೇಕೆಂದರೆ ಇಲ್ಲಿ ಒಬ್ಬರೂ ಇಲ್ಲ ಹೀಗಿದ್ದರೂ, ಹೇಗಾದರೂ ಮಾಡಿ ನೀವು co-operate ಮಾಡಿ ಎಂದರೆ ಹೇಗೆ? ಯಾವುದರಲ್ಲಿ ನಾವು ನಿಮಗೆ co-operate ಮಾಡಬೇಕು? ಯಾರೂ ಇಲ್ಲದೆ ಬಹಳ ತೊಂದರೆಯಾಗುತ್ತಿದೆ ಸಂಬಂಧಪಟ್ಟವರು ಯಾರ್ಯಾರಿದ್ದಾರೆ

ಅವರೆಲ್ಲರನ್ನೂ ಕರೆಸಿಬಿಡಿ ಮಾನ್ಯ ಅಧ್ಯಕ್ಷರು half an hour ಸದನವನ್ನು ಮುಂದೂಡಿ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ ನೀವು ಎಲ್ಲರನ್ನೂ ಕೂಡ ಸಂಪರ್ಕ ಮಾಡಿದರೆ ಎಲ್ಲರೂ ಕೂಡ ಬರುತ್ತಾರೆ ಅಧಿಕಾರಿಗಳೂ ಕೂಡ ಬರಬೇಕು Chief Secretaryಗೆ ಏನು ಕೆಲಸವಿದೆ? ಜಾಮ್‌ದಾರ್‌ರವರು ಎಲ್ಲಿದ್ದಾರೆ? ಬೇರೆಯವರು ಎಲ್ಲಿದ್ದಾರೆ?

ಶ್ರೀ ಎಂ ಪಿ ಪ್ರಕಾಶ್ ಬರುತ್ತಾರೆ Secretary No 2 ಇಲ್ಲೇ ಇದ್ದಾರೆ

ಶ್ರೀ ಧರ್ಮಸಿಂಗ್ ಆ ಕಡೆ ನೋಡಿ ಲತಾ ಕೃಷ್ಣರಾವ್‌ರವರೊಬ್ಬರು ಮಾತ್ರ ಇಲ್ಲಿದ್ದಾರೆ ಆದರೆ ಬೇರೆಯವರು ಎಲ್ಲಿದ್ದಾರೆ? Chief Secretary ಬೇಕಾಗಿಲ್ಲವೇ? Development Commissioner ರವರು ಬೇಕಾಗಿಲ್ಲವೇ?

ಶ್ರೀ ಎಂ ಪಿ ಪ್ರಕಾಶ್ ಬರುತ್ತಾರೆ Both of them are coming

ಶ್ರೀ ಧರ್ಮಸಿಂಗ್ ಕೃಷಿಗೆ ಸಂಬಂಧಪಟ್ಟ ಹಾಗೆ, Agriculture Secretary ಎಲ್ಲಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ ನೀವು ಅವರನ್ನು ಕರೆಸಬೇಕಾಗಿಲ್ಲ ಅವರೇ ಇಲ್ಲಿ ಬಂದು ಕುಳಿತುಕೊಳ್ಳಬೇಕು ಅಧಿಕಾರಿಗಳ ಜವಾಬ್ದಾರಿ ಅದು ಅಧಿಕಾರಿಗಳು ಈ ಮಟ್ಟಕ್ಕೆ ಇಳಿದಿದ್ದಾರೆ ಅಧಿಕಾರಿಗಳು ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳನ್ನು ಯಾವ ಮಟ್ಟಕ್ಕೆ ಇಳಿಸಿದ್ದಾರೆ ಎಂದರೆ, ಅವರು ಜವಾಬ್ದಾರಿಯಿಂದ ವರ್ತಿಸುತ್ತಿಲ್ಲ ಬಹಳ ಬೇಜವಾಬ್ದಾರಿ ತೋರಿಸುತ್ತಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ನಿನ್ನೆ Adjournment Motion ಕೊಟ್ಟಿದ್ದಾರೆ ಅದನ್ನು ಇವತ್ತು ತೆಗೆದುಕೊಳ್ಳುತ್ತಾರೆ ಎಂಬ ವಿಷಯ ಈಗತಾನೇ ಗೊತ್ತಾಗಿದೆ ನಮಗೂ ಕೂಡ ಅದರ copy ಕೊಡಬೇಕಾಗಿತ್ತು ಅದನ್ನು ನನಗೆ ಈಗ ಕೊಟ್ಟಿದ್ದಾರೆ

ಶ್ರೀ ಧರ್ಮಸಿಂಗ್ ನಾವು ಸೂಚನೆಯನ್ನು 10 ಗಂಟೆಗೇ ಕೊಟ್ಟಿದ್ದೇವೆ

ಶ್ರೀ ಎಂ ಪಿ ಪ್ರಕಾಶ್ – ಅದನ್ನು ನಾನು ತೆಗೆದುಕೊಂಡಿದ್ದೇನೆ ಇಲ್ಲಿಯ ಕಛೇರಿಯಲ್ಲಿ ತೊಂದರೆಯಾಗಿ, ನಾನು 11 ಗಂಟೆಗೆ ನನ್ನ ಕಛೇರಿಗೆ ಬಂದಾಗ ನನಗೆ ಅದರ ಕಾಪಿಯನ್ನು ಕೊಟ್ಟಿದ್ದಾರೆ Adjournment Motion ಸೂಚನೆ ಬಂದಾಗ ಅದನ್ನು Parliamentary Ministerಗೆ ಕೊಡಬೇಕು Leader of the Oppositionಗೆ ಕೊಡಬೇಕು ಮತ್ತು ಸಂಬಂಧಪಟ್ಟಂತಹ ಮಂತ್ರಿಗಳಿಗೆ ಕೊಡಬೇಕು ಎಂದು ಇದೆ ಅದು 11 ಗಂಟೆಗೆ ನನಗೆ ಸಿಕ್ಕಿದೆ

Sir, they are coming ಅವರು ಬರುತ್ತಿದ್ದಾರೆ You please initiate ಇದು ಎಲ್ಲಾ ಕಾಲದಲ್ಲೂ ಆಗಿರುವಂತಾದ್ದೇ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, Sir, this is an insult to this House Let some other business be taken up or else you please adjourn the House This House cannot sit waiting for those VIPs

SRI M P PRAKASH That is not our point at all On the contrary, I requested the Leader of the Opposition to take up the discussion In the meantime they will be coming ಎಂದು ನಾನು ಹೇಳಿದೆ It is not that we have to wait for them It is not our job

ಶ್ರೀ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ದಯವಿಟ್ಟು half an hour ಸದನವನ್ನು ಮುಂದೂಡಿ ಎಲ್ಲರನ್ನೂ ಕರೆಸಿ Otherwise you take up tomorrow ಈ ತರಹ ಮಾತನಾಡಿದರೆ ಉಪಯೋಗವಾಗುವುದಿಲ್ಲ

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಮಾಜಿ ಮುಖ್ಯಮಂತ್ರಿಗಳು ಮತ್ತು ಈಗಿನ ವಿರೋಧ ಪಕ್ಷದ ನಾಯಕರಿಗೆ ಎಲ್ಲಾ ಗೊತ್ತಿದೆ ಮತ್ತು ಅನುಭವವೂ ಇದೆ ಸಾರ್, ಇಲ್ಲಿ ರೆವಿನ್ಯೂ ಸಚಿವರಿದ್ದಾರೆ ಮತ್ತು ಇನ್ನಿತರ ಹಿರಿಯ ಸಚಿವರುಗಳಿದ್ದಾರೆ ಇದರ ಜೊತೆಗೆ ಕೋರಂ ಆಗುವಷ್ಟು ಸಂಖ್ಯೆ ಇದೆ ಬರ ನಿಭಾಯಿಸುವಂತಹ ಕಾರ್ಯದರ್ಶಿಯವರೂ ಸಹ ಅಲ್ಲಿದ್ದಾರೆ ಖಂಡಿತವಾಗಿಯೂ ನಾವೆಲ್ಲಾ ನಿಮ್ಮ ಮಾತನ್ನು ಕೇಳುತ್ತೇವೆ ದಯವಿಟ್ಟು ಮಾತನಾಡಿ

ಶ್ರೀ ಧರ್ಮಸಿಂಗ್ ನೀವೇಕೆ ಮಾತನಾಡುತ್ತೀರಿ? ಸುಮ್ಮನೆ ಕುಳಿತುಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, Let the House be adjourned for 15 minutes They will be here I have no objection 15 ನಿಮಿಷ ತಾವು ಸದನವನ್ನು ಮುಂದೂಡಿ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, Officers ಬರಲಿಲ್ಲವೆಂದು ತಾವು House adjourn ಮಾಡಿಸುತ್ತೀರಾ?

ಶ್ರೀ ಎಂ ಪಿ ಪ್ರಕಾಶ್ ಅದಲ್ಲ It is not that question I have said you can initiate discussion

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಮಾಧುಸ್ವಾಮಿ The debate going on here is that. ಯಾರೋ ಇಬ್ಬರು officers ಬರಲಿಲ್ಲವೆಂದು House adjourn ಮಾಡುವಂತಹ ಕೆಟ್ಟ ಸಂಪ್ರದಾಯವನ್ನೇಕೆ ನೀವು ಹಾಕಲಿಕ್ಕೆ ಹೊರಟಿದ್ದೀರಿ? Are you going to create a precedent? ಅಂತಹ ವಿಚಾರವನ್ನು ನೀವು ಎಲ್ಲಿಯಾದರೂ ಕೇಳಿದ್ದೀರಾ? ದಯವಿಟ್ಟು ಮೊದಲು ಚರ್ಚೆಯನ್ನು initiate ಮಾಡಿಸಿ

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ತಾವು ಪ್ರಾರಂಭ ಮಾಡಿ

ಶ್ರೀ ವಾಟಾಳ್ ನಾಗರಾಜ್ ಬರದಿರುವ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಿ

ಶ್ರೀ ಜೆ ಸಿ ಮಾಧುಸ್ವಾಮಿ ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ಚರ್ಚೆ ಪ್ರಾರಂಭ ಮಾಡಿಸಿ ಅಧಿಕಾರಿಗಳು ಇಲ್ಲವೆಂಬ ಕಾರಣಕ್ಕೆ ನಾವು ಮಾತನಾಡುವುದು ಬೇಡವೇ?

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ನಾಗರಾಜ್‌ರವರೆ, ತಾವೇನು ಮಾತನಾಡುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ ನೀವು ಅವರು ಯಾರೂ ಬಂದೇ ಇಲ್ಲ, ನಾವು ಯಾರಿಗೆ ಹೇಳಬೇಕು ಎಂದು ಹೇಳುತ್ತೀರಿ

ಶ್ರೀ ಜೆ ಸಿ ಮಾಧುಸ್ವಾಮಿ ಈಗ ತಾವು ಇದ್ದೀರಿ ಚರ್ಚೆ ಪ್ರಾರಂಭಿಸಿ

ಶ್ರೀ ಎಂ ಪಿ ಪ್ರಕಾಶ್ ತಾವು ಆ ರೀತಿ ಹೇಳಲಿಲ್ಲ You have never interrupted But, both of them said, none of these people responsible are here To whom we have to address? ಎಂಬ ಮಾತುಗಳನ್ನು ತಾವು ಹೇಳಿದ ಮೇಲೆ, ನಾವು, ಆಯಿತು ಸಾರ್, ನಾವು ಅವರನ್ನು ಕರೆಸುತ್ತೇವೆ, ಅವರು ಬರುತ್ತಿದ್ದಾರೆ, ತಾವು initiate ಮಾಡಿ ಎಂದು ನಿಮ್ಮನ್ನು request ಮಾಡಿಕೊಂಡೆವು But, if the House so desires, let it be adjourned ಎಂದೂ ಕೂಡ ನಾನು ಹೇಳಿದೆ What is that we can do now?

ಶ್ರೀ ವಾಟಾಳ್ ನಾಗರಾಜ್ ಸಭೆಯನ್ನು ಮುಂದಕ್ಕೆ ಹಾಕಿ ಎಂದು ನಾವೆಲ್ಲೂ ಹೇಳಿಯೇ ಇಲ್ಲ ನಾವು ಖಂಡಿತಾ ಆ ಮಾತನ್ನು ಹೇಳಲಿಲ್ಲ ಯಾವ ಅಧಿಕಾರಿಗಳು ಬರಲಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ನಾವು ಹೇಳಿದೆವು

ಶ್ರೀ ಜೆ ಸಿ ಮಾಧುಸ್ವಾಮಿ ತಾವು Take action against them

ಶ್ರೀ ವಾಟಾಳ್ ನಾಗರಾಜ್ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಇವರು ಬಹಳ ಬೇಜವಾಬ್ದಾರಿ ಅಧಿಕಾರಿಗಳಾಗಿದ್ದಾರೆ ಮೊದಲನೇ ದಿವಸವೇ ಈ ರೀತಿಯಾದರೆ ಗತಿಯೇನು? ಮುಖ್ಯ ಕಾರ್ಯದರ್ಶಿಯವರು ಎಲ್ಲಿಗೆ ಹೋಗಿದ್ದಾರೆ?

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ ಎಲ್ಲರೂ ಬರುತ್ತಾರೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, Sir, It has come to the light only today This has come in the agenda today ಆ ಸಂದರ್ಭಕ್ಕೆ everybody ಬೇರೆ ಬೇರೆ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುತ್ತಾರೆ ಅನೇಕ ಸಂದರ್ಭದಲ್ಲಿ ಮುಖ್ಯ ಕಾರ್ಯದರ್ಶಿಯವರು ಬಂದಿರುವುದಿಲ್ಲ ಆದರೆ ಹಿಂದೆ ಮುಖ್ಯಮಂತ್ರಿಗಳಾಗಿ ಈಗ Leader of the Opposition ಆಗಿರುವವರು ಇಂತಹ ಮಹತ್ವದ ವಿಚಾರವನ್ನು ಪ್ರಸ್ತಾಪಿಸುತ್ತೇವೆ ಎಂದು ಹೇಳಿದ ಕಾರಣಕ್ಕಾಗಿಯೇ, ಅವರಿಗೆ ಇಲ್ಲಿಗೆ ಬರಲು ಹೇಳಿ ಕಳುಹಿಸಿದ್ದೇವೆ, ಅವರು ಬರುತ್ತಾರೆ ತಾವು initiate ಮಾಡಿ ಎಂದೂ ಕೂಡ ನಾನು request ಮಾಡಿಕೊಂಡೆ What more? You also join hands with me and request him ತಾವೂ ಮಾಡಿ You please do that

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು adjourn ಮಾಡಲಿಕ್ಕೆ ಕೇಳಲಿಲ್ಲ ಬಾರದಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದಷ್ಟೇ ಹೇಳಿದ್ದೆವು

ಶ್ರೀ ಎಂ ಪಿ ಪ್ರಕಾಶ್ ಆಯಿತು, ಮುಂದೇನು? What is next?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾತನಾಡಿ ಎಂದೇ ನಾವೂ ಕೂಡ ಹೇಳುತ್ತಿದ್ದೇವೆ

ಶ್ರೀ ಎಂ ಪಿ ಪ್ರಕಾಶ್ ಅವರು ಮಾತನಾಡುವುದಿಲ್ಲ ಎಂದರೆ ನಾವು ಏನು ಮಾಡಬೇಕು? Then we will have to jump Adjournment

Motion has got precedence over other legislative matters You can't do that ಈಗ ನಾವು ಅದನ್ನು ಬಿಟ್ಟು ಬೇರೆ legislative businessಗೆ jump ಮಾಡಲಿಕ್ಕಾಗುತ್ತದೆಯೇ? ಆ ರೀತಿ ನಾವು ಮಾಡಲಿಕ್ಕಾಗುವುದಿಲ್ಲ ಆದ್ದರಿಂದ ಚರ್ಚೆ stalemate ಆಗುವುದು ಬೇಡ ತಾವು ದಯಮಾಡಿ ಚರ್ಚೆಯನ್ನು ಶುರು ಮಾಡಿ

8 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ Chief Secretary ಇಲ್ಲದಿರುವ ಬಗ್ಗೆ we are not serious ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ serious ಆಗಿ ಇರಬೇಕಲ್ಲವೇ? ತಾವು ಈಗ ಬಂದಿರಿ House assemble ಆಗಿ 30 minutes ಆದಮೇಲೆ ನೀವು ಬಂದಿದ್ದೀರಿ ಇವತ್ತು ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೆಂದರೆ ನಾವು ಇನ್ಯಾರಿಗೆ ಹೇಳಬೇಕು? ನಾವು ಬಹಳಷ್ಟು ವಿಷಯಗಳನ್ನು ಇವತ್ತು ಹೇಳಬೇಕಾಗಿದೆ ಪತ್ರಿಕೆಗಳಲ್ಲಿ ಬರತಕ್ಕಂಥ ವಿಚಾರಗಳ ಬಗ್ಗೆಯೂ ಸಹ ನಾವು ಪ್ರಸ್ತಾಪ ಮಾಡಬೇಕಾಗಿದೆ We have taken a decision ಇವತ್ತು ಜನರಿಗೆ ತೊಂದರೆ ಆಗತಕ್ಕಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲು ನಾವು ನಿಂತಿದ್ದೇವೆ How far you will take? ಅದನ್ನು ನೀವು ಏನು ಮಾಡುತ್ತೀರೋ? ಅದನ್ನು ನೀವು ಹಗುರವಾಗಿ ತೆಗೆದುಕೊಳ್ಳುತ್ತೀರೋ ಅದವಾ ಗಂಭೀರವಾಗಿ ತೆಗೆದುಕೊಳ್ಳುತ್ತೀರೋ ಎಂಬ ಬಗ್ಗೆ ನಾವು ಹೇಳುತ್ತಿಲ್ಲ ನಾವು ಏನು ಹೇಳಲಿಕ್ಕೆ ಹೊರಟಿದ್ದೇವೆ ಎಂದರೆ, ಇವತ್ತು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ, ಸರ್ಕಾರ ನಡೆಸತಕ್ಕಂಥ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇವತ್ತು ಸದನದಲ್ಲಿ ಇರಲಾರದಂತಹ ಪರಿಸ್ಥಿತಿಯಲ್ಲಿ ಗಂಭೀರವಾದಂತಹ ಸಮಸ್ಯೆಯನ್ನು ನಾವು ಹೇಗೆ ಪ್ರಸ್ತಾಪಿಸಲು ಸಾಧ್ಯ? ಇವತ್ತು ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದವರು ಕೊಟ್ಟಿದ್ದಾರೆ, ಪ್ರಸ್ತಾಪ ಮಾಡಲಿದ್ದಾರೆ, ಆದ್ದರಿಂದ ನಾವು ಸದನಕ್ಕೆ ಹೋಗಲೇಬೇಕು ಎಂದು ನಿರ್ಧಾರ ತೆಗೆದುಕೊಂಡು ಬೇರೆ ವಿಚಾರಗಳನ್ನು ದೂರವಿಟ್ಟು ಈ ಸದನಕ್ಕೆ ಬರಲಿಕ್ಕೆ ಆಗುವುದಿಲ್ಲವೇ? ತಾವು ಹಿಂದೆ ಬಂದಿರಲಿಲ್ಲವೇ? ನಾವೂ, ನೀವೂ ಕೂಡಿ

ಅದನ್ನು ಮಾಡಿರಲಿಲ್ಲವೇ? ಈಗ ಏಕೆ ಈ ತರಹದ ಹರಮಾರಿತನ ತೋರಿಸುತ್ತಿದ್ದೀರಿ? ಏನೋ ಹೇಳುತ್ತಾರೆ, ಹೋಗುತ್ತಾರೆ ಎನ್ನತಕ್ಕಂಧ ಧಾಟಿಯಲ್ಲಿ ಸರ್ಕಾರ ಇದ್ದರೆ ಅದಕ್ಕೆ ಜನ ಉತ್ತರ ಕೊಡುತ್ತಾರೆ ಇವತ್ತು ಈ ತರಹ ನಡೆದುಕೊಳ್ಳವುದು ಅಲ್ಲವೇ ಅಲ್ಲ ಇವತ್ತು ಏನು ಜನರಿಗೆ ರಾಜ್ಯದಲ್ಲಿ ತೊಂದರೆಯಾಗಿದೆ, ಎಲ್ಲಿ ತಾವು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಿಲ್ಲ ಅನ್ನತಕ್ಕಂಧ ಮಾತನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇವತ್ತು ನಾವು ಬಂದಿದ್ದೇವೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಎಲ್ಲರೂ ಕೂಡ ಈ ಸದನದಲ್ಲಿ ಇರಬೇಕು ನಾವು ಆಡತಕ್ಕಂಧ ಮತ್ತು ಹೇಳತಕ್ಕಂಧ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬುದು ನಮ್ಮ ಅಭಿಲಾಷೆಯಾಗಿದೆ ಅದಕ್ಕಾಗಿಯೇ ನಾನು ಇವತ್ತು ಮಾನ್ಯ ಅಧ್ಯಕ್ಷರಿಗೆ ಹೇಳುತ್ತಿದ್ದೇನೆ ಅಧಿಕಾರಿಗಳಿಗೋಸ್ಕರ ನಾವು ಹೊರಗಡೆ ಹೋಗತಕ್ಕಂಧದ್ದಲ್ಲ ಅಧಿಕಾರಿಗಳನ್ನು ನಿಯಂತ್ರಣ ಮಾಡತಕ್ಕಂಧ ಕೆಲಸ ನಿಮ್ಮದು ಅಧಿಕಾರಿಗಳು ಇವತ್ತು ಕರ್ನಾಟಕ ರಾಜ್ಯದಲ್ಲಿ ನಿಮ್ಮ ಮಾತನ್ನು ಕೇಳುತ್ತಿಲ್ಲ ಈ ಮಾತನ್ನು ನಾವು ಹೇಳುತ್ತಿಲ್ಲ ಈ ಹೇಳಿಕೆಯನ್ನು ನೀವೇ ಹೇಳುತ್ತಿದ್ದೀರಿ ಇವತ್ತು ಸದನದಲ್ಲೂ ಕೂಡ ಇದೇ ತರಹ ನಡೆದುಕೊಂಡರೆ ನಾವು ಅದನ್ನು ಹೇಗೆ ಸಹನೆ ಮಾಡಲಿಕ್ಕೆ ಆಗುತ್ತದೆ?

ಶ್ರೀ ಎಂ ಪಿ ಪ್ರಕಾಶ್ ತಾವು ಈ ಸಂದರ್ಭದಲ್ಲಿ ನಿಲುವಳಿ ಸೂಚನೆ ಮೂಲಕ ಬಹಳ ಗಂಭೀರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಲು ಇಚ್ಛೈಸಿದ್ದೀರಿ ಬರಗಾಲದ ಬಗ್ಗೆ ಸರ್ಕಾರದ ಕ್ರಮಗಳ ಬಗ್ಗೆ ಚರ್ಚೆ ಮಾಡುವ ನಿಲುವಳಿ ಸೂಚನೆ ಇದೆ ನಿಲುವಳಿಸೂಚನೆ ಸಾದುವಾದದ್ದೊ, ನಿಲುವಳಿ ಸೂಚನೆಯನ್ನು ನೀವು ಈಗ ಕೈಗೆತ್ತಿಕೊಳ್ಳಬೇಕೇ ಅದಕ್ಕಿರುವ ಸಾಧಕ ಬಾಧಕಗಳೇನು? ಅಂತಹ ವಿಚಾರದ ಬಗ್ಗೆಯೂ ನಾವು ಚರ್ಚೆ ಮಾಡಬೇಕಾಗುತ್ತದೆ, With regard to the admissibility of the Adjournment Motion 'we have got our own reservation and it is left to you after hearing us also and after hearing him He has to convince you that this adjournment motion is absolutely necessary and that it is confined with the rules connected with it ಎಂದು ಅವರು ಹೇಳುತ್ತಾರೆ, ಅದಕ್ಕೆ ನಾವು ಏನೇನೆಲ್ಲಾ ಹೇಳಬೇಕೊ ಅದನ್ನು ಹೇಳುತ್ತೇವೆ ಅದಾದ ಮೇಲೆ ತಾವು ಒಪ್ಪಿಗೆ

ಕೊಡುವುದಾದರೆ, ಅದರ ವಿವರಗಳಿಗೆಲ್ಲಾ ಅವರು ಹೋಗುತ್ತಾರೆ ವಿವರಗಳಿಗೆ ಹೋಗಬೇಕಾದಾಗ ತಾವು ಬಯಸುವವರೆಲ್ಲರೂ ಇಲ್ಲಿರುತ್ತಾರೆ ಈಗ ಮುಖ್ಯ ಕಾರ್ಯದರ್ಶಿಗಳು, ಬೇರೆ ಕಾರ್ಯದರ್ಶಿಗಳು ಬಂದಿದ್ದಾರೆ, ಅವರು ಬರಲೇ ಬೇಕೆನ್ನುವುದಲ್ಲ, ಅವರು ಬರುವವರೆಗೆ ಸದನ ಮುಂದಕ್ಕೆ ಹಾಕಬೇಕೆಂತಲೂ ಅಲ್ಲ ತಾವು ದಯಮಾಡಿ ಅವರ ಮನವೊಲಿಸುವುದಕ್ಕೆ ತಾವೇನು ಹೇಳಬೇಕಾಗಿದೆ ಸರ್, ತಾವು ಈಗ ಅದನ್ನು ಹೇಳಿ ,ಪ್ರಾರಂಭ ಮಾಡಿ

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಬಹಳ ವರ್ಷ, ದೀರ್ಘಕಾಲ ಅನುಭವವುಳ್ಳವರು, ಈಗ ಕಾನೂನು ಮಂತ್ರಿ ಕೂಡ ಆಗಿದ್ದೀರಿ ಅಧಿಕಾರಿಗಳು ಬರಲೇ ಬೇಕು ಅಂತ ಏನು ಇಲ್ಲವೆನ್ನುವುದಲ್ಲ ಮತ್ತೆ ಬರಪರಿಹಾರ ಕಾರ್ಯಕ್ರಮಗಳನ್ನು ಮಾಡುವವರ್ಯಾರು, ಅವನ್ನು ಇಂಪ್ಲಿಮೆಂಟ್ ಮಾಡುವವರ್ಯಾರು, ಆ ಕೆಲಸಗಳನ್ನೆಲ್ಲಾ ನೋಡಿಕೊಳ್ಳುವವರ್ಯಾರು, ಆ ಉಸ್ತುವಾರಿ ನೋಡಿಕೊಳ್ಳುವವರ್ಯಾರು, ಅಲ್ಲಿ ಹಣ ಬಿಡುಗಡೆಯಾಗಿರುವುದು ಸರಿಯಾಗಿ ಖರ್ಚಾಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳುವವರ್ಯಾರು, ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೊ ಇಲ್ಲವೋ ಎಂದು ನೋಡಿಕೊಳ್ಳುವವರ್ಯಾರು, ಇಲ್ಲಿ ನಾವೇನು ಹೇಳುತ್ತೇವೆ ಅದನ್ನು ಕೇಳುವವರ್ಯಾರು, ಬರೀ ಮಂತ್ರಿಗಳೆ ಕೇಳಿಬಿಟ್ಟರೆ ಆಗುತ್ತದೆಯೆ? ಆ ತರಹ ಅವರು ಬರಲೇ ಬೇಕು ಎಂದಿಲ್ಲವೆಂದು ಹೇಳುವುದಲ್ಲ, ಅವರು ಬರಲೇ ಬೇಕು, ಅವರು ಇರಲೇ ಬೇಕು It is their duty ಅವರಲ್ಲಿ ಇಲ್ಲಿ ಕುಳಿತಿರಬೇಕು ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದಾಗ ಅದನ್ನು ಕೇಳಬೇಕಾಗುತ್ತದೆ ನಾವು, ಅಧಿಕಾರಿಗಳು ಸದನಕ್ಕೆ ಬರುವಂತಿಲ್ಲವೆಂದರೆ, ನೀವು ಮಂತ್ರಿಗಳೆಲ್ಲಾ ಇಲ್ಲಿರಬೇಕು, ಅಧಿಕಾರಿಗಳ್ಯಾರು ಬರುವುದು ಬೇಡವೆನ್ನುವುದಾದರೆ ಅವರಿಗೇನು ಕೆಲಸವಿರುತ್ತದೆ? ಆ ರೀತಿ ಹೇಳುವುದಕ್ಕೆ ಹೋಗಬೇಡಿ, ಅಧಿಕಾರಿಗಳು ಇಲ್ಲಿ ಇರಬೇಕಾಗುತ್ತದೆ

ಶ್ರೀ ಎನ್ ಧರ್ಮ್ ಸಿಂಗ್ (ವಿರೋಧಪಕ್ಷದ ನಾಯಕರು) ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಬರಪೀಡಿತ ಪ್ರದೇಶಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಹೊಂದಿದೆ ಎನ್ನುವ ಮಾತನ್ನು ನಾವು ಪ್ರಸ್ತಾಪ ಮಾಡಿದ್ದೇವೆ ಕೂಡಲೇ, ತ್ವರಿತಗತಿಯಿಂದ ಅಧಿವೇಶನ ಕರೆಯಬೇಕು, ಸದನದಲ್ಲಿ , ಈ ರಾಜ್ಯದ ಜನತೆಗೆ ಏನು ತೊಂದರೆಯಾಗಿದೆ ಆ ಬಗ್ಗೆ ವಿಚಾರವಿನಿಮಯವಾಗಬೇಕೆಂಬುದನ್ನು ನಾವು ಪ್ರಸ್ತಾಪ ಮಾಡಿದ್ದೇವೆ ಇವತ್ತು ಈ ಸರ್ಕಾರ ಕೇವಲ ಹೇಳಿಕೆ ಆಧಾರದ

ಮೇಲೆ ಬಹಳ ದಿವಸ ಜೀವಂತವಾಗಿರುವುದಕ್ಕಾಗುವುದಿಲ್ಲ ಇವತ್ತು ಮೊದಲು ನಮ್ಮ ರಾಜ್ಯದ ಮುಖ್ಯಮಂತ್ರಿಗಳೇನು ಪ್ರಸ್ತಾಪ ಮಾಡಿದ್ದಾರೆ, ಕರ್ನಾಟಕ ರಾಜ್ಯದ ಎಲ್ಲಾ 128 ತಾಲ್ಲೂಕುಗಳಲ್ಲಿ ಬರ ಪರಿಸ್ಥತಿ ಉದ್ಭವವಾಗಿದೆ, ಕೇಂದ್ರ ಸರ್ಕಾರ ರಾಜ್ಯದ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ, ಕೇಂದ್ರದಿಂದ ಇನ್ನು ನಮಗೆ ಹಣ ಬರುತ್ತಿಲ್ಲವೆನ್ನುವ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ ಕೇಂದ್ರ ಗೃಹ ಸಚಿವರಾದ ಶ್ರೀ ಶಿವರಾಜ್ ಪಾಟೀಲರಿಗೆ ಬರಪರಿಸ್ಥಿತಿಯ ಬಗ್ಗೆ ವಿಶೇಷವಾದ ಜವಾಬ್ದಾರಿಯನ್ನು ಕೂಡ ಪ್ರಧಾನ ಮಂತ್ರಿಗಳು ಕೊಟ್ಟಿದ್ದಾರೆ ಆವಾಗ ಶಿವರಾಜ್ ಪಾಟೀಲ್‌ರವರು ಕೂಡ ಕರ್ನಾಟಕ ರಾಜ್ಯಕ್ಕೆ ಬಂದಿದ್ದರು ನಾನು, ಮಾನ್ಯ ಉಪ ಮುಖ್ಯಮಂತ್ರಿಗಳು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಕಂದಾಯ ಮಂತ್ರಿಗಳು ಹಾಗೂ ಕೃಷಿ ಮಂತ್ರಿಗಳು ಕೂಡ ಜೊತೆಯಲ್ಲಿದ್ದರು ವೈಮಾನಿಕ ಸರ್ವೆ ಮಾಡುವ ಕಾಲದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳು ಬಳ್ಳಾರಿಯಲ್ಲಿ ಏನೊ ಸಭೆ ಇದೆ ಎಂದು ಹೋದರು ರಾಜ್ಯದಲ್ಲಿ ಗಂಭೀರವಾದಂತಹ ಬರಪರಿಸ್ಥತಿ ಬಂದಿದೆಯೆಂದು ಜವಾಬ್ದಾರಿಯುತ ಸ್ಥಾನದಲ್ಲಿರುವ ಕೇಂದ್ರ ಗೃಹ ಸಚಿವರು ರಾಜ್ಯಕ್ಕೆ ಬರುತ್ತಾರೆ, ವೈಮಾನಿಕ ಸರ್ವೆ ಮಾಡುವ ಸಮಯದಲ್ಲಿ, ಗೃಹ ಸಚಿವರ ಜೊತೆಯಲ್ಲಿ ಸಮಾಲೋಚನೆ ಮಾಡುವ ಸಮಯದಲ್ಲಿ ಅವರಿರಬೇಕಾಗಿತ್ತು, ಬಳ್ಳಾರಿಯಲ್ಲೇನು ಅತಿ ದೊಡ್ಡ ಕಾರ್ಯಕ್ರಮವಿರಲಿಲ್ಲ ಕೊನೆಯದಾಗಿ ಮೂರನೇ ಮಹಡಿಯಲ್ಲಿ ಸಭೆ ನಡೆಯಿತು, ಮಾನ್ಯ ಮುಖ್ಯ ಮಂತ್ರಿಗಳು ಕೂಡ ಬಂದರು ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಬಿತ್ತನೆಯಾಗಿಲ್ಲ, ಉತ್ತರ ಕರ್ನಾಟಕದ ಬಹಳಷ್ಟು ಕಡೆ ಬರದ ಛಾಯೆ ಇದೆ ಎಂಬುದು ಶಿವರಾಜ್ ಪಾಟೀಲ್‌ರವರಿಗೆ ಮನವರಿಕೆಯಾಯಿತು ಎಷ್ಟು ಹಣಬೇಕೆಂದು ನಾವು ಸಮಾಲೋಚನೆ ಮಾಡತಕ್ಕಂತ ಕಾಲದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ 100 ಕೋಟಿ ರೂಪಾಯಿಗಳು ಕೊಟ್ಟರೆ ಸಾಕು ಎಂದು ಅವರ ಮನಸ್ಸಿನಲ್ಲಿತ್ತು ಆದರೆ ನಾವು ಗೃಹ ಸಚಿವರ ಮೇಲೆ ಒತ್ತಡ ತಂದಿದ್ದೇವೆ, ಅವರು 250 ಕೋಟಿ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದ್ದಾರೆ ಇವತ್ತು ಕೇಂದ್ರದ ಸಿಅರ್‌ಎಫ್‌ನಿಂದಲೂ ಕೂಡ 113 ಕೋಟಿ ರೂಪಾಯಿಗಳು ಬಂದಿದೆ ಒಟ್ಟಾರೆ ಹಣ ಬಂದ ಮೇಲೆ, ಸರ್ಕಾರದ ಮೇಲೆ ಆರೋಪ ಮಾಡಿ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಏತಕ್ಕೆ ಎಂದು ಹೇಳುತ್ತಿದ್ದೀರಲ್ಲ, ಸರ್ಕಾರದ ಮೇಲೆ ಗಂಭೀರವಾದ ಆರೋಪ ಏನಿದೆ ಎಂದರೆ, ಕೇಂದ್ರದಿಂದ ಬಂದಂತಹ ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತಾವು ಸ್ವೀಕಾರ ಮಾಡಿದ್ದೀರೆಂದು ಹೇಳಿದ ಮೇಲೆ, ಅವರು ಇದರ ಎಲ್ಲಾ ವಿವರಗಳನ್ನು ಹೇಳಲಿ ಸರ್

ಶ್ರೀ ಎನ್ ಧರ್ಮ್‌ಸಿಂಗ್ ಮಾನ್ಯ ಅಧ್ಯಕ್ಷರೆ, ವಿವರವನ್ನು ಏತಕ್ಕೆ ಹೇಳಬೇಕಾಗಿತ್ತೆಂಬುದು ತಮಗು ಕೂಡ ಗೊತ್ತು, ಇಲ್ಲಿಂದ ಮಾತನಾಡಿದ್ದೀರಿ, ಅಲ್ಲಿಂದ ಮಾತನಾಡಿದ್ದೀರಿ, ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದೀರಿ ಇವತ್ತು ಅಧ್ಯಕ್ಷರಿಗೆ ಏನು ಹೇಳುತ್ತಿದ್ದೇವೆಂದರೆ, ನಾವು ಗಂಭೀರವಾದ ಆರೋಪವನ್ನು ಸರ್ಕಾರದ ಮೇಲೆ ಮಾಡುತ್ತಿದ್ದೇವೆ, ಅದಕ್ಕೆ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು Government has utterly failed ಇವತ್ತು ಏನಾಗಿದೆ ಎಂದರೆ, ಮನಮೋಹನ್ ಸಿಂಗ್ ಮತ್ತು ಶರದ್ ಪವಾರ್ ರವರು ವಿದರ್ಭಕ್ಕೆ ಬಂದರು, ವಿದರ್ಭ ಪ್ಯಾಕೇಜ್ ಇದೆ, ಈ ಎಲ್ಲಾ ಹಣವನ್ನು ನೀವು ಖರ್ಚು ಮಾಡಿಲ್ಲವೆನ್ನುವ ರೀತಿಯಲ್ಲಿ, ಚರ್ಚೆ ರೂಪದಲ್ಲಿ ಅಲ್ಲ, ಗಂಭೀರವಾದ ಆರೋಪವನ್ನು ಇವತ್ತು ನಾವು ಮಾಡುತ್ತಿದ್ದೇವೆ, ಅದಕ್ಕೆ ತಾವು ಅನುಮತಿ ಕೊಡಬೇಕು ಎಂದು ಕೇಳತಕ್ಕತಂತಹ ರೀತಿಯಲ್ಲಿ ನಾನು ಪೀರಿಕೆಯಲ್ಲಿ ಮಾತನಾಡುತ್ತಿದ್ದೇನೆ ಇದಕ್ಕೆ ಅನುಮತಿಯನ್ನು ಕೊಟ್ಟರೆ ಚರ್ಚೆಯಲ್ಲಿ ನಮ್ಮ ಹಿರಿಯ ಸದಸ್ಯರೆಲ್ಲರು ಭಾಗವಹಿಸುತ್ತಾರೆ ಅದಕ್ಕೆ ನಾವು ಸದನದಲ್ಲಿ ಗಭೀರವಾದ ಆರೋಪ ಮಾಡುತ್ತಿದ್ದೇವೆ ಆರೋಪ ಏತಕ್ಕೆ ಮಾಡುತ್ತಿದ್ದೇವೆಂದರೆ, ಇವತ್ತು ಏನು ಕೆಲಸಕಾರ್ಯಗಳು ನಡೆಯುತ್ತಿಲ್ಲ ನಾನು ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿದ್ದೇನೆ ರಾಜ್ಯದ ಮುಖ್ಯ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಅಧಿಕಾರಿಯವರಿಗೆ ನಾನು ಪತ್ರವನ್ನು ಬರೆದಿದ್ದೇನೆ, ಇವತ್ತು ಬರಪರಿಸ್ಥಿತಿಯ ಬಗ್ಗೆ ಏನು ಕೆಲಸ ಮಾಡಿದ್ದಾರೆನ್ನುವ ಬಗ್ಗೆ ಒಬ್ಬರು ಉತ್ತರವನ್ನು ಕೊಡುತ್ತಿಲ್ಲ, ಅಂಜುತ್ತಿದ್ದೀರಿ ನಾನು ಮುಖ್ಯ ಮಂತ್ರಿಯಾಗಿದ್ದೆ, ತಾವು ಉಪ ಮುಖ್ಯಮಂತ್ರಿಯಾಗಿದ್ದೀರಿ, ಸಿದ್ಧರಾಮಯ್ಯನವರು ಕೂಡ ಉಪ ಮುಖ್ಯಮಂತ್ರಿಯಾಗಿದ್ದರು ಎಂದೂ ಕೂಡ ವಿರೋಧಪಕ್ಷದವರಿಗೆ ಎಲ್ಲಾ ರೀತಿಯ ಮಾಹಿತಿ ಕೊಡುವುದಕ್ಕೆ ಅಡ್ಡಬಂದಿಲ್ಲ ಇದು ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಇನ್ನು ಕೂಡ ಕಂದಾಯ ಮಂತ್ರಿಗಳಿಂದ ಉತ್ತರ ಬರುತ್ತಿಲ್ಲ ಅಲ್ಲಿ ನಿಖರವಾಗಿ ಮಾಹಿತಿಯನ್ನು ಕೊಡಲೇಬಾರದೆನ್ನುವ ರೀತಿಯಲ್ಲಿ ಹೇಳಿದ್ದಾರೆ ಇವತ್ತು ಯಾರಿಗಾದರು ಬಂದಿದೆಯೇ? ನೀವು

(ವಾಟಾಳ್ ನಾಗರಾಜ್) ಪತ್ರ ಬರೆದಿದ್ದೀರಾ, ಮಾಹಿತಿ ಬಂದಿದೆಯೇ? ಮಾನ್ಯ ವಾಟಾಳ್ ನಾಗರಾಜ್ ರವರು ಪತ್ರ ಬರೆಯುವುದಕ್ಕು ಹೋಗುವುದಿಲ್ಲ ಕೇಳುವುದಕ್ಕು ಹೋಗುವುದಿಲ್ಲ ನನಗೆ ಇನ್ನು ಕಂದಾಯ ಕಾರ್ಯದರ್ಶಿಯವರಿಂದ ಮಾಹಿತಿ ಬಂದಿಲ್ಲ ಇವತ್ತು ಏನಾಗುತ್ತಿದೆ ಎಂದರೆ, ಕೇಂದ್ರದಿಂದ ಬಂದಂತಹ ಹಣ ಉಪಯೋಗವಾಗುತ್ತಿಲ್ಲ, ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಡನೆ ಸಮಾಲೋಚನೆ ನಡೆಯುತ್ತಿಲ್ಲ, ರಿವ್ಯೂ ಮೀಟಿಂಗ್ ಆಗುತ್ತಿಲ್ಲ ಪ್ರವಾಹಪೀಡಿತ ಪ್ರದೇಶಕ್ಕೆ ನಾವು ನೀವು ಕೂಡಿ ಮೂರು ಸಲ ಹೋಗಿ ಬಂದಿದ್ದೇವೆ, ಆವಾಗ ಕಳೆದ ಸಾರಿ 315 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಎಲ್ಲಾ ಹಣವನ್ನು 5 ಜಿಲ್ಲೆಗಳಿಗೆ ಖರ್ಚು ಮಾಡಿದ್ದೇವೆ ಇವತ್ತು ಒಂದು ಕಡೆ ಕೂಡ ಕೆಲಸವಾಗುತ್ತಿಲ್ಲ, ನೀವು ಎಲ್ಲಾ ಕಡೆ, ನಾವು ತಯಾರಾಗಿದ್ದೇವೆಂದು ಹೇಳಿಕೊಳ್ಳುತ್ತಾ ಹೋಗುತ್ತಿದ್ದೀರಿ, ನಿಮ್ಮ ವ್ಯವಹಾರಗಳನ್ನು ಯಾರು ಬಗೆಹರಿಸುವುದಕ್ಕಾಗುವುದಿಲ್ಲ ದಿವಸವು ಮಾನ್ಯ ಕುಮಾರಸ್ವಾಮಿ, ಯಡಿಯೂರಪ್ಪನವರು ಏನು ಹೇಳಿಕೆಯನ್ನು ಕೊಡುತ್ತಾರೆ, ಆ ದ್ವಂದ್ವ ಹೇಳಿಕೆಯಿಂದ ಇವತ್ತು ಜನರು ಬೇಸತ್ತು ಹೋಗಿದ್ದಾರೆ ನಾನು ಅದನ್ನು ಪ್ರಶ್ನಿಸಲು ನಿಂತಿಲ್ಲ, ಅದರಿಂದ ನೀವು ಜನಾಭಿಪ್ರಾಯವನ್ನು ಮೂಡಿಸುವುದಕ್ಕಾಗುವುದಿಲ್ಲ, ಚುನಾವಣೆ ಬಂದಾಗ ನೋಡುತ್ತೇವೆ ಎನ್ನುವ ರೀತಿಯಲ್ಲಿ ನೀವು ಹೇಳುವುದಕ್ಕಾಗುವುದಿಲ್ಲ ನಾವೇನು ಕೇಳುತ್ತಿದ್ದೇವೆಂದರೆ, ಇವತ್ತು ಜನರ ಸಹಾಯಕ್ಕೆ ಬನ್ನಿ, ರೈತರ ಸಹಾಯ ಕ್ಕೆ ಬನ್ನಿ ರೈತರ ಸಮಸ್ಯೆಗಳನ್ನು ಬಗೆಹರಿಸತಕ್ಕಂತಹ ರೀತಿಯಲ್ಲಿ ನಮ್ಮ ಸರ್ಕಾರ ಎಲ್ಲಾ ದೃಷ್ಟಿಯಿಂದ ಸಹಾಯ ಮಾಡುತ್ತದೆ ಎನ್ನುವ ರೀತಿಯಲ್ಲೇನು ಬೆನ್ನನ್ನು ತಟ್ಟಿಕೊಳ್ಳುತ್ತಿದ್ದೀರಲ್ಲ, ಇವತ್ತು ತಾವು ಯಾವ ಕೆಲಸವನ್ನೂ ಕೂಡ ಕರ್ನಾಟಕ ರಾಜ್ಯದಲ್ಲಿ ಮಾಡುತ್ತಿಲ್ಲ ಹಣವನ್ನು ಕೂಡ ಬಿಡುಗಡೆ ಮಾಡುತ್ತಿಲ್ಲ, ಅದಕ್ಕೆ ನಾವು ನಿಲುವಳಿ ಸೂಚನೆಯ ಮುಖಾಂತರ ಈ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು, ಅಧ್ಯಕ್ಷರು ನಮಗೆ ಅನುಮತಿಯನ್ನು ಕೊಟ್ಟರೆ ಪೂರ್ಣ ಪ್ರಮಾಣದ ವಿವರವನ್ನು ಈ ಬಗ್ಗೆ ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇವೆ ಅದಕ್ಕೆ ಇವತ್ತು ಚರ್ಚೆಯಾಗಬೇಕು, ಚರ್ಚೆಯಾಗದೆ ಯಾರಿಗೆ ಹೇಳಬೇಕು? ತಾವು ಕೂಡ [ಎಂ ಪಿ ಪ್ರಕಾಶ್] ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೀರಿ ಏನೋ ಅಕಸ್ಮಾತ್ ಆಗಿ ತಾವು ಇವತ್ತು ಗೃಹ ಸಚಿವರು ಮತ್ತು ಸಂಸದೀಯ

3 30 PM

ವ್ಯವಹಾರಗಳ ಸಚಿವರಾಗಿದ್ದೀರಿ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ

ಶ್ರೀ ಎಂ ಪಿ ಪ್ರಕಾಶ್ ಆಗಲೂ ಆಕಸ್ಮಿಕವಾಗಿ ಉಪ ಮುಖ್ಯಮಂತ್ರಿಯಾಗಿದ್ದೆ ಮಾನ್ಯ ಸಿದ್ದರಾಮಯ್ಯನವರು ಹೊರಗೆ ಹೋಗದಿದ್ದರೆ ಆಗಲೂ ಚಾನ್ಸ್ ಸಿಗುತ್ತಿರಲಿಲ್ಲ

ಶ್ರೀ ಎಸ್ ಸಿದ್ದರಾಮಯ್ಯ ನಾನು ನಿಮಗೆ ಉಪ ಮುಖ್ಯ ಮಂತ್ರಿ ಪಟ್ಟ ಸಿಗಲೆಂದೇ ಹೊರಗಡೆ ಹೋಗಿದ್ದು

ಶ್ರೀ ಎನ್ ಚೆಲುವರಾಯಸ್ವಾಮಿ ಮಾನ್ಯ ಅಧ್ಯಕ್ಷರೆ, 2004ರ ನಂತರ ಎಲ್ಲಾ ಆಕಸ್ಮಿಕವಾಗಿಯೇ ಆಗುತ್ತಿರುವುದು 120ಕ್ಕೂ ಹೆಚ್ಚು ಸೀಟ್ ಯಾರೂ ತೆಗೆದುಕೊಳ್ಳದೆ ಇರುವುದರಿಂದ 2004 ರಚುನಾವಣೆ ನಂತರ ಎಲ್ಲ ಆಕಸ್ಮಿಕವಾಗಿಯೇ ಆಗುತ್ತಿರುವುದು

(ಗೊಂದಲ)

ಶ್ರೀ ಎನ್ ಚೆಲುವರಾಯ ಸ್ವಾಮಿ ನೀವು ಎರಡೂ ಕಡೆಯೂ ಇದ್ದೀರಿ ನನ್ನ ಕಾಲದಲ್ಲಿಯೂ ಇದ್ದಿರಿ, ಈಗಲೂ ಇದ್ದೀರಿ ನೀವು ಬಹಳ ನಿಪುಣರಾಗಿದ್ದೀರಿ

(ಗೊಂದಲ)

ಶ್ರೀ ಎನ್ ಚೆಲುವರಾಯ ಸ್ವಾಮಿ ನಿಮ್ಮ ಹತ್ತಿರವೇ ಕಲಿತದ್ದು ನಾನು

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾದಾಗ ನೀವು ಮಂತ್ರಿಯಾಗಿ ಇರುತ್ತೀರಾ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಪ್ರಕಾಶ್ ಆ ವಿಚಾರದಲ್ಲಿ ಮೌನ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುವುದು ನಿಜವೇ?

ಶ್ರೀ ಎಸ್ ಸಿದ್ದರಾಮಯ್ಯ ಮಾನ್ಯ ಪ್ರಕಾಶ್ ಹೇಳುವುದಕ್ಕಾಗುವುದಿಲ್ಲ ಅಗ್ರಿಮೆಂಟ್ ಆದಾಗ ಪ್ರಕಾಶ್ ಇರಲಿಲ್ಲ

ಶ್ರೀ ಎನ್ ಚೆಲುವರಾಯಸ್ವಾಮಿ ಮಾನ್ಯ ಯಡಿಯೂರಪ್ಪನವರಿಗೆ ಖಂಡಿತ ಮುಖ್ಯಮಂತ್ರಿ ಮಾಡುತ್ತೇವೆ ನೀವು ಬೇಜಾರು ಮಾಡಿಕೊಳ್ಳಬೇಡಿ

ಶ್ರೀ ವಾಟಾಳ್ ನಾಗರಾಜ್ ನಮಗೇಕೆ ಬೇಜಾರಾಗುತ್ತದೆ, ನಮಗೆ ಖುಷಿ ಈಗ ಆಗುತ್ತೀರೋ ಇಲ್ಲವೋ ಎನ್ನುವ ಅನುಮಾನ

ಶ್ರೀ ಎನ್ ಧರ್ಮ್‌ಸಿಂಗ್ ಸುಮ್ಮನೆ ಹುಡುಗಾಟಿಕೆ ಮಾತನ್ನು ಏಕೆ ಹೇಳುತ್ತಿದ್ದೀರಿ, ಮಾನ್ಯ ಯಡಿಯೂರಪ್ಪನವರಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ

ಮಾಡುವುದಕ್ಕೆ ಬಿಡುವುದಿಲ್ಲ ಅದಕ್ಕೆ ಎರಡು ಗ್ರಹಗಳಿವೆ ಅವು ಯಾವುವು ಎಂದು ಸಮಯ ಬಂದಾಗ ಹೇಳುತ್ತೇನೆ ನಾನು ಗುಲ್ಬರ್ಗದಲ್ಲಿ ಹೇಳಿದ್ದೇನೆ ಎರಡು ಗ್ರಹಗಳು ಎಂದೂ ಯಡಿಯೂರಪ್ಪನವರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗುವುದಕ್ಕೆ ಅವಕಾಶ ಕೊಡುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದು ಬುಧ ಗ್ರಹನೋ ಶುಕ್ರ ಗ್ರಹನೋ ಎಂದು ಹೇಳಿದರೆ ಸರಿ ಹೋಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಧರ್ಮ್‌ಸಿಂಗ್‌ರವರು ಗ್ರಹಗಳ ಬಗ್ಗೆ ಬಹಳ ಚೆನ್ನಾಗಿ ಹೇಳಿದರು ಯಾವ ಗ್ರಹ ಎಂದು ಹೇಳಿದರೆ ಚೆನ್ನಾಗಿ ಇರುತ್ತದೆ

ಅಧ್ಯಕ್ಷರು ಬರದ ಬಗ್ಗೆ ಮಾತನಾಡಲಿ ಬಿಡಿ ಬರ ಮರೆತೇ ಬಿಟ್ಟಿರಲ್ಲ ರೈತರ ಬರ ಮರೆತು ಎಲ್ಲಿಗೋ ಹೋಗಿದ್ದೀರಿ

ಶ್ರೀ ವಾಟಾಳ್ ನಾಗರಾಜ್ ಗುಲ್ಬರ್ಗದಲ್ಲಿ ಗ್ರಹಗಳ ಬಗ್ಗೆ ನೀವು ಹೇಳಿದ ಮೇಲೆ ಇಲ್ಲಿಯೂ ಹೇಳಿ

ಶ್ರೀ ಎನ್ ಧರ್ಮ್‌ಸಿಂಗ್ ಮಾನ್ಯ ಅಧ್ಯಕ್ಷರೆ, ನಾನೇನು ನಿಲುವಳಿ ಸೂಚನೆ ತರುತ್ತಿದ್ದೇನೆ, ಇನ್ನೂ ಕೂಡ ನಾಯಕರು ಇದರ ಬಗ್ಗೆ ಮಾತನಾಡುವವರಿದ್ದಾರೆ ಇದು ಒಂದು ದೀರ್ಘವಾದ ಚರ್ಚೆ ಕೇಂದ್ರದಿಂದ ಬರತಕ್ಕಂತಹ ಹಣವನ್ನು ಎಷ್ಟರ ಮಟ್ಟಿಗೆ ಖರ್ಚು ಮಾಡುತ್ತಿದ್ದಾರೆ, ವಿಧರ್ಭ ಪ್ಯಾಕೇಜ್‌ನಲ್ಲಿ 2689ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ ಈ ಸರ್ಕಾರ ಬಂದ ಮೇಲೆ 172 ರೈತರ ಆತ್ಮಾಹುತಿ ಆಗಿದೆ ಜನವರಿ ತಿಂಗಳಲ್ಲಿ ಕೂಡ 30 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಇದರ ಬಗ್ಗೆ ಇವತ್ತಿನದಿವಸ ಕೆಲಸಕಾರ್ಯಗಳು ಆಗಬೇಕಾಗಿದೆ ನಾನು ಇವತ್ತು ಕಂದಾಯ ಮಂತ್ರಿಗಳ ಮೇಲೆ ನೇರವಾಗಿ ಆಕ್ಷೇಪಣೆ ಮಾಡುತ್ತಿಲ್ಲ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ನಿಮ್ಮ ಆದೇಶವನ್ನು ಕರ್ನಾಟಕ ರಾಜ್ಯದ ಅಧಿಕಾರಿಗಳು ಯಾರೂ ಕೂಡ ಪಾಲನೆ ಮಾಡುತ್ತಿಲ್ಲ ಜಿಲ್ಲಾಧಿಕಾರಿಗಳು ಆದೇಶಗಳನ್ನು ಪಾಲನೆ ಮಾಡುತ್ತಿಲ್ಲ ಉದ್ಯೋಗ ಭರವಸೆ ಯೋಜನೆಯಲ್ಲಿ ಕಮಿಟ್‌ಮೆಂಟ್ ಇಲ್ಲ ನನ್ನ ಜೇವರ್ಗಿ ತಾಲ್ಲೂಕಿನಲ್ಲಿ 14,000 ಜನ ರೈತರು ಕೆಲಸ ಮಾಡಿದ್ದಾರೆ There they have spent Rs 2 crore ಪ್ರತಿಯೊಂದು ತಾಲ್ಲೂಕಿನಲ್ಲಿ ಉದ್ಯೋಗ ಭರವಸೆ ಯೋಜನೆ ಇದೆ ಎಲ್ಲ ಯೋಜನೆಗಳಿಗೂ ಕೇಂದ್ರ ಸರ್ಕಾರದಿಂದ ಹಣ ಬರುತ್ತಿದೆ Employment Guarantee Scheme ಏನಿದೆ ಇಡೀ ರಾಷ್ಟ್ರದಲ್ಲಿ

ಶ್ರೀ ಮನಮೋಹನ್ ಸಿಂಗ್‌ರವರು ಮತ್ತು UPA chairman ಆದ ಶ್ರೀಮತಿ ಸೋನಿಯಾ ಗಾಂಧಿಯವರು ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಒತ್ತು ಕೊಟ್ಟು ಹಣ ಕೊಟ್ಟಿದ್ದಾರೆ ಇಂತಹ ಹಣ ಉಪಯೋಗ ಮಾಡತಕ್ಕಂತಹ ರೀತಿಯಲ್ಲಿ ಸರ್ಕಾರ you have failed in all this ಸುಮ್ಮನೆ ನೀವು ಪತ್ರಿಕೆ ಮುಖಾಂತರ ಭಾಷಣಗಳನ್ನು ಮಾಡುತ್ತಿದ್ದೀರಿ ಇವತ್ತು ಜನಾಭಿಪ್ರಾಯ ಪಡೆದ ಸರ್ಕಾರ ಕರ್ನಾಟಕ ರಾಜ್ಯದಲ್ಲಿಲ್ಲ ಬದ್ದತೆ ಇಲ್ಲ ಯಾವುದಾದರೂ ಸರ್ಕಾರಕ್ಕೆ ಈ ರಾಜ್ಯದಲ್ಲಿರತಕ್ಕಂತಹ ಬಡವರಿಗೆ ಸಹಾಯ ಮಾಡತಕ್ಕಂಥದ್ದು, You must have that commitment ಅಧಿಕಾರಿಗಳು ಕೂಡ ಅದೇ ರೀತಿಯಿಂದ ಕಮಿಟ್‌ಮೆಂಟ್‌ನಿಂದ ಕೆಲಸ ಮಾಡಬೇಕಾಗುತ್ತದೆ ಅದು ಆಗುತ್ತಿಲ್ಲ ನಾನು ವಿವರಗಳಿಗೆ ಹೋಗುವುದಕ್ಕೆ ಇಚ್ಛೆ ಪಡುವುದಿಲ್ಲ ಇವತ್ತು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಇದಕ್ಕೆ ತಾವು ಒಪ್ಪಿ, ಇದರ ಬಗ್ಗೆ ಚರ್ಚೆಯಾಗಲಿ, ಚರ್ಚೆಗೆ ಸರ್ಕಾರದಿಂದ ಸರಿಯಾದ ರೀತಿಯಲ್ಲಿ ಉತ್ತರ ಸಿಗಲಿ, ಮತ್ತು ರಾಜ್ಯದ ಜನತೆಗೆ ಸರ್ಕಾರದ ಕೆಲಸಕಾರ್ಯಗಳ ವೈಖರಿ ತಿಳಿಸತಕ್ಕಂತಹ ಪ್ರಯತ್ನವನ್ನು ಕೂಡ ಮಾಡಬೇಕಾಗಿದೆ ತಾವು ಇದಕ್ಕೆ ಪರವಾನಗಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ ತಾವು ಪರವಾನಗಿ ಕೊಟ್ಟರೆ ನಾವು ನಮ್ಮ ವಿಚಾರಗಳನ್ನು ತಮ್ಮ ಮುಂದಿಡುತ್ತೇವೆ ಇದನ್ನು ತಳ್ಳಿ ಹಾಕಿ ಬೇರೆ ಯಾವುದೇ ರೂಪದಲ್ಲಿ ಪರಿವರ್ತನೆ ಮಾಡಿ ತರಬಾರದು, ನಿಲುವಳಿ ಸೂಚನೆ ಮುಖಾಂತರ ಇವತ್ತು ಸದನದಲ್ಲಿ ಚರ್ಚೆಯಾಗಬೇಕೆಂದು ವಿನಂತಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅದ್ಯಕ್ಷರೆ, ಬಹಳ ಗಂಭೀರವಾದಂತಹ ವಿಷಯವನ್ನು, With regard to the admissibility itself I am representing for that ಅವರ ಮನವೊಲಿಸುತ್ತೀರಾ?

ಶ್ರೀ ಕೆ ಆರ್ ರಮೇಶ್ ಕುಮಾರ್ ಹೌದು, Exactly Sir, the practice is, couple of us, we make the submission

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, Without going into the merits of the Motion, if you are trying to convince him to accept this particular Adjournment Motion, I have no objection ನಿಮ್ಮ ಲೀಡರ್ ಹೇಳಿರುವುದರಿಂದ ತಾವು ಮಾತನಾಡುವುದಿಲ್ಲವೆಂದು ತಿಳಿದಿದ್ದೆ ಯಾರ್‍ಯಾರು ಸಹಿ ಹಾಕಿರುತ್ತಾರೆ ಅವರು ಚರ್ಚೆಯಲ್ಲಿ ಭಾಗವಹಿಸುತ್ತಾರೆ

ಶ್ರೀ ಆರ್ ವಿ ದೇಶಪಾಂಡೆ ತಾವು Adjournment Motionಗೆ ಒಪ್ಪಿಕೊಂಡರೆ ಅಡ್ಡಿ ಇಲ್ಲ

ಶ್ರೀ ಎಸ್ ಸಿದ್ದರಾಮಯ್ಯ ನೀವು ಒಪ್ಪಿಕೊಂಡರೆ ಯಾರೂ preliminary submission ಮಾಡುವ ಅವಶ್ಯಕತೆ ಇಲ್ಲ

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷದ ನಾಯಕರು preliminary submission ಮಾಡಿದ್ದಾರೆ ಇನ್ನು ಒಬ್ಬರು ಇಬ್ಬರು ಮಾತನಾಡಿ ನಿಯಮಾವಳಿಗಳಲ್ಲಿ ಮೂರು ಜನರಿಗೆ ಅವಕಾಶ ಕೊಡಬೇಕೆಂದು ಇದೆ ಇನ್ನಿಬ್ಬರು ಮಾತನಾಡಿ, just convince me

ಶ್ರೀ ಆರ್ ವಿ ದೇಶಪಾಂಡೆ(ಹಳಿಯಾಳ) ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಈ ನಿಲುವಳಿ ಸೂಚನೆಯನ್ನು ಏಕೆ ತರಬೇಕೆಂಬ ಬಗ್ಗೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ತಮ್ಮ ಮಾತು ನೋಡಿದರೆ ತಾವು ಕನ್‌ವಿನ್ಸ್ ಆದ ಹಾಗೆ ಕಾಣುತ್ತಿದೆ ಮುಖ್ಯವಾಗಿ ಬರಗಾಲ ಈ ರಾಜ್ಯಕ್ಕೆ ಹೊಸದೇನೂ ಅಲ್ಲ ಅತೀವೃಷ್ಟಿಯೂ ಸಹ ರಾಜ್ಯಕ್ಕೆ ಹೊಸದಲ್ಲ ಪ್ರತಿ ವರ್ಷ ರಾಜ್ಯದ ಕೆಲವು ಭಾಗಗಳಲ್ಲಿ ಅತೀವೃಷ್ಟಿ ಆಗುತ್ತದೆ, ಬರಗಾಲ ಬರುತ್ತದೆ ಆದರೆ ಇವತ್ತು ದುರ್ದೈವದಿಂದ ಒಂದು ಕಡೆ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಹೇಳುತ್ತಾರೆ, ನಮ್ಮಲ್ಲಿ ಹಣದ ಕೊರತೆ ಇಲ್ಲ, ಎಷ್ಟು ಬೇಕು ಅಷ್ಟು ಹಣ ಕೊಡುತ್ತೇವೆಂದು ಒಂದು ಕಡೆ ಹೇಳುತ್ತಾರೆ ಮತ್ತೊಂದು ಕಡೆ ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುತ್ತಾರೆ, ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಹೇಳುತ್ತಾರೆ ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುವುದು Central Calamity Relief Fund ನಿಂದ ನಮ್ಮ 12ನೇ ಹಣಕಾಸಿನ ಆಯೋಗದ ನಿರ್ಧಾರದ ಪ್ರಕಾರ ಕರ್ನಾಟಕಕ್ಕೆ 124ಕೋಟಿ ರೂಪಾಯಿಗಳು ಬರಬೇಕು ಅದರಲ್ಲಿ ಶೇಕಡ 75ರಷ್ಟು ಭಾಗ ಕೇಂದ್ರ ಸರ್ಕಾರ ಕೊಡುತ್ತದೆ, 25 ಭಾಗ ರಾಜ್ಯ ಸರ್ಕಾರ ಕೊಡಬೇಕು ಈ ಹಣ ಅಕ್ಟೋಬರ್ 2000 ರಲ್ಲಿ ಹಣ ಬಂದಿದೆ ಅಂದಾಜು 92 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದರ ನಂತರ ಮತ್ತೊಂದು National Calamity Contingency Fund ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಸಹ ದೆಹಲಿಗೆ ಹೋಗಿ ಬಂದರು, ನಮ್ಮ ಪಕ್ಷದ ಅಧ್ಯಕ್ಷರಾದ ಖರ್ಗೆ ಸಾಹೇಬರು, ವಿರೋಧ

ಪಕ್ಷದ ನಾಯಕರಾದ ಮಾನ್ಯ ಧರ್ಮ್‌ಸಿಂಗ್‌ರವರು ಸಹ ದೆಹಲಿಗೆ ಹೋಗಿ ಕೇಂದ್ರ ಸರ್ಕಾರಕ್ಕೆ ಕನ್‌ಫಿನ್ಸ್ ಮಾಡಿ ಕೇಂದ್ರ ಸರ್ಕಾರದಿಂದ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು National Calamity Contingency Fund ಏನಿದೆ ಅದು ಕೇಂದ್ರ ಸರ್ಕಾರದ ಡಿಸ್ಕ್ರಿಷನ್ ಆದರೆ ಇಲ್ಲಿಯ ಅತೀವೃಷ್ಟಿ ಮತ್ತು ಬರಗಾಲದ ಗಂಭೀರತೆಯನ್ನು ನೋಡಿಕೊಂಡು ಕೇಂದ್ರ ಸರ್ಕಾರದವರು 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು ಅದರಲ್ಲಿ 226 ಕೋಟಿ NCCFನಿಂದ ಕೊಟ್ಟರು Advance ಆಗಿ ಪುನ CRFನಲ್ಲಿ ಸುಮಾರು 24 ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟರು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಒಟ್ಟು 374 ಕೋಟಿ ರೂಪಾಯಿಗಳು ಬಂದಿವೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಗೃಹ ಸಚಿವರು ಮಾನ್ಯ ಕಂದಾಯ ಸಚಿವರು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ ಗಾಂಭೀರ್ಯತೆ ಇದೆ ರೈತರು ಕಷ್ಟದಲ್ಲಿದ್ದಾರೆ ವಿದ್ಯುಚ್ಛಕ್ತಿ ಇಲ್ಲ ರಸ್ತೆಗಳು ಹಾಳಾಗಿವೆ, ಕುಡಿಯುವುದಕ್ಕೆ ನೀರಿಲ್ಲ, ಆದರೆ ultimately ಏನಾಗಿದೆ, ಕೇಂದ್ರ ಸರ್ಕಾರದಿಂದ 374 ಕೋಟಿ ರೂಪಾಯಿಗಳು ಬಿಡುಗಡೆ ಆದರೂ ಸಹ ರಾಜ್ಯ ಸರ್ಕಾರದಿಂದ ಜನವರಿ 10ರವರೆಗೆ ಬಿಡುಗಡೆ ಆಗಿರುವ ಹಣ ಕೇವಲ 252 ಕೋಟಿ ರೂಪಾಯಿಗಳು ಮಾತ್ರ ಒಂದು ರೂಪಾಯಿ ಕೂಡ ರಾಜ್ಯ ಸರ್ಕಾರದವರು ಬಿಡುಗಡೆ ಮಾಡಿಲ್ಲ ಕೇಂದ್ರ ಸರ್ಕಾರದಿಂದ ಹಣ ಬಂತು ಆದರೂ ಅದೂ ಸಹ ಎಲ್ಲಾ ಹಣ ಬಿಡುಗಡೆಯಾಗಲಿಲ್ಲ ನಿನ್ನೆ ಮೊನ್ನೆ ತಾವು 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎಂದು ಗೊತ್ತಾಗಿದೆ ಹಾಗಾದರೂ ಸಹ ಟೋಟಲಿ 352 ಕೋಟಿ ರೂಪಾಯಿಗಳಾಗುತ್ತದೆ ಇನ್ನೂ ನಿಮ್ಮ ಕಡೆ 22 ಕೋಟಿ ರೂಪಾಯಿಗಳು ಉಳಿದಿವೆ ಒಂದು ಕಡೆ ಹಣ ಬಿಡುಗಡೆಯನ್ನು ನೀವು ಮಾಡಿದರೂ ಸಹ ಎಷ್ಟು ಹಣ ಖರ್ಚಾಗಿದೆ, ಎಷ್ಟು ಉದ್ಯೋಗಾವಕಾಶ ಸೃಷ್ಟಿಯಾಗಿದೆ, ಕುಡಿಯುವ ನೀರಿನ ಅಭಾವ ಎಷ್ಟು ಕಡೆ ಇತ್ತು ಮತ್ತು ಈಗ ಎಷ್ಟು ಕಡೆ ಕುಡಿಯುವ ನೀರಿನ ಅಭಾವ ಕಡಿಮೆಯಾಗಿದೆ, ಯಾರು ಇವುಗಳ ಬಗ್ಗೆಯೆಲ್ಲಾ ಮಾನೀಟರ್ ಮಾಡಿದ್ದಾರೆ ಹೇಳಿ ಮಾನ್ಯ ಖರ್ಗೆ ಸಾಹೇಬರು ಹಿಂದೆ ಕ್ಯಾಬಿನೆಟ್ ಸಬ್ ಕಮಿಟಿ ಛೇರ್ಮನ್ ಆಗಿದ್ದಾಗ ಆ ಕ್ಯಾಬಿನೆಟ್ ಸಬ್ ಕಮಿಟಿ ಇಡೀ ರಾಜ್ಯದ ಪೂರ್ತಿ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿಶಾಸಕರ ಜೊತೆ, ಜನ ಪ್ರತಿನಿಧಿಗಳ ಜೊತೆ, ರೈತರ ಜೊತೆ ಚರ್ಚೆ ಮಾಡಿ ಅಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಇಂಥಿಂಥ ಕೆಲಸಗಳನ್ನು ಮಾಡಬೇಕೆಂದು

ಆದೇಶವನ್ನು ಕೊಟ್ಟಿದ್ದರು ನಾನು ಈಗ ನಿಮ್ಮನ್ನು ಕೇಳಬಯಸುತ್ತೇನೆ ಮಾನ್ಯ ಗೃಹ ಸಚಿವರು ಅಧ್ಯಕ್ಷರಾಗಿರುವ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ತಾವು ಇದುವರೆಗೆ ಎಷ್ಟು ಕಡೆ ಹೋಗಿದ್ದೀರಿ? ಎಷ್ಟು ಜಿಲ್ಲೆಗಳಿಗೆ ತಾವು ಭೇಟಿಯನ್ನು ಕೊಟ್ಟಿರಿ? ಎಷ್ಟು ಜಿಲ್ಲೆಗಳಲ್ಲಿ ತಾವು ಜಿಲ್ಲಾಧಿಕಾರಿಗಳಿಗೆ ಈ ಪ್ರಕಾರವಾಗಿ ಕೆಲಸ ಮಾಡಬೇಕೆಂದು ಡೈರಕ್ಷನ್ಸ್ ಕೊಟ್ಟಿರಿ? ಯಾವುದೂ ಇಲ್ಲ ಏಕೆಂದರೆ ಸರ್ಕಾರದಲ್ಲಿ ಯಾವುದೇ ತರಹದ ಸೀರಿಯಸ್‌ನೆಸ್ ಇಲ್ಲವಾಗಿದೆ Drought ಬಿದ್ದರೆ ಬೀಳಲಿ, ಮಾನ್ಯ ಕಂದಾಯ ಸಚಿವರೆ, ತಾವು ನನಗೆ ಹೇಳಿ ಎಷ್ಟು ಜಿಲ್ಲೆಗಳಿಗೆ ತಾವು ಭೇಟಿ ಕೊಟ್ಟಿರಿ?

ಶ್ರೀ ಜಗದೀಶ್ ಶೆಟ್ಟರ್ ನಿಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದೆನಲ್ಲಾ

ಶ್ರೀ ಆರ್ ವಿ ದೇಶಪಾಂಡೆ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದೀರಿ ನಾನು ಇಲ್ಲ ಎಂದು ಹೇಳಲಿಲ್ಲ ತಾವು ಒಟ್ಟು ಎಷ್ಟು ಜಿಲ್ಲೆಗಳಿಗೆ ರಾಜ್ಯದಲ್ಲಿ ಭೇಟಿ ಕೊಟ್ಟಿರಿ ಎಂದು ಕೇಳುತ್ತಿರುವುದು ಅದಕ್ಕೆ ಉತ್ತರ ಕೊಡುವಾಗ ತಾವು ಹೇಳಬಹುದು ಉತ್ತರ ಕನ್ನಡ ಜಿಲ್ಲೆಗೆ ತಾವು ಬಂದಿಲ್ಲವೆಂದು ನಾನು ಹೇಳುತ್ತಿಲ್ಲ ಸರ್ಕಾರದಲ್ಲಿರುವ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಸಚಿವರು, ಕಂದಾಯ ಇಲಾಖಾ ಕಾರ್ಯದರ್ಶಿಗಳು ಎಷ್ಟು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ? ಎಷ್ಟು ಕಡೆ ರಿವ್ಯೂ ಆಗಿದೆ ಎಂಬ ಬಗ್ಗೆ ನಮಗೆ ಗೊತ್ತಾಗಬೇಕಲ್ಲ ಸರ್ಕಾರ ಏನು ಪ್ರೆಸ್ ಮುಖಾಂತರ ಸೀರಿಯಸ್‌ನೆಸ್ ಬಗ್ಗೆ, ರೈತರಿಗೆ ತೊಂದರೆ ಆಗಿರುವ ಬಗ್ಗೆ ಹೇಳುತ್ತಿದೆ ಅದು ನಿಜ ರೈತರಿಗೆ ತೊಂದರೆ ಆಗಿರುವುದು ನಿಜ ಆದರೆ ಅವುಗಳನ್ನು ಪರಿಹರಿಸಲು ಹಾಕಿಕೊಂಡಿರುವ ಯೋಜನೆ ಎಷ್ಟರ ಮಟ್ಟಿಗೆ ಕಾರ್ಯರೂಪದಲ್ಲಿ ತರಲು ನೀವು ಕ್ರಮವನ್ನು ತೆಗೆದುಕೊಂಡಿದ್ದೀರಿ? ಈ ಬಗ್ಗೆ ಏನು ನಿಮ್ಮ ಕಾರ್ಯಕ್ರಮ? ಕಳೆದ ಏಳೆಂಟು ತಿಂಗಳಲ್ಲಿ ಏನೇನು ನೀವು ಮಾಡಿದಿರಿ? ಮಾನಿಟರಿಂಗ್ ಇಲ್ಲಾ, ತಾವು ಹಣ ಬಿಡುಗಡೆ ಮಾಡುತ್ತೀರಿ, ನಾವು 25 ವರ್ಷದಿಂದ ಕೆಲಸ ಮಾಡುತ್ತಿದ್ದೇವೆ ತಾವು ಹಣ ಬಿಡುಗಡೆ ಮಾಡುವಾಗ ಕೆಲವೊಂದು ಪ್ರಿನ್ಸಿಪಲ್ಸ್ ಇರುತ್ತದೆ ಯಾವುದೇ ತಾಲ್ಲೂಕಿಗೆ ಅಥವಾ ಭಾಗಕ್ಕೆ ಹಣವನ್ನು ಬಿಡುಗಡೆ ಮಾಡುವಾಗ ಅಲ್ಲಿಯ ಪರಿಸ್ಥಿತಿ ಏನಿದೆ, ಅಲ್ಲಿಯ ಡ್ರಾಟ್ ಸೀರಿಯಸ್‌ನೆಸ್ ಏನಿದೆ, ಅಲ್ಲಿ ನಿರುದ್ಯೋಗಿ ಜನಗಳ ಸಂಖ್ಯೆ ಎಷ್ಟಿದೆ, ಅಲ್ಲಿ ಕೂಲಿಗಾರ ಜನರ ಸಂಖ್ಯೆ ಎಷ್ಟಿದೆ, ಅಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಗಂಭೀರ ಪರಿಸ್ಥಿತಿ ಹೇಗಿದೆ, ಇವುಗಳ ಬಗ್ಗೆಯೆಲ್ಲಾ ವಿಚಾರ ಮಾಡಬೇಕಾಗುತ್ತದೆ ಇದರ ಬಗ್ಗೆ ಏನೂ ವಿಚಾರ ಮಾಡೇ ಇಲ್ಲ 177

ತಾಲ್ಲೂಕುಗಳಿಗೂ ಅಡ್‌ಹಾಕ್ ಆಗಿ ಹಣ ಕೊಡುವುದು ಕೆಲವು ತಾಲ್ಲೂಕು ಸಣ್ಣದಾಗಿವೆ, ಕೆಲವು ತಾಲ್ಲೂಕುಗಳು ದೊಡ್ಡದಿವೆ, ಕೆಲವು ತಾಲ್ಲೂಕುಗಳಲ್ಲಿ ಹೆಚ್ಚು ಸೀರಿಯಸ್‌ನೆಸ್ ಜಾಸ್ತಿ ಇದೆ, ಎಲ್ಲಾ ತಾಲ್ಲೂಕುಗಳಲ್ಲೂ ಸೀರಿಯಸ್‌ನೆಸ್ ಇರಬಹುದು, ಆದರೆ ಕೆಲವು ತಾಲ್ಲೂಕುಗಳಲ್ಲಿ ತೀವ್ರವಾದಂಥ ಸೀರಿಯಸ್ ಇರುತ್ತದೆ ಆದರೆ ಇವುಗಳ ಬಗ್ಗೆ ವೈಜ್ಞಾನಿಕವಾಗಿ ಮಾನೀಟರಿಂಗ್ ಮಾಡಿ ಚಿಂತನೆ ಮಾಡಿ ಆಮೇಲೆ ಹಣವನ್ನು ಬಿಡುಗಡೆ ಮಾಡಿಲ್ಲ ಹಣ ಬಿಡುಗಡೆ ಮಾಡುವ ಮುಂಚೆ ಎಲ್ಲಿ ಸೀರಿಯಸ್‌ನೆಸ್ ಹೆಚ್ಚಿದೆ ಎಂಬ ಬಗ್ಗೆ ನಿಮ್ಮ ಕಡೆ ಇನ್‌ಫರ್ಮೇಶನ್ ಇರುತ್ತದೆ ಆ ಮಾಹಿತಿ ನಿಮ್ಮ ಕಡೆ ಇದ್ದರೆ ತಾವು ಈ ಪ್ರಕಾರ ಅಡ್‌ಹಾಕ್ ಆಗಿ ಎಲ್ಲ ಕಡೆಗೂ ಸಮನಾಗಿ ಹಣವನ್ನು ರಿಲೀಸ್ ಮಾಡುತ್ತಿರಲಿಲ್ಲ ತಾವು ವಿಚಾರ ವಿನಿಮಯ ಮಾಡಿ ಎಲ್ಲಿ ಗಾಂಭೀರ್ಯತೆ ಹೆಚ್ಚಿದೆ, ಎಲ್ಲಿ ಕಷ್ಟ ಹೆಚ್ಚು ಇದೆ, ಎಲ್ಲಿ ಮೈಗ್ರೇಶನ್ ಹೆಚ್ಚಾಗುತ್ತಿದೆ ಎಂಬ ಬಗ್ಗೆ ನೋಡುತ್ತಿದ್ದಿರಿ ಇವೊತ್ತಿನ ದಿವಸ ಬಡವರು ಆಂಧ್ರಕ್ಕೆ, ಗೋವಾಕ್ಕೆ, ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ ಈ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ ಇವೊತ್ತು ಫಾಡರ್ ಬಗ್ಗೆ ದುಡ್ಡನ್ನು ಇಲ್ಲಿಯವರೆವಿಗೂ ಹಣವನ್ನು ಬಿಡುಗಡೆ ಮಾಡಿಲ್ಲ ಇವೊತ್ತಿನವರೆಗೂ ಫಾಡರ್ ಬಗ್ಗೆ ಒಂದು ರೂಪಾಯಿ ಕೂಡ ಸರ್ಕಾರದಿಂದ ಬಿಡುಗಡೆಯಾಗಿಲ್ಲ ಸರ್ಕಾರದಲ್ಲಿ ಅನುಭವದ ಕೊರತೆ ಇರಬಹುದು ಆದರೆ ನಿಮ್ಮಂಥ ಅನುಭವಿ ಮಂತ್ರಿಗಳು ಇದ್ದಾರೆ ಆದರೆ ಈ ರೀತಿ ಆಗಬಾರದು ಆದರೆ ಹೀಗೇಕೆ ಆಗುತ್ತಿದೆ? ಹಣವಿದೆಯೆಂದು ಹೇಳುತ್ತೀರಿ ಕೇಂದ್ರ ಸರ್ಕಾರದವರು ನಿಮಗೆ ಹಣವನ್ನು ಕೊಟ್ಟಿದ್ದಾರೆ ನಿಮ್ಮ ಲೆಕ್ಕಕ್ಕೆ ಜಮಾ ಮಾಡಿದ್ದಾರೆ ಹೀಗಿದ್ದರೂ ಕೂಡ ಇವೊತ್ತು ಏಕೆ ಇನ್ನೂ ಹಣ ಬಿಡುಗಡೆಯಾಗುತ್ತಿಲ್ಲ? ಹಣ ಏಕೆ ಖರ್ಚಾಗುತ್ತಿಲ್ಲ? ಸರಿಯಾಗಿ ಹಣದ ಉಪಯೋಗ ಏಕೆ ಆಗುತ್ತಿಲ್ಲ? Scarcity works ತೆಗೆದುಕೊಂಡಿದ್ದೀರಿ ಅದರ ಗುಣಮಟ್ಟ ನೋಡಿದಿರೇನು? ವಿಜಿಲೆನ್ಸ್ ಸೆಲ್ ಮಾಡಿದ್ದರ ಬಗ್ಗೆ, ಅದಕ್ಕೆ ಏನು ಮಾಡಿದ್ದೀರಿ ಏನು ಹಣ ಪೋಲಾಗುತ್ತಿದೆಯೋ,ಎಲ್ಲೆಲ್ಲಿ ಎಂಪ್ಲಾಯ್‌ಮೆಂಟ್ ಜನರೇಟ್ ಆಗುತ್ತಿದೆ ಎಂಬ ಬಗ್ಗೆ ನಿಮ್ಮಲಿ ರೆಕಾರ್ಡ್ ಇದೆಯೇ? ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ, ಮಾನ್ಯ ಎಸ್ ಎಂ ಕೃಷ್ಣರವರ ಕಾಲದಲ್ಲಿ ವಿಜಿಲೆನ್ಸ್ ಕಮಿಟಿಗಳು ಇತ್ತು ಅವರು ಮಾನಿಟರಿಂಗ್ ಮಾಡುತ್ತಿದ್ದರು ರಿಪೋರ್ಟ್ ಕೊಡುತ್ತಿದ್ದರು ಎಷ್ಟು ಹೊಸದಾದವು, ಎಷ್ಟು ಕಂಪ್ಲೀಟ್ ಆದವು, ಕಳಪೆ ಕೆಲಸವಾಗಿದ್ದರೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳುವುದು, ಧರ್ಡ್ ಪಾರ್ಟಿಗೆ ಇನ್ಸ್‌ಪೆಕ್ಷನ್‌ನ್ನು ನಾವು ಮಾಡಿಸುತ್ತಿದ್ದೆವು ಆದರೆ ಇವುಗಳ್ಯಾವವೂ

ಇವೊತ್ತು ಇಲ್ಲ ಹೀಗಾಗಿ ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿರುವುದು ಬಹಳ ಗಂಭೀರವಾದ ವಿಷಯವಾಗಿದೆ ಒಂದು ಕಡೆ ಕುಡಿಯುವ 'ನೀರಿಲ್ಲ, ಹೀಗಿದ್ದರೂ ನೀವು ಏನು ಮಾಡುತ್ತಿದ್ದೀರಿ? ಎಷ್ಟು ಕಡೆ ನೀವು ಬೋರ್‌ವೆಲ್ ಡ್ರಿಲ್ ಮಾಡಿದಿರಿ? ಎಷ್ಟು ಕಡೆ ನೀವು ಓಪನ್ ವೆಲ್ ಡ್ರಿಲ್ ಮಾಡಿದ್ದೀರಿ, ಇಂಧವುಗಳ ಬಗ್ಗೆಯೆಲ್ಲಾ ಮಾಹಿತಿ ಇಲ್ಲ, ಇವೊತ್ತು ವಿದ್ಯುಚ್ಛಕ್ತಿಯ ಕೊರತೆ ಕಳೆದ ವರ್ಷ ತುಂಬಾ ಮಳೆಯಾಯಿತು ಎಲ್ಲಾ ಡ್ಯಾಂಗಳು ಫುಲ್ ಆಗಿ ತುಂಬಿದವು ಆದರೂ ಇಂದು scarcity of power ಇದೆ ಏಕೆಂದರೆ 100 ಮಿಲಿಯನ್ ಯುನಿಟ್ಸ್‌ನಿಂದ 142 ಮಿಲಿಯನ್ ಯುನಿಟ್ಸ್‌ಗೆ ಕನ್ಸ್‌ಂಪ್‌ಶನ್ ಹೋಗುತ್ತಿದೆಯೆಂದು ಪತ್ರಿಕೆಯಲ್ಲಿ ನಾನು ಓದಿದ್ದೇನೆ ಹಾಗಾದರೆ ಇದರ ಬಗ್ಗೆ ನಿಮ್ಮ ನಿರ್ಣಯವೇನು? ಒಂದು ಕಡೆ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ, no, I don't want to head this committee ಎಂದು ಹೇಳುತ್ತಾರೆ Energy Minister ಅವರನ್ನು ಕೇಳಿದರೆ ನನಗೇನೂ ಗೊತ್ತಿಲ್ಲ ಎಂದು ಹೇಳುತ್ತಾರೆ, ಮುಖ್ಯಮಂತ್ರಿಗಳು ಹೇಳುತ್ತಾರೆ, ನಾನು ಸಮಸ್ಯೆ ಬಗೆಹರಿಸುತ್ತೇನೆಂದು, ಏನು ಉತ್ತರವೇ ಅದು, ಲೋಡ್ ಶೆಡ್ಡಿಂಗ್, ರೈತರಿಗೆ ಕಷ್ಟವಾಗುತ್ತದೆ, ಎಲ್ಲೆಲ್ಲಿ ಸ್ವಲ್ಪ ನೀರಿದೆ, ಎಲ್ಲೆಲ್ಲಿ ಪಂಪ್‌ಸೆಟ್ ರಿಪೇರಿ ಮಾಡಬೇಕಾಗಿದೆಯೋ ಆ ಕೆಲಸ ಅಲ್ಲಿ ಆಗುತ್ತಿಲ್ಲ ವಿದ್ಯಾರ್ಧಿಗಳಿಗೆ ಈಗ ಪರೀಕ್ಷೆಗಳು ಶುರುವಾಗುತ್ತದೆ, ಈಗ ಪರೀಕ್ಷೆಗಳ ಕಾಲ, ಹಳ್ಳಿಯಲ್ಲಿ ಲೈಟ್ಸ್ ಇಲ್ಲ, ವಿದ್ಯುಚ್ಛಕ್ತಿ ಕೊರತೆ, ಖರೀದಿ ಮಾಡಿ, ಹೇಗಿದ್ದರೂ ಹಣದ ಕೊರತೆಯೇನೂ ಇಲ್ಲವೆಂದು ನೀವೇ ಹೇಳಿದ್ದೀರಲ್ಲ ಮೊನ್ನೆ ಉಪ ಮುಖ್ಯಮಂತ್ರಿಗಳು ಹೇಳಿದರು, ಆರ್ ಬಿ ಐ ನವರು ನಮ್ಮನ್ನು praise ಮಾಡಿದ್ದಾರೆ, I am No1 in the country ಇರಬಹುದು, ನನಗೆ ಗೊತ್ತಿಲ್ಲ, ನೋಡಿ ಅದರ ಬಗ್ಗೆ ಹೇಳೋಣ ಆದರೆ ಅದಕ್ಕೆ Fiscal Responsibility Act, ಸಿದ್ದರಾಮಯ್ಯನವರು ಇದ್ದಾಗ ಎಸ್ ಎಂ ಕೃಷ್ಣಾರವರು ಇದ್ದಾಗ ಈ ಬಗ್ಗೆ ಹಲವಾರು ಕ್ರಮಗಳನ್ನು ನಾವೇನು ತೆಗೆದುಕೊಂಡೆವು, ವ್ಯಾಟ್ ಜಾರಿಗೆ ಬಂತು ಇದರಿಂದಾಗಿ ಇಡೀ ದೇಶದಲ್ಲಿಯೇ ಈ ವಿಚಾರದಲ್ಲಿ ಸುಧಾರಣೆಯಾಗಿದೆ ಆರ್ ಬಿ ಐ ನವರೇ 9% ಜಿ ಡಿ ಪಿ ಗ್ರೋಧ್ ಆಗುತ್ತದೆ ಎಂದು ಹೇಳಿದ್ದಾರೆ ಅದರ ಲಾಭ ಕರ್ನಾಟಕದಲ್ಲೂ ಆಗುತ್ತಿದೆ ಅದರಲ್ಲಿ ನಿಮ್ಮ ಎಫರ್ಟ್ಸ್ ಇರಬಹುದು, ಇಲ್ಲವೆಂದು ನಾನು deny ಮಾಡುತ್ತಿಲ್ಲ ಏಕೆಂದರೆ ಅದಕ್ಕೆಲ್ಲಾ ರೆಕಾರ್ಡ್ಸ್ ಇದೆ ಆದರೆ

ಶ್ರೀ ಎಂ ಪಿ ಪ್ರಕಾಶ್(ಗೃಹ ಸಚಿವರು) ಕರ್ನಾಟಕದಲ್ಲಿ ಜಿ ಡಿ ಪಿ 12 1%

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, Karnataka was always ahead Karnataka has been always ahead in the country Let us discuss it afterwards I am not going to argue on that ನಾನು ಏನು ಹೇಳುತ್ತಿದ್ದೇನೆಂದರೆ ನಿಮ್ಮ ಹತ್ತಿರ ಹಣವಿದೆಯೆಂದು ಹೇಳುತ್ತಿದ್ದೀರಲ್ಲ, ಆ ಹಣವನ್ನು ಉಪಯೋಗ ಮಾಡಿಕೊಂಡು ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುವುದಕ್ಕೆ ನಿಮಗೇನು ಪ್ರಾಬ್ಲಂ ಇದೆ? Why you are hesitant? ನಿಮಗೆ ಪ್ರಾಬ್ಲಂ ಏನು? ಒಂದು ವೇಳೆ ಟ್ರೆಶರಿಯಲ್ಲಿ ಹಣವಿಲ್ಲವೆಂದರೆ ಅದು ಬೇರೆ ಪ್ರಶ್ನೆ ಆದರೆ ನೀವೇ ಹೇಳುತ್ತೀರಿ, ಸಾಕಷ್ಟು ನಮ್ಮ ಬಳಿ ಹಣವಿದೆಯೆಂದು ಹೇಳುತ್ತೀರಿ ಹೀಗಿರುವಾಗ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಿ, save the situation ಇವೊತ್ತು ಬೆಳೆಗಳೆಲ್ಲಾ ಹಾಳಾಗಿವೆ ನಮ್ಮ ಜಿಲ್ಲೆಯಲ್ಲಿ ಹತ್ತಿ ಬೆಳೆಯೆಲ್ಲಾ ಹಾಳಾಗಿದೆ ಕೆಲವು ಕಡೆ ಅಲ್ಪ ಪರಿಹಾರ ಕೊಟ್ಟಿರಿ ಯಾವ ಪರಿಹಾರ ಅದು, ಕೆಲವು ಕಡೆ ಏನಾಗಿದೆ ಫಾರೆಸ್ಟ್ ಲ್ಯಾಂಡ್‌ಗೆ ಕೊಟ್ಟಿಲ್ಲ ಅಲ್ಲಿ ಫಾರೆಸ್ಟ್ ಲ್ಯಾಂಡ್ ಅವರಿಗೆ ಮಂಜೂರಾಗಿದೆ ಆದರೆ ನಿಮ್ಮ ಮೇಲೆ ನಾನು ದೂರು ಮಾಡುತ್ತಿಲ್ಲ ಕಳೆದ ಮೂರ್ನಾಲ್ಕು ವರ್ಷದಿಂದ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಆರ್ಡರ್ ಮಾಡಿದರೂ ಸಹ ಇವೊತ್ತು ಅರಣ್ಯ ಇಲಾಖೆಯಿಂದ deforest ಮಾಡಿಲ್ಲ ಕೇಂದ್ರ ಸರ್ಕಾರದವರು ಲ್ಯಾಂಡ್ ಕೂಡಬೇಕೆಂದು ಆರ್ಡರ್ ಮಾಡಿದ್ದಾರೆ ರಾಜ್ಯ ಸರ್ಕಾರ ಒಪ್ಪಿಕೊಂಡಿದೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಇನ್ನೂ deforest ಆಗಿಲ್ಲ ಇನ್ನೂ ಫಾರೆಸ್ಟ್‌ನ ಹೆಸರಿನಲ್ಲಿಯೇ ಇದೆ ಅವರಿಗೆ ಪರಿಹಾರವನ್ನೂ ಕೂಡ ಇನ್ನೂ ಕೊಟ್ಟಿಲ್ಲ ಕೇವಲ meager compensation ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ಹೇಳಿ ಹೀಗಾಗಿ ಇಂಧ ಎಲ್ಲ, ಪರಿಸ್ಥಿತಿಗಳು ಇವೆ ಒಂದು ಕಡೆ ರೈತರಿಗೆ ಪರಿಹಾರ ಕೊಟ್ಟಿಲ್ಲ, ಒಂದು ಕಡೆ ಕುಡಿಯುವುದಕ್ಕೆ ನೀರಿಲ್ಲ, ಮತ್ತೊಂದು ಕಡೆ ವಿದ್ಯುಚ್ಛಕ್ತಿ ಇಲ್ಲ, ಒಂದು ದನಕರುಗಳಿಗೆ ಮೇವಿಲ್ಲ, ಇವುಗಳಿಗೂ ಕೂಡ ಕುಡಿಯುವುದಕ್ಕೆ ನೀರಿಲ್ಲದಂಧ ಪರಿಸ್ಥಿತಿ ಇದೆ ನಾನೂ ಇನ್ನೂ ಆರ್ಡರ್ ನೋಡಿಲ್ಲ, ಮೊನ್ನೆ 177 ತಾಲ್ಲೂಕುಗಳಿಗೂ ಹಣವನ್ನು ಬಿಡುಗಡೆ ಮಾಡಿದ್ದಾರಂತೆ ಎಲ್ಲಿ ಅತಿವೃಷ್ಟಿಯಾಗಿರುವಂದ ಪರಿಸ್ಥಿತಿ ಇದೆ, ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಕೊಡಗು ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ,ಬೆಳಗಾಂ ಜಿಲ್ಲೆಯ ಕೆಲವು ಭಾಗ, ಬಾಗಲಕೋಟೆ,

ಬಿಜಾಪುರ ಜಿಲ್ಲೆಯ ಕೆಲವು ಭಾಗ, ರಾಯಚೂರು ಜಿಲ್ಲೆಯ ಕೆಲವು ಭಾಗಗಳಿಗೆ ಈವರೆವಿಗೂ ಹಣವನ್ನೇ ಬಿಡುಗಡೆ ಮಾಡಿಲ್ಲ ನಿನ್ನೆ ಮೊನ್ನೆ ಆರ್ಡರ್ ಆಗಿದೆ ನಾನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ವಿಷಯ ತಂದಿದ್ದೆ, ತಾವು ಧಾರವಾಡದಲ್ಲಿ ಭೇಟಿಯಾದಾಗ ಹೇಳಿದ್ದೆ, ತಾವು ಎಲ್ಲಾ ಜಿಲ್ಲೆಗೆ flood affected districts ಗೆ ಕೊಡುತ್ತೇವೆಂದು ಹೇಳಿದ್ದೀರಿ ಆದರೆ ಹಣವನ್ನು ಕೊಟ್ಟಿಲ್ಲ ಏಕೆ? ಏಕೆ ಈ ಮಲತಾಯಿ ಧೋರಣೆ? ನೀವು ಮೊನ್ನೆ ದಾಂಡೇಲಿಗೆ ಬಂದಿದ್ದಿರಿ, ಒಳ್ಳೆಯ ಮಾತು ಹೇಳಿದಿರಿ, ಏನ್ರಿ ದೇಶಪಾಂಡೆಯವರೆ ನೀವು ಎಂ ಎಲ್ ಎ ಆಗಿದ್ದೀರಿ, ಇಲ್ಲಿ ಎಂಥ ರಸ್ತೆ ಹಾಳಾಗಿದೆ ಎಂದು ಹೇಳಿದಿರಿ ನಿಜ ಸಾರ್, ನಾನು ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ, ಸಾರ್ ನನ್ನ ಕಣ್ಣಲ್ಲಿ ನೀರು ಬರುತ್ತದೆ, 25 ವರ್ಷದಿಂದ ಎಂ ಎಲ್ ಎ ಆಗಿದ್ದೇನೆ ಇಂಥ ಪರಿಸ್ಥಿತಿ ಯಾವಾಗಲೂ ಬಂದಿರಲಿಲ್ಲ ಮಾನ್ಯ ರೇವಣ್ಣನವರಿಗೆ ನಾಲ್ಕು ಪತ್ರಗಳನ್ನು ಬರೆದಿದ್ದೇನೆ ಇಲ್ಲಿ ರಸ್ತೆಯ ಕಂಡೀಶನ್ ತೀರ ಹದಗೆಟ್ಟಿದೆ, ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲ ಏನಾದರೂ ಮಾಡಿ ಸರಿ ಮಾಡಿ ಎಂದು ಪತ್ರವನ್ನು ಬರೆದಿದ್ದೇನೆ ಅಲ್ಲಿ ರಸ್ತೆ ಹಾಳಾಗಿವೆ, ಮೈನಿಂಗ್ ಟ್ರಾಫಿಕ್, ಹೆಚ್ಚು ಮಳೆಯಿಂದಲೂ ಹಾಳಾಗಿವೆ, ರಸ್ತೆ ಸರಿಪಡಿಸಲು ಹಣ ಬಿಡುಗಡೆಯನ್ನು ನೀವು ಮಾಡಬೇಕಲ್ಲವೆ, ನಾನೇನೂ ಈಗ ಮಂತ್ರಿಯಲ್ಲ, ಹಣ ಬಿಡುಗಡೆ ಮಾಡುವ ಅಧಿಕಾರ ನನಗಿಲ್ಲ ಆಗ ನಮ್ಮ ಮೇಲೆ ನೀವು ಟೀಕೆ ಮಾಡಿ ಹೋದಿರಿ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಬಹಳ ಚೆನ್ನಾಗಿ ರೋಡ್‌ಗಳಿತ್ತು It is one of the best districts as far as the roads are concerned ಆದರೆ ಕಳೆದ ಒಂದು, ಒಂದೂವರೆ ವರ್ಷದಲ್ಲಿ ನಮ್ಮ ಜಿಲ್ಲೆ ಒಂದೇ ಅಲ್ಲ ಬೇರೆ ಎಲ್ಲ ಜಿಲ್ಲೆಗಳಲ್ಲೂ ರಸ್ತೆಗಳು ಹಾಳಾಗಿವೆ ನಾವು ಮೊನ್ನೆ ದೊಡ್ಡಬಳ್ಳಾಪುರಕ್ಕೆ ಹೋಗಿದ್ದೆವು ಅಲ್ಲಿ ರಸ್ತೆಯ ಕಂಡೀಶನ್ ಹೇಗಿದೆ ನೋಡಿದ್ದೀರಾ ಹೀಗಾಗಿ ನೀವು ನಮ್ಮ ಮೇಲೆ ಟೀಕೆ ಮಾಡಿ ಟೀಕೆ ಮಾಡುವಾಗ

ಶ್ರೀ ಎನ್ ಚೆಲುವರಾಯಸ್ವಾಮಿ – ಹಾಗಾದರೆ ನೀವು ನಾವೇನೂ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದೀರ?

ಶ್ರೀ ಆರ್ ವಿ ದೇಶಪಾಂಡೆ,– ಒಂದು ನಿಮಿಷ, ನಾವು ಟೀಕೆ ಮಾಡುವಾಗ ನಮ್ಮ ಸ್ನೇಹಿತರಾದ ಮಾನ್ಯ ಶೆಟ್ಟರ್ ಸಾಹೇಬರೆ ನೀವು ಒಂದು ತಿಳಿದುಕೊಳ್ಳಬೇಕು ಈಗ ನೀವು ಅಧಿಕಾರದಲ್ಲಿ ಇದ್ದೀರಿ ರಸ್ತೆ ರಿಪೇರಿ ಮಾಡುವ ಕೆಲಸ ನಿಮ್ಮದು, ನನ್ನದಲ್ಲ ನಾನು ಶಾಸಕನಾಗಿ ಇರಬಹುದು, ನಾನು ಏನು

ಮಾಡಬಹುದು, ಇಲ್ಲಿ ಕೂಗಬಹುದು, ನಿಮಗೆ ಪತ್ರ ಬರೆಯಬಹುದು, ಅಷ್ಟೆ ಮಾಡಬಹುದು, ಮತ್ತೇನೂ ಮಾಡುವುದಕ್ಕಾಗುತ್ತದೆ ಈಗ heavy rains ನಿಂದಾಗಿ ಇಡೀ ರಾಜ್ಯದಲ್ಲಿ ರಸ್ತೆಯ ಪರಿಸ್ಥಿತಿ ಹಾಳಾಗಿದೆ ಹಣ ಬಿಡುಗಡೆ ಮಾಡಿ You take up road repairs Property damage ಆಗಿದೆ, ಅದಕ್ಕೆಲ್ಲಾ ಹಣವನ್ನು ಬಿಡುಗಡೆ ಮಾಡಿ ಆ ರೀತಿ ಏಕೆ ನೀವು ಮಾಡುತ್ತಿಲ್ಲ? ಹಾಗಾಗಿ ಎಲ್ಲಾ ಹಂತದಲ್ಲಿ ಇವತ್ತು ಸರ್ಕಾರ ಬರಗಾಲ ಮತ್ತು ಅತಿವೃಷ್ಟಿಯನ್ನು tackle ಮಾಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ ಮಾನ್ಯ ಪ್ರಕಾಶ್ ಅವರ ಸ್ಟೇಟ್‌ಮೆಂಟ್ ಅನ್ನು ನಾನು ಓದಿಲ್ಲ ಮಾನ್ಯ ಕಂದಾಯ ಸಚಿವರ ಸ್ಟೇಟ್‌ಮೆಂಟ್ ನಾನು ಓದಿಲ್ಲ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ರೈತರು ಬಹಳ ಕಷ್ಟದಲ್ಲಿದ್ದಾರೆ, ನಮ್ಮ ನಾಯಕರು ಹೇಳಿದ ಹಾಗೆ 122 ರೈತರ suicide ಆಗಿವೆ, ರೈತರ ಸಹಾಯಕ್ಕೆ ನಾವು ಧಾವಿಸಬೇಕು ಎಂದು ಹೇಳಿದರು, ಸಂತೋಷ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ, ಸಂತೋಷ ಆದರೆ ಮೊದಲನೆ ಸ್ಟೇಟ್‌ಮೆಂಟ್ ಏನು ಹೇಳಿದಿರಿ? ಎಲ್ಲಾ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ 2ನೆ ಸ್ಟೇಟ್‌ಮೆಂಟ್ co-operativeಗೆ ಸಂಬಂಧಪಟ್ಟಂಥ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ ಮೂರನೆಯದಾಗಿ ಕ್ರಾಪ್ ಲೋನ್ ಮನ್ನಾ ಮಾಡುತ್ತೇವೆಂದು ಹೇಳಿದಿರಿ 4ನೇ ಸ್ಟೇಟ್‌ಮೆಂಟ್ ಏನು? 5 ಸಾವಿರ ಮಾಡಬೇಕೋ 10 ಸಾವಿರ ಮಾಡಬೇಕೋ ಎಂದು examine ಮಾಡುತ್ತಿದ್ದೇವೆಂದು ಹೇಳಿದಿರಿ ನಿಮ್ಮ ಸರ್ಕಾರದಲ್ಲಿ clarity ಇಲ್ಲವೇ? ನಿಮ್ಮಗಳಲ್ಲಿ ಹೊಂದಾಣಿಕೆ ಇಲ್ಲವೇ? ರಾಜ್ಯದ ಒಬ್ಬ ಮುಖ್ಯಮಂತ್ರಿ ರಾಜ್ಯದಲ್ಲಿನ ರೈತರ ಸಾಲವನ್ನು ಮನ್ನಾ ಮಾಡುತ್ತೇನೆಂದು ಹೇಳಿದಾಗ ನಾವು ಅದನ್ನು ಸ್ವಾಗತ ಮಾಡಿದ್ದೇವೆ, ಮಾಡಿ ಒಟ್ಟು 90 ಲಕ್ಷ ರೈತ ಕುಟುಂಬಗಳು ಇವೆ ಅದರಲ್ಲಿ ಕೋ-ಅಪರೇಟೀವ್‌ನಲ್ಲಿ ಕವರ್ ಆಗುವ families ಎಷ್ಟು? 17 ಲಕ್ಷ ಚಿಲ್ಲರೆ ಮೆಜಾರಿಟಿ Nationalized Bank ನಿಂದ ಲೋನ್ ತೆಗದುಕೊಂಡಿರುವುದು ಅವರ ಸಾಲ ಯಾರು ಮನ್ನಾ ಮಾಡುವುದು? ಕೇಂದ್ರದವರು ಘೋಷಣೆ ಮಾಡಲಿಲ್ಲವಲ್ಲ, ಕೇಂದ್ರದವರು ಮಾಡಿದರೆ ಇಡೀ ದೇಶದಲ್ಲಿ ಮಾಡಬೇಕಾಗುತ್ತದೆ ನೀವು ಘೋಷಣೆ ಮಾಡಿದಿರಿ ಕೇಂದ್ರ ಸರ್ಕಾರ ರೈತರಿಗೆ ಸುಲಭವಾಗಿ ಸಾಲ ಸಿಗಲೆಂದು ಬಡ್ಡಿ ದರ ಕಡಿಮೆ ಮಾಡಿದ್ದಾರೆ ಹಾಗಾಗಿ ನಿಮಗೆ ನಾಲ್ಕು ಪರ್ಸೆಂಟ್‌ನಲ್ಲಿ ಬಡ್ಡಿ ಕೊಡುವುದಕ್ಕೆ ಸಾಧ್ಯವಾಯಿತು ಆದುದರಿಂದ ನೀವು ಸಾಲ ಮನ್ನಾ ಮಾಡಿ Nationalized Bankದು, RRBದು ಮಾಡಿ, co-operativesದು ಮಾಡಿ

ಎಲ್ಲಾ ಮಾಡಬೇಕು 5 ಸಾವಿರ ಅಥವಾ 10 ಸಾವಿರದಿಂದ ಏನೂ ಆಗುವುದಿಲ್ಲ ಅದು ಮೋಸ ಆಗಬಹುದು ಆದುದರಿಂದ ನಿಮಗೆ ಎಲ್ಲಾ ಸಾಲ ಮನ್ನಾ ಮಾಡಿ ಎಂದು ಸಲಹೆ ಮಾಡುತ್ತಿದ್ದೇನೆ ನೇಕಾರರು ಕಷ್ಟದಲ್ಲಿದ್ದಾರೆ, ಅವರಿಗೂ 4 ಪರ್ಸೆಂಟ್ ನಲ್ಲಿ ಕೊಟ್ಟಿದ್ದಾರೆ, ಅವರದು ಸಾಲ ಮನ್ನಾ ಮಾಡಿ ಮೀನುಗಾರರು ಕಷ್ಟದಲ್ಲಿದ್ದಾರೆ, ಅವರಿಗೂ 4 ಪರ್ಸೆಂಟ್ ಮಾಡಿ Unemployed youth ಅವರು ದಂಧೆ ಮಾಡುವುದಕ್ಕೆ ಸಾಲ ತೆಗೆದುಕೊಂಡಿದ್ದಾರೆ, ಅದು ಹಾನಿಯಾಗಿದೆ, ಅವರದು ಮನ್ನಾ ಮಾಡಿ ಕೂಲಿಗಾರರು ಸಾಲ ತೆಗೆದುಕೊಂಡಿದ್ದಾರೆ, ಅವರದು ಸಾಲ ಮನ್ನಾ ಮಾಡಿ ಏಕೆ ಮಾಡುವುದಿಲ್ಲ? ಸಂತೋಷ, ಅದೆಲ್ಲ ಮಾಡಿ ನಾವು ನಿಮಗೆ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಬಂದು ಹಾರ ಹಾಕುತ್ತೇವೆ, ಅಭಿನಂದಿಸುತ್ತೇವೆ ಮಾನ್ಯ ಧರ್ಮ್‌ಸಿಂಗ್ ಕಾಲದಲ್ಲಿ ರೈತರಿಗೆ ಇತ್ತು After I became Co-operative minister fishermen ಮತ್ತು weaversಗೆ ನಾವು ಬಡ್ಡಿದರ 6 ಪರ್ಸೆಂಟ್ ಮಾಡಿದೆವು ನೀವು ಅದನ್ನು 4 ಪರ್ಸೆಂಟ್ ಮಾಡಿದಿರಿ ಅದನ್ನು ನಾನು dispute ಮಾಡುತ್ತಿಲ್ಲ ಅವರದು ಕೂಡ ಸಾಲ ಮನ್ನಾ ಮಾಡಿ ಎಂದು ಹೇಳುತ್ತಿದ್ದೇನೆ ರೈತರಿಗೂ ಮಾಡಿ, ನೇಕಾರರಿಗೂ ಮಾಡಿ, ಮೀನುಗಾರರಿಗೂ ಮಾಡಿ, ಕೂಲಿಗಾರರಿಗೂ ಮಾಡಿ ಅದಕ್ಕೆ ಬಹಳಷ್ಟು ಹಣ ಏನು ಬೇಡ, ನಿಮ್ಮ ಹತ್ತಿರ ಸಾಕಷ್ಟು ಹಣ ಇದೆ ಅದಕ್ಕೆ 17 ರಿಂದ 18 ಸಾವಿರ ಕೋಟಿ ರೂಪಾಯಿ ಇದ್ದರೆ ಸಾಕು ನಿಮ್ಮ treasury ಯಲ್ಲಿ ಹಣ ಇದೆ ಎ ಟಿ ರಾಮಸ್ವಾಮಿ ಕಮಿಟಿಯಿಂದ ಹಣ ವಸೂಲಿ ಮಾಡುತ್ತೇವೆಂದು ಹೇಳಿದ್ದೀರಿ ಮಾಡಿ, ಯಾರು ಅಡ್ಡ ಬರುತ್ತಿದ್ದಾರೆ ? ಜಮೀನನ್ನು ಯಾರು ಅತಿಕ್ರಮಣ ಮಾಡಿದ್ದಾರೆ ಅದನ್ನು ಹರಾಜು ಹಾಕಿ ಆದರೆ ತಾವೇನು ಮಾತನಾಡುತ್ತೀರಿ, ಆ ಪ್ರಕಾರ ನಡೆದುಕೊಳ್ಳಿ ಮಾತಾನಾಡುವುದು ಒಂದು, ಮಾಡುವುದೊಂದು, ಹೇಳುವುದೊಂದು, ಹೀಗಾಗಿ ಮಾನ್ಯ ಅಧ್ಯಕ್ಷರೆ, ಈ ಬರಗಾಲದಲ್ಲಿ ಅತಿವೃಷ್ಟಿಯಲ್ಲಿ ರೈತರು ಕಂಗಾಲಾಗಿದ್ದಾರೆ ಸಾಮಾನ್ಯ ಜನ ಕಂಗಾಲಾಗಿದ್ದಾರೆ ಇವತ್ತು ಸಾಮಾನ್ಯ ಜನ ಕಷ್ಟದಲ್ಲಿದ್ದಾರೆ ವಿದ್ಯುಚ್ಛಕ್ತಿ ಸರಿಯಿಲ್ಲ, ರಸ್ತೆಗಳು ಸರಿಯಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಮೇವಿಲ್ಲ, ಜನರಿಗೆ ಉದ್ಯೋಗವಕಾಶವಿಲ್ಲ ಹಾಗಾಗಿ ನಿಲುವಳಿ ಸೂಚನೆಗೆ ಅವಕಾಶ ಕೊಟ್ಟರೆ ಮಾತ್ರ ಇವೆಲ್ಲಾ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಆದುದರಿಂದ ತಾವು ನಿಲುವಳಿ ಸೂಚನೆಗೆ allow

ಮಾಡಬೇಕು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತಾಳುತ್ತಿದೆ ಎಂದು ಹೇಳುತ್ತಿದ್ದಾರೆ ಕೇಂದ್ರ ಸರ್ಕಾರ ಏನು ಮಲತಾಯಿ ಧೋರಣೆ ತೋರಿಸುತ್ತಿದೆ ಎನ್ನುವುದನ್ನು ಸಾಬೀತುಪಡಿಸಬೇಕು ಕೇಂದ್ರ ಸರ್ಕಾರ in timeನಲ್ಲಿ ಹಣವನ್ನು release ಮಾಡಿದೆ ಅದನ್ನು ನಿಮಗೆ ಖರ್ಚು ಮಾಡುವುದಕ್ಕೆ ಆಗಿಲ್ಲ Release ಮಾಡಿ ನೀವು, release ಮಾಡಿದರೆ ತಾನೆ ಖರ್ಚಾಗುವುದು ಹಾಗಾಗಿ ನಾನು ಒತ್ತಾಯಿಸುತ್ತೇನೆ, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಅಧ್ಯಕ್ಷರು ಮೂರನೆಯವರು ಯಾರಾದರೂ ಮಾತನಾಡಿ

ಶ್ರೀ ಸಿದ್ದರಾಮಯ್ಯ ಮನವರಿಕೆ ಆಗಿರಬೇಕು ಕೇಳಿ, ಮನವರಿಕೆ ಆಗಿರಬೇಕಲ್ಲ, now you are convinced

ಶ್ರೀ ವಾಟಾಳ್ ನಾಗರಾಜ್ ಇದನ್ನು ಯಾವ ರೀತಿ ಮಾಡಬೇಕೆಂದು ಹೇಳಿ ತಮಗೆ ಇನ್ನು ಮನವರಿಕೆಯಾಗಲಿಲ್ಲ ಈಗ ಹೇಳಿದರು ನನಗೆ convince ಮಾಡಿ ಎಂದು, ಈಗ ಇಬ್ಬರ ಭಾಷಣವಾಯಿತು ಇನ್ನು ನಿಮಗೆ ಮನವರಿಕೆಯಾಗಲಿಲ್ಲ ಈಗ ಇವರು ಮಾತನಾಡಿದ ಮೇಲೆ ತಮಗೆ ಮನವರಿಕೆಯಾಗಬಹುದು ಎಂದು ಕಾಣುತ್ತದೆ ಅವರು ದಾರಿ ತಪ್ಪಿಸುತ್ತಾರೆ

ಶ್ರೀ ಕೆ ಆರ್ ರಮೇಶ್ ಕುಮಾರ್(ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸಹೊದ್ಯೋಗಿ ದೇಶಪಾಂಡೆಯವರು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಳ್ಳಬೇಕೆ ಎನ್ನುವುದಕ್ಕೆ ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸುವುದಕ್ಕೆ ಮಾತ್ರ ನಾವು ನಿಂತಿದ್ದೇವೆ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಕೆಲವು ಸೀಮಿತ ವಿಷಯಗಳಿಗೆ ಮಾತ್ರ ಸೆಳೆಯುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಸರ್ಕಾರ ಎಂದರೆ ಈ ರಾಜ್ಯದ ಜನರ ಪರಿಪಾಲನೆ ಮಾಡತಕ್ಕಂಥ ಹೊಣೆ ಋತುಮಾನಗಳು ಹೇಗೆ ಪ್ರತಿವರ್ಷ ತಮ್ಮ ಪ್ರಕ್ರಿಯೆಯನ್ನು ನಡೆಸಿಕೊಂಡು ಹೋಗುತ್ತವೆ ಎನ್ನುವುದರ ಬಗ್ಗೆ ಬಹಳ ಸೂಕ್ಷ್ಮವಾದಂತಹ ನಿಗಾ ಇಡಬೇಕಾದಂತಹ ಜವಾಬ್ದಾರಿ ಸರ್ಕಾರಕ್ಕೆ ಇದೆ ಸರ್ಕಾರದಲ್ಲಿ Meteorological Department ಇದೆ ಪ್ರತಿವರ್ಷ ಹೇಗೆ ಮಳೆ ಬರಬಹುದು? ಯಾವ್ಯಾವ ತಿಂಗಳಿಗೆ ಮಳೆ ಎಷ್ಟು ಬರಬಹುದು? ಎಲ್ಲಾ ಜಲಾನಯನ ಪ್ರದೇಶದಲ್ಲಿ ಇರುವಂತಹ ಜಲಾಶಯಗಳಿಗೆ ಎಷ್ಟು ನೀರು

4 00 P M

ಬರಬಹುದು ಎನ್ನುವ ನಿರೀಕ್ಷೆ ಇರುತ್ತದೆ ನಂತರ ಬರತಕ್ಕಂಧ ಮಳೆಗಳಿಗೆ rain shadow areas ನಮ್ಮಲ್ಲಿ ವಿಶೇಷವಾಗಿ ಏನಿದೆ, ಇಲ್ಲಿ ಮಳೆ ಹೇಗೆ ಬರುತ್ತದೆ ಎನ್ನುವುದರ ಬಗ್ಗೆ ವಾಚ್ ಇರಬೇಕಾಗುತ್ತದೆ ಪ್ರವಾಹ ಎಂದರೆ ದಿಢೀರ್ ಆಗಿ ಬಂದುಬಿಡುತ್ತದೆ ಆದರೆ ಬರಗಾಲ ದಿಢೀರ್ ಎಂದು ಬರುವುದಿಲ್ಲ ಅದು ಸಾಕಷ್ಟು ಸೂಚನೆ ಕೊಟ್ಟು ಬರುತ್ತದೆ ನಾನು ಈ ಸರ್ಕಾರ ಎಂದು ಹೇಳುವುದಿಲ್ಲ ಯಾವುದೇ ಮಾನವೀಯ ಸರ್ಕಾರಕ್ಕೆ ತನ್ನ ಅರಿವು, ಜವಾಬ್ದಾರಿಯ ಬಗ್ಗೆ ಪ್ರಜ್ಞೆ ಇದ್ದರೆ ಪರಿಸ್ಥಿತಿಗಳನ್ನು ಗಮನಿಸಿಕೊಂಡು ಬರಬಹುದಾದಂತಹ ಸಂದರ್ಭಗಳನ್ನು ನಿಭಾಯಿಸುವುದಕ್ಕೆ ಎಲ್ಲಾ ರೀತಿಯಿಂದ ಅವರು ಸಜ್ಜಾಗಬೇಕಾಗುತ್ತದೆ ಯಾವಾಗ ಇದರ ಬಗ್ಗೆ ನಿಗಾ ಇಡುವುದಿಲ್ಲ, ಮಾಹಿತಿ ಇರುವುದಿಲ್ಲ, ಅದರ ಬಗ್ಗೆ ಆಲೋಚನೆ ಇರುವುದಿಲ್ಲ, ಅದೂ ಕೂಡ ರಾತ್ರೋರಾತ್ರಿ ಬರಗಾಲ ಬಂದಿದೆ ಎಂದು ಬರಗಾಲ ಪರಿಹಾರಕ್ಕೆ ದಿಢೀರ್ ಎಂದು ಸರ್ಕ್ಯುಲರ್ ಕಳುಹಿಸುವುದು, ಉತ್ತರ ಕಳುಹಿಸುವುದು, ಹಾವಭಾವಗಳಿಂದ ಓಡಾಡುವುದು ಇದೆಲ್ಲಾ ಮಾಡುತ್ತಾರೆ ನಿಮಗೆ ಯಾವ ತಿಂಗಳಲ್ಲಿ ಈ ಸಲ ಮಳೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಅಂದಾಜು ಗೊತ್ತಾಗಬಹುದು? ಬಿತ್ತನೆಯಾಗಿಲ್ಲ, ಕೃಷಿಯನ್ನೆ ನಂಬಿಕೊಂಡು ಜೀವನ ಮಾಡತಕ್ಕಂಧ ಕೃಷಿಕ ಒಂದು ಕಡೆ, ಕೃಷಿಕ ತನಗೆ ಕೊಡಬಹುದಾದಂತ ಉದ್ಯೋಗ ಅದನ್ನೆ ನಂಬಿಕೊಂಡು ಜೀವನ ಮಾಡತಕ್ಕಂಧ ಕೃಷಿ ಕಾರ್ಮಿಕರು ಕೃಷಿ ಕಾರ್ಮಿಕರು ಗಂಟುಮೂಟೆ ಕಟ್ಟಿಕೊಂಡು ವಲಸೆ ಹೋಗುತ್ತಾನೆ ನಮ್ಮ ಕಡೆ ಅವನಿಗೆ ತಿರುಪತಿ ಹತ್ತಿರ ಆಗುತ್ತದೆಂದು ಅಲ್ಲಿಗೆ ಹೊರಟು ಹೋಗುತ್ತಾನೆ ಎರಡು ಕೆಲಸ ಒಟ್ಟಿಗೆ ಆಗುತ್ತದೆ ಈ ಕಡೆ ಜನ ಬೇರೆ ಬೇರೆ ಭಾಗಕ್ಕೆ ಹೋಗುತ್ತಾರೆ Boarder areaದಲ್ಲಿ ಇರುವವರು ಗೋವಾ ಅಧವಾ ಮಹಾರಾಷ್ಟ್ರಕ್ಕೆ ಹೋಗುತ್ತಾರೆ ಕೃಷಿಕ ಎಲ್ಲಿ ಹೋಗಬೇಕು? ಅವನು ಜಮೀನು ಹೊತ್ತುಕೊಂಡು ಹೋಗುವ ಹಾಗೆ ಇಲ್ಲ ದನಕರುಗಳನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುವ ಹಾಗೆ ಇಲ್ಲ ಊರಲ್ಲಿ ಮಾಡುವುದಕ್ಕೆ ಉದ್ಯೋಗ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ ಅವನಿಗೆ ದಾಸ್ತಾನು ಮನೆಯಲ್ಲಿ ಏನಿತ್ತು ಅದು closeಆಗಿದೆ ಸಂಪಾದನೆ ಮಾಡುವುದಕ್ಕೆ ಮಾರ್ಗ ಇಲ್ಲ ಸಂಸಾರದ ನಿರ್ವಹಣೆ ನಡೆಸಬೇಕು ಸರ್ಕಾರ ಹೇಗೆ ಈ ಸಂಕಷ್ಟದಲ್ಲಿ ಅವನ ಜೊತೆ ಪಾಲ್ಗೊಳುತ್ತದೆ ಎನ್ನುವ ಸಂಗತಿ ಪ್ರಾಮಾಣಿಕತೆಯಿಂದ ಈ ಒಂದು

ವಿಚಾರವನ್ನು ಪ್ರಾರಂಭದಲ್ಲೇ ಅಭ್ಯಾಸ ಮಾಡಿ ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೆ, ಈ ಶಾಪವನ್ನು ಕೂಡ ವರವಾಗಿ ಪರಿವರ್ತನೆ ಮಾಡಿಕೊಳ್ಳಬಹುದು ಹಲವು ರಾಜ್ಯಗಳಲ್ಲಿ ಆಗಿರುವ ನಿದರ್ಶನಗಳು ನಮ್ಮ ಮುಂದೆ ಇದೆ ಹಲವು ರಾಜ್ಯಗಳಲ್ಲಿ ಬರಗಾಲ ಬಂದಂತಹ ಸನ್ನಿವೇಶದಲ್ಲಿ ಬಂದಂಥ ಹಣಕಾಸನ್ನು ಉಪಯೋಗ ಮಾಡಿ, ಕೈಗೆತ್ತಿಕೊಂಡಿರುವಂತಹ ಕೆಲಸಗಳನ್ನು, ಶಾಶ್ವತವಾದಂತಹ ಆಸ್ತಿಗಳನ್ನು ನಿರ್ಮಾಣ ಮಾಡಿದ್ದಾರೆ. ಮಾನ್ಯ ಎಂ ಪಿ ಪ್ರಕಾಶ್‌ರವರೆ, ತಮಗೆ ನಾನು ಹೇಳುವುದಿಷ್ಟೆ, ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಬೇಕೆ? ಮಾಡಬಾರದೆ? ತಾಂತ್ರಿಕತೆಯ ಮೇಲೆ ಕುಳಿತುಕೊಳ್ಳಬೇಕೆ? ಅಥವಾ ಬೇರೆ ನಿಯಮದ ಕೆಳಗೆ ವಿಷಯವನ್ನು ಚರ್ಚೆ ಮಾಡಬೇಕೆ? All together it is all different thing ನಾನು ಪ್ರತಿನಿಧಿಸಕ್ಕಂಥ ಕ್ಷೇತ್ರದಲ್ಲಿ 25 ಗ್ರಾಮ ಪಂಚಾಯತ್‌ಗಳು ಇವೆ ಒಂದು ಗ್ರಾಮ ಪಂಚಾಯತ್‌ಗೆ ಸರಾಸರಿ 10 ರಿಂದ 12 ಸಾವಿರ ಜನಸಂಖ್ಯೆ ಎಂದು ಇಟ್ಟುಕೊಂಡರೂ, ಎಷ್ಟು ಜನಸಂಖ್ಯೆಯಾಗಬಹುದೆಂದು ಅಂದಾಜು ಮಾಡಿ ತಾವು ಬೇಕಾದರೆ ಲೆಕ್ಕವನ್ನು ತರಿಸಿ ನೋಡಿ ತಾವು 78 ಲಕ್ಷ ರೂಪಾಯಿಗಳೆಂದು ಏನೋ ರಿಲೀಸ್ ಮಾಡಿದ್ದೀರಿ ಈ 78 ಲಕ್ಷ ರೂಪಾಯಿಗಳ ಲೆಕ್ಕ ಹೇಗೆಂದರೆ, ಮೇವಿಗೆ ಇಷ್ಟು ಹಣ, ಉಳಿದದ್ದು ಇಂಥಾದ್ದಕ್ಕೆ ಎಂದು ಮಾಡಿದ್ದೀರಿ ನೀವು ಕೊಡತಕ್ಕಂಥ ಅನುದಾನ ಅದವಾ ಏನು ಹಣವನ್ನು ಬಿಡುಗಡೆ ಮಾಡುತ್ತೀರಿ ಅದರಲ್ಲೆ ಅವನು ಊಟವನ್ನು ತಿನ್ನಬೇಕಾ? ಅವನ ಜೀವನದ ಪ್ಲಾನ್ ಅನ್ನು ಮಾಡಿಕೊಳ್ಳಬೇಕಾ? ಅಥವಾ ಅವನಿಗೆ ಬರಬಾರದ ಸಂಕಷ್ಟ ಬಂದಿದೆ ಅವನು ಅವನ ಬೆನ್ನಿಗೆ ನಿಮ್ಮನ್ನು ಕಟ್ಟಿಕೊಂಡು ಸಾಕಿದ್ದಾನೆ ಅವನನ್ನು ಈ ಕಷ್ಟದಿಂದ ಪಾರು ಮಾಡಬೇಕೆಂಬ ಆಲೋಚನೆ ಏನಾದರೂ ನಿಮಗೆ ಇದೆಯೇ? ನೀವು 50 ಲಕ್ಷ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದೀರಿ ಅದು ಒಂದು ಗ್ರಾಮ ಪಂಚಾಯತ್‌ನಲ್ಲಿ ಎರಡೂವರೆ ಸಾವಿರ ಜನರು ಕೆಲಸವನ್ನು ಮಾಡುತ್ತಾರೆ ಆ ಹಣ ಒಂದು ದಿವಸಕ್ಕೆ ಆಗುತ್ತದೆ ಇನ್ನು ಕುಡಿಯುವ ನೀರು, ಇದನ್ನು ಮಾನಿಟರ್ ಮಾಡುವವರು ಯಾರು? ಕೊಳವೆ ಬಾವಿಗಳನ್ನು 300 ಅಡಿಗೆ, 400 ಅಡಿಗೆ ತೋಡಿದರೆ, ನೀರು ಸಿಗುತ್ತಾ ಇತ್ತು ನಾವು ನಿಸರ್ಗದ ಮೇಲೆ ಪ್ರಯೋಗವನ್ನು ಮಾಡಿದ್ದೇವೆ ನಾವು 600 ಅಡಿ, 700 ಅಡಿ, 800 ಅಡಿಯವರೆಗೂ ಕೊಳವೆ ಬಾವಿಯನ್ನು ಕೊರೆದಿದ್ದೇವೆ ಮೊದಲಿಗೆ 300 ಅಡಿಗೆ

ನೀರು ಸಿಕ್ಕರೆ, ನಾವು ಹ್ಯಾಂಡ್ ಪಂಪ್ ಅನ್ನು ಫಿಕ್ಸ್ ಮಾಡಬಹುದಾಗಿತ್ತು ಇವತ್ತು 300 ಅಡಿಗೆ ನೀರು ಸಿಗುವುದಿಲ್ಲ, 700 ಅಡಿ, 800 ಅಡಿಗೆ ಹೋಗಿದ್ದೇವೆ ನೀವು ಕೊಡುವ ಹ್ಯಾಂಡ್ ಪಂಪ್‌ನಿಂದ ನೀರನ್ನು ಮೇಲೆ ಎತ್ತುವುದಕ್ಕೆ ಸಾಧ್ಯವಿಲ್ಲ ನೀವು ಅನಿವಾರ್ಯವಾಗಿ ಪಂಪ್ ಮೋಟಾರ್ ಅನ್ನು ಕೊಡಬೇಕಾಗುತ್ತದೆ ಯಾವ ಊರಿನಲ್ಲಿ ಕೊಳವೆ ಬಾವಿಗಳನ್ನು ತೋಡಿದ್ದಾರೆ? ಅದು ಎಷ್ಟು ಅಡಿ ಆಳದಲ್ಲಿ ನೀರು ಸಿಕ್ಕಿದೆ? ಅದನ್ನು ಎಷ್ಟಕ್ಕೆ ನಿಲ್ಲಿಸಿದ್ದಾರೆ? ಅಲ್ಲಿಂದ ನೀರನ್ನು ಎತ್ತಬೇಕಾದರೆ, ಎಷ್ಟು horse power motor ಬೇಕು? ಅದಕ್ಕೆ ಸಂಯೋಜನೆ ಮಾಡುವುದಕ್ಕೆ ಪಂಪ್ ಎಷ್ಟು ಸ್ಟೇಜ್ ಇರಬೇಕು? ಎಲೆಕ್ಟ್ರಿಸಿಟಿ ಪರಿಸ್ಥಿತಿ ಏನು? ಆ ಊರಿನಲ್ಲಿ ತಕ್ಷಣ ಕಾರ್ಯ ಆರಂಭ ಮಾಡದೇ ಹೋದರೆ, ಕುಡಿಯುವ ನೀರಿಗೆ ಆ ಜನರ ಗತಿ ಏನು? ಅವರು ಅದಕ್ಕೆ ಎಷ್ಟು ದೂರ ಹೋಗಬೇಕಾಗುತ್ತದೆ? ನಿಮಗೆ ಈ ಬಗ್ಗೆ ರಿಪೋರ್ಟ್ ಕೊಡುವವರು ಯಾರು? ಇವತ್ತು ಗೌವರ್ನಮೆಂಟ್‌ನಲ್ಲಿ ಇದಕ್ಕೆ ಏನು ಅರೆಂಜ್‌ಮೆಂಟ್ಸ್ ಇದೆ? ನಮ್ಮ ಎಗ್ಸಿಸ್ಟಿಂಗ್ ಮೆಷನರಿಯಲ್ಲಿ ಜಿಲ್ಲಾ ಪಂಚಾಯತ್‌ನ JE ಕೊಡುತ್ತಾನಾ? ಗ್ರಾಮ ಪಂಚಾಯತ್‌ನ ಸೆಕ್ರೆಟರಿ ಕೊಡುತ್ತಾನಾ? ವಿಲೇಜ್ ಪಂಚಾಯತ್‌ನ ಅಧ್ಯಕ್ಷ ಕೊಡುತ್ತಾನಾ? ಎಂ ಎಲ್ ಎ ಕೊಡುತ್ತಾರಾ? ತಾಲ್ಲೂಕು ಪಂಚಾಯತ್‌ನ ಮೆಂಬರ್ ಕೊಡುತ್ತಾರಾ? ಜಿಲ್ಲಾ ಪಂಚಾಯತ್‌ನ ಮೆಂಬರ್ ಕೊಡುತ್ತಾರಾ? ಅಥವಾ EO ಕೊಡುತ್ತಾರಾ? ಅದವಾ ತಹಶೀಲ್ದಾದರರು ಕೊಡುತ್ತಾರಾ? ಯಾರು ಯಾರಿಗೆ ಕಮ್ಯೂನಿಕೇಟ್ ಮಾಡುವವರು? ಮೊಟ್ಟ ಮೊದಲನೆಯದಾಗಿ ಜನರ ಬವಣೆಯನ್ನು ಗೋಳನ್ನು, ಕಷ್ಟವನ್ನು, ಸರ್ಕಾರಕ್ಕೆ ತಲುಪಿಸುವಂತಹ ವಿಧಾನವೇ ಇಲ್ಲ ಬೋರ್‌ವೆಲ್ ಅನ್ನು ಕೊರೆಯುವುದಕ್ಕೆ ಹಣವನ್ನು ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಕೊಡುತ್ತಾರೆ, ಪಂಪ್, ಮೋಟಾರ್ ಅನ್ನು ಡೆಪ್ಯೂಟಿ ಕಮೀಷನರ್ ಕೊಡುತ್ತಾರೆ ಅವರಿಬ್ಬರ ಮಧ್ಯೆ ಎಷ್ಟು ಬೇಗ ಕೊ ಆರ್ಡಿನೇಷನ್ ಆಗುತ್ತದೆ ಈ ಮೀಟಿಂಗ್ ಅನ್ನು ಮಾಡುವಂಥವರು ಯಾರು? Day to day monitor ಮಾಡುತ್ತಿದ್ದಾರಾ? ಇವತ್ತು ನೋಡಿದಂತಹ ಕೊಳವೆ ಬಾವಿ ನಾಳೆ ಡ್ರೈ ಆಗುತ್ತಿದೆ ಬೇರೆ ಎಲ್ಲಾ ವಿಚಾರಗಳಿಗೆ ಡೇಟ್ ಹಾಕಬಹುದು ನಾವು ಅವರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ಏನು ಮಾಡಬೇಕು? ಎಷ್ಟು ಜನರಿಗೆ ಕೂಲಿ ಸಿಗಬೇಕು? ಆ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇಲ್ಲ ನೀವು ಎಷ್ಟು ಜನರಿಗೆ ಕೂಲಿ ಕೊಡುತ್ತಿದ್ದೀರೆಂಬ ಇನ್‌ಫರ್‌ಮೇಷನ್ ನಿಮ್ಮ ಹತ್ತಿರ ಇದೆ

ನೀವು ಕೊಡುತ್ತಿರುವಂಥ ಸಂಖ್ಯೆ ಅಲ್ಲಿ ಬವಣೆಗೊಳಗಾಗಿರುವ ಜನರು ಯಾರು ಇದ್ದಾರೆ, ಅದಕ್ಕೆ ಮ್ಯಾಚ್ ಆಗುತ್ತದಾ? ನಾನು ಒಂದು ನಿಮಿಷಕ್ಕೆ ಇದು ಆಡಳಿತ ಪಕ್ಷದ ಸಮಸ್ಯೆ, ನಾನು ವಿರೋಧ ಪಕ್ಷದಲ್ಲಿ ಇದ್ದೇನೆ ನಾನು ಮಾತನಾಡಬೇಕೆಂದು ಮಾತನಾಡುತ್ತಿಲ್ಲ, ಕಲೆಕ್ಟೀವ್ ಆಗಿ ತಮಗೆ, ನಮಗೆ ಎಲ್ಲರಿಗೂ ಈ ವಿಚಾರದಲ್ಲಿ ರೆಸ್ಪಾನ್ಸಿಬಿಲಿಟಿ ಇದೆ ಇದು ರಾಜ್ಯದ ಮೇಲೆ ಬಂದು ಬಿದ್ದಿರುವಂತಹ ಸಂಕಷ್ಟವಾಗಿದೆ ನಾವೆಲ್ಲರೂ ಕೂಡ ಕಲೆತು ಯಶಸ್ವಿಯಾಗಿ ಈ ಕೆಲಸವನ್ನು ನಿರ್ವಹಣೆ ಮಾಡಬೇಕಾಗಿದೆ ಮೊನ್ನೆ ಒಂದು ವಾರದ ಕೆಳಗೆ ರೆವಿನ್ಯೂ ಮಿನಿಸ್ಟರ್‌ರವರು ನಮ್ಮ ಕ್ಷೇತ್ರಕ್ಕೆ ಬಂದಿದ್ದರು ನಾವೆಲ್ಲರೂ ಅವರಿಗೆ ಕಾದಿದ್ದು, ಅವರೊಡನೆ ಕುಳಿತು ಅವರಿಗೆ ನಾವೆಲ್ಲರೂ ಸಲಹೆಗಳನ್ನು ಕೊಟ್ಟೆವು ನೀವು ಬರುವುದಕ್ಕೆ ಮೊದಲು ಏನು ಪರಿಸ್ಥಿತಿ ಇತ್ತು? ನೀವು ಬಂದು ಹೋದ ಮೇಲೆ ಏನು ಪರಿಸ್ಥಿತಿ ಆಗಿದೆ Is there any improvement? ನಮಗೆ ಫೋನ್ ಮಾಡುತ್ತಲೆ ಇದ್ದಾರೆ, ಬಾವಿ ಇಲ್ಲ, ದುಡ್ಡು ಬಂದಿಲ್ಲವೆಂದು ಹೇಳುತ್ತಿದ್ದಾರೆ ಇನ್ನೊಂದು ಕಡೆ ಪಂಪ್, ಮೋಟಾರ್ ಇಲ್ಲವೆಂದು ಹೇಳುತ್ತಾರೆ ನಾವು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ, ಬಿಡುಗಡೆ ಮಾಡುವವರು ಇಲ್ಲ ನಾವೆಲ್ಲರೂ ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ನಿರ್ವಹಣೆಯನ್ನು ಮಾಡಿದ್ದೇವೆ ನಾವು ಜನಪ್ರತಿನಿಧಿಗಳು ಜೀವಂತವಾಗಿ ಇದ್ದೇವೆಂದರೆ, ಇದಕ್ಕೆ ಸಕಾಲದಲ್ಲಿ ಪ್ರತಿಕ್ರಿಯಿಸದೇ ಹೋದರೆ, ಸ್ಪಂದಿಸದೇ ಹೋದರೆ, ನಾವು ಇದ್ದಂತೆ ಲೆಕ್ಕನಾ, ಸತ್ತಂತೆ ಲೆಕ್ಕನಾ? ನಾವು ಇನ್ನು ಏನು ಮಾಹಿತಿಯನ್ನು ನಿಮ್ಮ ಮನವೊಲಿಸುವುದಕ್ಕೆ ಕೊಡಬೇಕು? ಸರ್ಕಾರ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವುದರಲ್ಲಿ ವಿಫಲವಾಗಿದೆಯೆಂದು ಹೇಳುವುದಕ್ಕೆ, ನಾನು ಯಾವ arithmetic jugglery ಮಾಡುವುದಕ್ಕೆ ಹೋಗುವುದಿಲ್ಲ, ಡಿಟೈಲ್ಸ್ ಅನ್ನು ಕೊಡುವುದಕ್ಕೆ ಹೋಗುವುದಿಲ್ಲ ಅಲ್ಲಿಂದ ಅಷ್ಟು ಕೋಟಿ ರೂಪಾಯಿಗಳು ಬಂತು, ಇಲ್ಲಿಂದ ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಈ ಪಾಸ್ ಬುಕ್ ಇಷ್ಟು ಇದೆ, ಇಷ್ಟು ಸೇವಿಂಗ್ಸ್ ಬ್ಯಾಂಕ್ ಆಕೌಂಟ್‌ನಲ್ಲಿದೆ ಇದು ಯಾವುದು ಬೇಕಾಗಿಲ್ಲ ನನ್ನ ಊರಿನಲ್ಲಿರುವಂತಹ ಕೃಷಿ ಕಾರ್ಮಿಕನಿಗೆ ಕೆಲಸ ಇಲ್ಲ ನನ್ನ ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆ ಬಂದಿದೆ, ನೀರು ಇಲ್ಲ ನಾನು ಕೃಷಿ ಕಾರ್ಮಿಕ ಈಗ ಬರಗಾಲ ಬಂದಿರುವುದರಿಂದ ಜೀವನಕ್ಕೆ ಬೇರೆ ಉಪಾಯವಿಲ್ಲ, ಹಸಿವಿನಿಂದ ನರಳುತ್ತಿದ್ದೇನೆ ಸಂವಿಧಾನ ಬದ್ಧವಾಗಿ ಹಸಿವಿನಿಂದ ನರಳುತ್ತಿರುವ ಒಬ್ಬ ಪ್ರಜೆಯನ್ನು ಕಾಪಾಡುವಂತಹ ಹೊಣೆ ನಿಮ್ಮ

ಮೇಲೆ ಇದೆಯೇ? ಇಲ್ಲವೇ? ನಾನು ಇನ್ನು ಏನು ಹೆಚ್ಚಿಗೆ ಕೇಳುವುದಕ್ಕೆ ಹೋಗುವುದಿಲ್ಲ ನೀವು ಈ ಬರಗಾಲದ ಪರಿಸ್ಥಿತಿಯಲ್ಲಿ ಯಾವ ಹಣವನ್ನು ಖರ್ಚು ಮಾಡುತ್ತೀರಿ? ಅದು ಒಂದು ಲಕ್ಷ ರೂಪಾಯಿಗಳಾಗಬಹುದು, ಒಂದು ಕೋಟಿ ರೂಪಾಯಿಗಳಾಗಬಹುದು, ನೂರು ಕೋಟಿ ರೂಪಾಯಿಗಳಾಗಬಹುದು ನೀವು ಶಾಶ್ವತವಾದ ಆಸ್ತಿಯನ್ನು ನಿರ್ಮಾಣ ಮಾಡುವುದಕ್ಕೆ ಏನಾದರೂ ಆಲೋಚನೆಯನ್ನು ಮಾಡಿದ್ದೀರಾ? ಅದಕ್ಕೆ ಸುತ್ತೋಲೆಯನ್ನು ಕಳುಹಿಸಿದ್ದೀರಾ? ಖರ್ಚು ಆದ ಹಣ ಯಾವ ಬಾಬಿನಲ್ಲಿ ಖರ್ಚು ಆಗುತ್ತಿದೆಯೆಂಬುದನ್ನು ನೋಡುತ್ತಿದ್ದೀರಾ? ಈ ಕಾರ್ಯವನ್ನು ನಿರ್ವಹಿಸಲು ಯಾವ ಯಾವ ಇಲಾಖೆಗಳನ್ನು ಇದರಲ್ಲಿ ಒಳಪಡಿಸಿಕೊಂಡಿದ್ದೀರಿ? ಜಲಾನಯನ ಇಲಾಖೆಯವರನ್ನು ಚೆಕ್ ಡ್ಯಾಮ್‌ಗಳನ್ನು ಮಾಡಲು ಏನಾದರೂ ಒಳಪಡಿಸಿಕೊಂಡಿದ್ದೀರಾ? ಹಾಗೆ ಏನಾದರೂ ಇದ್ದರೆ ಎಲ್ಲೆಲ್ಲಿ ಮಾಡಿದ್ದಾರೆ? ಎಷ್ಟು ಮಾಡಿದ್ದಾರೆ? ರಸ್ತೆಗಳನ್ನು ಮಾಡುವುದಕ್ಕೆ ಇವರನ್ನು ಏನಾದರೂ ಉಪಯೋಗ ಮಾಡಿಕೊಂಡಿದ್ದೀರಾ? ಅಥವಾ ಜೆಲ್ಲಿಯನ್ನು ಒಡೆದು ಖಾಯಂ ರಸ್ತೆಯನ್ನು ಮಾಡುವುದಕ್ಕೆ ಆದಕ್ಕೆ ಸಂಬಂದಪಟ್ಟ ಕಾರ್ಮಿಕರು ಯಾರು ಇದ್ದಾರೆ ಅವರನ್ನು ಏನಾದರೂ ಕಾರ್ಯ ನಿರತರನ್ನಾಗಿ ಮಾಡಿದ್ದೀರಾ? ಈ ಯಾವ ಪ್ರಶ್ನೆಗೂ ಉತ್ತರವಿಲ್ಲ Task Force Resolution ನಾವು ಶಾಸಕರಾಗಿ ಯಾವ ಯಾವ ಹಳ್ಳಿಯಿಂದ , ಯಾವ ಯಾವ ಗ್ರಾಮದಿಂದ ಯಾವ ಯಾವ ಬೇಡಿಕೆ ಬಂದಿದೆ ಆ ಎಲ್ಲಾ ಬೇಡಿಕೆಗಳನ್ನು comprehensive ಆಗಿ ಸೇರಿಸಿ, Task Force Resolution ಮಾಡಿದ್ದೇವೆ ಯಾವ ಸಮಯದಲ್ಲಾದರೂ ಹಣ ಬರಬಹುದು ಕಡೆ ಪಕ್ಷ ಒಂದು ಗ್ರಾಮ ಪಂಚಾಯತ್ ಒಳಗೆ 10, 15, ಗ್ರಾಮಗಳು ಇರುವಂತಹ ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಕನಿಷ್ಟ ಒಂದು ಲಕ್ಷ ರೂಪಾಯಿಗಳ, ಒಂದೂವರೆ ಲಕ್ಷ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲವೆಂದರೆ, ನಾವು ನಾಮಕಾವಸ್ಥೆಗೆ ಈ ಕೆಲಸವನ್ನು ಮಾಡುತ್ತಿದ್ದೆವಾ? ಅಥವಾ ನಿಜವಾಗಲು ಆ ವರ್ಗದ ಜನರಿಗೆ ಇರುವಂತಹ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ, ನೀಗಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವಾ? ನಾನು ಹೇಳುವಂತಹ ರೀತಿಯಲ್ಲಿ ಕೆಲಸವನ್ನು ಮಾಡುವುದಿದ್ದರೆ, ಆ ಮಾಹಿತಿ ಇದ್ದರೆ ದಯಮಾಡಿ ಮಾಹಿತಿಯನ್ನು ಕೊಡಿ ತಾವು ಎಷ್ಟು ಪಂಚಾಯತ್‌ಗಳಲ್ಲಿ ಎಷ್ಟೆಷ್ಟು ಹಣವನ್ನು ವಿನಿಯೋಗ ಮಾಡಿದ್ದೀರಿ? ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರೆಂಬುದನ್ನು

ದಯಮಾಡಿ ಹೇಳಿ? ವಿಧಾನ ಸಭೆಯ ಅಧಿವೇಶನ ಪ್ರಾರಂಭವಾಗುತ್ತದೆಂಬ ಸೂಚನೆ ಬಂದ ಕೂಡಲೇ, ಸುಮಾರು 350 ಗ್ರಾಮಗಳಿಗೂ ಕೂಡ ನಮ್ಮಲ್ಲೂ ಆ ಮಾಹಿತಿ ಇದೆ ಬೆಳಿಗ್ಗೆ 7 ಗಂಟೆ, 7 30 ಗಂಟೆ ಹೊರಟರೆ ರಾತ್ರಿ 11 00 ಗಂಟೆಯವರೆಗೂ, ಒಂದು ಸಣ್ಣ ಮುಜರಾಯಿ ಗ್ರಾಮವನ್ನು ಕೂಡ ಬಿಡದೆ, ಯಾರು ಎಲ್ಲಿ ಏನು ಹೇಳುತ್ತಾರೊ, ಎಲ್ಲಿ ನಮ್ಮ ಮೇಲೆ ಅಪಾದನೆ ಬರುತ್ತದೊ, ಹೇಳುವವರು ಸರಿಯಾದ ವರ್ತಮಾನವನ್ನು ಕೊಡುತ್ತಾರೋ, ಇಲ್ಲವೋ, ಎಂದು ಹೇಳಿ, ಪ್ರತಿ ದಿವಸ ಪ್ರತಿ ಹಳ್ಳಿಗೂ ಹೋಗುತ್ತಿದ್ದದ್ದು, ನಮಗೆ ಚುನಾವಣೆಯ ಪ್ರಚಾರವಾದ ಹಾಗೆ ಆಗಿದೆ ನಾವು ವಾಪಸ್ಸು ಬರುವುದು ರಾತ್ರಿ 11 00 ಗಂಟೆಯಾಗುತ್ತಿತ್ತು ನಾವು ಹೋದ ತಕ್ಷಣ ಕುಡಿಯುವ ನೀರಿನ ಬಗ್ಗೆ ಕೇಳಿದ್ದೇವೆ ಅನೇಕ ಕಡೆ ಈ ಸಮಸ್ಯೆ ಇದೆ ಆ ಸಮಸ್ಯೆಯನ್ನು ಪರಿಹಾರ ಮಾಡುವುದರಲ್ಲಿ ನಮ್ಮ ಪಾತ್ರ ಏನಿದೆ, ಅದು ಸಂಪೂರ್ಣ ಸೊನ್ನೆ ಇದು ನಮಗ್ಯಾರಿಗೂ ಕೂಡ ಗೌರವ ತರತಕ್ಕಂಥಾದ್ದು ಅಲ್ಲ ರಾಜಕಾರಣ ಮಾಡಲಿಕ್ಕೆ ಸಾಕಷ್ಟು ವಿಚಾರಗಳಿವೆ ನಮಗೆ ಯೋಗ್ಯತೆ, ನೈಪುಣ್ಯತೆ, ಚೈತನ್ಯ, ಶಕ್ತಿ ಇದ್ದರೆ ನಾವು ರಾಜಕಾರಣ ಮಾಡುತ್ತೇವೆ ಬರಗಾಲದಲ್ಲಿ ರಾಜಕಾರಣವನ್ನು ಮಾಡತಕ್ಕಂಥ ನೀಚತನಕ್ಕೆ ನಾವು ಹೋಗುವುದಿಲ್ಲ ಮಾನ್ಯ ಚೆಲುವರಾಯಸ್ವಾಮಿಯವರು ಹೇಳಿದಂತೆ ಈಗ ಎಲ್ಲವೂ ಆಕಸ್ಮಿಕಗಳೇ ಆಕಸ್ಮಿಕವಾಗಿ ನೀವು ಅಲ್ಲಿ ಕುಳಿತಿದ್ದೀರಿ, ಸರ್ಕಾರ ನಡೆಸುತ್ತಿದ್ದೀರಿ ಆಕಸ್ಮಿಕವಾಗಿ ನಾವು ಇಲ್ಲಿದ್ದೇವೆ ಆದ್ದರಿಂದ ಆಕಸ್ಮಿಕವಾಗಿ ಈ ಹೊತ್ತು ಆ ಜವಾಬ್ದಾರಿ ನಿಮ್ಮ ಮೇಲಿದೆ ಇವತ್ತಿನ ಸರ್ಕಾರವಾದಂಥ ನೀವು ಈ ಒಂದು ಪರಿಸ್ಥಿತಿಯನ್ನು ನಿಭಾಯಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ ಎನ್ನತಕ್ಕಂಥ ಮಾತನ್ನು, ಎಲ್ಲ ಸ್ಪಷ್ಟ ಆಧಾರಗಳ ಮೇಲೆ ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುತ್ತಿದ್ದೇನೆ ಈ ಸದನದ ಕಲಾಪವನ್ನು ಮುಂದೂಡಿ, ತಕ್ಷಣ ಬರಗಾಲದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಇದಕ್ಕಿಂತ ಯೋಗ್ಯವಾದಂಥ ವಿಷಯವಿಲ್ಲ, ಇದಕ್ಕಿಂತಲೂ ಹೆಚ್ಚು ವಿವರಗಳು ಬೇಕಾಗಿಲ್ಲ ಅದಕ್ಕೆ ಈಗ ಅಗತ್ಯವಿರತಕ್ಕಂಥಾದ್ದು ಎಂದರೆ ಒಂದು ಮನಸ್ಸು ನಿಮಗೆ ಆ ದಿಟ್ಟವಾದಂಥ ಮನಸ್ಸು ಬರಬೇಕು ಆಡಳಿತ ನಡೆಸತಕ್ಕಂಥವರಿಗೆ ಬುದ್ಧಿ ಇರಬೇಕಾಗುತ್ತದೆ ಆಡಳಿತ ನಡೆಸತಕ್ಕಂಥ ರಾಜಕಾರಣಗಳಿಗೆ ಹೃದಯ ಇರಬೇಕಾಗುತ್ತದೆ ನೀವು ಹೃದಯವಂತರಾಗಿ ಕೆಲಸ ಮಾಡಬೇಕು ನಾನು ತಮ್ಮಲ್ಲಿ ಕೈಜೋಡಿಸಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ರಾಜ್ಯದಲ್ಲಿ ಕಿತ್ತು ತಿನ್ನುತ್ತಿರತಕ್ಕಂಥ ಈ ಒಂದು ಕಷ್ಟದ ಸಮಸ್ಯೆಯ ಕಡೆಗೆ ನಮ್ಮ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು, ನಾವು ಮಂಡಿಸಿರುವ

ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು ಎಂದು ನಾವು ತಮಗೆ ಏನು ಮನವಿಯನ್ನು ಸಲ್ಲಿಸಿದ್ದೇವೆ, ಇದಕ್ಕೆ ಈ ಕೂಡಲೇ ತಮ್ಮ ಅಂಗೀಕಾರವನ್ನು ಕೊಟ್ಟು, ಎಲ್ಲ ಕಲಾಪವನ್ನು ಮುಂದೂಡಿ, ತಕ್ಷಣ ಇದನ್ನು ತೆಗೆದುಕೊಳ್ಳೇಕು ಎಂದು ಹೇಳಿ, ನನ್ನ ಮಾತುಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ನಮ್ರ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಅದಕ್ಕೆ ಹಿರಿಯರಾದಂಥ ಸದಸ್ಯರು ಧ್ವನಿಗೂಡಿಸಿ, ಇದೊಂದು ಬಹಳ ಮಹತ್ವವಾದ ವಿಷಯವಾಗಿರುವುದರಿಂದ, ಅಧಿಕಾರದಲ್ಲಿರುವವರಿಗೆ ಬುದ್ಧಿ ಮತ್ತು ಮನಸ್ಸು ಎರಡೂ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ

ಶ್ರೀ ಎನ್ ಚೆಲುವರಾಯಸ್ವಾಮಿ ಹೃದಯವೂ ಇರಬೇಕೆಂದು ಹೇಳಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಹೃದಯವೂ ಇರಬೇಕೆಂದು ಹೇಳಿದ್ದಾರೆ ಅದು ಹೇಳುವ ಒಂದು idiom ಹೃದಯವೆಂದರೆ ಅದು ಹೃದಯವೇ ಅದರಲ್ಲಿ ಅನುಕಂಪದ ಹೃದಯ, ಕರುಣೆಯ ಹೃದಯ, ಕಠಿಣ ಹೃದಯ ಎಂದು ಇರುವುದಿಲ್ಲ It cannot be a hard heart or soft heart ಅದೇನಾದರೂ ಇದ್ದುಕೊಳ್ಳಲಿ, ಅದರ ಬಗ್ಗೆ ಈಗ ಬೇಡ ಆದರೆ ಅಧಿಕಾರಕ್ಕೆ ಸ್ನೇಹಿತರು ಇರುವುದಿಲ್ಲ ಎನ್ನುವುದು ಮಾತ್ರ ನನಗೆ ಗೊತ್ತು ಏಕೆಂದರೆ, ಅಧಿಕಾರದಲ್ಲಿದ್ದಂಥವರಿಗೆ ಅನೇಕ ಸಂದರ್ಭಗಳಲ್ಲಿ ಸ್ನೇಹಿತರು ಇರುವುದಿಲ್ಲ ತಪ್ಪು ಕಂಡುಹಿಡಿಯತಕ್ಕಂಥಾದ್ದೂ ಕೂಡ ಬಹಳ ಮುಖ್ಯವಾಗಿರತಕ್ಕಂಥಾದ್ದು ಅಧಿಕಾರದಲ್ಲಿರತಕ್ಕಂದವರು ಟೀಕಾಚಿತ್ತರಾಗಿರಲಿಕ್ಕೆ ಸಾಧ್ಯವೇ ಇಲ್ಲ, ಚರ್ಚೆಗೆ ಒಳಗಾಗಲೇ ಬೇಕಾಗುತ್ತದೆ ಈಗ ಇಲ್ಲಿ ಹಿರಿಯ ಸದಸ್ಯರು ಮಾಡಿರುವ ಪ್ರಸ್ತಾಪದ ಬಗ್ಗೆ ಈ ಸರ್ಕಾರದಲ್ಲಿ ಯಾವುದೇ ತರವಾದಂಥ ಆಕ್ಷೇಪಣೆಗಳಿಲ್ಲ ಚರ್ಚೆ ಮಾಡಲಿಕ್ಕೆ ಈ ಸರ್ಕಾರ ಹಿಂಜರಿಯುವುದಿಲ್ಲ ಅವರು ಯಾವಯಾವ ವಿಷಯವನ್ನು ಪ್ರಸ್ತಾಪಿಸಿ, ಮಾಹಿತಿಯನ್ನು ಪಡೆಯಬೇಕೆಂದು ಬಯಸುತ್ತಿದ್ದಾರೆ, ಆ ಎಲ್ಲ ಮಾಹಿತಿಗಳೂ ನಮ್ಮ ಹತ್ತಿರ ಇವೆ ಆದರೆ, ಈಗಿರತಕ್ಕಂಥ ಪ್ರಶ್ನೆಯೆಂದರೆ, ಈ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಿದ್ದರೆ ಅದು ನಿಲುವಳಿ

ಸೂಚನೆಯ ರೂಪದಲ್ಲಿಯೇ ಬರಬೇಕೇ ಅದವಾ ಬೇರೆ ರೂಪದಲ್ಲಿ ಬರಬೇಕೇ ಎನ್ನುವುದು ಬೇರೆ ರೂಪದಲ್ಲಿ ಬರಬೇಕಾಗಿದ್ದರೆ, ಅದು ಯಾವ ನಿಯಮಾವಳಿಗಳಡಿಯಲ್ಲಿ ಬಡರಬೇಕು? ಮತ್ತು ನಾವು ಅನೇಕ ಇಂಥ ಮಹತ್ವದ ವಿಚಾರಗಳನ್ನು ಚರ್ಚೆ ಮಾಡುವಾಗ ನಿಲುವಳಿ ಸೂಚನೆಗಳನ್ನು ತರಬೇಕಾದಂಥ ಸನ್ನಿವೇಶಗಳೇನು? ಆ ನಿಲುವಳಿ ಸೂಚನೆಯ ಜವಾಬ್ದಾರಿ ಎಷ್ಟರ ಮಟ್ಟಿಗಿರುತ್ತದೆ? ಯಾವ ಸನ್ನಿವೇಶದಲ್ಲಿ ತಾವು ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎನ್ನುವ ಬಗ್ಗೆ ತಾವು, ಮಾನ್ಯ ರಮೇಶ್ ಕುಮಾರ್ ರವರು ಆ ಸ್ಥಾನದಲ್ಲಿದ್ದಂಥ ಸಂದರ್ಭಗಳಲ್ಲಿ ಕೊಟ್ಟಿರತಕ್ಕಂಥ ತೀರ್ಮಾನಗಳು, ಅದಕ್ಕೂ ಹಿಂದೆ ಇದ್ದಂಥ ನಮ್ಮ ಅನೇಕ ಘನವೆತ್ತ ಸ್ಪೀಕರ್‌ಗಳು ಕೊಟ್ಟಿರತಕ್ಕಂಥ ತೀರ್ಮಾನಗಳ ಆಧಾರದ ಮೇಲೆ, ನಮ್ಮ ಸಭೆಯ ಕಾರ್ಯಕಲಾಪಗಳನ್ನು ನಾವು ನಡೆಸಿಕೊಂಡು ಹೋಗುತ್ತಿದ್ದೇವೆ ಆದ್ದರಿಂದ, ಅಕಸ್ಮಾತ್ ಈ ಸರ್ಕಾರ ಈ ನಿಲುವಳಿ ಸೂಚನೆಯನ್ನು ತಾಂತ್ರಿಕ ಕಾರಣಗಳಿಗಾಗಿ ವಿರೋಧ ಮಾಡಿಕೊಂಡು, ಅದರ ಮೂಲಕವಾಗಿ ರಕ್ಷಣೆಯನ್ನು ಪಡೆಯುತ್ತಿದೆ ಎಂದು ತಾವು ಅನ್ಯದಾ ಭಾವಿಸಬಾರದು ಈ ಸದನದಲ್ಲಿ ಮತ್ತು ಸದನದ ಹೊರಗಡೆ ಎಲ್ಲ ರೀತಿಯ ಚರ್ಚೆಗೆ ಮುಕ್ತ ವಾತಾವರಣವಾಗಬೇಕು ಮತ್ತು ಅದಕ್ಕೆ ಉತ್ತರವನ್ನು ಕೊಡಬೇಕು ಅದಕ್ಕೆ ಇದು ನಿಜವಾಗಿಯೂ ಒಂದು ಸವಾಲು ಮತ್ತು ಒಂದು ಅವಕಾಶ ಎಂದು ನಾವು ಭಾವಿಸಿಕೊಂಡಿದ್ದೇವೆ ಇಂಥ ಒಂದು ದೊಡ್ಡ ವೇದಿಕೆ ನಮ್ಮ ಸರ್ಕಾರಕ್ಕೆ ಮತ್ತೆ ಸಿಗುವುದಿಲ್ಲ ನಾವು ಏನೆಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದೇವೆ, ಕೇಂದ್ರ ಸರ್ಕಾರ ನಮಗೆ ಎಷ್ಟರಮಟ್ಟಿಗೆ ಪ್ರತಿಕ್ರಿಯಿಸಿದೆ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಯಾವ ರೀತಿಯಾಗಿದೆ ಮತ್ತು ಇಂಥ ವಿಚಾರಗಳ ಬಗ್ಗೆ ನಾವು ಹೊರಗಡೆ ಇರತಕ್ಕಂಥ ಜನತೆಗೆ ಈ ಸದನದ ಮೂಲಕ ತಿಳಿಸಲೇಬೇಕಾಗಿರತಕ್ಕಂಥ ಜವಾಬ್ದಾರಿ ವಿರೋಧ ಪಕ್ಷದವರಿಗಿಂತಲೂ ಹೆಚ್ಚಾಗಿ ಆಡಳಿತ ಪಕ್ಷದ, ಮೇಲೆ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ತಾವು ಕೇಳಿರತಕಂಥಾದ್ದರ ಬಗ್ಗೆ ನಮ್ಮದೇನೂ ಆಕ್ಷೇಪಣೆಗಳಿಲ್ಲ ಆದರೆ, ಯಾವಾಗ ನಿಲುವಳಿ ಸೂಚನೆಯನ್ನು ತರಬಹುದು ಮತ್ತು ಯಾವ ಸಂದರ್ಭದಲ್ಲಿ ತಂದಾಗ ಅದಕ್ಕೆ ಅನುಮತಿಯನ್ನು ಕೊಡಬೇಕಾದುದಿಲ್ಲ ಎನ್ನುವುದನ್ನು ಮತ್ತು ಬೇರೆ ಒಂದು ಅವಕಾಶವಿದ್ದಾಗ ನಿಲುವಳಿ ಸೂಚನೆಯನ್ನು ತರಬೇಕಾದಂಥ ಅಗತ್ಯವಿಲ್ಲ ಎನ್ನುವುದಕ್ಕೆ, ಹಿಂದೆ ಇದೇ ಸದನದಲ್ಲಿ ಇಂಥಾದ್ದೇ ಒಂದು ಸನ್ನಿವೇಶ ಬಂದಾಗ,

> "On 27th January of 1970, the Hon'ble Members Sri T R Shamanna and Sri H M Channabasappa and Sri K Rajaiah Shetty had given notices of adjournment motion regarding acceptance of higher tender by the Bangalore Water Supply and Sewerage Board and requested the Chair to give a consent for moving them"

ಎನ್ನತಕ್ಕಂದ ಒಂದು ವಿಷಯದ ಮೇಲೆ ಮಾತನಾಡುತ್ತಾರೆ ಆ ವಿಷಯ ಬಂದಾಗ ಅಲ್ಲಿ ಇಂಥಹುದೇ ಒಂದು ಸನ್ನಿವೇಶವಿತ್ತು ಆಗ ಅವರು ಹೇಳುತ್ತಾರೆ,

> "I am also as much interested in the matter as all the Hon'ble Members who have raised this Now, the question is whether the normal business namely the motion of thanks to the Governor's speech should be adjourned to take up this business The only point that lays with me is whether all these matters cannot be raised during the present debate and whether a separate time should be allotted for it? The Hon'ble Member Sri R Dayananda Sagar has stated his case in a very powerful way and others also may do likewise The matter raised is important I do not want to under estimate its importance But, the Members may take advantage of the opportunity now available to them and express their views and the Government is bound to give a reply to it I have also admitted a call attention note When a Member calls the attention of the Minister to the

> matter, the Government has got to make a statement Under these circumstances, I am sorry, I cannot give my consent to this motion and also I withhold my consent"

ಇಲ್ಲಿ, ಸನ್ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಘನವೆತ್ತ ರಾಜ್ಯಪಾಲರು ದಯಪಾಲಿಸಿರತಕ್ಕಂಥ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುವಂಥ ಒಂದು ವಿಷಯವನ್ನು ತಮಗೆ ಕೊಟ್ಟಿದ್ದಾರೆ ಅದನ್ನು ನಮ್ಮ ಮಾನ್ಯ ರಾಜಣ್ಣನವರು ಅನುಮೋದಿಸಿದ್ದು, ಅದು ಈಗಾಗಲೇ ಸ್ವೀಕೃತವಾಗಿದೆ ಅದು ಇವತ್ತಿನ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಕೂಡ ಇದೆ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣದ ಮೇಲಿನ ವಂದಾನಾ ನಿರ್ಣಯದ ಮೇಲೆ ಮಾತನಾಡುವಾಗ ಅನೇಕ ವಿಷಯಗಳನ್ನು, ರಾಜ್ಯ ಸರ್ಕಾರದ ವೈಫಲ್ಯಗಳನ್ನು, ಅದು ದೂರದೃಷ್ಟಿರಹಿತವಾಗಿ ಕೆಲಸ ಮಾಡಿದಂಥ ವಿಷಯಗಳನ್ನು ಚರ್ಚೆ ಮಾಡಲು ಬೇಕಾದಷ್ಟು ಅವಕಾಶಗಳಿರುವಂಥ ಸನ್ನಿವೇಶದಲ್ಲಿ, ಎಲ್ಲ ಕಾರ್ಯಕಲಾಪಗಳನ್ನು ಮುಂದೂಡಿ, ಇದು ಬಹಳ ಮಹತ್ವದ್ದು ಅನ್ನತಕ್ಕಂಥಾದ್ದರ ಮೂಲಕವಾಗಿ ನಿಲುವಳಿ ಸೂಚನೆಯನ್ನು ತರಬೇಕಾದಂಥ ಅಗತ್ಯವಿರಲಿಲ್ಲ ನಿಲುವಳಿ ಸೂಚನೆಯನ್ನು, ತೀರಾ ಇತ್ತೀಚೆಗೆ ಆದ, ಅತ್ಯಂತ ಮುಖ್ಯವಾಗಿರತಕ್ಕಂಥ ವಿಷಯದ ಬಗ್ಗೆ ತರಬೇಕು ಇದು ಬಹಳ ಪ್ರಮುಖವಾದಂಥ ವಿಪಯ ಬರಗಾಲ ಎಲ್ಲರಿಗೂ ಸಂಬಂಧಪಟ್ಟಿರತಕ್ಕಂಥಾದ್ದು, ಈ ಹಸಿವಿಗೆ ಯಾವುದೇ ತರವಾದಂಥ ರಾಜಕೀಯ ಲೇಪನಗಳನ್ನು ಹಚ್ಚಬೇಕಾದಂಥ ಅಗತ್ಯತೆ ಇಲ್ಲ ಇಂಥಾದ್ದನ್ನು ನಿರ್ವಹಿಸಲಿಕ್ಕೆ ಸಾಧ್ಯವಿಲ್ಲದಿದ್ದರೆ ಅದು ಸರ್ಕಾರವೇ ಅಲ್ಲ ಆ ಕಾರಣಕ್ಕಾಗಿ ತಾವು ಕೊಡುವಂಥ ಸಲಹೆಗಳನ್ನು, ಸೂಚನೆಗಳನ್ನು ನಾವು ಸ್ವೀಕರಿಸಬೇಕಾಗುತ್ತದೆ ಈಗ ನನ್ನ ಆಕ್ಷೇಪಣೆ ಇರತಕ್ಕಂಥಾದ್ದು ಇಷ್ಟೇ, ನಿಲುವಳಿ ಸೂಚನೆಯ ರೂಪದಲ್ಲಿ ಇದನ್ನು ಚರ್ಚೆಗೆ ತೆಗೆದುಕೊಂಡು, ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಮಾಡುವುದಕ್ಕಿಂತಲೂ ಹೆಚ್ಚಾಗಿ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿಯೂ ಕೂಡ ಈ ವಿಚಾರದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬಹುದು ಅದೂ ಕೂಡ ಒಂದು ದಾರಿಯಾಗಿದೆ ಅಕಸ್ಮಾತ್, ಆ ದಾರಿಯಲ್ಲಿ ಹೋದರೆ ತಡವಾಗುತ್ತದೆ, ಹೇಳುವಂಥ ವಿಷಯದ ಮಹತ್ವ ಏನಿರುತ್ತದೆ, ಆ ಮಹತ್ವ ಕಡಿಮೆಯಾಗುತ್ತದೆ, ನಿಲುವಳಿ ಸೂಚನೆಗಿರುವಂಥ ಮಹತ್ವ, ವಂದನಾ ನಿರ್ಣಯದ ಮೇಲಿನ

ಚರ್ಚೆಯಲ್ಲಿ ಭಾಗವಹಿಸಿದಾಗ ಇರುವುದಿಲ್ಲ ಎನ್ನುವಂಥ ಅಭಿಪ್ರಾಯ ಹಿರಿಯ ಸದಸ್ಯರಿಗಿದ್ದರೆ, ಇದನ್ನು ಮತ್ತೊಂದು ರೂಪದಲ್ಲಿ ಕೂಡ ಚರ್ಚೆಗೆ ತೆಗೆದುಕೊಳ್ಳಬಹುದು ನಿಯಮ 69ರ ಕೆಳಗೆ ಅದನ್ನು ನೀವು ಪರಿವರ್ತನೆ ಗೊಳಿಸಿ, ಪ್ರಶ್ನೋತ್ತರ ವೇಳೆ ಮುಗಿದ ನಂತರ ತೆಗೆದುಕೊಳ್ಳಲಿಕ್ಕೂ ಕೂಡ ಅವಕಾಶವಿದೆ ಮತ್ತು ಆ ಪರಿವರ್ತನೆಯನ್ನು ತಾವೇ ಮಾಡಿಕೊಡಲಿಕ್ಕೆ ಕೂಡ ಅವಕಾಶವಿದೆ ಇದರ ಜೊತೆಗೂ ಕೂಡ ಬಹಳ ಮುಖ್ಯವಾಗಿರತಕ್ಕಂಥ ನಮ್ಮವರೇ ನಮ್ಮಲ್ಲಿ ಕೊಟ್ಟಿರತಕ್ಕಂಥ ಒಂದು ನಿರ್ಣಯವಿದೆ ಮತ್ತೊಂದು ನಿರ್ಣಯದಲ್ಲಿ "Not admissible when an ordinary parliamentary opportunity will shortly occur to discuss the subject matter" ಎಂದು ಆ ಸನ್ನಿವೇಶದಲ್ಲಿ ಹೇಳುತ್ತಾ,

> "As the hon Members know, an adjournment motion is intended to raise a discussion on a matter which could not be otherwise discussed under the ordinary procedure of the House and will result in interrupting the appointed business of the House In order that such interruption may be only in exceptional circumstances and for very special reasons, several restrictions have been imposed by the rules It is also the duty of the Speaker to examine if the purpose of the adjournment motion cannot be secured without upsetting the arranged list of business For the purpose of the present motion, it is enough to state that a uniform and long series of rulings in the House of Commons and in the Parliament of India and in our own Legislature in the past have laid down that where an ordinary parliamentary opportunity will shortly occur to discuss the subject matter of an adjournment

> motion, then permission of the Speaker to the adjournment motion should be refused"

ಇದು ಬಹಳ ಪ್ರಮುಖವಾಗಿರತಕ್ಕಂಥ ಒಂದು ತೀರ್ಮಾನವನ್ನು ತಮ್ಮ ಹಿಂದಿನವರು ಇಲ್ಲಿ ಕೊಟ್ಟಿದ್ದಾರೆ ಇದಕ್ಕೆ ಅವಕಾಶವಿದೆ ನಮ್ಮ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದಲ್ಲಿ ನಾವೇ ನಿರ್ಧರಿಸಲ್ಪಟ್ಟಿರತಕ್ಕಂಥ ಕಾರ್ಯಪಟ್ಟಿಯ ವಿಷಯಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕಾದಂಥ ಅಗತ್ಯತೆ ಇಲ್ಲ ಒಂದು ವೇಳೆ ಅದನ್ನು ನಾವು ತೆಗೆದುಕೊಳ್ಳಲೇಬೇಕು, ಇಲ್ಲದಿದ್ದರೆ ಅದಕ್ಕೆ ಅಷ್ಟು ಮಹತ್ವ ಸಿಗಲಾರದು ಎನ್ನುವುದಾಗಿದ್ದರೆ ಸರ್ಕಾರ ಮರೆಮಾಚುವುದಿಲ್ಲ ನಿಯಮ 69ರ ಕೆಳಗಡೆಗೆ ಅದನ್ನು ಪರಿವರ್ತನೆ ಮಾಡಿ ಅದರ ಚರ್ಚೆಗೆ ಕೂಡ ತಾವು ತೆಗೆದುಕೊಳ್ಳುವುದಕ್ಕೆ ಸರ್ವಸಮ್ಮತಿ ಇರತಕ್ಕಂಥದ್ದು ಇದೆ ಇನ್ನು ಬೇರೆ ತಾಂತ್ರಿಕ ಕಾರಣಗಳು ಕೂಡ ಇವೆ ಈ ಬರಗಾಲ ಎನ್ನತಕ್ಕಂಥದ್ದು ಪ್ರಾರಂಭವಾಗಿರುವುದು ತಮಗೆ ಗೊತ್ತಿದೆ ಅದು ನಮ್ಮ ಬೆನ್ನಿಗೆ ಹಿಂದೆ ಹುಟ್ಟಿರತಕ್ಕಂಥ ಅಣ್ಣತಮ್ಮಂದಿರ ಹಾಗೆ ಇದು ಬರುತ್ತಲೇ ಇದೆ 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಈಗಾಗಲೇ ಘೋಷಿಸಿದ್ದೇವೆ ವಾಡಿಕೆ ಮಳೆಗಿಂತಲೂ ಕೂಡ ಶೇಕಡ 38 ರಷ್ಟು ಮಳೆ ಕಡಿಮೆಯಾಗಿ 1971ರ ಸಾಲಿನಲ್ಲಿ ತಾವೆಲ್ಲರೂ ಕೂಡ ದಿವಂಗತ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಯಾವ ದೊಡ್ಡ ಪ್ರಮಾಣದ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಸಚಿವರು Kindly withhold your reply

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, I am not replying You have also said so many other things Kindly listen to me sir I am not yielding

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಆಕ್ಷೇಪಣೆಯನ್ನು ಎತ್ತಿದ್ದಾರೆ ಅದಕ್ಕೆ ಉತ್ತರ ಕೊಡಬೇಕಾದಂಥ ಸಂದರ್ಭದಲ್ಲಿ ಉತ್ತರ ಕೊಡಿ ನಮಗೆ ಮೊದಲು ಅವಕಾಶ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ ಅವಕಾಶ ಇದೆ I have not even concluded

ಶ್ರೀ ಕೆ ಆರ್ ರಮೇಶ್ ಕುಮಾರ್ ಉತ್ತರ ಕೊಡುವುದಕ್ಕೆ ನಿಮಗೆ ಅವಕಾಶ ಸಿಕ್ಕಿದಾಗ you can explain You can give the reply

ಶ್ರೀ ಎಂ ಪಿ ಪ್ರಕಾಶ್ ಈಗ ತಾವು ಅವರ ಮನವೊಲಿಸುವಂಥ ಸಂದರ್ಭವನ್ನು ಉಪಯೋಗಿಸಿಕೊಂಡು ರಾಜನೀತಿಯ ಅನೇಕ ವಿಚಾರಗಳನ್ನು ಹೇಗೆ ತಾವು ಪ್ರಸ್ತಾಪ ಮಾಡಿದರೋ ಹಾಗೆಯೇ ಈ ಬರಗಾಲ ಬಹಳ ತೀವ್ರವಾಗಿರತಕ್ಕಂಥದ್ದು, 128 ತಾಲ್ಲೂಕುಗಳಲ್ಲಿ ಬರಗಾಲವಿದೆ, 1971ರ ಸಾಲಿನಲ್ಲಿ ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಇದ್ದ ಬರಗಾಲದಷ್ಟೇ ಪ್ರಮಾಣದ ತೀವ್ರತೆ ಇಲ್ಲಿದೆ ಅದರ ಬಗ್ಗೆ ನಾವು ಮುಚ್ಚಿಡಬೇಕಾಗಿರತಕ್ಕಂಥದ್ದು ಏನೂ ಇಲ್ಲವೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ ನಿಮ್ಮ ಸಹಾಯಕ್ಕೇ ನಾನು ಬರುತ್ತಿದ್ದೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಬಹಳ ಸಂತೋಷ

ಶ್ರೀ ಎಂ ಪಿ ಪ್ರಕಾಶ್ ಹೌದು ನೀವು ಸಂತೋಷ ಪಡಲೇಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ ನಮ್ಮ ಸಹಾಯಕ್ಕೆ ಬರಬೇಕಾದರೆ ಬನ್ನಿ permanently

ಶ್ರೀ ಎಂ ಪಿ ಪ್ರಕಾಶ್ ಆಗಲಿ, ಸರ್ ಆಗ ನಮ್ಮನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ ಎನ್ನುವುದರ ಮೇಲೆ ಅವಲಂಬನೆಯಾಗಿರುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಷ್ಟು ಮಾತ್ರ ಹೇಳಬಹುದು ಅದೇನೆಂದರೆ, ಅವರಿಗಿಂತಲೂ ಬಹಳ ಚೆನ್ನಾಗಿ ನೋಡಿಕೊಳ್ಳುತ್ತೇವೆ This much guarantee I can give

ಶ್ರೀ ಎಂ ಪಿ ಪ್ರಕಾಶ್ ಆಗಲಿ ಸರ್ ತಮಗೆ ವಂದನೆಗಳು ಸರ್

ಶ್ರೀ ಆರಗ ಜ್ಞಾನೇಂದ್ರ ಧೃತರಾಷ್ಟ್ರ ಆಲಿಂಗನ ಆಗಿಬಿಟ್ಟರೆ ಕಷ್ಟವಾಗುತ್ತದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇಲ್ಲ, No, no, ನಮ್ಮಲ್ಲಿ ಹಾಗೆ ಆಗುವುದೇ ಇಲ್ಲರೀ ಈಗ ನಿಮಗೆ ಆಗಿದೆ ನೋಡಿ, ಪಾಪ ಮಾನ್ಯ ಆರಗ ಜ್ಞಾನೇಂದ್ರ ಇಷ್ಟು senior man ಅವರಿಗೆ ಹೇಗೆ treat ಮಾಡಿದ್ದಾರೆಂದು ನಿಮಗೆಲ್ಲ ಗೊತ್ತಿದೆ ಅದಕ್ಕೆ ಅವರಿಗೂ re-treat ಮಾಡಿದ್ದಾರೆ

ಶ್ರೀ ಎಂ ಪಿ ಪ್ರಕಾಶ್ ಅಲ್ಲ ಸರ್ ನಮ್ಮ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಜನ ನೋಡಿಕೊಂಡಿರುವುದಿಲ್ಲ ನಿಮ್ಮ ಮೇಲೆ ನಾವು ಕರುಣೆ ಇಟ್ಟಿದ್ದೇವೆ

ಶ್ರೀ ಎಂ ಪಿ ಪ್ರಕಾಶ್ ಅದು ಬಹಳ ಅಪಾಯಕಾರಿಯಾದದ್ದು ಕರುಣೆ ಅದು ಯಾರೂ ಕೂಡ ಇನ್ನೊಬ್ಬರ ಕರುಣೆಯಲ್ಲಿ ಮುಲ್ಾಜಿನಲ್ಲಿ ಬದುಕಬಾರದು ಆದ್ದರಿಂದ ಆ ಕರುಣೆ ಬಹಳ ಅಪಾಯಕಾರಿ ಸರ್ ನನ್ನ ಬಗ್ಗೆ ನೀವು ಪ್ರೀತಿ ತೋರಿಸಿ, ಸಾಕು ಅಷ್ಟೆ ಅವರು ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಾರೋ ಇಲ್ಲವೋ ಎನ್ನುವುದನ್ನು ತಾವು ತೂಕ ಮಾಡಿ ಅದರ ಬಗ್ಗೆ ಏನೂ ಇಲ್ಲ ಆದ್ದರಿಂದ, ಈ ಸಂದರ್ಭದಲ್ಲಿ ಬಹಳ ಗುರುತರವಾಗಿರತಕ್ಕಂಥ ಈ ಬರಗಾಲದ ಬಗ್ಗೆ ಸರ್ಕಾರ ಏನೆಲ್ಲ ಮಾಡಿದೆ ಎನ್ನುವುದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ ಚರ್ಚೆಗೂ ಕೂಡ ತಯಾರಿದ್ದೇವೆ ಈಗ ನಮ್ಮಲ್ಲಿಯೇ ಇರತಕ್ಕಂಥ ತೀರ್ಮಾನಗಳ ಹಿನ್ನೆಲೆಯಲ್ಲಿ ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡದೆ ಅದನ್ನು ತಾವು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳುವಂತೆ ಪರಿವರ್ತನೆ ಮಾಡಿ ಅವಕಾಶ ಕಲ್ಪಿಸಿಕೊಡಬಹುದು ಇಲ್ಲದಿದ್ದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ಏನಿದೆ ಆ ಸಂದರ್ಭದಲ್ಲಿ ಕೂಡ ಬರ ಕುರಿತು ಚರ್ಚೆ ಮಾಡಬಹುದು ಏಕೆಂದರೆ, ಹಿಂದೆ ಕೊಟ್ಟ ತೀರ್ಮಾನದ ವಿರುದ್ಧ ನಾವು ಹೋಗಬಾರದೆನ್ನುವ ಕಾರಣಕ್ಕಾಗಿಯೇ ನಾನು ವಿರೋಧ ಪಕ್ಷದ ಎಲ್ಲಾ ನಾಯಕರುಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಚರ್ಚೆಯಾಗಬೇಕೆನ್ನುವುದು ತಮ್ಮ ಮುಖ್ಯ ಗುರಿಯಾಗಿರುತ್ತದೆ ಚರ್ಚೆಗೆ ನಾವು ತಯಾರಿದ್ದೇವೆ ಯಾವ ರೂಪದಲ್ಲಿ ಚರ್ಚೆಯಾಗಿ ನಾವು ಉತ್ತರ ಕೊಡುವುದಿಲ್ಲ ಎಂದು ತಪ್ಪಿಸಿಕೊಳ್ಳವುದಾದರೆ ಆ ಮಾತು ಬೇರೆ ಇತ್ತು ಉತ್ತರ ಕೊಡಲಿಕ್ಕೆ ನಾವು ತಯಾರಾಗಿರುವ ಕಾರಣದಿಂದ ಚರ್ಚೆ ಯಾವ ರೂಪದಲ್ಲಿ ಬಂದರೂ ಕೂಡ ನಿಮಗೆ ಉತ್ತರ ಸಿಗುತ್ತದೆ ಎನ್ನುವ ಕಾರಣಕ್ಕಾಗಿಯೇ ಮತ್ತು ಜನತೆಗೆ ಪರಿಹಾರ ಸಿಗುತ್ತದೆ ಎನ್ನುವ ಕಾರಣಕ್ಕಾಗಿಯೇ ದಯವಿಟ್ಟು ನಿಲುವಳಿ ಸೂಚನೆಯನ್ನು ತಾವು ಮೊದಲನೇ ನೋಟದಲ್ಲಿ you have to dismiss in-limine ಎಂದು ಹೇಳುತ್ತಾರಲ್ಲ ಆ ತರಹದಲ್ಲಿ ತಾವು ಅದನ್ನು ತಿರಸ್ಕಾರ ಮಾಡಿ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

4 30 P M

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಮ್ಮ ನಿಲುವಳಿ ಸೂಚನೆಗೆ ತಾವು ಮನ್ನಣೆಯನ್ನು ನೀಡಬೇಕಾದ ಅಗತ್ಯವಿಲ್ಲವೆಂದು ಸಮರ್ಥನೆ ಮಾಡಿಕೊಳ್ಳುವಾಗ, 1970ನೇ ಇಸವಿಯಲ್ಲಿ ಈ ಸದನದಲ್ಲಿ ನಡೆದಂಥ ಒಂದು ಪ್ರಕರಣವನ್ನು ಉಲ್ಲೇಖ ಮಾಡಿದ್ದಾರೆ ನಾವು ಆಡತಕ್ಕಂಥ ಎಲ್ಲಾ ಮಾತುಗಳು ಇಂಥ ಸಂದರ್ಭಗಳಲ್ಲಿ ಕಡತಕ್ಕೆ ಹೋಗುತ್ತವೆ ಮುಂದೆ ಇದು ಚರಿತ್ರೆಯಾಗುತ್ತದೆ ಒಂದು ಟೆಂಡರ್ ವಿಚಾರಕ್ಕೆ ಐದಾರು ಜನ ಶಾಸಕರುಗಳು ಟೆಂಡರ್‌ನಲ್ಲಿ ಏರುಪೇರಾಗಿದೆ, ಆದ್ದರಿಂದ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೊಟ್ಟ ವಿಚಾರಕ್ಕೆ ನೀಡಿದ ತೀರ್ಪನ್ನು ರಾಜ್ಯದ 128 ತಾಲ್ಲೂಕುಗಳಲ್ಲಿ ಹಬ್ಬಿರತಕ್ಕಂದ ಬರಗಾಲದ ಸಮಸ್ಯೆಗೆ ಹೋಲಿಕೆ ಮಾಡಿ, ಅದರ ಮೇಲೆ ನೀವು ಆಧಾರ ಪಟ್ಟು, ಆದ್ದರಿಂದ ನೀವು ತಿರಸ್ಕಾರ ಮಾಡಬೇಕೆಂದು ಹೇಳುವುದಾದರೆ, ನಾನು ಹಿರಿಯರಾದ ಅವರ ಮೇಲೆ ಏನೂ ವ್ಯಾಖ್ಯಾನ ಮಾಡುವುದಿಲ್ಲ ಈ ಎಲ್ಲ ಮಾತುಗಳು ಕಡತದಲ್ಲಿ ಉಳಿಯಲಿ ಮುಂದಿನ ಜನಾಂಗಕ್ಕೆ ಬಿಡೋಣ ಏನು ತೀರ್ಪು ಯಾರ್ಯಾರ ಬಗ್ಗೆ ಅವರು ತೆಗೆದುಕೊಳ್ಳಬೇಕೆನ್ನತಕ್ಕಂಥದ್ದು ಬೆಳಗಾಂ ಅಧಿವೇಶನ ನಡೆಯಿತು ಇನ್ನೂ ಒಂದು ಚೂರು ನಮಗೆಲ್ಲೋ ಆಸೆ ಮಿಗಿಲಿತು, ಏನಾದರೂ ಒಳ್ಳೆಯದಾಗಬಹುದು, ಈಗಲೂ ಮಳೆ ಬರಬಹುದು, ಕಡೆಯ ಪಕ್ಷ cycloneನಲ್ಲಾದರೂ ಮಳೆ ಬರಬಹುದು, ನಮ್ಮ ಕೆರೆಕುಂಟೆಗಳಿಗೆ ಸ್ವಲ್ಪ ನೀರು ಬರಬಹುದೆನ್ನುವ ಆಸೆ ಇತ್ತು ಬೆಳಗಾಂ ಅಧಿವೇಶನ ಆದಮೇಲೆ ನಾವು ಅಧಿವೇಶನ ಸೇರಲಿಲ್ಲ ಬೆಳಗಾಂ ಅಧಿವೇಶನದ ನಂತರ ಇದು ಮೊದಲನೇ ಅಧಿವೇಶನ ಪರಿಸ್ಥಿತಿ ಆವತ್ತಿಗೂ ಇವತ್ತಿಗೂ ಮತ್ತಷ್ಟು ಬಿಗಡಾಯಿಸಿದೆ ಅದು ಕೂಲಿಯಿಂದ ಜೀವನ ಮಾಡತಕ್ಕಂಥವನ ಬದುಕು ಆಗಿರಬಹುದು ಅಥವಾ ಕುಡಿಯುವ ನೀರಿನ ವಿಚಾರ ಆಗಿರಬಹುದು, ಈ ನಾಡಿನ ಪ್ರಜೆಗಳ ಬದುಕಿನ ವಿಚಾರಕ್ಕೆ ಸಂಬಂಧಿಸಿದಂತೆ ಸಿಕ್ಕ ಮೊದಲನೇ ಸಂದರ್ಭದಲ್ಲೇ ಪ್ರಶ್ನೋತ್ತರಕ್ಕೆ ನಾವು ಅಡ್ಡಿ ಪಡಿಸಬಾರದು, ಉಳಿದ ವರದಿಗಳನ್ನೊಪ್ಪಿಸುವುದು ಇವೆಲ್ಲ ನಡೆದುಕೊಂಡು ಹೋಗಲಿ, ಪ್ರತಿಷ್ಠೆ ವಿಚಾರ ಮಾಡಿಕೊಳ್ಳಬಾರದೆಂದು ನಮ್ಮ ಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಿ, ನಿಯಮಾವಳಿಗಳಿಗನುಸಾರವಾಗಿ ತಮಗೆ notice ಅನ್ನು ಕೊಟ್ಟು ಸೂಚನೆ ಕೊಟ್ಟು ಪ್ರಾಸ್ತಾವಿಕ ಮನವಿಯನ್ನು ತಮಗೆ

ಸಲ್ಲಿಸಿದ್ದೇವೆ ನಾನು ಅವರಿಗೆ ಕೇಳುತ್ತೇನೆ, alright, ನಾವು ಬೇರೆ ವಿಚಾರದ ನಿಯಮದ ಕೆಳಗೆ ಚರ್ಚೆ ಮಾಡಬಹುದು ಎನ್ನುವ ವಿಚಾರ ಬೇರೆ ಒಂದು ವಿರೋಧ ಪಕ್ಷಕ್ಕೆ ತಮ್ಮ ಕೆಲಸವನ್ನು ತಾವು ಜವಾಬ್ದಾರಿಯಿಂದ ನಿಷ್ಠೆಯಿಂದ ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿದ್ದರೆ ಇಂಥ ಸನ್ನಿವೇಶದಲ್ಲಿ ಇದು ಬಿಟ್ಟು ಬೇರೆ ಯಾವ rules ಕೆಳಗಡೆ ನಮಗೆ ಅವಕಾಶ ಇದೆ? ಕಡೆಗೆ ತಾವೇನು ತೀರ್ಪು ಕೊಡುತ್ತೀರಾ ಅದಕ್ಕೆ ತಲೆಬಾಗುತ್ತೇವೆ ಅದು ಬೇರೆ ಪ್ರಶ್ನೆ ರಮೇಶ್ ಕುಮಾರ್‌ರವರು ಅಲ್ಲಿ ಅಧ್ಯಕ್ಷರಾಗಿ ಕುಳಿತಿದ್ದರು ನಿಜ ಯಾವುದೇ ಒಂದು ಸ್ಥಾನದಲ್ಲಿ ಕುಳಿತಾಗ ಅವರವರ ಕೆಲಸವನ್ನು ಅವರು ಆ ಸ್ಥಾನಕ್ಕೆ ಏನು ಜವಾಬ್ದಾರಿಯನ್ನು ಹಚ್ಚಿರುತ್ತಾರೋ ಅದಕ್ಕೆ ಹೊಂದಿಕೊಂಡೇ ಮಾಡಬೇಕಾಗುತ್ತದೆ ಯಾರೂ ಮಾಯಾಬಜಾರ್ ಮಾಡಲಿಕ್ಕೆ ಬರುವುದಿಲ್ಲ ಆದರೆ ನಮ್ಮ ಮೇಲೆ ಒಂದು social obligation ಎನ್ನುವುದು ಇರುತ್ತದೆ ನಾನು ಅದರ ಬಗ್ಗೆ ಕೇಳುತ್ತಿರತಕ್ಕಂಥದ್ದು You take it up under any rule ನಮ್ಮ ನಾಯಕರು ಮಾತನಾಡುತ್ತಾರೆ ನಮ್ಮ ಪಕ್ಷದ ಪರವಾಗಿ ಅವರು ತೀರ್ಪು ಕೊಡುತ್ತಾರೆ I will not arrogate the authority to myself ಆದರೆ, ನೀವು ಏನು ವಕಾಲತ್ತು ವಹಿಸಿದ್ದೀರಿ? ಯಾವುದೋ ಒಂದು ಟೆಂಡರ್ ವಿಚಾರವನ್ನು ತೆಗೆದುಕೊಂಡು ಬಂದು, ಟೆಂಡರ್ ವಿಚಾರದಲ್ಲಿ Speaker ಕೊಟ್ಟ ruling ಅನ್ನು ಭೀಕರ ಬರಗಾಲಕ್ಕೆ ಹೋಲಿಕೆ ಮಾಡುತ್ತೀರಲ್ಲಾ, ನಮ್ಮ ಪ್ರಯಾಣ ಎಲ್ಲಿಗೆ, ಯಾವ ದಿಕ್ಕಿನಲ್ಲಿ ಹೊರಟಿದೆ? ಇದಕ್ಕಿಂತ ಹೆಚ್ಚು ನಾನೇನೂ ಪ್ರತಿವಾದ ಮಾಡಲಿಕ್ಕೆ ಹೋಗುವುದಿಲ್ಲ ನಮ್ಮ ಪ್ರಕಾರ, ನಮ್ಮ ಪಕ್ಷದ ಪ್ರಕಾರ, ಯಾರು ಈ ಸೂಚನೆಯನ್ನು ತಮಗೆ ಕೊಟ್ಟಿದ್ದೇವೆ, ಸಹಿ ಹಾಕಿರುವ ನಮ್ಮ ಅಭಿಪ್ರಾಯದ ಪ್ರಕಾರ, ಇದು ಅತ್ಯಂತ ಗಂಭೀರವಾದಂಥ ವಿಚಾರ ಗೋಲಿಬಾರ್ ಆಗಿದೆ Law and Order problem ಇದೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಬುಡಮೇಲು ಮಾಡುವಂಥ ವಿಚಾರಗಳಲ್ಲಿ ಅವರು ಮಾಡಿರತಕ್ಕಂಥ ಅನೇಕ ಹೇಳಿಕೆಗಳಿವೆ ಆಡಳಿತವನ್ನು ನಡೆಸುತ್ತಿರುವ ಎರಡೂ ಪಕ್ಷಗಳ ಮಧ್ಯೆ ವಿರಸ ಉಂಟಾಗತಕ್ಕಂಥ ಹೇಳಿಕೆ, ಪ್ರತಿ ಹೇಳಿಕೆಗಳಿವೆ ಇವು ಯಾವುದರ ಗೋಜಿಗೂ ನಾವು ಹೋಗಿಲ್ಲ ಪ್ರಶ್ನೋತ್ತರಕ್ಕೆ ಅಡ್ಡ ಬಂದಿಲ್ಲ ನಾವು ಒಂದು ಜವಾಬ್ದಾರಿ ವಿರೋಧ ಪಕ್ಷವಾಗಿ ಕೆಲಸ ಮಾಡಬೇಕು, ಜನಸಾಮಾನ್ಯರ ದೃಷ್ಟಿಯಲ್ಲಿ ನಾವು ಅವಹೇಳನಕ್ಕೆ ಗುರಿಯಾಗಬಾರದು ಎಂದು ಹೇಳಿ ನಮ್ಮ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ತಮ್ಮ ಮುಂದೆ ನಾವು,

ನಿಂತಿದ್ದೇವೆ ತಮ್ಮಲ್ಲಿ ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ ಬೆಳಗಾಂ ಅಧಿವೇಶನ ಕಳೆದ ಮೇಲೆ ನಮಗೆ ಅವಕಾಶವೇ ಸಿಕ್ಕಿರಲಿಲ್ಲ ಇವತ್ತು ಪುನ ನಾವು ಸೇರಿದ್ದೇವೆ ಅವತ್ತಿನಿಂದ ಇವತ್ತಿನವರೆಗೆ ತಾಳೆ ಹಾಕಿದರೆ ಅವನ ಜೀವನದ ಸ್ಥಿತಿ ತಳ ಮುಟ್ಟಿದೆ, ಅವನು ಪಾತಾಳಕ್ಕೆ ಹೋಗಿದ್ದಾನೆ ಅವನ ಪ್ರತಿನಿಧಿಗಳಾಗಿ, ಅವನ ಪರವಾಗಿ ಧ್ವನಿ ಎತ್ತತಕ್ಕಂಥ ಹೊಣೆ ನಮ್ಮ ಮೇಲಿದೆ ಆದ್ದರಿಂದ, ತಮ್ಮಲ್ಲಿ ನಾವು ಮನವರಿಕೆ ಮಾಡಿಕೊಂಡಿದ್ದೇವೆ ಈಗಲೂ ಕೂಡ ನಮ್ಮ ಸ್ಪಷ್ಟ ಅಭಿಪ್ರಾಯ, ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇಡೀ ರಾಜ್ಯವನ್ನು ಹಬ್ಬಿ ಹರಡಿರತಕ್ಕಂಥ, ಕಾಡುತ್ತಿರತಕ್ಕಂಥ ಈ ತೀವ್ರವಾದಂಥ ಸಮಸ್ಯೆ ಏನಿದೆ, ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಬೇಕು, ತಾವು ಅಪ್ಪಣೆ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ನಮ್ಮ ಈ ಮಾತಿನ ರೀತಿ ಮತ್ತು ವಿಚಾರಗಳು ಯಾವ ದಿಕ್ಕಿನಲ್ಲಿ ಹೋಗುತ್ತಿವೆ ಎನ್ನುವುದು ನನಗೆ ಸಂಶಯ ಬರುತ್ತಿದೆ ತಾವು ಹೇಗೆ ಜನ ಪ್ರತಿನಿಧಿಗಳಾಗಿ ಜನತೆಗೆ ಎಷ್ಟು ಜವಾಬ್ದಾರರಾಗಿದ್ದೀರಿ, ಅಷ್ಟೇ ನಾವು ಕೂಡ ಜವಾಬ್ದಾರರಾಗಿ ಜನಪ್ರತಿನಿಧಿಗಳಾಗಿ ಬಂದಿದ್ದೇವೆ ತಾವು ಯಾವ ರೀತಿಯಾಗಿ ಕರ್ತವ್ಯವನ್ನು ನಿಭಾಯಿಸುತ್ತೀರಿ ಎನ್ನುವುದರ ಬಗ್ಗೆ ನಾನು ಟೀಕೆಯನ್ನು ಮಾಡಲೇ ಇಲ್ಲ ನಾನು ಈ ಮಾತನ್ನು ಹೇಳುವಾಗ ಸಂಪೂರ್ಣ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ಅತ್ಯಂತ ಗಂಭೀರತೆಯಿಂದ ಗುರುತರವಾದಂಥ ರೀತಿಯಲ್ಲಿ ತಮ್ಮ ಅಧಿಕಾರವನ್ನು ತಾವು ಚಲಾಯಿಸಿದ್ದೀರಿ ತಮಗೆ ನಾನು ಧನ್ಯವಾದಗಳನ್ನು ಕೂಡ ಅರ್ಪಿಸುತ್ತಿದ್ದೇನೆ ಏಕೆಂದರೆ, ಈ ವಿಚಾರದಲ್ಲಿ ಸ್ಪಷ್ಟೀಕರಣವನ್ನು, ಈ ಸದನದ ಮೂಲಕ ನಮ್ಮ ಪ್ರಭುಗಳಾದಂಥ ಜನತೆಗೆ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎಂದು ಹೇಳುವ ಅವಕಾಶವನ್ನು ತಾವು ಕಲ್ಪಿಸಿಕೊಟ್ಟಿದ್ದೀರಿ ಅದಕ್ಕೆ ನಾನು ನಿಮಗೆ ಧನ್ಯವಾದಗಳನ್ನು ಕೂಡ ಅರ್ಪಿಸುತ್ತೇನೆ ಅಲ್ಲಿ ಪ್ರಶ್ನೆ ಬರತಕ್ಕಂಥದ್ದು ಏನು? ಪ್ರಶ್ನೆ ಇರತಕ್ಕಂಥದ್ದು ಚರ್ಚೆ ಬೇಡವೆಂದಲ್ಲ ಪ್ರಶ್ನೆ ಇರತಕ್ಕಂಥದ್ದು, ಯಾರು ಯಾರ ಪರವಾಗಿ ಹೆಚ್ಚು ನಿಂತಿದ್ದಾರೆ ಎನ್ನತಕ್ಕಂಥದ್ದು ಅಲ್ಲ ಅದನ್ನು ಜನತೆ ತೀರ್ಮಾನ ಮಾಡುತ್ತಾರೆ ಇಲ್ಲಿ ತೀರ್ಮಾನ ಮಾಡಬೇಕಾಗಿರತಕ್ಕಂಥದ್ದು, ಎಲ್ಲ ಸದನದ ಕಲಾಪಗಳನ್ನು ನಿಲುವಳಿ ಸೂಚನೆ ರೂಪದಲ್ಲಿ ಈ ಸಂದರ್ಭದಲ್ಲಿ ತರಬಹುದೆ?

ತರಬಾರದು ಎನ್ನುವುದಾಗಿದ್ದರೆ, Shakdhar and Kaul ನಲ್ಲಿ ಏನು ಹೇಳುತ್ತದೆ? ನಮ್ಮ Speaker ಗಳಾದಂಥವರು ಕಾಲ ಕಾಲಕ್ಕೆ ಏನು ತೀರ್ಮಾನ ಕೊಟ್ಟಿದ್ದಾರೆ? ಒಂದು ತೀರ್ಮಾನದ ಸಮಯದಲ್ಲಿ 3 tender ಬಗ್ಗೆ ಮಾತನಾಡಿರತಕ್ಕಂದದ್ದು ಇದೆ ಆ ವಿಚಾರವನ್ನೂ, ಬರಗಾಲವನ್ನೂ ಸಮೀಕರಿಸಿದ್ದೀರಿ ಎಂದು ಹೇಳಿ ತಾವು ಅದನ್ನು ವಿಕೃತಗೊಳಿಸಬೇಕಾದ್ದು ಇಲ್ಲ ಆದರೆ, ತೀರ್ಮಾನದ ವಿಷಯದಲ್ಲಿರತಕ್ಕಂಥ ಆಶಯ ಭಾಷಣ ಏನು? ಯಾವುದಾದರೂ ವಿಷಯದ ಬಗ್ಗೆ ಪ್ರಶ್ನೆಯಾಗಿರಬಹುದು ಅಲ್ಲಿ Speaker ರವರು ಕೊಟ್ಟಿರತಕ್ಕಂಥ ಆಶಯ, ನಿಮಗೆ ಬೇರೊಂದು ಅವಕಾಶ ಇರತಕ್ಕಂದ ಸಂದರ್ಭದಲ್ಲಿ ಆ ಅವಕಾಶವನ್ನು ನೀವು ಉಪಯೋಗಿಸಿಕೊಳ್ಳಬೇಕೇ ವಿನ ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡಬೇಕಾದ ಅಗತ್ಯತೆ ಇಲ್ಲ ಎನ್ನುವಂಥ ಆಶಯದ ಮಾತನ್ನು ಹೇಳಿದ್ದಾರೆ ಅದರ ಬಗ್ಗೆ ನಾನು ಗಮನ ಸೆಳೆದಿದ್ದೇನೆಯೇ ವಿನ 3 tender ನ ವಿಚಾರದಲ್ಲಿ ಬರಗಾಲದ ಸಮೀಕರಣ ಎಂದು ಇಲ್ಲ ಅದಕ್ಕೆ ಬಹಳ ಸಲ ಜಾಣರ ಕೈಯಲ್ಲಿ ಹೇಳತಕ್ಕಂಥದ್ದು ಕೇಳುವವರ ಮಾತಿಗೆ ಹೇಳುವವರು ಯಾವಾಗಲೂ ಕಡಿಮೆಯಾಗಿರುತ್ತೇವೆ ಗೌಣವಾಗಿರುತ್ತೇವೆ ಇನ್ನೊಂದು ವಿಚಾರದಲ್ಲಿಯೂ ಕೂಡ, for the purpose of the present motion it is enough to state that a uniform and long series of rulings in the House of Commons and in the Parliament of India and in our own Legislature in the past have laid down that where an ordinary parliamentary opportunity will shortly occur to discuss the subject matter of an adjournment motion, then the permission of the Speaker to the adjournment motion should be refused ಅನ್ನತಕ್ಕಂಥದ್ದು ಅಂದರೆ, ಅವಕಾಶ ಮತ್ತೊಂದು ಲಭ್ಯತೆ ಇರತಕ್ಕಂಥ ಕಾರಣ, Shakdhar and Kaul ಬರೆದಿರುವ ಪುಸ್ತಕವನ್ನು ಕೂಡ ತಾವು ಬಹಳ ಜನ ಪರಾಮರ್ಶಿಸಿದ್ದೀರಿ 5 ವರ್ಷ Speaker ಆಗಿದ್ದಿರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, Rulings ಇಲ್ಲವೆಂದು ಯಾರೂ ವಾದ ಮಾಡಿಲ್ಲ ಇಲ್ಲಿ ಪ್ರಶ್ನೆ ಇರತಕ್ಕಂಥದ್ದೇನೆಂದರೆ, ತಾವು Governor speech ಗೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ

ಮಾತನಾಡುವಾಗ ಇದನ್ನು ತೆಗೆದುಕೊಳ್ಳಬೇಕು, ಪ್ರತ್ಯೇಕವಾಗಿ ಇದನ್ನು ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥ ವಾದ ತಮ್ಮದು ಇದೆ

ಶ್ರೀ ಎಂ ಪಿ ಪ್ರಕಾಶ್ ಅಥವಾ ನಿಯಮ 69ಕ್ಕೆ convert ಮಾಡಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಮ್ಮ ವಾದ ಇಷ್ಟೆ, ಎಷ್ಟೋ ಸಲ ಈ ಮನೆಯಲ್ಲಿ ಚರ್ಚೆಯಾಗಿದೆ ತಕ್ಷಣವೇ ಅಧ್ಯಕ್ಷರು ಅದನ್ನು Rule 69ಕ್ಕೆ convert ಮಾಡಿ allow ಮಾಡಿದ್ದಾರೆ ಈಗ ತಮ್ಮ ಹೇಳಿಕೆ ಪ್ರಕಾರ ಈಗ ಇದನ್ನು ಪುನ ನೀವು agenda ದಲ್ಲಿ ತಂದು time fix ಮಾಡಿ ಆಮೇಲೆ ಚರ್ಚೆಗೆ ತೆಗೆದುಕೊಳ್ಳಿ ಅನ್ನತಕ್ಕ ವಾದ ಒಂದು ಕಡೆ ಇಡುತ್ತಿದ್ದೀರಿ ಇನ್ನೊಂದು ಕಡೆ ವಾದ ಏನು ಇಡುತ್ತಿದ್ದೀರಿ ಎಂದರೆ, ಈಗಾಗಲೇ Governor speech ಮೇಲೆ ಅದನ್ನು ನಾವು ನಮೂದು ಮಾಡಿದ್ದೇವೆ, ಆ ಚರ್ಚೆ ಸಮಯದಲ್ಲಿಯೂ ಕೂಡ ಇದನ್ನು ತೆಗೆದುಕೊಳ್ಳಬೇಕು ಅನ್ನತಕ್ಕಂಥ ವಾದವನ್ನೂ ಕೂಡ ಇಡುತ್ತಿದ್ದೀರಿ ನಮ್ಮ ಅನಿಸಿಕೆ, ಎಲ್ಲರೂ ಕೂಡ ಕೇಳತಕ್ಕಂಥದ್ದು ಇಷ್ಟೆ, Governor speechನ page number 7, 8 ರಲ್ಲಿ ಏನು ಹೇಳಿದ್ದೀರಿ, hardly ಏನೆಂದರೆ, ಅತೀವೃಷ್ಟಿಗೆ 10 sentence ಬಳಸಿದ್ದೀರಿ, ಅನಾವೃಷ್ಟಿಗೆ 8 sentence ಬಳಸಿದ್ದೀರಿ ಅದು ಬಿಟ್ಟು, ಏನು ಮಾಡಿದ್ದೀರಿ, ಏನಿಲ್ಲ ಅನ್ನತಕ್ಕಂಥದ್ದು ಯಾವುದೂ ಕೂಡ ಇದರಲ್ಲಿ ಇಲ್ಲ ಅದಕ್ಕಾಗಿ ಇದಕ್ಕೆ ಮಹತ್ವ ಬರಬೇಕು ಇದು ಸಾರ್ವಜನಿಕ ಮಹತ್ವದ ವಿಷಯವೆಂದು ತಾವೇ ಒಪ್ಪಿದ್ದೀರಿ 175 ತಾಲ್ಲೂಕುಗಳ ಪೈಕಿ ಸುಮಾರು 128 ತಾಲ್ಲೂಕುಗಳಲ್ಲಿ ಬರಗಾಲವಿದೆ ಅನ್ನತಕ್ಕಂಥದ್ದನ್ನು ತಾವೇ ಒಪ್ಪಿಕೊಂಡಿದ್ದೀರಿ ಇಷ್ಟೊಂದು wide scale ಮೇಲೆ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದ್ದಾಗ ತಾವು ಇದಕ್ಕೆ public importance ಎಂದು ಹೇಳುತ್ತೀರೋ, ಇಲ್ಲವೋ? ಅದವಾ ಸಾರ್ವಜನಿಕ ಮಹತ್ವದ ವಿಷಯವೆಂದು ಹೇಳುತ್ತೀರೋ, ಇಲ್ಲವೋ? ಇದು ಸಾರ್ವಜನಿಕ ಮಹತ್ವದ ವಿಷಯವೆಂದು ಒಂದು ಕಡೆ ಒಪ್ಪಿಕೊಳ್ಳುತ್ತೀರಿ ತಾವು ಹೇಳಿದ್ದನ್ನು ತಿರುಚಿ ಹೇಳಬೇಕೆಂದು ಅವರು ಹೇಳಲಿಲ್ಲ ಅವರು ಹೇಳಿದ್ದೆಂದರೆ, ಒಂದು ಸೀಮಿತವಾಗಿರತಕ್ಕಂಥ ಪ್ರಶ್ನೆ ಅದಕ್ಕೆ ಸಂಬಂಧಪಟ್ಟಂಥ ಚರ್ಚೆಗೆ ಅವರು adjournment motion ಬೇಡ ಎಂದು ಹೇಳಿದ್ದೇ ಹೊರತಾಗಿ ಇದು ಇಡೀ ರಾಜ್ಯ ವ್ಯಾಪಿ ಇರತಕ್ಕಂಥ ಪ್ರಶ್ನೆ ಇರುವುದರಿಂದ ಕೋಟ್ಯಾಂತರ ಜನ ರೈತರಿಗೆ, ಬಡವರಿಗೆ ಇವತ್ತು ನೀರು, ಅನ್ನ, ಜಾನುವಾರುಗಳಿಗೆ ಮೇವು ಇದರ ಸಂಬಂಧವಿದ್ದ ಕಾರಣ ಇದಕ್ಕೆ ಹೆಚ್ಚಿನ ಮಹತ್ವವಿದೆ ಅದಕ್ಕೆ ಇದಕ್ಕೆ ಹೋಲಿಕೆ

ಬೇಡವೆಂದು ಇಷ್ಟೇ ಹೊರತಾಗಿ ಬೇರೇನಿಲ್ಲ ಅದಕ್ಕೆ ದಯವಿಟ್ಟು, ತಾವು ಮನಸ್ಸು ಮಾಡಿ ಇದಕ್ಕೆ ಅನುಮತಿ ಕೊಡಿ ಚರ್ಚೆಯಲ್ಲೇನು ಬರುತ್ತದೆ? ಚರ್ಚೆಗೆ ಬಂದಾಗ ನಮಗೆ ತಿಳಿದಿದ್ದು ನಾವು ಹೇಳುತ್ತೇವೆ ನೀವು ಈಗಾಗಲೇ ಹೇಳಿದ್ದೀರಿ ನಾವೇನು ಕ್ರಮವನ್ನು ಜರುಗಿಸಿದ್ದೇವೆ ಎಂದು ಜನತೆಯ ಮುಂದೆ ಇಡುವುದಕ್ಕೆ ನಿಮಗೂ ಅವಕಾಶ ಸಿಗುತ್ತದೆ ಅದಕ್ಕೆ ದಯವಿಟ್ಟು ಇದನ್ನು allow ಮಾಡಿ

ಶ್ರೀ ಎಂ ಪಿ ಪ್ರಕಾಶ್ ಇಲ್ಲಿ ಪ್ರಶ್ನೆ ಇರತಕ್ಕಂಥದ್ದು, ಇದು ಮಹತ್ವ ಹೌದೋ, ಅಲ್ಲವೋ ಅನ್ನುವುದಕ್ಕಿಂತಲೂ ಹೆಚ್ಚಾಗಿ ನಮಗೂ ಕೂಡ ಈ ಚರ್ಚೆಯಾಗಬೇಕಾದಂಥ ಅಗತ್ಯತೆ ಇದೆ ಇಲ್ಲಿ ನಾವು ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿರತಕ್ಕಂಥ ಸಂದರ್ಭದಲ್ಲಿ ಯಾವ ಆಧಾರದ ಮೇಲೆ ತಾವು ತಮ್ಮ ಕರ್ತವ್ಯವನ್ನು ನಿಭಾಯಿಸಬೇಕು, ನಾವು ಯಾವ ಕರ್ತವ್ಯವನ್ನು ನಿಭಾಯಿಸಬೇಕು ಎನ್ನುವುದಕ್ಕೆ ನಿಯಮಾವಳಿಗಳಿವೆ ಅದಕ್ಕೆ ವ್ಯಾಖ್ಯಾನಗಳಿವೆ ಅದಕ್ಕೆ ಬೇಕಾಗಿರತಕ್ಕಂಥ ಅನೇಕ ನಮ್ಮ ಮಾರ್ಗದರ್ಶಿ ಸೂತ್ರಗಳೂ ಕೂಡ ಇವೆ Shakdhar and Kaul ನವರು ಬರೆದಿರುವ ಪುಸ್ತಕದಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ, adjournment motion are not normally allowed during the budget discussion or during the discussions on the motion of thanks on a President's address, as members have sufficient opportunity to focus the attention of the House to any matter during that discussion ಅನ್ನುವುದನ್ನೂ ಹೇಳುತ್ತಾರೆ ನಾನು ಇದೇ ಒಂದು sacrosanct ಇದು ಬಿಟ್ಟು ಹೋಗಬಾರದೆಂಬ ಮಾತನ್ನು ಹೇಳುವುದಿಲ್ಲ ಅದಕ್ಕಾಗಿ ಎರಡೂ ಅವಕಾಶಗಳಿರುವುದು ಪರ್ಯಾಯವಾಗಿ ಈ ವಿಷಯವನ್ನೇ ಚರ್ಚೆ ಮಾಡಬೇಕಾದಂಥ ಅಗತ್ಯತೆ ಇದ್ದಾಗ ತಾವು ವಂದನಾ ನಿರ್ಣಯದ ಸಂದರ್ಭದಲ್ಲಿಯೂ ಕೂಡ ಅದರ ಬಗ್ಗೆ ಮಾತನಾಡಬಹುದು ಆದರೆ, ವಂದನಾ ನಿರ್ಣಯದಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗುತ್ತವೆ, ಅದಕ್ಕೆ ಅಷ್ಟು ಗಹನತೆ ಸಿಗುವುದಿಲ್ಲ, ಅದಕ್ಕೆ ಬೇಕಾಗಿರತಕ್ಕಂಥ ಸಂಪೂರ್ಣ ಗಮನ ಅದರ ಕಡೆಗೆ ಹೋಗುವುದಿಲ್ಲ ಎನ್ನುವುದಾಗಿದ್ದರೆ, ಅದನ್ನು ನಿಯಮ 69ರ ಕೆಳಗೆ ಪರಿವರ್ತನೆ ಮಾಡಿರತಕ್ಕಂಥ ಅನೇಕ ಉದಾಹರಣೆಗಳು ಇವೆ ಅದು ತಮಗೂ ಕೂಡ ಗೊತ್ತಿದೆ ಇಡೀ ನಮ್ಮ adjournment motionನ ವಿಚಾರದ

ಹಿನ್ನೆಲೆ ಕೂಡ ಇರತಕ್ಕಂಥದ್ದು ಏನೆಂದರೆ ಚರ್ಚೆಯಾಗಬೇಕೆಂಬುದಾಗಿದೆ ಅದಕ್ಕೆ ಸರ್ಕಾರದಿಂದ ಉತ್ತರ ಸಿಗಬೇಕು ಆದ್ದರಿಂದ, ನಾನು ಮತ್ತೆ ಅದರ ಬಗ್ಗೆ ಹೇಳಬೇಕಾದಂಥದ್ದಿಲ್ಲ ನಾವು ಚರ್ಚೆಗೆ ಹಿಂಜರಿಯತಕ್ಕಂಥವರಲ್ಲ ನಾಚಿಕೆ ಪಡಬೇಕಾದ ಅಗತ್ಯವೂ ಕೂಡ ಇಲ್ಲ ಆದ್ದರಿಂದ, ದಯವಿಟ್ಟು, ಇದನ್ನು ತಾವು 69ರ ನಿಯಮಕ್ಕೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಂಡರೆ, ತತ್‌ಕ್ಷಣದಲ್ಲೇ ಚರ್ಚೆಗೆ ನಾವು ತಯಾರಿದ್ದೇವೆ ಈಗಲೇ ತಾವು ತೆಗೆದುಕೊಳ್ಳಬಹುದು ತಾವು ಅದರ ಮೇಲೆ ಮಾತನಾಡಬಹುದು ಅಥವಾ ಆಕಸ್ಮಾತ್ ವಂದನಾ ನಿರ್ಣಯದ ಸಂದರ್ಭದಲ್ಲಿ ಆಗಬಹುದು ಅಥವಾ ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು ಈಗ ಈ ನಿಮಿಷದಲ್ಲಿ ಉತ್ತರ ಕೊಡಲಿಕ್ಕೆ ನಾವು ತಯಾರಿದ್ದೇವೆ ಅದನ್ನು ನಿಯಮ 69ರ ಕೆಳಗೆ ತೆಗೆದುಕೊಳ್ಳಲಿ ವಿನ adjournment motion ರೂಪದಲ್ಲಿ ಬೇಡವೆಂದು ಹೇಳಿ ನಾನು ವಿನಂತಿ ಮಾಡುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಬಹುಶ ನಾನೂ ಇದನ್ನು ನೋಡುತ್ತಿದ್ದೇನೆ ಇದು ಹೀಗೆ ಒಂದು ನಿಲುವಳಿ ಸೂಚನೆ ತರುವುದು, ಆಮೇಲೆ, ಅದಕ್ಕೆ ಬೇಡವೆಂದು ಏನಿದೆ ಅದನ್ನು ಹೇಳುವುದು ಆಮೇಲೆ, ನೀವು ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ಕೊಡುವುದು ಇದು ನಡೆದೇ ಇದೆ ಯಾವಾಗ ಇದು ಶುರುವಾಗಿದೆ ಆಗಿನಿಂದ ಇದು ಹಾಗೇ ಇದೆ ದಯವಿಟ್ಟು ತಾವು ಇದರ ಬಗ್ಗೆ ಹೇಳುವ ಮುನ್ನ ನಿಲುವಳಿ ಸೂಚನೆ ಯಾವ ಪರಿಸ್ಥಿತಿಯಲ್ಲಿ ಕೊಟ್ಟಿದ್ದಾರೆ ಆ ಉದಾಹರಣೆಯನ್ನು ತಾವು ಹೇಳಿ ಹಿಂದೆ ಯಾವಾಗಲಾದರೂ ಕೊಟ್ಟಿರುವ ಉದಾಹರಣೆ ಇರುತ್ತದೆ ಅಲ್ಲವೆ ತಮಗೆ ಗೊತ್ತಿರುತ್ತದೆ ಏಕೆಂದರೆ ತಾವು ಹಿರಿಯರು ಇದ್ದೀರಿ, ಯಾವ ಸಂದರ್ಭದಲ್ಲಿ ಕೊಟ್ಟಿದ್ದಾರೆಂಬುದನ್ನು ಮೊದಲು ಹೇಳಿ, ಅದಕ್ಕೂ ಇದಕ್ಕೂ ಸಂಬಂಧವಾಗುವುದಿಲ್ಲ ಅದಕ್ಕಾಗಿ ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲವೆಂದು ದಯವಿಟ್ಟು ಹೇಳಿ ಹಿಂದೆ ನಿಲುವಳಿ ಸೂಚನೆಯನ್ನು ಅಲೌ ಮಾಡಿರುವಂಥ ಉದಾಹರಣೆಗಳು ಕೆಲವು ಇವೆ ತಾವು ದಯವಿಟ್ಟು ಈ ರೀತಿಯಾಗಿ ಅಲೌ ಮಾಡಿರತಕ್ಕಂಥ ಉದಾಹರಣೆಯನ್ನು ತೆಗೆದುಕೊಂಡು, ಅದನ್ನು ಅಲೌ ಮಾಡಿದ್ದಕ್ಕೆ ಇದಕ್ಕೆ ಬಹಳ ಅಂತರವಿದೆ ಹೀಗಾಗಿ ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲ, ಅದಕ್ಕಾಗಿ ಇದನ್ನು 69 ಕ್ಕೆ ಕನ್‌ವರ್ಟ್ ಮಾಡಿದ್ದೇನೆಂದು ತಾವು ದಯಮಾಡಿ ಹೇಳಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ತಾವು ಹೇಳುವುದನ್ನು ನೋಡಿದರೆ, ಅಲೌ ಮಾಡಿದಂತಹ ಸಂದರ್ಭಗಳು ಇವೆ ಇದರ ಬಗ್ಗೆ ಅಕಾಡೆಮಿಕ್ ಚರ್ಚೆ ಮಾಡುತ್ತಾ ಹೋದರೆ ಸಮಯವಿರುವುದಿಲ್ಲ ಹಿಂದೆ ಕೂಡ ಅನೇಕ ಸಮಯದಲ್ಲಿ ನಿಲುವಳಿ ಸೂಚನೆಯನ್ನು ಅಲೌ ಮಾಡಿದಂಥ ಸಂದರ್ಭಗಳು ಇವೆ

ಶ್ರೀ ಎಸ್ ಎಸ್ ಪಾಟೀಲ್ ಯಾವಾಗ ನೋಡಿದರೂ ಇದೇ ಸಮಸ್ಯೆಯಾಗುತ್ತದೆ ಆದುದರಿಂದ ಅದನ್ನು ತೆಗೆದುಬಿಡಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, It is a matter of public importance, sudden occurence ಎನ್ನತಕ್ಕಂಥ ಶಬ್ದಗಳನ್ನು ಬಳಸುತ್ತಾರೆ ಈಗ ಬರಗಾಲ ಬಹಳ ದಿವಸಗಳಿಂದ ಇರುವುದರಿಂದ ಇದರ ಬಗ್ಗೆ ಹಿಂದೆ ಸದನದಲ್ಲಿ ಚರ್ಚೆ ಮಾಡಿದ್ದೇವೆ ಅದರ ಬದಲು 69ರ ಕೆಳಗೆ ಇದನ್ನು ತೆಗೆದುಕೊಳ್ಳಿ ಎಂದು ನಮ್ಮ ವಾದ

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಬರಗಾಲದಂಥ ಪ್ರಮುಖವಾದ ಹಾಗೂ ಮಹತ್ವದ ವಿಷಯವೂ ಕೂಡ ಇದರಲ್ಲಿ ಬರುವುದಿಲ್ಲವೆಂದರೆ ಈ ರೂಲ್‌ನ ಅವಶ್ಯಕತೆ ಏನೀದೆ? ಇದನ್ನು ತೆಗೆದು ಬಿಡಿ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಈ ರೂಲ್ ಅನ್ನು ತೆಗೆದುಬಿಡಿ ಇಲ್ಲದಿದ್ದರೆ ಇದನ್ನು ನಾವು ಏಕೆ ತೆಗೆದುಕೊಳ್ಳುವುದಿಲ್ಲ, ರೂಲ್ 69ಕ್ಕೆ ಕನ್‌ವರ್ಟ್ ಮಾಡುತ್ತೇವೆಂದು ತಾವು ಉದಾಹರಣೆಯನ್ನು ಕೊಟ್ಟು ಹೇಳಬೇಕಾಗುತ್ತದೆ ಇಲ್ಲದೆ ಇದ್ದರೆ ಇದಕ್ಕೆ ಏನು ಮಹತ್ವ ಬರುವುದಿಲ್ಲ ನಿಲುವಳಿ ಸೂಚನೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿದಾಗ ಮಾತ್ರ ಇದಕ್ಕೆ ಮಹತ್ವ ಬರುತ್ತದೆ ಬರಗಾಲವೇ ಇದರಲ್ಲಿ ಬರುವುದಿಲ್ಲವೆಂದರೆ ಇನ್ಯಾವ ವಿಷಯ ಬರುತ್ತದೆ? ತಾವು ಇದನ್ನು ರಿಜೆಕ್ಟ್ ಮಾಡುವ ಮುಂಚೆ ಅದನ್ನು ಹೇಳಬೇಕಾಗುತ್ತದೆ ಈ ರೀತಿಯಾಗಿಯಾದರೂ ಹೇಳಬೇಕು ಇಲ್ಲದಿದ್ದರೆ ಇದನ್ನು ಅಲೌ ಮಾಡಬೇಕು ಎರಡಲ್ಲಿ ಒಂದನ್ನು ತಾವು ದಯಮಾಡಿ ಮಾಡಬೇಕು

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಮಾನ್ಯ ಪ್ರಕಾಶ್‌ರವರು ಕೌಲ್ ಅಂಡ್ ಶಕ್ದರ್ ರವರ ಏನು ರೂಲಿಂಗ್ ಓದಿದರು, ಅದಲ್ಲಿಯೇ ಹೇಳಿದ್ದಾರೆ ನಾರ್ಮಲಿ ಬಜೆಟ್ ಸೇಷನ್‌ನಲ್ಲಿ ಮತ್ತು ಗೌರ್ನರ್ ಸ್ಪೀಚ್‌ನಲ್ಲಿ ಇದನ್ನು ಅಲೌ ಮಾಡುವುದಿಲ್ಲ ನಾರ್ಮಲಿ ಅದು ಇರಬಹುದು ಆದರೆ ಇದು special circumstance ಇರುವುದರಿಂದ you must allow ನಿಮಗಂತೂ ರೈತರ

ಬಗ್ಗೆ ಹೆಚ್ಚಿನ ಆಸಕ್ತಿ, ಪ್ರೀತಿ , ವಿಶ್ವಾಸ ಇದೆ ಇದು ನಿಮ್ಮ ಕೈಯಲ್ಲಿದೆ ಬಾಕಿ ವಿಷಯ ತೆಗೆದುಕೊಳ್ಳುವುದು ಬಿಡುವುದು ಅವರ ಕೈಯಲ್ಲಿ ಇರಬಹುದು, ಅಟ್‌ಲಿಸ್ಟ್ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು, ರೈತರ ಸಮಸ್ಯೆಗೆ ಸ್ಪಂದಿಸತಕ್ಕಂಥದ್ದಕ್ಕೆ ಅವಕಾಶ ಮಾಡಿ ಕೊಡುವುದು ತಮ್ಮ ಕೈಯಲ್ಲಿ ಇದೆ ಆದುದರಿಂದ ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ ಏಕೆಂದರೆ, ಅದು ನಾರ್ಮಲಿ ಎಂದು ಇದೆ ಅದು ಏನು ಆ ರೂಲಿಂಗ್ mandatory ಅಲ್ಲ ಅವರು ಒಪ್ಪಿಕೊಳ್ಳುತ್ತಾರೆ ಅದಕ್ಕಾಗಿ ತಾವು ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಎಸ್ ಎಸ್ ಪಾಟೀಲ್‌ರವರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಹೇಳುವುದಾದರೆ, adjournment motion, if it is carried it is a strong disapproval of government policy ಎನ್ನತಕ್ಕಂಥ ರೀತಿಯಲ್ಲಿ ಅದಕ್ಕೊಂದು ಮಹತ್ವ ಇದೆ ಅದು ಏನು ಸೆನ್ಸಾರ್ ಆಗತಕ್ಕಂಥದ್ದಿಲ್ಲ ಸೆನ್ಸಾರ್ ಆಗಬೇಕೆಂದರೆ ಮತ್ತೆ vote of confidence ಬರಬೇಕಾಗುತ್ತದೆ ಅಷ್ಟಕ್ಕೆ ಸೀಮಿತ ಆದುದರಿಂದ adjournment motion ಎನ್ನತಕ್ಕಂಥ ಪ್ರಾವಿಜನ್ ಅನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ ತಾವು ಹೇಳಿದಂತೆ ತಾವೇ ಇದರ ಬಗ್ಗೆ ನಿರ್ಣಯಿಸಬೇಕಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಎಸ್ ಎಸ್ ಪಾಟೀಲ್‌ರು ಹೇಳಿದ ಮಾತಿನ ಆರ್ಥವೇನೆಂದರೆ, ಅವರು ಹಿಂದೆ ಈ ಸದನದಲ್ಲಿ ಒಂದೆರಡು ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಒಂದು ಸಾರಿಯಾದರೂ ಆಡ್ಮಿಟ್ ಮಾಡದೇ ಹೋದರೆ ಅದು ಇದ್ದು ಏನು ಪ್ರಯೋಜನ ಅದನ್ನು ತೆಗೆದು ಹಾಕಿರಿ ಎಂದು ಅವರು ಹೇಳುವ ಮಾತಿನ ಆರ್ಥ

SRI M P PRAKASH If it is carried, it is a strong disapproval

SRI K R RAMESH KUMAR Virtually it amounts to censure motion But the fact remains

SRI M P PRAKASH It does not, Sir

SRI K R RAMESH KUMAR It amounts to that, I said Generally, no Presiding Officer gives consent But, Hon Minister, my submission is, looking at the gravity of the situation any responsible Opposition is left with no option but to resort to this course It is only to bring to the notice of the government through the Speaker the magnitude of the seriousness involved and we are trying to do that The very object of having this proviso in the working our rules is to draw the attention of the government and to highlight ನಾವು ಅದರ ಗಾಂಭೀರತೆಯನ್ನು ತಮಗೆ ಪರಿಚಯ ಮಾಡಿಸುವ ದೃಷ್ಟಿಯಿಂದ ಇದನ್ನು ಇಟ್ಟುಕೊಂಡಿದ್ದೇವೆ ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ ಉಳಿದಿದ್ದು ತಮಗೆ ಬಿಟ್ಟದ್ದು

ಅಧ್ಯಕ್ಷರು ಈಗ ಈ ನಿಲುವಳಿ ಸೂಚನೆಯನ್ನು ನಾನು ಮಾರ್ಪಾಡು ಮಾಡಿ ರೂಲ್ 69ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇನೆ ಸರ್ಕಾರದವರು ಕೂಡ ಚರ್ಚೆಗೆ ನಾವು ಈಗಲೇ ಸಿದ್ದವಾಗಿದ್ದೇವೆಂದು ಹೇಳಿರುವುದರಿಂದ ಈಗ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಆರಂಭ ಮಾಡಬಹುದು

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಹೇಳುವಾಗ ಕಾರಣಗಳನ್ನು ಓದಬೇಕಾಗುತ್ತದೆ ಈ ಕಾರಣಗಳಿಂದ ಎಂದು ಇಂಥ ರೂಲ್‌ನ್ನು ಓದಿ ಇದರ ಪ್ರಕಾರ ಕನ್‌ವರ್ಟ್ ಮಾಡಿದ್ದೇನೆಂದು ತಾವು ದಯವಿಟ್ಟು ಹೇಳಬೇಕಾಗುತ್ತದೆ ನಾನು ತಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ ತಾವು ದಯವಿಟ್ಟು ಇದಕ್ಕೆ ಸಂಬಂಧಪಟ್ಟಹಾಗೆ ಕಾರಣಗಳನ್ನು ಓದಿಬಿಟ್ಟರೆ ಅದು ರೆಕಾರ್ಡ್‌ಗೆ ಹೋಗುತ್ತದೆ ಅದು ಸರಿಯಾಗುತ್ತದೆ ಅದುದರಿಂದ ಅದು ಒಳ್ಳೆಯ ರೂಲಿಂಗ್ ಆಗುತ್ತದೆ ಇದನ್ನೆಲ್ಲಾ ತಾವು ದಯವಿಟ್ಟು ಓದಿರಿ ಇದನ್ನೆಲ್ಲಾ ತಾವು ಓದಿದರೆ ಅದು ಒಳ್ಳೆಯ ರೂಲಿಂಗ್ ಆಗುತ್ತದೆ

ಅಧ್ಯಕ್ಷರು ಮಾನ್ಯ ಪಾಟೀಲ್‌ರವರೆ, ಇಲ್ಲಿಯವರೆಗೆ ಎಲ್ಲರೂ ಚರ್ಚೆ ಮಾಡಿದ್ದಾರೆ ಈಗ ನಾನು ಅದನ್ನು ಮಾರ್ಪಾಡು ಮಾಡಿ ರೂಲ್ 69ರ ಕೆಳಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ, ಸರ್ಕಾರವೂ ಸಿದ್ದವಿದೆ ಈಗ ಚರ್ಚೆ

ಆರಂಭವಾಗಲಿ ರಾಜ್ಯದಲ್ಲಿ ಬರದ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ಚರ್ಚೆಯಾಗಲಿ, ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ

9 ನಿಯಮ 69ರ ಮೇರೆಗೆ ಚರ್ಚೆ

ವಿಷಯ ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಎಂ ಪಿ ಪ್ರಕಾಶ್ ರವರು ಬಹಳಷ್ಟು ಕಾನೂನಿನ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಬರಗಾಲದ ಭೀಕರವಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಹೇಗೆ ಇದೆ ಎಂದು ಹೇಳಿದ್ದಾರೆ ವಿಶೇಷವಾಗಿ ಹಳ್ಳಿಗಳಲ್ಲಿ ಇದು ಪ್ರಾರಂಭವಾಗಿದೆ ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ನಮ್ಮ ಆರೋಪ ತಾವು ಇದನ್ನು ಕೊನೆಯದಾಗಿ ರೂಲ್ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಈಗಾಗಲೇ ತಮ್ಮ ತೀರ್ಮಾನ ನೀಡಿದ್ದೀರಿ ರಾಜ್ಯಪಾಲರ ಭಾಷಣದಲ್ಲೂ ಕೂಡ ಇದರ ಬಗ್ಗೆ ಚರ್ಚೆಗೆ ಅವಕಾಶ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ ಈಗಾಗಲೇ ನಮ್ಮ ಸ್ನೇಹಿತರು ಹೇಳಿದಾಗೆ, ಈ ಒಂದು ಆರು ತಿಂಗಳ ಅವಧಿಯಲ್ಲಿ ಬೆಳಗಾವಿಯ ಅಧಿವೇಶನ ಆದ ನಂತರ ಬಹಳಷ್ಟು ವಿಷಯಗಳು ನಮಗೆ ಬಂದಿವೆ ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಅವಕಾಶವೂ ಕೂಡ ನಮಗೆ ಇದೆ ಸಾಲ ಮನ್ನಾ ಮಾಡುವ ಬಗ್ಗೆ, ಇವತ್ತು ಗುಲ್ಬರ್ಗಾದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಹೇಳಿಕೆ, ಮತ್ತು ನಂತರದಲ್ಲಿ ಮಾನ್ಯ ಕುಮಾರಸ್ವಾಮಿಯವರ ಹೇಳಿಕೆ, ಇದು ದೊಡ್ಡ ಕಾಂಪಿಟೇಶನ್ ಆಗಿಬಿಟ್ಟಿದೆ ಕೊನೆಯದಾಗಿ ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲಿಯವರೆಗೆ ಈ ಒಂದು Common Minimum Programme ಇದೆ ಒಟ್ಟಾರೆ ಕೆಲಸ ಮಾಡತಕ್ಕಂಥ ದಾಟಿ ಬೇರೆ ಇದೆ ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಇವತ್ತು ನಮ್ಮ ಅಧಿಕಾರಕ್ಕೆ ಯಾರೂ ಕೂಡ ಪ್ರಶ್ನೆ ಹಾಕತಕ್ಕಂಥದ್ದಿಲ್ಲವೆಂದು ಹೇಳಿದರು ಪ್ರಜಾಪ್ರಭುತ್ವದಲ್ಲಿ ರಾಜ್ಯದ ಅಭಿವೃದ್ಧಿ ಕೆಲಸ ಕಾರ್ಯಗಳು ಆಗಬೇಕಾದರೆ ಕೊನೆಯದಾಗಿ ಸಂಪುಟದಲ್ಲಿ ಅದರ ಬಗ್ಗೆ ನಿರ್ಣಯವಾಗಬೇಕಾಗುತ್ತದೆ ಇದರ ಬಗ್ಗೆ ಸಾಕಷ್ಟು ವ್ಯತ್ಯಾಸಗಳಿವೆ ಮತ್ತು ರಾಜಕೀಯವಾಗಿ ವ್ಯತ್ಯಾಸವಾಗಿವೆ ಜೊತೆಗೆ ಆ ಒಂದು ಪಕ್ಷದ ರಾಷ್ಟ್ರಾಧ್ಯಕ್ಷರು ಕೂಡ ಪ್ರತ್ಯೇಕವಾದಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ ಇವೆಲ್ಲವನ್ನು

ನೋಡಿದರೆ, ನಮಗೆ ಈ ಸರ್ಕಾರ ಎಲ್ಲಿಯವರೆಗೆ ನಡೆಯುತ್ತದೆ ಎನ್ನತಕ್ಕಂಥ ಅನುಮಾನ ನಮ್ಮ ಮನಸ್ಸಿನಲ್ಲಿ ಬರುತ್ತದೆ ಹೀಗಿದ್ದರೂ ನಾವು ಅದರ ಬಗ್ಗೆ ಪ್ರಶ್ನಿಸುತ್ತಿಲ್ಲ ಕೋಮುಗಲಭೆಗಳು ನಡೆಯುತ್ತಿವೆ, ಎಲ್ಲಾ ಕಡೆಗೆ ಮತೀಯ ಸಮಾಜದಲ್ಲಿ ಬಿರುಕು ಹುಟ್ಟಿಸತಕ್ಕಂಥ ಕೆಲಸ ಕಾರ್ಯಗಳು ನಡೆಯುತ್ತಿವೆ, ಈಗಾಗಲೇ ಮಂಗಳೂರಿನಲ್ಲಿ ಗಲಭೆಯಾಗಿವೆ ಬೇರೆ ಕಡೆಗೂ ಕೂಡ ಗಲಭೆಯಾಗತಕ್ಕಂಥದ್ದು ಇದೆ ಕರ್ನಾಟಕದ ರಾಜಧಾನಿಯಾಗಿರತಕ್ಕಂಥ ಬೆಂಗಳೂರಿನಲ್ಲಿ ಇತ್ತೀಚಿನ ದಿನದಲ್ಲಿ ಏನು ಗಲಭೆಯಾಗಿದೆ ಅದು ಶೋಭೆ ತರತಕ್ಕಂಥದ್ದು ಅಲ್ಲ ಇವತ್ತು ಗೃಹ ಮಂತ್ರಿಗಳು ಕೂಡ ನಮ್ಮ ಎದುರಿನಲ್ಲಿ ಇದ್ದಾರೆ ಇವೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ, ವಿಶೇಷವಾಗಿ ಆರು ತಿಂಗಳ ನಂತರ ಸದನ ಸೇರಿದಾಗ ನಾವೇನು ನಮ್ಮ ಪಕ್ಷದಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ ಅದರ ಪ್ರಕಾರ ಆ ಎಲ್ಲಾ ವಿಚಾರ ಬದಿಗಿಟ್ಟು, ರಾಜ್ಯದ ರೈತರಿಗೆ ಏನು ಮಾಡಿದಿರಿ? 128 ತಾಲ್ಲೂಕುಗಳಲ್ಲಿ ಏನು ಒಂದು ವಾತಾವರಣ ಇದೆ, ಯಾವ ರೀತಿಯಾಗಿ ಕೆಲಸ ಕಾರ್ಯಗಳು ನಡೆಯಬೇಕಾಗಿವೆ, ಕೇಂದ್ರದಿಂದ ಬಂದಂಥ ಹಣವೇನಿದೆ, ಇದರಲ್ಲಿ ಎಷ್ಟರಮಟ್ಟಿಗೆ ಉಪಯೋಗವಾಗಿದೆಂದು ನಾವು ಕೇಳುವುದು ಬಹಳ ಅಗತ್ಯವಾಗಿದೆ ಹೀಗಾಗಿ ಇದು ಮಹತ್ವದ ವಿಷಯವೆಂದು ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ಇವತ್ತು ಇದನ್ನು ತಂದಿದ್ದೇವೆ ಈಗಾಗಲೇ ನಮ್ಮ ಮಾನ್ಯ ರಮೇಶ್ ಕುಮಾರ್ ರವರು ಮತ್ತು ದೇಶಪಾಂಡೆಯವರು ಮಾತನಾಡಿದ್ದಾರೆ, ಅದರಂತೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸಿದ್ದರಾಮಯ್ಯನವರು ಕೂಡ ಇದರ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ ಇವತ್ತು ಏಕೆ ಈ ಮಾತು ಬರುತ್ತಿದೆ ಎಂದರೆ, ಮಾನ್ಯ ಪ್ರಕಾಶ್‌ರವರು ಯಾವಾಗಲೂ ಕೂಡ ತಮ್ಮದೇ ಆದ ಭಾಷೆ ನೀತಿಯಲ್ಲಿ ಬಹಳ ಸಮಾಧಾನವಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ ಇದರ ಬಗ್ಗೆ ಕೌಲ್ ಅಂಡ್ ಶಕ್ದಾರ್ ಪುಸ್ತಕ ನೋಡತಕ್ಕಂದ ವಿಷಯವಲ್ಲ ತಾವೂ ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ ಮಾನ್ಯ ವೈಕುಂಠ ಬಾಳಿಗರವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಹಿರಿಯ ಸದಸ್ಯರಾಗಿದ್ದಂಥ ಮಾನ್ಯ ಗೋಪಾಲ ಗೌಡರು ಇದ್ದಾಗ ಜನಸಾಮಾನ್ಯರ ಬಗ್ಗೆ ಆಗಿನ ಸರ್ಕಾರ ಯಾವರೀತಿಯಾಗಿ ಚಿಂತನೆ ಮಾಡಿದಂಥ ಘಟನೆಗಳು ತಮಗೆಲ್ಲಾ ಗೊತ್ತಿರಬಹುದು ಇವತ್ತಿನ ದಿವಸ ಈ ಸದನಲ್ಲಿ ಜನಸಾಮಾನ್ಯರ ಅಭಿಪ್ರಾಯದ ಬಗ್ಗೆ ಮತ್ತು ರೈತರ ಹಾಗೂ ಮಣ್ಣಿನ ಮಗನ ಬಗ್ಗೆ ಶಿಖರದ ಮಟ್ಟಕ್ಕೆ ಚಿಂತನೆ ಮಾಡತಕ್ಕಂಥ ಮತ್ತು ಬಹಳ ಮಾತನಾಡತಕ್ಕಂಥ ಜನ ಈ ಸಮ್ಮಿಶ್ರ

ಸರ್ಕಾರದಲ್ಲಿದ್ದಾರೆ ನಾವುಗಳು ಒಂದಾಗಿ ಕೇವಲ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಸರ್ಕಾರ ಎಂದು ಹೇಳುತ್ತಿದ್ದಾರೆ ಆದರೆ, ಅವರು ಆ ಕಡೆ ಈ ಕಡೆಯಿಂದ ಬಂದು ರಾಜಭವನದಲ್ಲಿ ಒಂದಾಗಿದ್ದು ಬೇರೆ ನೀವೇನು ಚುನಾವಣೆಗೆ ಹೋಗಿ ಮನ್ನಣೆ ಪಡೆದುಕೊಂಡು ಬಂದವರಲ್ಲ ಮತ್ತೆ ಈ ಸರ್ಕಾರ ಬಹಳ ದಿವಸ ಇರುವುದಿಲ್ಲವೆಂದು ಮೇಲಿಂದ ಮೇಲೆ ಹೇಳುತ್ತಿದ್ದೇವೆ ಈ ಸರ್ಕಾರ ಪಧನವಾಗಬೇಕೆಂದು ನಾವೇನು ಹೇಳುತ್ತಿಲ್ಲ ಆದರೆ, ನಿಮಗೆ ಅಧಿಕಾರ ಕೊಟ್ಟಿದ್ದಾರೆ ಈ ಒಂದು ವರ್ಷದ ಅವಧಿಯಲ್ಲಿ ಆಗಿರುವಂತಹವುಗಳನ್ನು ನಾವು ಸುಮ್ಮನೆ ಕುಳಿತು ನೋಡುತ್ತಿದ್ದೇವೆ ಈ ಒಂದು ವರ್ಷದ ನಿಮ್ಮ ಆಡಳಿತದ ಅವಧಿಯಲ್ಲಿ ಯಾವುದೇ ಕೆಲಸಕ್ಕೂ ಎಲ್ಲಿಯೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ ಬೊಕ್ಕಸದಲ್ಲಿ ಹಣ ಇದೆ ಎಂದು ಅವರು ಹೇಳುತ್ತಾರೆ ಆದರೆ, ಎಲ್ಲಿಂದ ಹಣ ತರಬೇಕೆಂದು ಇವರು ಹೇಳುತ್ತಿದ್ದಾರೆ ಇವತ್ತು ಸರ್ಕಾರ ನಡೆಸತಕ್ಕಂಥ ಜನರು ಜವಾಬ್ದಾರಿಯುತವಾಗಿ ತಿಳಿದುಕೊಂಡು ಹೇಳಬೇಕಾಗುತ್ತದೆ ಸಾಲ ಮನ್ನಾ ಮಾಡುತ್ತೇವೆಂದು ಪ್ರಸ್ತಾಪ ಮಾಡಿದ್ದಾರೆ ಇವತ್ತಿನದಿವಸ ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿರುವಂಥ ಕಾಲದಲ್ಲಿ ಸಾಲ ಮನ್ನಾ ಮಾಡುತ್ತಾರೆಂದು ಕಾಯುತ್ತಿದ್ದಾರೆ ಅದರೆ, ನಾವು ಹೇಳುವುದೇನೆಂದರೆ, ಸಾಲ ಮನ್ನಾ ಮಾಡುವುದಕ್ಕೆ ಸುಮಾರು 12 ರಿಂದ 15 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ ಆದರೆ, ಕೇವಲ 82 ಕೋಟಿ ರೂಪಾಯಿ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಿ ಆದ್ದರಿಂದ , ಇಷ್ಟು ಹಣ ಇಟ್ಟುಕೊಂಡು ಯಾವರೀತಿಯಾಗಿ ಸಾಲ ಮನ್ನಾ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ ಇದರಲ್ಲಿಯೂ ಕೂಡ ಮುಖ್ಯ ಮಂತ್ರಿ ಮತ್ತು ಉಪ ಮುಖ್ಯ ಮಂತ್ರಿ ನಡುವೆ ಸ್ಪರ್ಧೆ ನಡೆದಿದೆ ಇವತ್ತಿನದಿವಸ ರೈತರ ಕೆಲಸ ಕಾರ್ಯಗಳು ಆಗುತ್ತಿಲ್ಲ ಮತ್ತೆ ಕಂದಾಯ ಇಲಾಖೆ ಕೂಡ ರೈತರ ಬಗ್ಗೆ ಕಾಳಜಿ ವಹಿಸುತ್ತಿಲ್ಲ ನಾವು ಬೆಳಗಾಂ ಅದಿವೇಶನದಲ್ಲಿಯೂ ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆವು ಅದೇನೆಂದರೆ, 128 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ನಿಮ್ಮ Action plan ಏನೆಂದು ನಾವು ಕೇಳಿದ್ದೆವು ಇವತ್ತಿನದಿವಸ ನೀವು ಮಾಡತಕ್ಕಂಥ ಕೆಲಸವಾದರು ಏನು? ಜಿಲ್ಲಾಧಿಕಾರಿಗಳು ಎಷ್ಟು ಹಳ್ಳಿಗೆ ಹೋಗಿದ್ದಾರೆ? ಮತ್ತೆ ಬೆಂಗಳೂರಿನಲ್ಲಿ ಕುಳಿತುಕೊಂಡಿರುವ ಅಧಿಕಾರಿಗಳು ಎಷ್ಟು ಕಡೆ ಹೋಗಿ ನಿರ್ವಹಣೆ ಮಾಡಿದ್ದಾರೆ? ಮಾನ್ಯ ಪ್ರಕಾಶ್‌ರವರೆ, ನಾನು ಹೇಳುವುದೇನೆಂದರೆ, ಕೇವಲ ಶಬ್ದಗಳ ಮುಖಾಂತರ ರಾಜ್ಯದ ಜನತೆಗೆ ಮೋಸ ವಂಚನೆ ಮಾಡತಕ್ಕಂಥದು ಬಹಳ ದಿವಸ

ನಡೆಯುವುದಿಲ್ಲ ಮತ್ತೆ ಪತ್ರಿಕಾ ಹೇಳಿಕೆಯ ಮುಖಾಂತರ ಕೂಡ ಬಹಳ ದಿವಸ ಜೀವಂತವಾಗಿರುವುದಕ್ಕೆ ಸಾಧ್ಯವಿಲ್ಲ ಇವತ್ತು ಏನಾದರೂ ಸಮ್ಮಿಶ್ರ ಸರ್ಕಾರ ಘನತೆ ಗೌರವ ಕಾಪಾಡಿಕೊಂಡು ಹೋಗುವಂಧ ರೀತಿಯಾಗಬೇಕಾದರೆ, ತಾವು ಈಗಾಗಲೇ ಮಾನ್ಯ ದೇವರಾಜ ಅರಸುರವರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ 1972ರಲ್ಲಿ ನಾನು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮೊದಲನೆ ಸಾರಿ ಶಾಸಕರಾಗಿದ್ದೆವು ಆ ಸಂದರ್ಭದಲ್ಲಿ ಮಾನ್ಯ ದೇವರಾಜ ಅರಸುರವರು ಗುಲ್ಬರ್ಗ ಜಿಲ್ಲೆಯಲ್ಲಿದ್ದಂತಹ ಬರಗಾಲ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವಾಗ ಅರ್ಧಮಂತ್ರಿಗಳಾಗಿದ್ದಂತಹ ಮಾನ್ಯ ಘೋರ್ಪಡೆಯವರು ಸಹ ಒಂದು ತಿಂಗಳ ಕಾಲ ಅಲ್ಲಿಯೇ ಕುಳಿತುಕೊಂಡು ಬರಗಾಲದ ನಿರ್ವಹಣೆಯನ್ನು ಮಾಡಿದ್ದರು ಮತ್ತೆ ಆ ಸಂದರ್ಭದಲ್ಲಿ ಬರತಕ್ಕಂಧ ಎಡರುತೊಡರುಗಳ ಬಗ್ಗೆ ಅಲ್ಲಿಯೇ ಒಂದು ನಿರ್ಧಿಷ್ಟವಾದ ಆದೇಶವನ್ನು ಕೊಡುತ್ತಿದ್ದರು ಆದರೆ, ಇವತ್ತಿನ ದಿವಸ ಯಾವ ಮಂತ್ರಿಗಳಾಗಲಿ ಅಧವಾ ಮುಖ್ಯ ಕಾರ್ಯದರ್ಶಿಯವರು ಹೋಗಿ ಅಲ್ಲಿ ಕುಳಿತುಕೊಂಡಿದ್ದೀರಿ? ಹೆಲಿಕಾಪ್ಟರ್ ಮುಖಾಂತರ ಹೋಗಿ ಕೇವಲ ಜಿಲ್ಲಾಧಿಕಾರಿಯವರ ಜೊತೆ ಸಮಾಲೋಚನೆ ಮಾಡಿದರೆ ಆಗುವುದಿಲ್ಲ ಮತ್ತೆ ಹಳ್ಳಿಗಳಿಗೆ ಹೋಗಿ ವಾಸ್ತವ್ಯ ಹೂಡಿ ಜನಾಭಿಪ್ರಾಯ ಮೂಡಿಸುವಂಧ ಕೆಲಸ ಮಾಡುವುದಕ್ಕೆ ಹೋಗಿರತಕ್ಕ ದಾಟಿ ಇವತ್ತಿನ ದಿವಸ ರೈತರಲ್ಲಿ ವಿಶ್ವಾಸ ಮೂಡಿಸುವಂಧ ಕೆಲಸವಲ್ಲ ಇವತ್ತಿನ ದಿವಸ 128 ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ ಕಳೆದ ಫೆಬ್ರವರಿ 3ರಂದು ತಮ್ಮ ಸರ್ಕಾರ ಅಧಿಕಾರಕ್ಕೆ ಬಂತು ಮತ್ತೆ ವಿಧಾನ ಸೌಧದ ಎದುರುಗಡೆ ತಾವೆಲ್ಲರೂ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ ಇದು ಸಂತೋಷದ ವಿಷಯ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಮತ್ತು ಜನತಾದಳ (ಎಸ್) ಪಕ್ಷ ಗಳೆರಡು ಕೂಡಿ ಸರ್ಕಾರ ರಚನೆ ಮಾಡತಕ್ಕಂಧದು ಕೂಡ ಪ್ರತಿಕ್ರಿಯವಾದ ಶಕ್ತಿಗಳಾಗಲಿ, Reactionary forces ಆಗಲಿ ಈ ರಾಷ್ಟ್ರದ ಇತಿಹಾಸದಲ್ಲಿ ನಾವು ವಹಿಸಿರುವಂತಹ ಪಾತ್ರದ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ ಆದರೆ, ಇವತ್ತು ಏನಾಗಿದೆ ಎಂದರೆ, ನೀವು ಸರ್ಕಾರ ರಚನೆ ಮಾಡಿ ಒಂದು ವರ್ಷ ಮುಗಿಯಿತು ಈ ಒಂದು ವರ್ಷದಲ್ಲಿ 172 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಾಗೆಯೇ, ಜನವರಿ ತಿಂಗಳಲ್ಲಿ 10 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆದ್ದರಿಂದ ಇದರ ಬಗ್ಗೆ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇವತ್ತಿನದಿವಸ ಮಹಾರಾಷ್ಟ ರಾಜ್ಯದಲ್ಲಿ ಕೂಡ ರೈತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ ವಿಶೇಷವಾಗಿ

ವಿದರ್ಭ ಕ್ಷೇತ್ರದಲ್ಲಿ ಹೆಚ್ಚಾಗಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ ಮಹಾರಾಷ್ಟ್ರದವರೆ ಆದ ಮಾನ್ಯ ಶರದ್‌ಪವಾರ್‌ರವರು ಇವತ್ತು ನಮ್ಮ ರಾಷ್ಟ್ರದ ಕೃಷಿ ಸಚಿವರಾಗಿದ್ದಾರೆ ಇವರು ಮಾನ್ಯ ಮನಮೋಹನ್ ಸಿಂಗ್‌ರವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು ಪದೇಪದೇ ಆಗುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಅಂತಿಮವಾಗಿ ಮತ್ತು ಶಾಶ್ವತ ಸೆಲ್ಯೂಷನ್ ಕಂಡು ಹಿಡಿಯಬೇಕೆಂಬ ದೃಷ್ಟಿಯಿಂದ ದೆಹಲಿಯಲ್ಲಿ ಚರ್ಚೆ ಕೂಡ ಮಾಡಲಾಗಿದೆ

(ಈ ಹಂತದಲ್ಲಿ ಮಾನ್ಯ ಆರಗಜ್ಞಾನೇಂದ್ರರವರು ಆಧ್ಯಕ್ಷ ಪೀರವನ್ನು ಅಲಂಕರಿಸಿದರು)

ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಳಗಾಂ , ದಾವಣಗೆರೆ, ಹಾಸನ , ಮಡಿಕೇರಿ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಬಹಳಷ್ಟು ರೈತರ ಆತ್ಮಹತ್ಯೆಗಳು ಆಗಿವೆ ಆದ್ದರಿಂದ ವಿದರ್ಭ ಮಾದರಿಯಲ್ಲಿಯೇ ಇಲ್ಲಿನ ರೈತರಿಗೂ ಹಣ ಕೊಡಬೇಕೆಂದು ಕೇಳಲಾಗಿತ್ತು 6 ತಿಂಗಳ ಹಿಂದೆ ಈ 6 ಜಿಲ್ಲೆಗಳಿಗೆ ವಿದರ್ಭ ಮಾದರಿಯಲ್ಲಿ ಹಣ ಕೊಡುವುದಕ್ಕಾಗಿ 2689 ಕೋಟಿ ರೂಪಾಯಿ ಕೊಟ್ಟಿದ್ದಾರೆ ಆದರೆ, ಇದಕ್ಕೆ ಇದುವರೆಗೂ Action plan ಮಾಡಿಲ್ಲ ಯಾವರೀತಿಯಾಗಿ ಈ ಹಣ ಖರ್ಚು ಮಾಡಬೇಕೆಂದೂ ಸಹ ಆಗಿಲ್ಲ ಮಾನ್ಯ ಪ್ರಕಾಶ್‌ರವರೆ, ನಾವು ನಿಲುವಳಿ ಸೂಚನೆಯ ಮೇಲೆ ಈ ವಿಷಯ ತಂದು ಗಂಭೀರವಾದಂತಹ ಆರೋಪ ಏತಕ್ಕಾಗಿ ಮಾಡುತ್ತಿದ್ದೇವೆಂದರೆ, ಕೇಂದ್ರ ಸರ್ಕಾರದಿಂದ ಬಂದಂಧ ಹಣವನ್ನು ನೀವು ಉಪಯೋಗ ಮಾಡುತ್ತಿಲ್ಲ ಇವತ್ತಿನ ದಿವಸ ಆ ಒಂದು ಸಮಿತಿಗೆ PWD Minister ಅವರನ್ನು ಹಾಕಿದ್ದೀರಿ ಆದರೆ, ಅದರಲ್ಲಿ ಕಂದಾಯ ಮಂತ್ರಿಗಳಿಲ್ಲ ಮತ್ತೆ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮಂತ್ರಿಗಳೂ ಸಹ ಇಲ್ಲ Action Plan prepare ಮಾಡಿಲ್ಲ ಆದ್ದರಿಂದ ನೀವು ಯಾವ ರೀತಿಯಾಗಿ ರೈತರ ಹಿತರಕ್ಷಣೆ ಮಾಡುತ್ತಿದ್ದೀರಿ? ನಾವು ಹೋದಸಲ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಂಧ ಸಂದರ್ಭದಲ್ಲಿ ನಾವು ಮತ್ತು ಮಾನ್ಯ ಖರ್ಗೆಯವರು ಇದ್ದಾಗ ನಿಮ್ಮ ಎದುರುಗಡೆಯೇ ಮಾನ್ಯ ಪ್ರಧಾನ ಮಂತ್ರಿಯವರ ಜೊತೆ ದೂರವಾಣಿ ಮುಖಾಂತರ ಮಾತನಾಡಿದ್ದೇವೆ ಪ್ರಧಾನ ಮಂತ್ರಿಯವರು ಬೆಳಗಾಂಗೆ ಬರುತ್ತಿದ್ದರು ಆದರೆ, ಫ್ಲೈಟ್ ಟೇಕ್ ಅಫ್ ಆಗಲಿಲ್ಲ ಮಾನ್ಯ ಶರದ್‌ಪವಾರ್‌ರವರು ಬಂದರು ತಾವೂ ಕೂಡ ಆ ಸಭೆಯಲ್ಲಿದ್ದೀರಿ ಆ ಸಭೆಯಲ್ಲಿ ನಾವೆಲ್ಲ ಮಾತನಾಡಿದ ಮೇಲೆ ಪ್ರವಾಹದಿಂದ

5 00 P M

ಪೀಡಿತವಾಗಿರುವ 5 ಜಿಲ್ಲೆಗಳ ಹಳ್ಳಿಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡಿ ಪುನರ್ವಸತಿ ಕಲ್ಪಿಸಿ ಕೊಡುವುದಾಗಿ ಆ ಸಂದರ್ಭದಲ್ಲಿ ಅವರು ಹೇಳಿದರು ಕೇವಲ ಬೆಳಗಾಂ ಜಿಲ್ಲೆಗೆ 172 ಕೋಟಿ ರೂಪಾಯಿ ಖರ್ಚಾಗಿದೆ ನಾನು ಮೊನ್ನೆದಿವಸ ಬೆಳಗಾಂಗೆ ಹೋದಾಗ ಜಿಲ್ಲಾಧಿಕಾರಿಯವರ ಜೊತೆ ಸಮಾಲೋಚನೆ ಮಾಡಿದಂತಹ ಸಂದರ್ಭದಲ್ಲಿ ಈ ವಿಷಯ ಹೇಳಿದರು ಹಿಂದೆ ತಾವು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದೀರಿ ಮತ್ತೆ ಮಾನ್ಯ ಸಿದ್ದರಾಮಯ್ಯನವರ ನಂತರ ಉಪ ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ 315 ಕೋಟಿ ರೂಪಾಯಿ ಕೊಡಲಾಗಿತ್ತು ಇದು ತಮಗೆಲ್ಲಾ ಗೊತ್ತಿರುವಂತ ವಿಷಯವಾಗಿದೆ ಆದರೆ, ಇವತ್ತು ಏಕೆ ಆಗುತ್ತಿಲ್ಲವೆಂದರೆ, ಜನಾಭಿಪ್ರಾಯ ಮೂಡಿಸುವಂಥ ರೀತಿಯಲ್ಲಿ ಕೆಲಸ ಕಾರ್ಯಗಳು ಆಗುತ್ತಿಲ್ಲ ಒಂದೂ ಜಿಲ್ಲೆಯಲ್ಲಿಯೂ ಕೂಡ ಈ ಒಂದು ಕೆಲಸ ಮಾಡುತ್ತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ ಮತ್ತೆ ನಮ್ಮ ರಾಜ್ಯದಲ್ಲಿ ಬರ ಪೀಡಿತ ಪ್ರದೇಶ 128 ತಾಲ್ಲೂಕುಗಳೆಂದು ತಾವು ಹೇಳಿದ್ದೀರಿ ಈಗಾಗಲೇ ಜಿಲ್ಲಾಧಿಕಾರಿಗಳು ಬೇಡಿಕೆಯ ಪಟ್ಟಿಯನ್ನು ಕೊಟ್ಟಿದ್ದಾರೆ ಇದಕ್ಕಾಗಿ 2271 ಕೋಟಿ ರೂಪಾಯಿ ಬೇಕಾಗುತ್ತದೆ ಆದರೆ, ಇಲ್ಲಿಯವರೆಗೆ ಕೇವಲ 261 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದೀರಿ ಮತ್ತೆ 330 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಕಂದಾಯ ಇಲಾಖೆಯವರು ಹೇಳುತ್ತಾರೆ ಆದರೆ, ಈ ಹಣ ಇನ್ನೂ ಕೂಡ ಜಿಲ್ಲೆಗಳಿಗೆ ಮುಟ್ಟಿಲ್ಲ ಇವತ್ತಿನ ದಿವಸ ಬೇಡಿಕೆಯ ಶೇಕಡ 11 ರಷ್ಟು ಹಣ ಮಾತ್ರ ತಾವು ಬಿಡುಗಡೆ ಮಾಡಿದ್ದೀರಿ ಇಲ್ಲಿಯವರೆಗೆ ಬಂದಿರುವ ಮಾಹಿತಿ ಪ್ರಕಾರ 151 ಕೋಟಿ ರೂಪಾಯಿಗೆ ಒಟ್ಟಾರೆ ಬೇಡಿಕೆಯ ಶೇಕಡ 7 ರಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ ಪ್ರಕೃತಿ ಪರಿಹಾರ ವಿಕೋಪ ನಿಧಿಯಿಂದ ಕೇಂದ್ರ ಸರ್ಕಾರ 90 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಮತ್ತೆ 2006–2007ನೇ ಸಾಲಿನಲ್ಲಿ 226 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಮತ್ತೆ 2007–2008ನೇ ಸಾಲಿಗೆ ಬಿಡುಗಡೆಯಾದ ಮುಂಗಡ 27 ಕೋಟಿ ಒಟ್ಟಾರೆ 344 ಕೋಟಿ ರೂಪಾಯಿ ಈಗಾಗಲೇ ತಮಗೆ ಬಂದಿದೆ ಮತ್ತೆ 18 ಲಕ್ಷ ಟನ್ ಆಹಾರಧಾನ್ಯ ಬಂದಿದೆ ಇದೂ ಸೇರಿ 330 ಕೋಟಿ ರೂಪಾಯಿಗಳಾಗುತ್ತದೆ ಇವತ್ತಿನ ದಿವಸ ಪ್ರವಾಹಕ್ಕೆ ಸಿಲುಕಿದ

ಗುಲ್ಬರ್ಗ, ಬಿಜಾಪುರ, ಬೆಳಗಾಂ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ 2005–2006ನೇ ಸಾಲಿನಲ್ಲಿ ನೆರೆ ಪರಿಹಾರ ಕಾಮಗಾರಿಗಳಿಗಾಗಿ 3041 ಕೋಟಿ ರೂಪಾಯಿ ಬಿಡುಗಡೆಯಾಗಿತ್ತು ನೆರೆ ಪರಿಹಾರ ಕಾಮಗಾರಿಗಳಿಗಾಗಿ 8 ಜಿಲ್ಲೆಗಳಲ್ಲಿ ಒಟ್ಟು 3041 ಕೋಟಿ ರೂ ಗಳ ಹಣ ಬಿಡುಗಡೆಯಾಗಿತ್ತು ಇದರಲ್ಲಿ ಖರ್ಚಾಗಿದ್ದು 315 ಕೋಟಿ ರೂ ಗಳು, 2006–07 ರಲ್ಲಿ ಬಿಡುಗಡೆಯಾಗಿರುವ ಹಣ ಕೇವಲ 123 ಕೋಟಿ ರೂ ಗಳಲ್ಲಿ ಅದರಲ್ಲಿ 96 ಕೋಟಿ ರೂ ಗಳು ಖರ್ಚಾಗಿದೆ ನಾನು ಏಕೆ ಈ ವಿವರವನ್ನು ಕೊಡುತ್ತಿದ್ದೇನೆಂದರೆ, ಹೋದ ವರ್ಷದ ಸಮ್ಮಿಶ್ರ ಸರ್ಕಾರದಲ್ಲಿ ಶ್ರೀಮಾನ್ ಸಿದ್ದರಾಮಯ್ಯನವರು ಹಣಕಾಸಿನ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳಾಗಿದ್ದರು ಮಾನ್ಯ ಪ್ರಕಾಶ್‌ರವರೆ, ತಾವು ಕಂದಾಯ ಮಂತ್ರಿಗಳಾಗಿದ್ದಿರಿ ತದನಂತರ ತಾವು ಉಪ ಮುಖ್ಯಮಂತ್ರಿಗಳಾಗಿದ್ದಿರಿ, ಇವತ್ತು ರಾಜ್ಯದಲ್ಲಿ ವಿಶೇಷವಾಗಿ ಜಿಲ್ಲೆಯಲ್ಲಿ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ರೀ–ಹ್ಯಾಬಿಲಿಟೇಶನ್ ಸೆಂಟರ್ ಸಲುವಾಗಿ ಎಲ್ಲಾ ಕಡೆಗೆ ಇವತ್ತು ಕೇಂದ್ರ ಸರ್ಕಾರದಿಂದ ಹಣವನ್ನು ಒದಗಿಸಿದ್ದಾರೆ ಇವತ್ತು ಯಾವ ಬಾಬತ್ತಿನಲ್ಲಿ ಕೂಡ ಪ್ರವಾಹಪೀಡಿತ ಪ್ರದೇಶಕ್ಕೆ ಹಣವನ್ನು ಬಿಡುಗಡೆ ಮಾಡತಕ್ಕಂಥದ್ದು ಅಲ್ಲ, ವ್ಯವಸ್ಥಿತವಾಗಿ ಕೇಂದ್ರ ಸರ್ಕಾರಕ್ಕೆ ಹಣವನ್ನು ಕೇಳತಕ್ಕಂಥದ್ದು ಕೂಡ ಅಲ್ಲ, action plan prepare ಮಾಡತಕ್ಕಂಥದ್ದು ಅಲ್ಲ, ಅಧಿಕಾರಿಗಳಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕಂಥದ್ದು ಅಲ್ಲ, ಇವತ್ತು ಈ ರೀತಿಯಾಗಿ ತಾವು ಏನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ ಅದಕ್ಕಾಗಿ ಇವತ್ತಿನ ದಿವಸ ನಾವು ತಮ್ಮ ಮೇಲೆ ಆರೋಪವನ್ನು ಮಾಡುತ್ತಿದ್ದೇವೆ ತಾವು ಹೇಳುತ್ತೀರಿ ಉತ್ತರವನ್ನು ಕೊಡುತ್ತೇವೆ, ಉತ್ತರವನ್ನು ಕೊಡಬೇಕಾದರೆ ಮಾನ್ಯ ಶಿವರಾಜ್ ಪಾಟೀಲ್‌ರು ಕೂಡ ತಮಗೆ ಹೆಚ್ಚಿನ ಪರಿಚಿತರು, ಕೇಂದ್ರದ ಗೃಹ ಸಚಿವರಾಗಿದ್ದಾರೆ ನಾವು ಮತ್ತು ಮಾನ್ಯ ಖರ್ಗೆಯವರು ಎಲ್ಲ ಇತರ ನಾಯಕರು ಕೂಡಿಕೊಂಡು we represented with the Prime Minister, ನಾವು ಮಾನ್ಯ ಶಿವರಾಜ್ ಪಾಟೀಲ್‌ರಿಗೆ ಭೇಟಿಯಾದೆವು ತಾವು ನೇರವಾಗಿ ಇದರ ಮಂತ್ರಿಗಳಾಗಿದ್ದೀರಿ, ತಾವು ಒಂದು ಸಲ ಕರ್ನಾಟಕಕ್ಕೆ ಬಂದು ಕರ್ನಾಟಕದ ಪರಿಸ್ಥಿತಿಯನ್ನು ನೋಡಿಕೊಂಡು ಹೋಗಬೇಕು, ನೀವು ಆವತ್ತು ಇರಲಿಲ್ಲ, ಮಾನ್ಯ ಜಗದೀಶ್ ಶೆಟ್ಟರ್‌ರವರು ನಾವು ಮಾನ್ಯ ಖರ್ಗೆಯವರು ಮಾನ್ಯ ಯಡಿಯೂರಪ್ಪನವರು ಎಲ್ಲರೂ ಕೂಡಿ ಎಲ್ಲಾ ಕಡೆ ವೈಮಾನಿಕ ಸರ್ವೆಯನ್ನು ಮಾಡಿದ್ದೇವೆ

ಮೂರನೇ ಮಹಡಿಯಲ್ಲಿ ಮೀಟಿಂಗ್ ಆಯಿತು ಮೀಟಿಂಗ್‌ನಲ್ಲಿ ನಾವು ಏನು ಕೇಳಿದೇವು, ಒಟ್ಟಾರೆ ಸರ್ಕಾರ ನಿರೀಕ್ಷೆ ಮಾಡಿದಕ್ಕಿಂತಲೂ ಹೆಚ್ಚಿಗೆ 250 ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದ್ದಾರೆ 250 ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದರೆ ಇವತ್ತು ಸದನದಲ್ಲಿ ನೇರವಾಗಿ ನೀವು ಹೇಳಬೇಕು ಕೇಂದ್ರದಿಂದ ಬಂದಿರುವ 250 ಕೋಟಿ ರೂ ಗಳಲ್ಲಿ ತ್ವರಿತವಾಗಿ ತಾವು ಎಷ್ಟು ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದ್ದೀರಿ ಜಿಲ್ಲೆಗಳಿಗೆ ಮುಟ್ಟಿದೆಯೋ ಇಲ್ಲವೋ ಮತ್ತು ಇವತ್ತು CRF ನಲ್ಲಿ 90 ಕೋಟಿ ರೂ ಗಳು, ಒಟ್ಟಾರೆ 113 ಕೋಟಿ ರೂ ಗಳು ಬಂದಿದೆ ನೀವು ರಾಜ್ಯದ ಬೊಕ್ಕಸದಿಂದ ಕೊಡತಕ್ಕಂಥದ್ದು ಅಲ್ಲ, ನಿಮ್ಮ ಖಜಾನೆ ಭರ್ತಿ ಇದೆ, ಅದು ನಿಮ್ಮಲ್ಲಿಯೇ ಇರಲಿ, ನೀವು ಯಾವುದಕ್ಕೆ ಉಪಯೋಗ ಮಾಡುತ್ತೀರಿ ಅದಕ್ಕೆ ಉಪಯೋಗವನ್ನು ಮಾಡಿ, ಇವತ್ತು ಕೇಂದ್ರದಿಂದ ಬಂದಿರುವ ಹಣಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಎಂದು ನೀವು ಏನು ಅವರ ಮೇಲೆ ಆರೋಪ ಮಾಡುತ್ತಿದ್ದೀರಿ, ಅದರ ಬಗ್ಗೆ ನೀವು ರಾಜ್ಯದ ಜನತೆಗೆ ಹೇಳಬೇಕು 128 ತಾಲ್ಲೂಕಿನಲ್ಲಿ ಬರ ಪರಿಸ್ಥಿತಿ ಉದ್ಭವವಾಗಿದೆ ಸರ್ಕಾರದ action plan ಏನಿದೆ, ಇವತ್ತು ಕುಡಿಯುವ ನೀರಿಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಈಗಾಗಲೇ ನಮ್ಮ ಕೇಂದ್ರದ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ಹೇಳಿದ್ದಾರೆ ನಾವು ಈಗಾಗಲೇ 81 ಕೋಟಿ ರೂ ಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ಹಣ ಖರ್ಚು ಆಗಿಲ್ಲವೆಂದು ಹೇಳಿದ್ದಾರೆ ತೋಟಗಾರಿಕೆ ಇಲಾಖೆಗೆ ಕೂಡ ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಇವತ್ತು ಪ್ರತಿದಿನ ಪ್ರತಿಯೊಬ್ಬ ಕೆಲಸ ಮಾಡುವ ಕೂಲಿಗಾರರಿಗೆ 69 ರೂ ಗಳನ್ನು ಕೊಡುತ್ತಿದ್ದಾರೆ That is the only revolutionary and historical commitment of the Prime Minister to the country's people ಯಾರೂ ಕೂಡ ಕೆಲಸ ಇಲ್ಲದೆ ಇರತಕ್ಕಂಥ ರೀತಿಯಲ್ಲಿ ಇರಬಾರದು, ಇವತ್ತು ನಾನು ಎಷ್ಟೋ ಸಲ ಮಾನ್ಯ ಉದಾಸಿಯವರಿಗೆ ಮಾತನಾಡಿದ್ದೇನೆ ಏಕೆ ಕೆಲಸವಾಗುತ್ತಿಲ್ಲ, ಚಿತ್ರದುರ್ಗದಲ್ಲಿ ಆಗುತ್ತಿದೆ ಗುಲ್ಬರ್ಗಾದಲ್ಲಿ ಮಾಡುತ್ತಿದ್ದಾರೆ, ಬೇರೆ ಕಡೆ ಕೂಡ ಮಾಡಬೇಕಾಗಿದೆ ಇವತ್ತು ಹಿಂದುಳಿದ ಪ್ರದೇಶದಲ್ಲಿ ಉದ್ಯೋಗ ಭರವಸೆ ಕಾರ್ಯಕ್ರಮದ ಅಡಿಯಲ್ಲಿ ಎಷ್ಟು ಹಣ ಬರುತ್ತದೆ utilization certificate submit ಮಾಡಿದರೆ ಅಷ್ಟು ಹಣವನ್ನು ಕೇಂದ್ರ ಸರ್ಕಾರ ನಮಗೆ ವಾಪಸ್ಸು ಕೊಡುತ್ತದೆ

ಇವತ್ತು ಬೇರೆ ಬೇರೆ ಇಲಾಖೆಯಿಂದ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಏನು ಹಣ ಬರುತ್ತದೆ, ಮತ್ತು ವಿಶೇಷವಾಗಿ ಇವತ್ತು CRF ನಿಂದ 250 ಕೋಟಿ ರೂ ಗಳು ಬಂದಿದೆ, ಪ್ರತಿ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಎಷ್ಟು ಹಣ ಖರ್ಚಾಗಿದೆ? ನಮಗೆ ತಿಳಿದ ಮಟ್ಟಿಗೆ ಇವತ್ತಿನ ದಿವಸ you have released only Rs 150 crores ಅದರಲ್ಲಿ ಇವತ್ತು ಹಣವನ್ನು ಕೂಡ ಖರ್ಚು ಮಾಡಿಲ್ಲ ಅದಕ್ಕಾಗಿ ನಾವು ಬೇರೆ ವಿಚಾರ ಗಳನ್ನು ಬದಿಗಿಟ್ಟು ಮಾತನಾಡುತ್ತಿದ್ದೇವೆ ಏಕೆಂದರೆ, we have taken a decision ಇವತ್ತು ಪ್ರಶ್ನೋತ್ತರ ವೇಳೆಯನ್ನು ಹಾಳು ಮಾಡುವುದಕ್ಕೆ ಹೋಗಲಿಲ್ಲ That is the property of the House ಎಲ್ಲಾ ಜನರಿಗೆ ಕೇಳತಕ್ಕಂಥ ಹಕ್ಕಿದೆ ಅದರಲ್ಲಿ we have not interfered ಎಲ್ಲಾ ಕೆಲಸವನ್ನು ಬದಿಗೊತ್ತಿ ಗಂಭೀರವಾದಂಥ ವಿಚಾರಗಳ ಬಗ್ಗೆ ಇವತ್ತಿನ ದಿವಸ ನಾವು ಪ್ರಸ್ತಾಪವನ್ನು ಮಾಡಿದ್ದೇವೆ ಇದಕ್ಕೆ ನೇರವಾಗಿ ಇವತ್ತಿನ ದಿವಸ ಕುಡಿಯುವ ನೀರಿನ ಬಗ್ಗೆ, ಶ್ರೀಮಾನ್ ಜಗದೀಶ್ ಶೆಟ್ಟರ್‌ರವರೆ, ಯಾವಾಗಲೂ ಕೂಡ ಎಪ್ರಿಲ್ ತಿಂಗಳಲ್ಲಿ action plan prepare ಆಗಬೇಕು You have to identify, ಒಂದು ಜಿಲ್ಲೆಯಲ್ಲಿ ಎಷ್ಟು ನಮ್ಮ ಗ್ರಾಮಗಳು ಇದೆ, ಎಷ್ಟು ಕಡೆ sensitive places ಇದೆ ಅದಕ್ಕೆ ನಾವು ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಬೋರವೆಲ್ ಹಾಕಬೇಕಾಗುತ್ತದೆ ಇವೆಲ್ಲವನ್ನು ಕೂಡ ನಾವು ಬಹಳಷ್ಟು ವಿಚಾರ ಮಾಡಿ ಇವತ್ತು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ ಇವತ್ತು ಕೇವಲ ಮುಖ್ಯಮಂತ್ರಿಗಳು ಅಲ್ಲದೇ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ನಾನು ಕೂಡ ವಾಸ್ತವ್ಯವನ್ನು ಹೂಡುತ್ತೇನೆ, ನಾನು ಕೂಡ ಹೋಗುತ್ತೇನೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ ಕೇವಲ ಎಲ್ಲಿಯಾದರೂ ಹೋಗಿ ಮನೆಯಲ್ಲಿ ವಾಸ ಮಾಡಿದರೆ ಆಗುವುದಿಲ್ಲ ಇವತ್ತು ಜನರ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸತಕ್ಕಂಥ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗಿದೆ ಆ ವಿಷಯದಲ್ಲಿ ಇವತ್ತು ನಡೆಯುತ್ತಿಲ್ಲ ಇವತ್ತು ನನಗೆ ಬಂದಂಥ ಮಾಹಿತಿಗಳು, ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದ್ದೇನೆ ಎಷ್ಟು ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಂದಿದೆ, ಅದರಲ್ಲಿ ಎಷ್ಟು ಖರ್ಚಾಗಿದೆ, ಅವರು ಹೇಳಿದ್ದಾರೆ ಒಟ್ಟು 128 ತಾಲ್ಲೂಕುಗಳಿಗೆ ಈಗಾಗಲೇ ಫ್ಲಡ್‌ನಲ್ಲಿ 250 ಕೋಟಿ ರೂ ಗಳು ಮತ್ತು drought ನಲ್ಲಿ 1364 ಕೋಟಿ ರೂ ಗಳು ಅದರಲ್ಲಿ ಒಟ್ಟಾರೆ ಖರ್ಚಾಗಿರುವುದು 151 ಕೋಟಿ ರೂ ಗಳು, ಇವತ್ತು ಕೆಲಸವಾಗುತ್ತಿಲ್ಲ

ಕೆಲಸವಾಗಬೇಕಾದರೆ ನಾನು ಹೇಳಿದ ಹಾಗೆ ಮಾನ್ಯ ದೇವರಾಜ್ ಅರಸುರವರು ಕರ್ನಾಟಕದ ಮುಖ್ಯಮಂತ್ರಿಗಳಾದಾಗ ಯಾವ ರೀತಿಯಾಗಿ ಪರಿಣಾಮಕಾರಿಯಾಗಿ ಕೆಲಸವಾಯಿತು ಇವತ್ತು ತಾವೆಲ್ಲರೂ ಕೂಡ ಮೊಟ್ಟೆ ಕೊಡಬೇಕಾ? ಏನು ಹಾಲು ಕೊಡಬೇಕಾ? ಮಾನ್ಯ ದೇವರಾಜ್ ಅರಸುರವರ ಕಾಲದಲ್ಲಿ ಬಾಲಸುಬ್ರಮಣ್ಯಂರವರು ಜಿಲ್ಲಾಧಿಕಾರಿಗಳಾಗಿದ್ದರು ನಾವು ಕೆಲಸ ಮಾಡತಕ್ಕಂಥ ಕೂಲಿಕಾರರಿಗೆ ಮೊಟ್ಟೆಯನ್ನು ಕೂಡ ಕೊಟ್ಟಿದ್ದೇವೆ ಇವತ್ತು ಮೊಟ್ಟೆಯಾದರೂ ಕೊಡಿ, ನೀವು ಹಾಲಾದರೂ ಕುಡಿಸಿ ಮತ್ತೆ ನೀವು ಬೇರೆ ಕಾರ್ಯಕ್ರಮ ಮಾಡಿದ್ದೀರಲ್ಲಾ, ಹಿಂದೂ ಸಮಾವೇಶ ಅದಕ್ಕೆ ನಾವು ಅಡ್ಡ ಬರುವುದಿಲ್ಲ ಇವತ್ತು ರಾಜ್ಯದ ಹಿತದೃಷ್ಟಿಯಿಂದ ಏನು ಒಂದು secular ಪ್ರಗತಿಪರ ವಾದಂಥ ಒಂದು ರಾಜ್ಯವಿದೆ, ಅದಕ್ಕೆ ತಾವು ಬಹಳಷ್ಟು ವ್ಯವಸ್ಥಿತವಾದ ಕೆಲಸಗಳನ್ನು ಮಾಡಬೇಕು ಮತ್ತೆ ಇವತ್ತು ಬರಗಾಲದಿಂದ ಕರ್ನಾಟಕ ರಾಜ್ಯದಲ್ಲಿ ನರಳತಕ್ಕಂಥ ಜನ ಏನಿದ್ದಾರೆ ಅವರನ್ನು ಉಳಿಸತಕ್ಕಂಥ ಪ್ರಯತ್ನವನ್ನು ಮಾಡಬೇಕು ಜಾನುವಾರುಗಳಿಗೆ ಮೇವು ಇಲ್ಲ, ಮಾನ್ಯ ಪ್ರಕಾಶ್‌ರವರೆ, ಇವತ್ತು ಮೇವು ತರತಕ್ಕಂಥ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ, ಮೇವು ಒಂದು ವೇಳೆ ಬರಲಿಲ್ಲವೆಂದರೆ ಎಲ್ಲಿಂದ ತರುತ್ತೀರಿ? ಮತ್ತೊಂದು ಏನೆಂದರೆ, ತಮಗೆ ಇನ್ನು ಬಜೆಟ್‌ಗೆ ಎರಡು ತಿಂಗಳ ಅವಧಿ ಮಾತ್ರ ಉಳಿದಿದೆ ಬಜೆಟ್‌ನಲ್ಲಿ ಇದ್ದಂಥ ಹಣ ಕೂಡ ಇವತ್ತು ಖರ್ಚಾಗುತ್ತಿಲ್ಲ ಬಜೆಟ್‌ನಲ್ಲಿ ಹೇಳಿದ್ದಾರೆ, ಇವತ್ತು ಮೊಟ್ಟಮೊದಲನೆಯದಾಗಿ ಮಾನ್ಯ ಯಡಿಯೂರಪ್ಪನವರು ಹೇಳಿದರು ನಾವು 43% ಪ್ರಗತಿ ಮಾಡಿದ್ದೇವೆ, ಮತ್ತೆ ಮುಖ್ಯಮಂತ್ರಿಗಳು ಹೇಳಿದರು ನಮ್ಮ spending is only 33% ಇನ್ನು ನೀವು 57% ಖರ್ಚು ಮಾಡಬೇಕಾಗುತ್ತದೆ ಇವತ್ತು ರಾಜಕೀಯ ಕಿತ್ತಾಟದಲ್ಲಿ ನಿಮ್ಮ ಭಿನ್ನಾಭಿಪ್ರಾಯಗಳ ಮಧ್ಯೆದಲ್ಲಿ ಇವತ್ತು ರಾಜ್ಯದ ಹಿತವನ್ನು ಯಾವ ರೀತಿಯಾಗಿ ಮಾಡುತ್ತೀರಿ ಎನ್ನುವ ಬಗ್ಗೆ ನಮಗೆ ಅನುಮಾನವಿದೆ ಅದಕ್ಕಾಗಿ ಇವತ್ತು ನಾವು ನಿಯಮ 69 ದಲ್ಲಿ ಚರ್ಚೆ ಮಾಡಿದ್ದೇವೆ ಇದಕ್ಕೆ ಸಮರ್ಪಕವಾದಂಥ ಉತ್ತರ ಬೇಕೇಬೇಕಾಗಿದೆ ರಾಜ್ಯದ ಜನರಿಗೆ ತಿಳಿಸತಕ್ಕಂಥ ರೀತಿಯಲ್ಲಿ, that must be very convincing reply ನೀವು ಸುಮ್ಮನೆ ಹಾಗೆ ಹೀಗೆ ಮಾಡಿ ಹೋಗತಕ್ಕಂಥದ್ದು ಅಲ್ಲ ನೇರವಾಗಿ ಕರ್ನಾಟಕ ರಾಜ್ಯದ ರೈತರ ಮನಸ್ಸಿಗೆ ಮುಟ್ಟತಕ್ಕಂಥ ರೀತಿಯಲ್ಲಿ ಇವತ್ತು ಸರ್ಕಾರ ಇದೆ ಎನ್ನತಕ್ಕಂಥದ್ದು ತಾವು ಮಾಡಬೇಕು ತಾವು ಮಾಡತಕ್ಕಂಥ ರೀತಿಯಲ್ಲಿ ತಾವು ಕೊಡತಕ್ಕಂಥ ಉತ್ತರದ

ಆಧಾರದ ಮೇಲೆ ನಾವು ಅಳತೆಯನ್ನು ಮಾಡುತ್ತೇವೆ ಯಾವ ರೀತಿಯಾಗಿ ಆಡಳಿತ ಒಂದು ವರ್ಷ ನಡೆದಿದೆ, ಸಾಕಷ್ಟು ಆಡಳಿತದ ಬಗ್ಗೆ ಬಹಳ ಸಮಾವೇಶಗಳು ಆಗುತ್ತಿವೆ ಬಹಳಷ್ಟು ಹೊಗಳುತ್ತಿದ್ದೀರಿ ಇವತ್ತು ರಾಷ್ಟ್ರ ಮಟ್ಟದಲ್ಲಿ ತಮಗೆ ನಂ1 ಮತ್ತು ನಂ5 ಎಂದು ಬಂದಿದೆ ಅದರ ಬಗ್ಗೆ ಅಲ್ಲ, ಇವತ್ತು ತಮ್ಮ ಆಡಳಿತ ಸರಿಯಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಇವತ್ತು ಜನಾಭಿಪ್ರಾಯ ಮೂಡಿಸತಕ್ಕಂಥ ರೀತಿಯಲ್ಲಿ ಕೆಲಸ ಕಾರ್ಯಗಳು ಆಗಬೇಕಾಗಿದೆ ಇನ್ನು ಮುಂದೆ ಬರುವಂತಹ ದಿವಸಗಳಲ್ಲಿ ನಾವು ಕೂಡ ಕರ್ನಾಟಕ ರಾಜ್ಯದಲ್ಲಿ 40 ವರ್ಷಗಳ ಕಾಲ ಜನರ ಮಧ್ಯದಲ್ಲಿ ಕೆಲಸವನ್ನು ಮಾಡಿದ್ದೇವೆ, because it requires a political credibility ನಾವು ಏನು ಹೇಳುತ್ತೇವೆ, ಅದು ಅನುಷ್ಠಾನಕ್ಕೆ ಬರಬೇಕು ಅನುಷ್ಠಾನಕ್ಕೆ ತರುವುದಕ್ಕೆ ಆಗದೇಹೋದರೆ ಬಹಳ ದಿವಸಗಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲ ತಾವು ಕೂಡ ರಾಜಕೀಯ ಜೀವನದಲ್ಲಿ ಸಾಕಷ್ಟು ಏರುಪೇರುಗಳನ್ನು ನೋಡಿದ್ದೀರಿ, ಯಾವ ಒಂದು ideology ಮೇಲೆ ಲೋಹಿಯಾ ಅವರ ideology ಮೇಲೆ ಬಂದು ಕೊನೆಗೆ ತಾವು ಏನಪ್ಪಾ ಅಂದರೆ ಬಲೂಲಕರ್ ಅವರ ideologyಗೆ ಇವತ್ತು ಹೋಗಿ ಸಿಕ್ಕಿಬಿದ್ದಿದ್ದೀರಿ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, but they are very defendable But ಹೊಸತು ಏನೆಂದರೆ, ಅದು ನಿಮ್ಮ ಭಾಷೆಯಾಗಲಿಲ್ಲ ಇವತ್ತು ನಾವು ಏನೆಂದರೆ, in politics, we must have a commitment In politics ideological basis ಮೇಲೆ constitute ಆಗಬೇಕಾದರೆ ಬಹಳ ದಿವಸಗಳ ಕಾಲ ಉಳಿಯುತ್ತದೆ ಜನರು ಕೂಡ್ಡ ನೆನೆಯುತ್ತಾರೆ, ಅದಕ್ಕೆ ಇವತ್ತಿನದಿವಸ ಕಂದಾಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರವನ್ನು ನಮ್ಮ ಎಲ್ಲಾ ನಾಯಕರುಗಳು ಮಾತನಾಡಿದ ಮೇಲೆ ಕೊಡುತ್ತಾರೆ ಮತ್ತೆ ಆದಾದ ಮೇಲೆ supplementaryಯನ್ನು ಕೇಳುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ (ಹಳಿಯಾಳ) ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಈಗಾಗಲೇ ಮಾನ್ಯ ಗೃಹ ಸಚಿವರು ಹೇಳಿದಹಾಗೆ ಈ ವರ್ಷ ಏನು ಬರಗಾಲವಿದೆ ಇಂತಹ ಭೀಕರವಾದ ಬರಗಾಲ ಯಾವತ್ತು ಬಂದಿಲ್ಲ ದುರ್ದೈವದಿಂದ ನಾವು ಬಹಳ ಹೆಮ್ಮೆಯಿಂದ ಕರ್ನಾಟಕ ರಾಜ್ಯದ ಸುವರ್ಣ ವರ್ಷವನ್ನು ಆಚರಿಸುವಾಗ

ಇಂತಹ ಭೀಕರವಾದ ಬರಗಾಲ ಬಂದಾಗ ರಾಜ್ಯ ಸರ್ಕಾರವು ಬಹಳ ಚುರುಕಾಗಿರಬೇಕಾಗಿತ್ತು ಇವತ್ತು ನಮ್ಮ ರೈತರು ಮತ್ತು ಬಡವರು, ಕೂಲಿಕಾರರು ಇದರ ಬಗ್ಗೆ ಚಿಂತನ ರಾಜ್ಯ ಸರ್ಕಾರಕ್ಕೆ ಇರಬೇಕಾಗಿತ್ತು ಅದು ಇದುವರೆವಿಗೂ ನಡೆದಿಲ್ಲ ಇವತ್ತು ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, "Farmer's suicide hatavo" ಇದು ಹೆಚ್‌ಡಿಕೆ ಗುರು ಮಂತ್ರ, ಸಂತೋಷ ಹೊಸ ಕೃಷಿನೀತಿಯನ್ನು ತಂದರು, ಇದು ಕಾರ್ಯಪಾಲನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ನಮ್ಮ ನಾಯಕರು ಹೇಳಿದಹಾಗೆ ಕೇಂದ್ರ ಸರ್ಕಾರವು ಏನು ಹಣವನ್ನು ಬಿಡುಗಡೆ ಮಾಡಿದೆ, ಆ ಹಣವನ್ನು ಇನ್ನು ಬಿಡುಗಡೆ ಮಾಡಿಲ್ಲ ರಾಜ್ಯ ಸರ್ಕಾರ ತಮ್ಮ ಷೇರನ್ನು ಬಿಡುಗಡೆ ಮಾಡುವುದು ಅದನ್ನು ವಿಲೇ ಮಾಡಿ ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ ಆದರೆ ನಿಮಗೆ ರೈತರ ಬಗ್ಗೆ ಎಷ್ಟು ,ಕಾಳಜಿ ಇದೆ, ಅವರ ಬಗ್ಗೆ ಎಷ್ಟು ಚಿಂತನೆ ಇದೆ ಎಂಬುದು ಇದರಿಂದಾಗಿ ಸ್ಫಷ್ಟವಾಗಿ ಕಾಣುತ್ತದೆ ಈಗಾಗಲೇ ಕೇಂದ್ರ ಸರ್ಕಾರ 1ನೇ ಜುಲೈ 2006 ಈ ಬರಗಾಲ ಬಂದಿರುವುದು ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಈ ಜಿಲ್ಲೆಯಲ್ಲಿ as on 1st july 2006 ಯಾವ ಸಾಲಗಳು ಓ ಬಿ ಯಾಯಿತು ಅದಕ್ಕೆ ಬಡ್ಡಿಯನ್ನು ಮನ್ನಾ ಮಾಡುವಂತೆ ನಿರ್ಣಯ ಮಾಡಿದೆ ಅದನ್ನು ರಾಜ್ಯ ಸರ್ಕಾರ ಸ್ವಾಗತ ಮಾಡಬೇಕು ಕೇಂದ್ರ ಸರ್ಕಾರವು ಒಂದು ಪ್ಯಾಕೇಜ್‌ನ್ನು ಕೊಟ್ಟಿದೆ ಬೀದರ್‌ನಲ್ಲಿ ಯಾವ ಪ್ರಕಾರವಾಗಿ ಕೊಟ್ಟರು, ಆ ಪ್ರಕಾರವಾಗಿ ಈಗ ಜಿಲ್ಲೆಗಳಿಗೂ ಸಹ ಕೊಟ್ಟಿದೆ ಅದರ ಉಪಯೋಗವೇನು ಆಗುತ್ತಿದೆ ಆ ಪ್ಯಾಕೇಜ್‌ನ್ನು ಯಾವ ಪ್ರಕಾರ್ರವಾಗಿ ನೀವು implement ಮಾಡಿದ್ದೀರಿ, ಇದು ನಮಗೆ ನೀವು ಕೊಡುವ ಉತ್ತರದಲ್ಲಿ ಗೊತ್ತಾಗಬೇಕು ಈ drought haunts the State ಎಂದು ಒಂದು ವಿಚಾರ ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದ್ದು, ನಾನು ಕಂದಾಯ ಹಾಗೂ ಕೃಷಿ ಸಚಿವರ ಗಮನಕ್ಕೆ ತರುತ್ತಿದ್ದೇನೆ 2001–2006ರ ತನಕ year wise data damage crops ಇದೆ 2001ನೇ ಇಸವಿಯಲ್ಲಿ 28 ಲಕ್ಷ ಹೆಕ್ಟೇರ್ damage ಆಯಿತು 2004 ರಲ್ಲಿ 14 ಲಕ್ಷ ಆಯಿತು 2005ರಲ್ಲಿ 12 ಲಕ್ಷ ಹೆಕ್ಟರ್ ಅಯಿತು ಈ ವರ್ಷದ ಬಗ್ಗೆ ತಮಗೆ ಗೊತ್ತಿದೆಯೋ ಅಥವಾ ಗೊತ್ತಿಲ್ಲ, 29 ಲಕ್ಷ ಹೆಕ್ಟರ್ ಭೂಮಿಯಲ್ಲಿ ಕೃಷಿ ಉತ್ಪಾದನೆಗೆ effect ಆಗಿದೆ ಆದರೆ ರೈತರು ಎಷ್ಟು ಕಷ್ಟದಲ್ಲಿದ್ದಾರೆಂಬ ಬಗ್ಗೆ ತಾವು ವಿಚಾರ ಮಾಡಬೇಕು ರೈತರು ಇಷ್ಟೊಂದು ಕಷ್ಟದಲ್ಲಿರುವಾಗ ನಮ್ಮ

ಸರ್ಕಾರವು ಯಾವ ತರಹದ ನೆರವನ್ನು ಕೊಡುವುದರ ಬಗ್ಗೆ ಧಾವಿಸಿದೆ ಇದರ ಬಗ್ಗೆ ಮಾನ್ಯ ಕಂದಾಯ ಹಾಗೂ ಕೃಷಿ ಸಚಿವರು ಹೇಳಬೇಕಾಗುತ್ತದೆ ಕೇವಲ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳುವುದಲ್ಲ ನೀವು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ, ಬಿಜೆಪಿಯವರು ಕರಾವಳಿ ಭಾಗದಿಂದ ಬಹಳ ಜನ ಆರಿಸಿ ಬಂದಿದ್ದೀರಿ, ಕರಾವಳಿ ಭಾಗದಲ್ಲೂ ಬಹಳ ಜನರು ಓಟು ಕೊಟ್ಟಿದ್ದಾರೆ ದಿನಾಂಕ 29-01-2007ರಲ್ಲಿ 17 ಜಿಲ್ಲೆಗಳಿಗೆ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಇನ್ನು 10 ಜಿಲ್ಲೆಗಳವರು ಏನು ಪಾಪ ಮಾಡಿದ್ದಾರೆ ಅಲ್ಲಿ ಅತಿವೃಷ್ಟಿಯಾಗಿಲ್ಲವೇ? ಅಲ್ಲಿ ತೊಂದರೆ ಇಲ್ಲವೆ, ನೀವೇ ಮೊನ್ನೆ ದಿನ ಅಲ್ಲಿಗೆ ಬಂದು ಹೇಳಿದ್ದೀರಿ, ಅಲ್ಲಿ ಏನು ರಸ್ತೆಗಳು ಹಾಳಾಗಿದೆ, ಆ ರಸ್ತೆಗಳನ್ನು ರಿಪೇರಿ ಮಾಡುವ ಬಗ್ಗೆ ಹಣವನ್ನು ಬಿಡುಗಡೆ ಮಾಡಬೇಕಲ್ಲವೆ? ಏಕೆ ಕೊಟ್ಟಿಲ್ಲವೆಂಬುದರ ಬಗ್ಗೆ ನಮಗೆ ಸ್ಫಷ್ಟವಾದ ಉತ್ತರ ಬೇಕಾಗಿದೆ ದಕ್ಷಿಣ ಕನ್ನಡ,ಉಡುಪಿ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆ, ಕೊಡಗು ಇನ್ನು ಹಲವಾರು ಅತಿವೃಷ್ಟಿಯಾದ ಜಿಲ್ಲೆಗಳಿಗೆ ನೀವು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ, ಏತಕ್ಕಾಗಿ ಮಾಡಲಿಲ್ಲ? ಅಲ್ಲಿ crop damage ಆಗಿದೆ ನೀವು ಕೊಟ್ಟ ಪರಿಹಾರವೇನು ಈಗಾಗಲೇ ನಾನು ಇದರ ಬಗ್ಗೆ ಹೇಳಿದ್ದೇನೆ ಅರಣ್ಯ ಭೂಮಿಗೆ ತಾವು ಪರಿಹಾರವನ್ನು ಕೊಟ್ಟಿರುವುದಿಲ್ಲ ಇದಕ್ಕಾಗಿ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ ರಾಜ್ಯ ಸರ್ಕಾರದವರು ಹಣವನ್ನು ಕೊಡುವುದರ ಬಗ್ಗೆ ಆದೇಶವಾಗಿದೆ ಕಳೆದ 3-4 ವರ್ಷಗಳಿಂದ ಅರಣ್ಯ ಇಲಾಖೆಯ ಫೈಲ್ ಪೆಂಡಿಂಗ್ ಇದೆ Just land disqualify ಆಗಿಲ್ಲ ಅದನ್ನು ನಾವು ಏನು ಒಪ್ಪಿಕೊಂಡಿದ್ದೇವೆ ಅವರಿಗೆ ಜಮೀನು ಕೊಡುವುದರ ಬಗ್ಗೆ because entry change ಅಗಿಲ್ಲವೆಂದು ಹೇಳಿ ಈಗ ನಾವು ಅವರಿಗೆ ಶಿಕ್ಷೆಯನ್ನು ಕೊಡುವುದಕ್ಕಾಗುತ್ತದೆಯೇ? ಹಾಗಾದರೆ ಅದರ ಬಗ್ಗೆ ನಿರ್ಣಯವನ್ನು ಮಾಡಬೇಕಾಗುತ್ತದೆ ಸರ್ಕಾರ ಆದೇಶವಿದ್ದು ಅವರ ಜಮೀನಿಗೆ ಕೊಡಬೇಕೆಂದಾಗ ಅದಕ್ಕೆ ಪರಿಹಾರ ಸಿಗುವಂತಹ ವ್ಯವಸ್ಥೆಯಾಗಬೇಕಾಗುತ್ತದೆ ಇವತ್ತು ಕೃಷಿಯ ಸಲುವಾಗಿ ನಮ್ಮ normal rate ಮಾನ್ಯ ಕೃಷಿ ಸಚಿವರೆ, 144 MM rates October ನಲ್ಲಿ normal rate ಆಗಬೇಕಾಗಿತ್ತು 99MM ಆಗಿದೆ ಅದರಿಂದಾಗಿ 45% deficit ಆಗಿದೆ ಇದನ್ನು ತಾವು ತಿಳಿದುಕೊಳ್ಳಬೇಕು ಇವತ್ತು ಅವರು ಹೇಳುತ್ತಾರೆ ನೋಡಿ Sales Director VS Prakash ಹೇಳುತ್ತಾರೆ October rainfall has been worst in the last 36 years 36 ವರ್ಷದಲ್ಲಿ ಅಷ್ಟು ಮಳೆ October 2006ನೇ ಇಸವಿಯಲ್ಲಿ ಆಗಿದೆ ಇದನ್ನು ಯಾರು ಹೇಳುತ್ತಾರೆ It has been badly affected the crops ಎಂದು Crop Monitoring Cell Director V S Prakashರವರು ಹೇಳುತ್ತಾರೆ ನೀವು ಏನು ಮಾಡುತ್ತಿದ್ದೀರಿ? ಇದರ ಬಗ್ಗೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರು ಕಷ್ಟದಲ್ಲಿರುವಾಗ crop affect ಆದಾಗ, ಉತ್ಫಾದನೆಯಲ್ಲಿ affect ಆದಾಗ ಏನು contingency plan ನಿಮ್ಮದು? ಕೃಷಿ ಇಲಾಖೆಗೆ contingency plan ಇರುತ್ತದೆ 29 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ರಬಿಯಲ್ಲಿ ಏರಡೂವರೆ ಲಕ್ಷ ಹೆಕ್ಟೇರ್ ಜಮೀನು ಹಾಳಾಗಿದೆ ಕೃಷಿ ಇಲಾಖೆಯವರು ತಕ್ಷಣ ಹೀಗೆ ಜಮೀನು ಮಳೆಯಾಗುಚವ ಅಭಾವದಿಂದ ಬಂಜರು ಬೀಳಬಹುದು ಅಥವಾ ಬೀಜವನ್ನು Sale ಮಾಡುವುದು ಉತ್ಪಾದಕಳು ಇರುವಾಗ ನಿಮ್ಮ ಕಡೆ ಪರ್ಯಾಯವಾಗಿ contingency plan ಇರುತ್ತದೆ ಏನು contingency plan ಮಾಡಿದ್ದೀರಿ? ಯಾವ ಜಿಲ್ಲೆಯಲ್ಲಿ ಯಾವ ತರಹದ ಬೀಜದ ಬಗ್ಗೆ contingency plan ಮಾಡಿ ಕೊಟ್ಟಿದ್ದೀರಿ? ಅದು ನಮಗೆ ಗೊತ್ತಾಗಬೇಕಲ್ಲವೆ, ಅದರ ಬಗ್ಗೆ ನಮಗೆ ಕಳುಹಿಸುವುದಿಲ್ಲ ಇದರ ಬಗ್ಗೆ ನಾವು ಕೃಷಿ ಇಲಾಖೆಯವರು ಇದರ ಬಗ್ಗೆ ಹೇಳಬೇಕಾಗುತ್ತದೆ ಬೆಳೆಯು ಹಾಳಾದಾಗ ಯಾವ ಯಾವ ಸೀಸನ್‌ನಲ್ಲಿ ಬೆಳೆಯು ಹಾಳಾಗಿದೆ, ಅಲ್ಲಲ್ಲಿ ಪರಿಹಾರವನ್ನು ಕೊಡಬೇಕು ಏನು ನಿಮ್ಮ contingency plan ಇದು ಗೊತ್ತಿಲ್ಲ ಅತಿವೃಷ್ಟಿಯಿಂದಾಗಿ ಹತ್ತಿ ಬೆಳೆ, ಜೋಳ ಎಲ್ಲವೂ ಹಾಳಾಯಿತು, ಏನು contingency plan ಇಲ್ಲ ಯಾವ ಸೀಡ್ಸ್ ಸಪ್ಲೈ ಆಗಿಲ್ಲ ಹಾಗಾದರೆ ಸರ್ಕಾರ ಇವತ್ತು ಬೆಳೆಯು ಹಾಳಾದಾಗ ರೈತರಿಗೆ ಪರ್ಯಾಯ ಬೆಳೆಯನ್ನು ಬೆಳೆಸುವ ಬಗ್ಗೆ ಬೀಜವನ್ನು ಕೊಡುವುದು, concision rateಗೆ ಕೊಡಬೇಕು, ಯಾವ ತರಹದ ಬೀಜವನ್ನು ಕೊಟ್ಟಿದ್ದೀರಿ ಅದರಿಂದ ಉತ್ಪಾದನೆ ಏನಾಗಿದೆ ಇದರ ಬಗ್ಗೆ ತಮ್ಮ ಕಡೆಯಿಂದ ಮಾಹಿತಿ ಇಲ್ಲ ಇವತ್ತು ಸರ್ಕಾರ ಎಲ್ಲಾ ರೀತಿಯಿಂದ ವಿಫಲವಾಗಿದೆ ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ, ಹೀಗೆ ಆದಾಗ ಇದು ಪ್ರತಿವರ್ಷವು ಆಗುತ್ತದೆ ನಾವು ಇದರ ಬಗ್ಗೆ ಮಾತನಾಡುತ್ತೇವೆ ಇದರ ಬಗ್ಗೆ ನೀವು ಸಹ ಮಾತನಾಡುತ್ತೀರಿ ಇದನ್ನು ಖಾಯಂ ಆಗಿ ಸರಿ ಮಾಡಬೇಕು ಒಂದು permanent messuresನ್ನು ತೆಗೆದುಕೊಳ್ಳಬೇಕಾಗುತ್ತದೆ ಯಾವ ಪ್ರಕಾರ ಇಂತಹ ಪರಿಸ್ಥಿತಿಯಾದಾಗ, ಯಾವ

ತರಹದ cropನ್ನು ನಾವು ಕೊಡಬೇಕು ಟಿ ಎಸ್ ಪಿ ಲೋನ್ ಹಣ ಬಿಡುಗಡೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ ಹಾಗೆಯೇ, ಈ ಭಾಗದಲ್ಲಿ ಎಲ್ಲೆಲ್ಲಿ ನೀರಾವರಿ ಮಾಡಲಿಕ್ಕೆ ಸಾಧ್ಯವಿಲ್ಲ ಒಣ ಬೇಸಾಯ ಯೋಜನೆಗಳನ್ನು ಹೆಚ್ಚು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಬೇಕು ಸಣ್ಣ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಹಾಗಾಗಿ ಈ ವಿಚಾರಗಳಲ್ಲಿ ಕೇವಲ temporary ಆಗಿ ಅದಕ್ಕೆ ಒಂದು ಮೆಡಿಸಿನ್ ಕೊಟ್ಟು ಬಿಡುವುದಲ್ಲ ಅದಕ್ಕೆ ಒಂದು ಖಾಯಂ ಸ್ವರೂಪದ ಯೋಜನೆಯನ್ನು ಸರ್ಕಾರ ಅಸ್ತಿತ್ವಪಡಿಸಬೇಕಾಗುತ್ತದೆ ಆ ದಿಕ್ಕಿನಲ್ಲಿ ನಿಮ್ಮ ಚಿಂತನೆ ಏನು? ಇನ್ನೂ ಮುಂದೆ ಇಂತಹ ಅನಾಹುತಗಳು ಆದಾಗ ಅಂಥ ಅತೀವೃಷ್ಠಿ ಅನಾವೃಷ್ಠಿ ಆದಾಗ ನೀವು ಏನು ಮಾಡುತ್ತೀರಿ? ಇದರ ಬಗ್ಗೆ ನಿಮಗೆ ಚಿಂತನೆ ಇದ್ದರೆ ಸರಿಯಾಗಿ ಸ್ಪಷ್ಟೀಕರಣವನ್ನು ನಿಮ್ಮ ಉತ್ತರದಲ್ಲಿ ನೀವು ಕೊಡಬೇಕು ಶ್ರೀ ಜಗದೀಶ್ ಶೆಟ್ಟರ್ ಒಬ್ಬ ಜವಾಬ್ದಾರಿ ಸ್ನೇಹಿತರು, ಕಂದಾಯ ಮಂತ್ರಿಗಳಾಗಿದ್ದೀರಿ ಆಗ ವಿರೋಧ ಪಕ್ಷದ ನಾಯಕರಾಗಿ ಈ ವಿಚಾರವನ್ನು ನೀವು ಪ್ರಸ್ತಾಪ ಮಾಡಿದಾಗ ಹಾಗು ಇವತ್ತು ಇದರ ಬಗ್ಗೆ ಚಿಂತನೆ ಮಾಡುತ್ತಿರಬಹುದೆಂದು ನಾನು ಭಾವಿಸುತ್ತೇನೆ along with the Agricultural Minister ಹಾಗಾದರೆ ನಿಮ್ಮ ಚಿಂತನೆ ಏನು? ಈ ಸಮಸ್ಯೆ ಮುಂದಿನ ವರ್ಷ ಬರುವುದಿಲ್ಲವೆನ್ನುವ ಹಾಗಿಲ್ಲ ಬರಬಾರದೆಂದು ದೇವರಲ್ಲಿ ಪ್ರಾರ್ಥನೆ ಮಾಡುವುದು ಆದರೂ ಪ್ರತಿವರ್ಷ ಈ ಸಮಸ್ಯೆ ಬರುತ್ತದೆ ಹಾಗಾಗಿ ನಿಮ್ಮ ಚಿಂತನೆ ಏನು? ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ ಮುಖ್ಯವಾಗಿ ಇವರು ಹೇಳುವುದೇನೆಂದರೆ, ನಮ್ಮ ಕರ್ನಾಟಕದಲ್ಲಿ ಒಳ್ಳೆಯ ಕಲ್ಟಿವಬಲ್ ಏರಿಯಾ ಇದೆ ಅಲ್ಲಿ 41% ಏರಿಯಾ ಎಫೆಕ್ಟ್ ಆಗಿದೆ ಕೃಷಿ ಸಚಿವರು ಇದೆಲ್ಲಾ ನಿಮಗೆ ಗೊತ್ತಿದ್ದಾಗ ಇದರ ಬಗ್ಗೆ ಒಂದು ವಾರ, ಹದಿನೈದು ದಿವಸಗಳಲ್ಲಿ ಕೆಲಸ ಆಗಬೇಕಾಗಿತ್ತು ಆದರೆ ಹಾಗಾಗಿಲ್ಲ, ನೀವು ಇನ್ನೂ ಯುವಕರಿದ್ದೀರಿ ತಮಗೆ ರೈತರ ಬಗ್ಗೆ ಚಿಂತನೆ ಇದೆ, ನಿಮ್ಮ ಕಾಲದಲ್ಲಿ ಅದು ಕಾಣಿಸಬೇಕಾಗಿತ್ತು ಅ ತರಹದ ಚಿಂತನೆ ನಿಮ್ಮ ಮಾತಿನಲ್ಲಿ ಕಾಣಿಸುತ್ತಿಲ್ಲ ಸರ್ಕಾರ ಆ ದಿಕ್ಕಿನಲ್ಲಿ ಕೆಲಸ ಮಾಡಿದ್ದು ನಮಗೆ ಕಾಣಿಸುತ್ತಿಲ್ಲ ಮುಂಜಾನೆ, ಸಂಜೆ ಹಳ್ಳಿಯಲ್ಲಿ ಯಾರ ಮನೆಯಲ್ಲೂ ಉಳಿಯಬಾರದೆಂದು ನಾನು ಹೇಳುವುದಿಲ್ಲ, ಯಾರ ಮನೆಗಾದರೂ ಹೋಗಿ ಉಳಿಯಲಿ, ಎಲ್ಲಿಗಾದರೂ ಹೋಗಿ ಉಳಿಯಲಿ, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ ಇದರಿಂದ ಸಮಸ್ಯೆ ಬಗೆಹರಿಸಲಿಕ್ಕೆ ಸಾಧ್ಯವಿಲ್ಲ ಅದು ಅವರ

ಹೊಸ ಕಾರ್ಯಕ್ರಮ ಆಗಿರಬಹುದು, ಸಂತೋಷ ಹಾಗಾಗಿ ಇದರ ಬಗ್ಗೆ ನಾವು ವಾದಕ್ಕೆ ಹೋಗುವುದಿಲ್ಲ ಅದು ಒಂದು ಕಾರ್ಯಕ್ರಮ ಇನ್ನು ಹತ್ತು ಕಡೆ ಹೋಗಿ ಮಲಗಲಿ, ಹೆಚ್ ಐ ವಿ , ಕ್ಯಾನ್ಸರ್ ರೋಗಿಗಳ ಮನೆಗಳಲ್ಲಿ ಹೋಗಿ ಮಲಗಲಿ, ಏನು ತೊಂದರೆಯಿಲ್ಲ ಅದು ನಿಮ್ಮ ವಿಚಾರಧಾರೆ, ಅದಕ್ಕೆ ನಾನು ಏನು ಹೇಳುವುದಿಲ್ಲ ಆದರೆ ನೀವು ಮುಂಜಾನೆಯಿಂದ ಸಂಜೆಯ ತನಕ 10 ಬಾರಿ ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದಾಗ, ಈಶ್ವರಪ್ಪನವರು, ಜಗದೀಶ್‌ಶೆಟ್ಟರ್‌ರವರು ಏನೇನು ಮಾತನಾಡಿದ್ದರು, ಪ್ರತಿ ಬಾರಿ ರೈತರು, ರೈತರು ಎಂದು ಹೇಳಿ ರೈತರ ಸಾಲ ಮನ್ನಾ ಮಾಡಿ, ಮತ್ತೊಂದು ಮಾಡಿ ವಾಕ್‌ಔಟ್, ಧರಣಿ, ಗಲಭೆ ಮಾಡುತ್ತಿದ್ದರು, ಇವತ್ತು ರೈತರು ಬಗ್ಗೆ ಕಾಳಜಿ ಎಲ್ಲಿ ಹೋಗಿದೆ, ಏನಾಗಿದೆ, ಇವತ್ತು ಅಧಿಕಾರ ಅಷ್ಟೇ ನಿಮ್ಮ ತಲೆಗೆ ಹೋಗಿದೆ ರೈತರನ್ನು ಮರೆತಿರಿ, ಕರ್ನಾಟಕವನ್ನು ಮರೆತಿರಿ, ಸಾಮಾನ್ಯ ಜನರನ್ನು ಮರೆತಿರಿ, ನಿಮ್ಮ ಅಧಿಕಾರ ಏನು ಅದರ ಅವಶ್ಯಕತೆ ಏನು ಇದೆ ಈ ಬಗ್ಗೆ ನಾವೇನು ಹೊಸದಾಗಿ ಹೇಳುತ್ತಿಲ್ಲ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ತಾವು ನಿಜಕ್ಕೂ ಬಹಳ ಹಿರಿಯ ರಾಜಕಾರಣಿಗಳು, ಅನುಭವಿ ಮಂತ್ರಿಗಳು ಸಹ ಆಗಿದ್ದಿರಿ ನಿಮ್ಮ ಎದೆ ಮುಟ್ಟಿಕೊಂಡು ಹೇಳಿ, ನಿಮ್ಮ ಇಷ್ಟು ವರ್ಷದ ಅಭಿವೃದ್ಧಿಗೂ, ಈ ಸರ್ಕಾರ ಬಂದ ಮೇಲೆ ರೈತರ ಅಭಿವೃದ್ಧಿಗಾಗಿ ನಾವು ಮಾಡಿರುವ ಕಾರ್ಯಕ್ರಮಗಳು ಏನು ಎಂಬ ಬಗ್ಗೆ ನೀವು ನಿಮ್ಮ ಎದೆ ಮುಟ್ಟಿಕೊಂಡು ಹೇಳಿ ನೀವು ಸತ್ಯ ಎಂದು ಹೇಳಿಬಿಟ್ಟರೆ ನೀವು ಹೇಳಿದಂತೆ ನಾನು ಕೇಳುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಉತ್ತರ ಕೊಡಬೇಕು ಮೊನ್ನೆ ದಾಂಡೇಲಿಗೆ ಹೋಗಿ ಹೇಳಿ ಬಂದಿದ್ದಾರೆ ಇದೇನು ರಸ್ತೆ, ದೇಶಪಾಂಡೆಯವರು ಇಲ್ಲಿ 25 ವರ್ಷಗಳಿಂದ ಎಂ ಎಲ್ ಎ ಆಗಿದ್ದಾರೆ ಈ ರೀತಿಯ ರಸ್ತೆಯನ್ನು ನಿಮಗೆ ಕೊಟ್ಟಿದ್ದಾರೆಯೇ ಎಂದು ಹೇಳಿ ಬಂದಿದ್ದಾರೆ ರಸ್ತೆ ಮಾಡಿರುವವನು ನಾನಲ್ಲ, ರಸ್ತೆ ಹಾಳಾಗಿರುವುದು ಒಂದೂವರೆ ವರ್ಷದಲ್ಲಿ ಈಗ ಉತ್ತರ ನಿಮಗೆ ಶೆಟ್ಟರು ಕೊಟ್ಟ ಹಾಗೆ ಆಯಿತಲ್ಲ, ರಸ್ತೆ ಸರಿಯಿಲ್ಲವೆಂದು ಎಲ್ಲಿ ಅಭಿವೃದ್ಧಿ ಆಗಿದೆ? ಮಾತುಗಳು ಘೋಷಣೆಗಳು ನಡೆಯುತ್ತಿದೆ ಅವರಿಗೆ ಅನುಭವದ ಕೊರತೆಯೂ ಇರಬಹುದು ಆಡಳಿತ ನಡೆಸುವುದು ಅಷ್ಟು

ಹಗುರವಲ್ಲ ಮಂತ್ರಿಗಳು, ಮುಖ್ಯಮಂತ್ರಿಗಳು ಆಗಿರಬಹುದು ಎಲ್ಲಾ ಆಗಬಹುದು ಆಡಳಿತ ನಡೆಸಬೇಕಾದರೆ ಜನರ ಸಮಸ್ಯೆಗೆ ಸ್ಪಂದಿಸಬೇಕಾಗುತ್ತದೆ ಏನು ಹಣ ಬಿಡುಗಡೆ ಮಾಡುತ್ತೀರಿ, ಅದರ ಬಗ್ಗೆ ಮಾನಿಟರ್ ಮಾಡ ಅದರ ಸದುಪಯೋಗ ಆಗುತ್ತಿದೆಯೆ ಎಂದು ನೋಡಬೇಕಾಗುತ್ತದೆ ಎಷ್ಟು ಜನ ಮಂತ್ರಿಗಳು ಅದರ ಬಗ್ಗೆ ನೋಡುತ್ತಿದ್ದೀರಿ, ಎಷ್ಟು ಜನ ಜಿಲ್ಲಾ ಕೇಂದ್ರಗಳಿಗೆ ಭೇಟಿ ಕೊಟ್ಟಿರಿ, ಎಷ್ಟು ಸಭೆಗಳು ಆಗಿವೆ ಎಂಬ ಬಗ್ಗೆ ನಾವೇನೂ ನೋಡಿಲ್ಲ ಹಾಗಾಗಿ ನಾನು ತಮ್ಮನ್ನು ಟೀಕೆ ಮಾಡುತ್ತಿಲ್ಲ ತಮ್ಮನ್ನು ಎಚ್ಚರಿಸುತ್ತಿದ್ದೇನೆ ನೀವು ಮಾಡಿದ್ದು ಸರಿಯಲ್ಲ ನಿಮಗೆ ಅವಕಾಶವನ್ನು ದೇವರು ಕೊಟ್ಟಿದ್ದಾನೆ ಒಳ್ಳೆಯ ಕೆಲಸ ಮಾಡಿ, ಯಾರು ಬೇಡವೆಂದು ನಿಮಗೆ ಹೇಳುತ್ತಾರೆ ಆದರೆ ನೀವು ಏನೂ ಮಾಡದೆ ಇವತ್ತು ಮುಂಜಾನೆಯಿಂದ ಸಂಜೆ ತನಕ ಹಿಂದು ಜನರ ಸಮ್ಮೇಳನ ಮಾಡುವುದರಲ್ಲಿ ತಲ್ಲೀನರಾಗಿದ್ದೀರಿ ಅದನ್ನು ಏಕೆ ಮಾಡುತ್ತೀರೆಂದು ನಾನು ಕೇಳುವುದಿಲ್ಲ ಅದನ್ನು ಬಿಟ್ಟು ಬೇರೆ ಏನು ಕಾರ್ಯಕ್ರಮ ಇಲ್ಲ ಇವತ್ತು ನೀವು ಇದರ ಬಗ್ಗೆ ಸಾಕಷ್ಟು ಚಿಂತನೆ ಮಾಡಿ ಇದರ ಬಗ್ಗೆ ಸರ್ಕಾರದಿಂದ ಯಾವುದಾದರೊಂದು ಕಾರ್ಯಕ್ರಮ ಹಾಕಿಕೊಂಡು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಆದರೆ ಆ ರೀತಿಯ ಕ್ರಮ ತೆಗೆದುಕೊಂಡಿಲ್ಲ ನನ್ನಲ್ಲಿರುವ ಮಾಹಿತಿಯ ಪ್ರಕಾರ ಇವತ್ತು ಕೇಂದ್ರ ಸರ್ಕಾರ 1 80 ಲಕ್ಷ ಮೆಟ್ರಿಕ್ ಟನ್ಸ್ ಜೂನ್ 2006ರಲ್ಲಿ 50,000 ಮೆಟ್ರಿಕ್ ಟನ್ಸ್ ಡಿಸೆಂಬರ್ 6ರಲ್ಲಿ ಒಟ್ಟು 2 30 ಲಕ್ಷ ಮೆಟ್ರಿಕ್ ಟನ್ಸ್ ಫುಡ್ ಗ್ರೇನ್ಸ್ ರಿಲೀಸ್ ಮಾಡಿದ್ದಾರೆ ಒಂದು ಕಿಲೋಗೆ 6 25 ರೂ ಗಳಂತೆ 145 ಕೋಟಿ ರೂ ಗಳು, in addition ಕೇಂದ್ರ ಸರ್ಕಾರ ನಿಮಗೆ ಕೊಟ್ಟಿರುವ 250 ಕೋಟಿ ರೂ ಗಳ ಹೊರತಾಗಿ 145 ಕೋಟಿ ರೂಪಾಯಿಗಷ್ಟು ಫುಡ್ ಗ್ರೇನ್ಸ್ ಕೊಟ್ಟಿದ್ದಾರೆ, ಆ ಫುಡ್ ಗ್ರೇನ್ಸ್ ಎಲ್ಲಿದೆ, ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ರಿಲೀಸ್ ಮಾಡಿದ್ದೀರಿ? ಎಷ್ಟು employment generate ಆಗಿದೆ ಎಷ್ಟು ಜನರಿಗೆ ಉದ್ಯೋಗಾವಕಾಶ ಲಭಿಸಿದೆ ಎಂಬ ಬಗ್ಗೆ ಮಾಹಿತಿ ಇರಬೇಕಲ್ಲವೇ? ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಕ್ಯಾಬಿನೆಟ್ ಸಮಿತಿಯ ಛೇರ್ಮನ್ ಆಗಿದ್ದಾಗ ಪ್ರತಿ ಜಿಲ್ಲೆಗೂ ಹೋಗುತ್ತಿದ್ದರು ಪ್ರತಿ ಜಿಲ್ಲಯಲ್ಲಿಯೂ ಮಾನಿಟರಿಂಗ್ ನಡೆಯುತ್ತಿತ್ತು ಶಾಸಕರು, ಜನ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ಮಾಡುತ್ತಿದ್ದರು ರೈತರ ಜೊತೆ ಚರ್ಚೆ ಮಾಡುತ್ತಿದ್ದರು ನೀವ್ಯಾಕೆ ಹಾಗೆ ಮಾಡಬಾರದು ನಮಗೆ ಆ ಬಗ್ಗೆ ಮಾಹಿತಿ ದೊರೆತಿಲ್ಲ ಟೀಕೆ ಮಾಡಬೇಕೆಂದು ನಾವು ಟೀಕೆ ಮಾಡುತ್ತಿಲ್ಲ

5.30 P M

ಹಾಗಾಗಿ ಇವತ್ತು ಮುಖ್ಯವಾಗಿ ಸರ್ಕಾರಕ್ಕೆ ರೈತರ ಬಗ್ಗೆ ಬಡವರ, ಕೂಲಿಕಾರರ ಬಗ್ಗೆ ನಿಜವಾಗಿಯೂ ಚಿಂತನೆ ಇದ್ದರೆ ಅವರು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಬೇಕು, ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಇದರ ಬಗ್ಗೆ ಸರಿಯಾದ ಮಾಹಿತಿ ಸದನಕ್ಕೆ ಕೊಡಬೇಕು ಮತ್ತು ಇನ್ನು ಮುಂದೆ ಇಂತಹ ಅನಾಹುತ ಆಗದಂತೆ ಖಾಯಂ ಸ್ವರೂಪದ ಕೆಲವು ಯೋಜನೆಗಳನ್ನು ಅವರು ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಒತ್ತಾಯಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಏನು ಬರದ ಪರಿಸ್ಥಿತಿ ನಿರ್ಮಾಣವಾಗಿದೆ ಇದರ ಬಗ್ಗೆ ಕಾಂಗ್ರೆಸ್ ಪಕ್ಷದವರು ನಿಲುವಳಿ ಸೂಚನೆ ತಂದಿದ್ದರು ಅದನ್ನು ತಾವು ವರ್ಗಾವಣೆ ಮಾಡಿ ನಮಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸುತ್ತೇನೆ ಮಾನ್ಯ ಅಧ್ಯಕ್ಷರೆ, ರಾಜ್ಯಕ್ಕೆ ಬರ ಹೊಸದೇನೂ ಅಲ್ಲ 1900 ರಿಂದ ಇಲ್ಲಿಯವರಗೆ ಸುಮಾರು 10–12 ಬರಗಳನ್ನು ನಾವು ಎದುರಿಸಿದ್ದೇವೆ ಬಹುಶಃ ಈ ನಾಡಿನ ದೊಡ್ಡ ಸಾಮ್ರಾಟ್ ಶ್ರೀ ಕೃಷ್ಣರಾಜ ಒಡೆಯರು ಸಾಲಗಾರರಾಗಿದ್ದರು ಬರದಲ್ಲಿ ರೈತರ ಸಹಾಯಕ್ಕೆ ಬಂದರು ದುರ್ದೈವ ಇವತ್ತು ನಾವು ಆ feudal ವ್ಯವಸ್ಥೆಯಷ್ಟು ಜನಗಳಿಗೆ ಸಹಕಾರ ಮಾಡಲಿಕ್ಕೆ ಮುಂದೆ ಬರಲಿಲ್ಲವೇನೋ ಎಂಬುದು ನಮ್ಮ ಭಾವನೆ ನಾನು ಈ ಶಾಸನಸಭೆಯಲ್ಲಿ ಮಾತನಾಡುವಾಗ ಹಿಂದೆ ಮಾತನಾಡಿದ್ದೇನೆ ಈ ರಾಜ್ಯಕ್ಕೆ ಎರಡು ರೆಮಿಡಿಯನ್ನು, ಎರಡು ರಿಲೀಫ್ ಅನ್ನು ನಾವು ಯೋಚನೆ ಮಾಡಬೇಕು ಒಂದು ಶಾಶ್ವತವಾಗಿ ಬರದ ಬವಣೆಯನ್ನು ಕಡಿಮೆ ಮಾಡುವುದು ಹೇಗೆ? ಇನ್ನೊಂದು ತ್ವರಿತವಾಗಿ ರೈತರಿಗೆ ಬರುವ ಬರವನ್ನು ನಿಭಾಯಿಸುವುದು ಹೇಗೆ? ಈವರೆಗೆ ರಾಜ್ಯದಲ್ಲಿ drought prone area ವನ್ನು ನಿಜವಾಗಿಯೂ ಒಂದು ಪ್ರಾಜೆಕ್ಟ್ ಮಾಡಿ ನಾವು ಆ ಬವಣೆಯಿಂದ ಆಚೆ ತರಲಿಕ್ಕೆ ಪ್ರಯತ್ನ ಮಾಡಲಿಲ್ಲ ನಿಮಗೆ ಒಂದು ಮಾಹಿತಿಯನ್ನು ಕೊಡಬೇಕಾಗುತ್ತದೆ ಈ ವರ್ಷ ಕರ್ನಾಟಕದಲ್ಲಿ ವ್ಯಾಪಕವಾಗಿ ಮಳೆ ಆಗಲೇ ಇಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ ನಮ್ಮ rain gaze ಗಳನ್ನು ನೋಡಿದರೆ ಸುಮಾರು ತಾಲ್ಲೂಕುಗಳಲ್ಲಿ average rain ಆಗಿದೆ ಆದರೆ seasonal rain ಆಗಲಿಲ್ಲ ಯಾವ ಕಾಲಕ್ಕೆ ಮಳೆ ಬರಬೇಕಾಗಿತ್ತೋ ಆ ಕಾಲಕ್ಕೆ ಬರಲಿಲ್ಲ ಎರಡನೆಯದು

atmospheric humidity maintain ಆಗಲಿಲ್ಲ ತಾವೇನು ಭೂಗರ್ಭದಲ್ಲಿರುವ ನೀರನ್ನು ಹೆಚ್ಚು ಬಳಸಿ ತಂಪಿರುವ ಪ್ರದೇಶಗಳಿಗೂ ಕೂಡ ಅತ್ಯಂತ ಹೆಚ್ಚು ಒಣ ವಾತಾವರಣ ಇರಲಿಕ್ಕೆ ನಾವೇನು ಪ್ರಯತ್ನ ಮಾಡಿದೆವು ಅಲ್ಲಿ ಮಳೆ ಬಿದ್ದರೆ ಕಾದಿರುವ ಹೆಂಚಿನ ಮೇಲೆ ನೀರು ಹಾಕಿದಂತೆ ಆಗುತ್ತಿದೆ ಮಳೆ ಬಿದ್ದ ತಕ್ಷಣ evaporate ಅಥವಾ ಅಲ್ಲಿ ಮಳೆಯ ಸಾಂದ್ರತೆಯ ನಮಗೆ ಗೊತ್ತಾಗುತ್ತಿಲ್ಲ ಇವತ್ತು ಮಳೆ ಬಿದ್ದರೆ ನಾಳೆ ಮಳೆ ಬಿದ್ದಿಲ್ಲವೇನೋ ಎಂಬ ಭಾವನೆ ಬರುತ್ತಿತ್ತು ಇದಕ್ಕೆ ಮೂಲ ಕಾರಣ, ಒಂದು ವಾತಾವರಣದ ತಂಪನ್ನ ಬಯಲು ಸೀಮೆಯಲ್ಲಿ ಇಲ್ಲದ ಹಾಗೆ ಮಾಡಿದ್ದೇವೆ ಮರಗಿಡಗಳು ಕಡಿಮೆಯಾದವು Forest ಕಡಿಮೆಯಾಯಿತು ಕೆರೆಗಳಲ್ಲಿ ನೀರು ತುಂಬಿರಬೇಕಾಗಿತ್ತು ಯಾವುದೇ ಕೆರೆಯಲ್ಲಿ ಇವತ್ತು ನೀರು ಇಲ್ಲದೇ ತಂಪು ಇಲ್ಲದಂತೆ ಆಯಿತು ರೈನ್ ಫಾಲ್ ಕಡಿಮೆಯಾಯಿತು ಅದನ್ನು ನಾವು ರೈನ್ ಟ್ರಾಕ್ ಅಂತ ಕರೆಯುತ್ತೇವೆ ಎಲ್ಲಿ ತಂಪು ಇರುತ್ತದೆ ಅಲ್ಲಿ ಮಳೆಯಾಗುತ್ತದೆ ಈಗ ನಮ್ಮ ತುಮಕೂರಿನಲ್ಲಿ ತುರುವೇಕೆರೆ, ತಿಪಟೂರು ಈ ಭಾಗದಲ್ಲಿ ಏನಾದರು ಹೇಮಾವತಿ ನೀರು ಹರಿದುಕೊಂಡು ಹೋದರೆ ಮಳೆ ಕೂಡ ಅಲ್ಲಿಯೇ ಬೀಳುತ್ತದೆ ಇದು ಗೊತ್ತಿರುವುದೇ ವೈಜ್ಞಾನಿಕವಾಗಿ ಎಲ್ಲಿ ತಂಪು ಇರುತ್ತದೆ ಅಲ್ಲಿ ಮತ್ತೆ ಮಳೆಯಾಗುತ್ತದೆ ಮಳೆಯಾದರೆ ಮತ್ತೆ ತಂಪಾಗುತ್ತದೆ ಈ ಸ್ಥಿತಿಯಲ್ಲಿ ನಾವಿದ್ದಾಗ ನಾವು ಹೇಳಿದೆವು, ನಿಮ್ಮ ಹತ್ತಿರ ಹೇರಳವಾಗಿ ಹಣ ಇದೆ ಎಂದು ಹೇಳುತ್ತಿದ್ದೀರಿ Revenue surplus ರಾಜ್ಯಕ್ಕೆ ಇದೆ ಎಂದು ಹೇಳುತ್ತೀರಿ ಈಗಲಾದರೂ ಕೆಲಸದ ಕಡೆ ಪ್ರಾಜೆಕ್ಟ್‌ಗಳ ಕಡೆ ಹೋಗಿ ಈಗಲಾದರೂ ಈ ಚೀಪ್ ಪ್ರೋಗ್ರಾಮ್ಸ್ ಅನ್ನು, ಪಾಪ್ಯುಲಾರಿಟಿ ಪ್ರೋಗ್ರಾಮ್ಸ್ ಅನ್ನು ಕೈ ಬಿಡಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಿ ನಾನು ಇಲ್ಲಿ ಒಂದು ಮಾತನ್ನು ಉಲ್ಲೇಖ ಮಾಡುತ್ತೇನೆ ಅಬ್ರಹಾಂ ಲಿಂಕನ್‌ರವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ ನನಗೆ ಇವತ್ತು ಸಂವಿಧಾನ ಮತ್ತು ದೇಶ ಆಯ್ಕೆ ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ ಸಂವಿಧಾನ ನನ್ನ ಅಂಗಾಂಗ, ದೇಶ ನನ್ನ ಶರೀರ, ಶರೀರ ಇರಬೇಕೋ ಅಥವಾ ಅಂಗಾಂಗ ಇರಬೇಕೋ ಅಂದಾಗ ನಾನು ಸಂವಿಧಾನ ಆಯ್ಕೆ ಮಾಡಿಕೊಳ್ಳಲೋ ಅಥವಾ ದೇಶವನ್ನು ಆಯ್ಕೆ ಮಾಡಿಕೊಳ್ಳಲೋ ಎನ್ನುತ್ತಾರೆ ಪರ್ವೇಜ್ ಮುಷರಫ್‌ರವರು ಅವರ ಪುಸ್ತಕದಲ್ಲಿ ಅದನ್ನೂ ಕೋಟ್ ಮಾಡಿ ಬರೆಯುತ್ತಾರೆ ನಾನು ಕೂಡ ಇವತ್ತು ಹಾಗೆಯೇ ಮಾಡಿದ್ದೇನೆ ಎಂದು ಒಬ್ಬ ಮಿಲಿಟರಿ ಆಡಳಿತಗಾರ ಎದೆ

ತಟ್ಟಿಕೊಂಡು ಬರೆಯುತ್ತಾನೆ ನಾನು ಇಷ್ಟು ಕಿಲೋಮೀಟರ್ ಕೆನಾಲ್ ಅನ್ನು modernize ಮಾಡಿ ಇಷ್ಟು ಲಕ್ಷ ಎಕರೆಗಳಿಗೆ ನೀರು ಹೋಗುವಂತೆ ಮಾಡಿದ್ದೇನೆ ನಾನು ಇಷ್ಟು ಇರಿಗೇಶನ್ ಪ್ರಾಜೆಕ್ಟಗಳನ್ನು ಜಾಸ್ತಿ ಮಾಡಿ ಪಾಕೀಸ್ತಾನವನ್ನು drought ಬವಣೆಯಿಂದ ಆಚೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಮಾಡಿರುವುದು ಬಿಡುವುದು ಆ ಉಲ್ಲೇಖ ನಮಗೆ ಈಗ ಬೇಡ ಕನಿಷ್ಠ ಸೌಜನ್ಯಕ್ಕೆ ಈ ರಾಜ್ಯದಲ್ಲಿ ಬಂದಿರುವ ಸರ್ಕಾರಗಳು ಯಾವತ್ತಾದರೂ ಕುಳಿತು ನಾವು ಈ ಡ್ರಾಟ್ ಬರುತ್ತಿರುವ ಪ್ರದೇಶಕ್ಕೆ ಅದರಲ್ಲೂ ಪ್ರಮುಖವಾಗಿ ಬಯಲು ಪ್ರದೇಶಕ್ಕೆ ಒಂದು ಕಾರ್ಯಕ್ರಮವನ್ನು ನಿರೂಪಣೆ ಮಾಡಬೇಕು ಎಂದು ಯೋಚನೆ ಮಾಡಿದ್ದಾರಾ? ಮಾಡಲಿಲ್ಲ ಏನಾಗಿದೆ ನಮ್ಮ ಕಾರ್ಯಕ್ರಮಗಳು? ಒಂದು ಕಡೆ ಡ್ರಾಟ್ ಅನ್ನು ಮಾನಿಟರ್ ಮಾಡುವುದು ಇನ್ನೊಂದು ಕಡೆ ಡ್ರಾಟ್ ಅನ್ನು ನಿಭಾಯಿಸುವುದು ಇದರಲ್ಲಿಯೇ ಸರಿ ಹೋಗಿದೆ ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಚೈನಾಗೆ ಹೋಗಿದ್ದೆವು ಬಹಳ ಸಂತೋಷವಾಯಿತು ತ್ರೀ ಘಾಟ್ಸ್ ಪ್ರಾಜೆಕ್ಟನ್ನು ನೋಡಿದಾಗ ನಮ್ಮನ್ನು ನೋಡಿ ನಕ್ಕರು ನಾವು ಹೋಗಬೇಕಾದರೆ ಮಾನ್ಯ ಹಂಪನಗೌಡರು ಬಂದಿದ್ದರು ಏನ್ರೀ ಹೋಗುತ್ತೀದ್ದೀರಿ ಎಂದು ನಮಗೆ ವಯಸ್ಸಾಯಿತಪ್ಪ ನಾವು ಇನ್ನು ಪಟ್ಟಣ ನೋಡುವ ಶೋಕಿ ಬೇಡ ನಾವು ಪ್ರಾಜೆಕ್ಟ್ ನೋಡಬೇಕು, ಮಾನ್ಯ ವಾಟಾಳರು, ಮಾನ್ಯ ರಮೇಶ್ ಕುಮಾರ್‌ರವರು, ರಾಜರು, ಮಹಾರಾಜರು ನೋಡಿಕೊಳ್ಳಲಿ, ನಾವು ಗ್ರಾಮೀಣ ಪ್ರದೇಶವನ್ನು ನೋಡುತ್ತೇವೆಂದು ಹೋಗಿದ್ದು ಸಾರ್ ನಾನು ನಿಮಗೆ ಹೇಳುತ್ತೇನೆ ನಾವು ಅಲ್ಲಿ ಕುಳಿತುಕೊಂಡು ಕೇಳಿದಾಗ ಅವಾಕ್ ಆಗಿ ಬಿಟ್ಟೆವು ನಾವು ಒಂದು ಕಡೆ ಅಲ್ಲಿ ಆಗುತ್ತಿದ್ದ ಫ್ಲಡ್ಸ್ ಅನ್ನು ರಿಸ್ಟ್ರಿಕ್ಟ್ ಮಾಡಿದರು ಇನ್ನೊಂದು ಕಡೆ ಆ ನೀರಿನಿಂದ ಡ್ರಾಟ್ ಅನ್ನು ಹೇಗೆ manage ಮಾಡಿದರು ನಾವು ಅನೇಕ ಸಲ ಹೇಳಿದೆವು Hats off to Krishnadevaraya Tank chain ಅನ್ನು ನಿರ್ಮಾಣ ಮಾಡಿದ್ದಾರೆ Reservoir chain ಅನ್ನು ನಿರ್ಮಾಣ ಮಾಡಿದ್ದಾರೆ ಏಳು ಜಿಲ್ಲೆಗಳಲ್ಲಿ ಇವತ್ತು ಬಿಹಾರ್‌ಗಿಂತ ನಮ್ಮ ರಾಜ್ಯ ಚೆನ್ನಾಗಿರುವಂತಹ ಸ್ಥಿತಿ ನಿರ್ಮಾಣವಾಗಿದೆ ಅಂದರೆ ಆ ಪುಣ್ಯಾತ್ಮರಿಂದ ಆಗಿದೆ, may be a feudalist. ರಾಜ್ಯದಲ್ಲಿ ಇವತ್ತು ಏನಾದರೂ ಅಭಿವೃದ್ಧಿ ಕಾಣುತ್ತಿದೆ ಎಂದರೆ ಅವರು ಮತ್ತು ಸರ್ ಎಂ ವಿಶ್ವೇಶ್ವರಯ್ಯನವರನ್ನು ನೆನೆಸಿಕೊಳ್ಳುತ್ತೇವೆ ಆ ವ್ಯವಸ್ಥೆಯನ್ನು ಕೂಡ

ನಾವು ಇವತ್ತು ಬಳಕೆ ಮಾಡಿಕೊಳ್ಳುವುದಕ್ಕೆ ಆಗಿಲ್ಲ ಸಕಲೇಶಪುರ ತಮಗೆ ಗೊತ್ತು ಪ್ರತಿ ವರ್ಷ ಹೋದ ವರ್ಷಕ್ಕಿಂತ ದುಪ್ಪಟ್ಟು ಮಳೆಯಾಗುತ್ತದೆ ಸಕಲೇಶಪುರದ ಪಕ್ಕ ಹಾಸನ ಅಲ್ಲಿ ಬರಗಾಲವಿದೆ ಸಕಲೇಶಪುರದಲ್ಲಿ ಈ ವರ್ಷ ಕಾಫಿ ಬೆಳೆ ಕೊಳೆತು ಹೋಗಿದೆ ಶುಂಠಿ ಬೆಳೆ ಕೊಳೆತು ಹೋಗಿದೆ ಸಕಲೇಶಪುರದಲ್ಲಿ ಮಾನ್ಯ ಶಿವಪ್ಪನವರು ಸಿಕ್ಕಿ ಒಂದು ಮಾತು ಹೇಳಿದರು ನಾನು ಕೊಳೆತ್ತಿಲ್ಲಪ್ಪ ಇನ್ನು ಎಲ್ಲಾ ಕೊಳೆತು ಹೋಗಿದೆ ಈ ವರ್ಷ ಸಕಲೇಶಪುರದಲ್ಲಿ ಮಳೆ ಹೆಚ್ಚಾಗಿ ಅಂತ ಪಕ್ಕದ ಹಾಸನ 20 ಕೀಲೋಮೀಟರ್ ಇದೆ ಅಲ್ಲಿ ನೇರವಾಗಿ ಬರಗಾಲದ ಪರಿಣಾಮವಾಗಿದೆ ಇದನ್ನು ನಾವು ಎಲ್ಲಿಯಾದರೂ ಒಂದು ಕಡೆ ಕುಳಿತು ಚರ್ಚೆ ಮಾಡಿದ್ದರೆ ರಾಜ್ಯವನ್ನು ನಾವು ಇವತ್ತು ಈ ಸ್ಥಿತಿಗೆ ತರುತ್ತಿರಲಿಲ್ಲ Temporary relief ಕೊಡುವುದು

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಸದಸ್ಯರಿಗೆ ಪೂರಕವಾಗಿ ಎಂತಹ ವೈಚಿತ್ರಗಳು ನಡೆಯುತ್ತವೆ ಅಂದರೆ ಸಹಾರಾ ಮರು ಭೂಮಿಯಲ್ಲಿ ವಿಪರೀತ ಮಳೆಯಾಗಿ ಫ್ಲಡ್ಸ್ ಆಯಿತು ರಾಜಾಸ್ಥಾನದ ಮರುಭೂಮಿಯಲ್ಲಿ ವಿಪರೀತ ಮಳೆಯಾಗಿ ಫ್ಲಡ್ಸ್ ಬಂದಿದೆ ಅಂಟಾರ್ಟಿಕ ದಕ್ಷಿಣ ಧೃವದಲ್ಲಿ warm ಆಗಿ ಹುಲ್ಲು ಬೆಳೆಯುತ್ತಿದೆ ಇದು ವಿಚಿತ್ರವಾದ ಸಂಗತಿ

SRI J C MADHUSWAMY It may be because of sunami effect ಅಂತ ಅವರು ಹೇಳುತ್ತಿದ್ದಾರೆ ಸುನಾಮಿ ಪರಿಣಾಮವೇನಾದರೂ ಆಗಿದೆಯೇ ಅಂತ ಹೇಳಿ ಒಂದು ಚರ್ಚೆಯಾಗುತ್ತಿದೆ ನಮ್ಮ ರೈನ್ ಸೀಜನ್ ಚೇಂಜ್ ಆಗುವುದಕ್ಕೂ ಕೂಡ ಅದೇ ಕಾರಣ ಅಂತ ಚರ್ಚೆಯಾಗುತ್ತಿದೆ Global warming ಈ ಸಲ ಶುರುವಾಗಿದೆ ಹಾಗಾಗಿ ನಾವು ಈ ಸಲ early monsoon ಅನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ Warm tides ಈ ಸಲ ಶುರುವಾಗಿದೆ ಅಂತ ನಾವು ಓದುತ್ತಿದ್ದೇವೆ ನಮ್ಮ ಕರ್ನಾಟಕದ ಪ್ರಶ್ನೆ ಬಂದಾಗ ನಮಗೆ ಈ ವರ್ಷ resources ಇತ್ತು ಈ ಹಣ ಹೆಚ್ಚಾಗಲಿಕ್ಕೆ ಯಾವ ಸರ್ಕಾರಗಳು ಕಾರಣವಲ್ಲ ಈ ಹಣ ಹೆಚ್ಚಾಗಲ್ಲಿಕ್ಕೆ ಟರ್ನ್ ಒವರ್ ಕಾರಣ ಈ ಹಣ ಹೆಚ್ಚಾಗಲಿಕ್ಕೆ ಡೀಸಲ್ ಮೇಲೆ ಪೆಟ್ರೋಲ್ ಮೇಲೆ ಹಾಕಿದ ಸೆಸ್ ಕಾರಣ ಈ ಹಣ ಹೆಚ್ಚಾಗಲಿಕ್ಕೆ ನಿಮ್ಮ volume of business ಕಾರಣ ಕೇಂದ್ರ ಸರ್ಕಾರದವರು subsidise ಮಾಡಿದ ಕಾರಣ ನಿಮಗೆ 250 ಕೋಟಿ ರೂಪಾಯಿಗಳು ಪುನರ್ ವಸತಿಗೆ ಬಂದ ಹಣ ಕಾರಣ ಇವೆಲ್ಲಾ ಇದ್ದಾಗ ಎಲ್ಲಿಯಾದರೂ ಒಂದು ಕಡೆ

ಕುಳಿತುಕೊಂಡು ಈ ರಾಜ್ಯ ನಡೆಸುವವರು ಈ ರಾಜ್ಯಕ್ಕೆ ಏನಾಗಿದೆ ಒಂದು ಕಡೆ ಫ್ಲಡ್ ಆಗಿ ಸಾಯುತ್ತಿದ್ದೇವೆ, ಇನ್ನೊಂದು ಕಡೆ ಮಳೆ ಇಲ್ಲದೆ ಸಾಯುತ್ತಿದ್ದೇವೆ ಇದನ್ನು ಬ್ಯಾಲೆನ್ಸ್ ಮಾಡಬೇಕಾ ಅಂತ ರಾಜ್ಯ ಸರ್ಕಾರದವರು ನಾನು ಈಗ ಮಾನ್ಯ ಈಶ್ವರಪ್ಪನವರನ್ನು ಪ್ರಶ್ನೆ ಕೇಳುತ್ತೇನೆ ನಾವು ಈ ಬಗ್ಗೆ ಚಿಂತನೆ ಮಾಡಿದ್ದೇವೆಯೇ Honest ಆಗಿ ನಾವು ಪಕ್ಷಗಳನ್ನು ಬಿಟ್ಟು ಮಾತನಾಡೋಣ ಇವತ್ತು ನಮ್ಮ ಹೇಮಾವತಿ ಬೇಸಿನ್‌ನಲ್ಲಿ ಎಷ್ಟು ನೀರು ವೇಸ್ಟ್ ಆಗುತ್ತಿದೆ ಎಲ್ಲಿಯಾದರೂ ಒಂದು ಕಡೆ ನಮ್ಮ ರಿಸರ್ವ ವಾಯರ್‌ಗೆ ಟರ್ನ್ ಮಾಡಿ ಕೊಟ್ಟಿದ್ದರೆ ಆಗುತ್ತಿರಲಿಲ್ಲವೇ ಎಲ್ಲಿಯಾದರೂ ಒಂದು ಕಡೆ ಅಂಡರ್ ಗ್ರೌಂಡ್ ವಾಟರ್ ಅನ್ನು ರೀ ಚಾರ್ಜ್ ಮಾಡಿಸಿದ್ದರೆ ಆಗುತ್ತಿರಲಿಲ್ಲವೇ? ಏನಾಗಿದೆ ಆಧ್ಯಕ್ಷರೇ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರಿನ ಕಡೂರು, ಪಂಚನಹಳ್ಳಿ ಭಾಗ ಬೀರೂರು ಈ ಕಡೆ 700 ಅಡಿಗಳಿಂದ ಒಂದು ಸಾವಿರ ಆಡಿಗಳವರೆಗೂ ಬೋರ್‌ವೆಲ್‌ಗಳನ್ನು ಕೊರೆಯುತ್ತಿದ್ದೇವೆ ಇವತ್ತು ನೀವು ಕುಡಿಯುವ ನೀರಿಗೆ ಬೋರ್‌ವೆಲ್ ಹಾಕಿ ಬಂದರೆ ಒಂದು ವಾರ ಇರುತ್ತದೆ, 6 ತಿಂಗಳು ಇರುತ್ತದೆ ಆಮೇಲೆ ಬತ್ತಿ ಹೋಗುತ್ತದೆ Entire underground water ಅನ್ನು exploit ಮಾಡಿ ನಿಂತಿದ್ದೇವೆ Because of that, heat ಜಾಸ್ತಿಯಾಯಿತು ಈ ಕಡೆ ಕಾರ್ಯಕ್ರಮಗಳನ್ನು ಏನು ಮಾಡಿದಿರಿ ರಾಜ್ಯದಲ್ಲಿ ವಾಟರ್ ಶೆಡ್ program ಅನ್ನು ವ್ಯಾಪಕವಾಗಿ ಹಾಕಿಕೊಂಡಿದ್ದೀರಿ ಸಾರ್ ಎದೆ ಮುಟ್ಟಿಕೊಂಡು ಮಂತ್ರಿಗಳು ಹೇಳಬೇಕು Water shed program ನಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗಿದೆ ವಾಟರ್ ಶೆಡ್‌ನಲ್ಲಿ ನೀವು ಪ್ರೋಗ್ರಾಂ ಮಾಡಿದರೆ ಎರಡು ವರ್ಷ ಎಕ್ಸ್‌ಟೆನ್‌ಷನ್ ಅನ್ನು ನೀವು ವರ್ಲ್ಡ್ ಬ್ಯಾಂಕ್‌ನ್ನು ಏಕೆ ಕೇಳುತ್ತಿದ್ದೀರಿ ನಿಮ್ಮ ಅಧಿಕಾರಿಗಳು ಬಂದು ಎರಡು ವರ್ಷ ಎಕ್ಸ್‌ಟೆನ್‌ಷನ್ ಕೊಡಿ ಅಂದ್ರೆ ಕೊಟ್ಟು ಕುಳಿತುಬಿಟ್ಟರಿ Next, additional water sheds ನೀವು ಎಲ್ಲಿ ಮಾಡುತ್ತೀರಿ ? 3 ಕೋಟಿ 4 ಕೋಟಿ 5 ಕೋಟಿ ಹಣ ಕೊಟ್ಟರು ಅಂತ ವಾಟರ್ ಶೆಡ್ ಪ್ರೋಗ್ರಾಂನಲ್ಲಿ ಏನ್ ಜಿ ಓ ಗಳಿಗೆ ವಹಿಸಿಬಿಟ್ಟಿದ್ದೇವೆ Surface water manage ಮಾಡಿದ್ದೇವೆ ನೀರನ್ನು ತಡೆದು ನೀರನ್ನು ಇಂಗಿಸು, ನೀರನ್ನು ಹರಿಸು ಎನ್ನುವ ಸ್ಲೋಗನ್ ನೀವು ಹೇಳಿಕೊಂಡು ಬಂದಿದ್ದೀರಲ್ಲ ಯಾವ ವಾಟರ್ ಶೆಡ್‌ನಲ್ಲಿ ನೀವು ಇವತ್ತು ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿದ್ದೀರಿ ನನಗೆ ಗೊತ್ತಿರುವಂತೆ ಒಂದು ಜಿಲ್ಲೆ

ಕೂಡ 30 ಪರ್ಸೆಂಟ್‌ಗಿಂತ ಜಾಸ್ತಿ ಕೆಲಸ ಆಗಲಿಲ್ಲ ಒಂದು ವರ್ಷದ ಕಾರ್ಯಕ್ರಮ training ಮಾಡುವುದು, ಪ್ರಚಾರ ಮಾಡುವುದು, ಮೀಟಿಂಗ್ ಮಾಡುವುದು, ಯಾರು ಲೀಡ್ ಎನ್ ಜಿ ಒ ಇದ್ದರೂ ಅವರು ಮಾಡಿ ಹೋಗಿ ಬಿಟ್ಟರೆ ಅದರ ನಂತರದ ಕಾರ್ಯಕ್ರಮಗಳೆಲ್ಲಾ ಸ್ಟಾರ್ಟ್ ಆಗಿದೆ ಕೂಲಿ ಜನರೇಟ್ ಆಗುತ್ತಿತ್ತು ವಾಟರ್ ಮ್ಯಾನೇಜ್‌ಮೆಂಟ್ ಆಗುತ್ತಿತ್ತು ನಿಮ್ಮ ಡ್ರೈ ಲ್ಯಾಂಡ್ ಎಲ್ಲಾ ಅಫಾರ್ ಸ್ಟೇಷನ್ ಆಗುತ್ತಿತ್ತು ಗ್ರೀನರಿ ಬೆಳೆಯುತ್ತಿತ್ತು ಹಾರ್ಟಿಕಲ್ಚರ್ ಕ್ರಾಪ್ ಬೆಳೆಯುತ್ತಿತ್ತು ಇವತ್ತು ಒಂದು ಎಕರೆಯೂ ಇಲ್ಲ 5,000 ಹೆಕ್ಟೇರ್, 8000 ಹೆಕ್ಟೇರ್ ವಾಟರ್‌ಷೆಡ್ ತೆಗೆದುಕೊಳ್ಳುತ್ತೇವೆಂದು ಹೇಳುವ ಕಡೆ, ಒಂದು ಎಕರೆ ಕೂಡ ಪ್ಲಾಂಟೇಷನ್ ಸಮರ್ಪಕವಾಗಿ ಆಗುತ್ತಿಲ್ಲ ಅಲ್ಲಿ ನೀವು ವಿಫಲರಾದಿರಿ ಅಲ್ಲಿ ಏನಾದರೂ ನೀವು ಕೂಲಿಗಾಗಿ ಹಣವನ್ನು ಖರ್ಚು ಮಾಡಿಸಿದ್ದರೆ ಅಲ್ಲಿ ಕೆಲಸ ನಿರ್ಮಾಣ ಮಾಡಿದ್ದರೆ ನಿಮಗೆ ರಿಲೀಫ್‌ನಲ್ಲಿ ಒತ್ತಡ ಬೀಳುತ್ತಿರಲಿಲ್ಲ It is mere economics ನಮಗೆ ಕೆಲಸ ಬೇಕು ನಮಗೆ ಎಲ್ಲಿಯಾದರೂ ಕೊಡಿ ಕೆಲಸವನ್ನು ಕೊಡಲೇ ಇಲ್ಲ ಒಂದು ಕಡೆ circular ಕೊಟ್ಟರು ಜೆ ಸಿ ಬಿ ಯನ್ನು ಯಾವ ಕಾರಣಕ್ಕೂ ಬಳಸಕೂಡದು ಎಂದು ಇನ್ನೊಂದು ಕಡೆ ಇಲ್ಲ ಎಂತಹ ಪರಿಸ್ಥಿತಿ ನಿರ್ಮಾಣವಾಯಿತು ದಿಢೀರ್ ಎಂದು ಜಿಲ್ಲಾಧಿಕಾರಿಗಳು ನಿಮ್ಮ ರಿಲೀಫ್ ಕೆಲಸಗಳನ್ನು ಶುರು ಮಾಡಿಕೊಂಡರು ಮಾನ್ಯ ಪ್ರಕಾಶ್‌ರವರೇ ಯಾವ ಪ್ಲಾನ್‌ನಲ್ಲಿ ಶುರು ಮಾಡಿದರು? Do you know what D C s have done? ತಮಗೆ ಇಷ್ಟ ಬಂದ ಕಡೆ ಕೆಲಸ ಶುರು ಮಾಡಿದರು ಎರಡನೇ ಹಂತದಲ್ಲಿ, ಮೂರನೇ ಹಂತದಲ್ಲಿ ಎಂ ಎಲ್ ಎ ಗಳನ್ನು ಈ ಸಲ ಕನ್ಸಲ್ಟ್ ಮಾಡಿದರು ಮೊದಲನೆ ಹಂತದ ಕೆಲಸವನ್ನು ಅವರಿಗೆ ಇಷ್ಟ ಬಂದ ಕಡೆ ಕೆಲಸ ಕೊಟ್ಟಿದ್ದಾರೆ ಬೇರೆ ಇಲಾಖೆಯ ಅಧಿಕಾರಿಗಳನ್ನು ಕರೆದು ನೀನು ಈ ಕೆಲಸ ಮಾಡು, ನೀನು ಈ ಕೆಲಸ ಮಾಡು ಎಂದು ಹೇಳಿದ್ದಾರೆ ತಾವು ಬೇಕಾದರೆ ತುಮಕೂರು ಜಿಲ್ಲೆಯನ್ನು ರಿವ್ಯೂ ಮಾಡಿ ತುಮಕೂರು ಜಿಲ್ಲೆಗೆ ಬಂದ ಅಕ್ಕಿ ಎಲ್ಲಿ ಹೋಯಿತು? ಮಾನ್ಯ ರಾಜಣ್ಣನವರು ಹೇಳಬೇಕು ನಾವು ಮೀಟಿಂಗ್ ಹಾಲ್‌ನಲ್ಲಿ ಮೊನ್ನೆ ಮಾತನಾಡಿದೆವು ನಾಲ್ಕು ಸಾವಿರ ಟನ್ ಅಕ್ಕಿ ಎಲ್ಲಿಗೆ ಹೋಯಿತು ಯಾರಿಗೆ ಕೊಟ್ಟರು ಎಂದು ಕೇಳುವವರೇ ಇಲ್ಲ Early programme ಮಾಡಿ ಎಂದು ಹೇಳಿದವರು ಯಾರು? ಇಲಾಖೆಯವರನ್ನು ಕರೆಯುವುದು, ಇಂತಿಂಥ ಕೆಲಸವನ್ನು ಮಾಡಿ ಎಂದು ನೇಮಿಸುವುದು, ಪ್ಲಾನ್ /

ಮಾಡಿರುವಿರಾ? ಹಾಗಾದರೆ ಲೇಬರ್ ಲಿಸ್ಟ್ ಅನ್ನು ಅನೌನ್ಸ್ ಮಾಡಿಸಿದ್ದೀರಾ? ಗ್ರಾಮ ಪಂಚಾಯ್ತಿ ಚಾವಡಿ ಮೇಲೆ ಅವರ ಹೆಸರುಗಳು ಇವೆಯೇ? ಪುರಸಭಾ ಆಫೀಸಿನಲ್ಲಿ ಅವರ ಹೆಸರುಗಳು ಇವೆಯೇ? ಯಾರಾದರೂ ಒಬ್ಬ ಸಹಿ ಮಾಡಿ ನಿಮ್ಮ ಹತ್ತಿರ ಪೇಮೆಂಟ್ ತೆಗೆದುಕೊಂಡು ಹೋಗಿದ್ದಾನೆಯೇ? ಏನೂ ಇಲ್ಲ ಇನ್ನೊಂದು ಸಮಸ್ಯೆ ಸೃಷ್ಟಿ ಆಯಿತು ತಾವು ಮೂರು ರೂಪಾಯಿಗೆ ಪಿ ಡಿ ಎಸ್ ನಲ್ಲಿ ಅಕ್ಕಿ ಕೊಟ್ಟಿರಿ ಇಲ್ಲಿ Food for work ನಲ್ಲಿ 6 25 ರೂ ಗಳನ್ನು ಮಾಡಿದರು ಯಾರು ತೆಗೆದುಕೊಳ್ಳುತ್ತಾರೆ? ಮೂಲಭೂತವಾದ ಪ್ರಶ್ನೆಯನ್ನು ನೀವು ಟ್ಯಾಕಲ್ ಮಾಡಿರುವಿರಾ? The very man who purchases rice at three rupees has to take rice at Rs 6 25 ಇದರಲ್ಲಿ ಸ್ಕ್ಯಾಂಡಲ್ ಆಗಿದೆಯೇ ಎಂದರೆ ಆಗದೇ ಇರುತ್ತದೆಯೇ? ಮಾನ್ಯ ರೆವಿನ್ಯೂ ಮಿನಿಸ್ಟರ್ ಇದಕ್ಕೆ ಉತ್ತರಿಸುವಿರಾ? ನಮಗೆ ಸೊಸೈಟಿಯಲ್ಲಿ ಮೂರು ರೂಪಾಯಿಗೆ ಅಕ್ಕಿ ದೊರೆಯುತ್ತದೆ ಅದೇ ಮನುಷ್ಯ ನಿಮ್ಮ ಹತ್ತಿರ ಕೂಲಿ ಮಾಡಿ 6 25 ರೂ ಗಳನ್ನು ಕೊಟ್ಟು ಅಕ್ಕಿ ತೆಗೆದುಕೊಳ್ಳುವ ಪರಿಸ್ಥಿತಿ ಇರಬೇಕಾದರೆ ಅಷ್ಟು ಹಣವನ್ನು ಕೊಟ್ಟು ಅಕ್ಕಿಯನ್ನು ಯಾರು ತೆಗೆದುಕೊಳ್ಳುತ್ತಾರೆ ಅದು ಸಾಧ್ಯವೇ ಇಲ್ಲ ಏನಾದರೂ ಪರಿಹಾರ ಕಂಡುಹಿಡಿದಿದ್ದೀರಾ? ಅಧಿಕಾರಿಗಳು ಏನಾಗಬೇಕು? ನಾವೇನಾಗಬೇಕು? ಅಕ್ಕಿ ಮಾರಿದ್ದಾರೆ ಅಂತ ನಾವೀಗ ಒಪ್ಪಿಕೋಬೇಕಲ್ಲ ನಾಳೆ ಯಾರು ಉತ್ತರ ಹೇಳೋರು? Is it not your job to find out some solution? ಕಲಿತುಕೊಳ್ಳಿ ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹತ್ತಿರ, open ಆಗಿ declare ಮಾಡಿ ಅವರು ಈ ಅಕ್ಕಿ ಮಾರಿಸಿದರು, yes I am selling rice through societies and PDS ಆ ದುಡ್ಡನ್ನು ನಾನಿಲ್ಲಿ ಬಳಸು ತ್ತಿದ್ದೀನಿ ಅಂತ ಕೆಲಸಗಳಾದರೂ ಆಯಿತು ಇಲ್ಲಿ ಏನೂ ಆಗುತ್ತಿಲ್ಲ, ಒಂದು ಕಡೆ ಅವರಿಗೆ ಅಕ್ಕಿ ಕೊಡಲು ಆಗುತ್ತಿಲ್ಲ ಇನ್ನೊಂದು ಕಡೆ ಅವರು ಅಕ್ಕಿ ತಗೊಳುತ್ತಿಲ್ಲ ಮತ್ತೊಂದು ಕಡೆ ನಿಮ್ಮ ಹತ್ತಿರ ಅಕ್ಕಿ ಸ್ಟಾಕೇ ಇಲ್ಲ ಇವತ್ತು ಕರ್ನಾಟಕದಲ್ಲಿ ಚಿಂತನೆ ನಡೆದಿದೆ, ಅದೂನೂ cash ಕೊಟ್ಟುಬಿಡುವುದೋ ಹೇಗೆ ಅಂತ ಇನ್ನು ವರ್ಕಿಗೆ ಯಾರನ್ನು ಜವಾಬ್ದಾರಿ ಮಾಡುತ್ತಿದ್ದೀರಿ? ಬರಗಾಲ ಅಂತ declare ಮಾಡಿದ ತಕ್ಷಣ ಮಾನ್ಯ ಕಂದಾಯ ಸಚಿವರೇ Advance ಆಗಿ ಅಕ್ಕಿಯನ್ನು ಕೊಡಬೇಕು ಅಂತ ನಿಯಮ, ಇಲ್ಲವಲ್ಲ ನಿಮ್ಮ ಹತ್ತಿರ, ಎಲ್ಲಿದೆ ನೋಡೋಣ ಹೇಳಿ, ಎಲ್ಲಿ ತಾವು advance ಆಗಿ food ಕೊಟ್ಟು ಈ ರಾಜ್ಯದಲ್ಲಿ ಕಾಮಗಾರಿ

ಮಾಡಿಸುತ್ತಿದ್ದೀರಿ? ಮಾಡಿಸಲಿಕ್ಕೆ ನಿಮ್ಮ ಹತ್ತಿರ ಎಲ್ಲಿದೆ ದುಡ್ಡು? account ಕೊಡಿ Please place it on the table ಇಲ್ಲಾಂದಮೇಲೆ ಏನು ಮಾಡಬೇಕು ಅಂತ ಸರ್ಕಾರ ನಡೆಸೋರು ಆಲೋಚನೆ ಮಾಡಿದ್ದೀರಾ? ಅದು ರಾಜ್ಯ ಸರ್ಕಾರದ್ದ ಕೇಂದ್ರ ಸರ್ಕಾರದ್ದ ಎಂಬ ಚರ್ಚೆ ಅಲಾಯಿದ How are you tackling the problem? ಹೇಳಬೇಕಲ್ಲ ನೀವು, ಕೋಟಿ ಕೋಟಿ, ಅಷ್ಟು ಕೋಟಿ ಕೊಟ್ಟೆ ಇಷ್ಟು ಕೋಟಿ ಕೊಟ್ಟೆ ಅಂತ ಬೂಸಿ ಬಿಟ್ಟುಕೊಂಡು ಓಡಾಡಿಬಿಟ್ಟರೆ ಕೆಲಸ ಆಯಿತಾ? ಜನಗಳಿಗೇನಾದರೂ ಸಹಾಯ ಆಯಿತಾ? No work is turned up ನೀವೇನು ಮೊದಲನೇ ಹಂತದಲ್ಲಿ 25 ಲಕ್ಷ ನಮಗೆಲ್ಲ ಒಂದೊಂದು ಕ್ಷೇತ್ರ ಅಥವಾ ತಾಲ್ಲೂಕಿಗೆ ಕೊಟ್ಟಿರಿ ಅದರಿಂದ ಮಾತ್ರ prompt ಆಗಿ ಕೆಲಸವಾಗಿದೆ, next ಒಂದು ಕೋಟಿ ಒಂದೊಂದು ಕ್ಷೇತ್ರಕ್ಕೆ ಕೊಟ್ಟಿದ್ದೇವೆ ಎಂಬ ಕೆಲಸ ಸ್ಲಾಟಾಗಿದೆ ಆನೆಸ್ಟಾಗಿರುವವರು ಯಾರೂ ಕೆಲಸ ಮಾಡಲು ಆಗುತ್ತಿಲ್ಲ ರೈಸಿಲ್ಲ, ಲೇಬರ್ ಬರಯಲು ಆಗುತ್ತಿಲ್ಲ, ಮೆಶಿನನ್ನು ಮುಟ್ಟ ಬಾರದು ಅಂತೀರಿ ಇನ್ನು supervisory staff ಹೆಚ್ಚು ಮಾಡಿಕೊಂಡು ಹೋಗಿದ್ದೇ ಒಂದು ದೊಡ್ಡ ಸಾಧನೆ ಯಾರ್ರೀ ನಿಮ್ಮ third party inspection One percent ಕೊಟ್ಟರೆ ಕೂತಿದ್ದ ಕಡೆ ಅವನು ಇವತ್ತು ಸೈನ್ ಹಾಕು ತ್ತಾನೆ ಯಾರೂ ಅದಕ್ಕೋಸ್ಕರ ಹೆಮ್ಮೆ ಪಟ್ಟುಕೊಳ್ಳಬೇಕಾಗಿಲ್ಲ Nodal officer ಯಾರು? ನಿಮ್ಮ ಜಿಲ್ಲ ಪಂಚಾಯ್ತಿಯವನು, ಕೂತಿದ್ದ ಕಡೆ ಅವನಿಗೆ ಪರ್ಸಂಟೇಜ್ ಬೇಕು Third party inspection ಮಾಡುವುದು university ಯವನೋ ಕಾಲೇಜಿನವನೋ ಕೂತಿದ್ದ ಕಡೆ ಪರ್ಸಂಟೇಜ್ ಬೇಕು ಬೋರ್ಡ ಹಾಕ ಬೇಕು, ತಗೊಂಡುಹೋಗಿ ಅವನ ಮುಂದೆ ಇಡಬೇಕು ಮಾನ್ಯ ಈಶ್ವರಪ್ಪನವರೇ ಆಗ ಅವನು ಸೈನ್ ಹಾಕಿಕೊಡುವುದು ಯಾರೂ ಬರಲಿಲ್ಲ inspectionಗೆ Asst Commissioner inspect ಮಾಡಬೇಕು, ತಹಸೀಲ್ದಾರ್ inspect ಮಾಡಬೇಕು, ಜಿಲ್ಲಾ ಪಂಚಾಯ್ತಿಯವರು inspect ಮಾಡಬೇಕು ಇಂಜಿನಿಯರಿಂಗ್ ಇಲಾಖೆಯಿಂದ ಕೆಲಸಗಳು ಆಗಿರಬೇಕು Third party ಬರಬೇಕು, nodal officer ಬರಬೇಕು ಎಲ್ಲೀವರೆಗೆ ತಗೊಂಡುಹೋಗುತ್ತಿದ್ದೀರಿ ಒಂದು ಸಣ್ಣ ಆಡಳಿತವನ್ನು ಎಷ್ಟು ಜನರ ಕೈಲಿ inspect ಮಾಡಿಸುತ್ತಿದ್ದೀರಿ worksನ್ನು ಸತ್ಯ ಒಪ್ಪಿಕೊಂಡು ಕನಿಷ್ಠ ರಾಜ್ಯದ ಪ್ರಗತಿ ಆದರೂ ಯಾಕೆ ಮಾಡಲಿಲ್ಲ ಸಾರ್ ಇವತ್ತು ಬರ ಪರಿಹಾರದ ಕಾಮಗಾರಿ ಕೂಲಿಗಾಗಿ ಅಂತ ಉಳಿದಿಲ್ಲ ಹೋಗಲಿ ಆ ಹೆಸರಿನಿಂದ ಸಣ್ಣಪುಟ್ಟ

ಕೆಲಸಗಳಾದರೂ ಆಗುತ್ತಿವೆಯಾ ಸಮರ್ಪಕವಾಗಿ ಅಂದರೆ ಅದಕ್ಕೆ ತಾವು ಉಪಸಮಿತಿಯಲ್ಲಿ ಕೂತು ಚರ್ಚೆ ಮಾಡಿ ಇದನ್ನು ಹೇಗೆ ತಿಳಿ ಮಾಡಬೇಕು ಅಂತ ಮಾಡಲಿಲ್ಲ ಮೂರನೆಯದು with due respect to this Government ನಿಮಗೆ ಯಾರಿಗೂ ಇದರಲ್ಲಿ ಆಸಕ್ತಿ ಇಲ್ಲ ಆಸಕ್ತಿ ಯಾರೂ ತೋರಿಸಿಲ್ಲ ಇವತ್ತಿನವರೆಗೆ ನಾನು ಎರಡು ಸಭೆ ಮಾಡಿ ಕೇಳಿದೆ, simple thing ಅಪ್ಪ, IP set ಇರೋರ್ಗೆ 10 ಗುಂಟೆ 20 ಗುಂಟೆ ಮೇವು ಬೆಳೆದುಕೊಳ್ಳಪ್ಪ, ನಾವು ಮೇವಿಗಾಗುವಂತಹ ಬೀಜ ಕೊಡುತ್ತೇವೆ ಆಮೇಲೆ ಅನುಕೂಲ ಇಲ್ಲದೇ ಇರೋರ್ಗೆ ಮಾರಬಹುದು ಅಂತ ನೀವು ಎಲ್ಲಾದರೂ ಹೇಳಿದ್ದೀರ? ಹೇಳಿಲ್ಲ ಆದರೆ ಗೋಶಾಲೆಯನ್ನು ಕಡ್ಡಾಯ ಮಾಡುತ್ತೇವೆ ಅಂತ ಹೇಳಿದಿರಿ, ಎಲ್ಲಾ ತಾಲೂಕಿನಲ್ಲೂ ಒಂದೊಂದು ಗೋಶಾಲೆ ಇರಬೇಕು ಅಂತ ಹೇಳಿದ್ದೀರಿ, 4 ರಿಂದ 5 ಸಾವಿರ ರಾಸನ್ನು ಅಲ್ಲಿಗೆ ತಗೊಂಡುಹೋಗಿ ಕೂಡಿ ಅಂತ ಹೇಳಿದ್ದೀರಿ,

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) 2 ಸಾವಿರಕ್ಕೊಂದು ಟನ್ನಿನಂತೆ ನಾವು ಖರೀದಿ ಮಾಡಲು ತಯಾರಿದ್ದೇವೆ, ಕೆಲವು ಕಡೆ ತೆಗೆದುಕೊಂಡಿದ್ದಾರೆ ಮೆಕ್ಕೆಜೋಳದ್ದರ ರೇಟ್ ಸಹ ಕೊಟ್ಟಿದ್ದೇವೆ, ಮತ್ತು ಕೆಲವು ಕಡೆ ತೆಗೆದುಕೊಂಡಿದ್ದಾರೆ farmಗಳಿಂದಲೂ ಇಂಥಾದ್ದು ಕೊಂಡಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಇಲ್ಲ, ನಾನೇ ಕೂತು ಸ್ಕೀಂ ಕೇಳಿದೆ, ನಾನೇ ಕೂತು ರೈತರನ್ನು ಕರೆಸಿ ನೋಡಪ್ಪ 10–20 ಗುಂಟೆ ಎಲ್ಲಾದರೂ ಬೆಳೆಸಿಕೊಡುತ್ತೇವೆ ಯಾರಿಗೆ ಅನುಕೂಲವಿಲ್ಲವೋ ಅವರಿಗೆ ಮಾರುವ ಸ್ಥಿತಿ ನಿರ್ಮಾಣ ಮಾಡಿ ಅಂದಾಗ ತುಮಕೂರು ಜಿಲ್ಲೆಯಲ್ಲಾಗಿರುವ ತೀರ್ಮಾನ ಸಾರ್ ನಾವು ಗೋಶಾಲೆ ಮಾತ್ರ ಮಾಡಬೇಕು fodder assistanceಗೆ ಅವರು ಒಪ್ಪಿಲ್ಲ ಅಂತ ಸ್ಪಷ್ಟವಾಗಿ ಹೇಳಿರುವುದರ ಮಾಹಿತಿ ತಾವು ತರಿಸಬೇಕು ಹಿಂದೆಯೆಲ್ಲ ಲಾರಿ ಬಾಡಿಗೇನೋ ಮತ್ತೊಂದೋ ನಾವೇ ಕೊಟ್ಟುಬಿಟ್ಟು ಎಲ್ಲಿ ಮೇವಿದೆಯೋ ಅಲ್ಲಿಂದ ತರಿಸಲಾದರೂ ಮಾಡುತ್ತಿದ್ದೆವು ಅದೇನಾದರೂ ಮಾಡಿದಿರಾ? ಇವತ್ತಿನ ತನಕ ಆಗಿಲ್ಲ,

ಶ್ರೀ ಎಂ ಪಿ ಪ್ರಕಾಶ್ ನೋಡಿ, ಅಗತ್ಯ ಪ್ರೋತ್ಸಾಹಿಕ ಕ್ರಮಗಳನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳುವುದು, ಮೇವು ಕೊರತೆ ಇರುವ ಕಡೆಗೆ ಜಿಲ್ಲಾಧಿಕಾರಿಗಳು ಮೇವು ಖರೀದಿಸುವುದು ಹಾಗೂ ಸಾಗಾಣಿಕೆ ವೆಚ್ಚವನ್ನು

ಸರ್ಕಾರದ ಆದೇಶ ಸಂಖ್ಯೆ 311, 20–6–2003 ರಂತೆ CRF ಅಡಿ ಭರಿಸುವುದು, ಸರ್ಕಾರದ ಆದೇಶ ಸಂಖ್ಯೆ 91, 2003, 20–1–2004ರಲ್ಲಿ ನಿಗದಿಗೊಳಿಸಿದ ದರವನ್ನೇ ಮುಂದುವರೆಸುವುದು, ಮೇವು ಬ್ಯಾಂಕ್ ಗಳಿಂದ ಮೇವು ವಿತರಿಸುವುದು, ಹೊರರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡುವುದನ್ನು ಜಿಲ್ಲಾಧಿ ಕಾರಿಗಳು ನಿರ್ಬಂಧಿಸುವುದು ಆದ್ದರಿಂದ ಮೇವಿಗೆ ಸಂಬಂಧಪಟ್ಟಂತೆ ರೇಟನ್ನು ಹಾಕಿ 1500 ರೂಗಳಿಗೆ ಮೆಕ್ಕೆ ಜೋಳದ ದಿಂಡು ಕೊಳ್ಳುವುದು, ಹುಲ್ಲು ಮೊದಲಾದವಕ್ಕೆ ಟನ್ನಿಗೆ 2000 ರೂನಂತೆ ಖರೀದಿ ಮಾಡಬೇಕು ಅಂತ ನಿರ್ಧಾರ ಮಾಡಿ ಅವರಿಗೆ ಅಧಿಕಾರ ಕೊಟ್ಟು ಹಣವನ್ನೂ ಕೊಟ್ಟಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ನಮಗೆ ಈವರೆಗೆ ಅದು communicate ಆಗಿಲ್ಲ, atleast ನಾವು serious ಆಗಿ ತಗೊಳೋರು, ನಾವು ರೈತರ ಮನೇಲಿರೋರು, ಹಳ್ಳಿಗಳಲ್ಲಿ ಬದುಕಿರೋರು, ಜಾನುವಾರುಗಳನ್ನು ಕಟ್ಟಿಕೊಂಡಿರೋರು, ಆ ಕಷ್ಟ ನಮಗೆ ಗೊತ್ತಿದೆ If cattle population is lost one third of the income of the family is lost ಅಂತ ತಿಳಿದುಕೊಂಡಿರುವವರು ನಾವು ಎರಡು ವರ್ಷಗಳ ಹಿಂದೆ ಭಾಷಣ ಮಾಡುವಾಗ ನಾನು ಹೇಳಿದ್ದೇನೆ, ಈ ವರ್ಷ ಜಾನುವಾರುಗಳನ್ನು 5 ಸಾವಿರ 4 ಸಾವಿರಕ್ಕೆ ಮಾರುತ್ತಿದ್ದೀರಿ ರೈತರು ಇನ್ನು ಎರಡು ವರ್ಷಕ್ಕೆ 20 ಸಾವಿರಕ್ಕೆ ಅದನ್ನೇ ಕೊಂಡುಕೊಂಡು ಬರಬೇಕು ಅಂತ ಆ ಸ್ಥಿತಿ ನಿರ್ಮಾಣವಾಗಿದೆ ಇವತ್ತು, ಮನುಷ್ಯರು manage ಆಗುತ್ತಿದ್ದಾರೆ, ಪಶುಸಂಪತ್ತು ಇವತ್ತು ರಾಜ್ಯದಲ್ಲಿ ನಾಶವಾಗಿಹೋಗುತ್ತಿದೆ

ಶ್ರೀ ಕೆ ಆರ್ ರಮೇಶ ಕುಮಾರ್ ನಮ್ಮಲ್ಲಿ ಹೆಚ್ಚು ಹೈನುಗಾರಿಕೆ ಮಾಡುತ್ತೇವೆ ಅದಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿರುತ್ತೇವೆ ಅಲ್ಲಿ ಇಲ್ಲಿ 5–10 ಗುಂಟೆ green fodder ಹಾಕಿಕೊಂಡಿರುತ್ತೇವೆ ಕೆಲವು ಕಡೆ ಹೆಚ್ಚು ಹನಿ ಬಿದ್ದ ಕಡೆ horse gram ಬೆಳೆದುಕೊಂಡು ಅದನ್ನು ಸ್ಟೋರ್ ಮಾಡಿ ಕೊಂಡಿದ್ದೇವೆ ರೈತನ ಪಡಿಪಾಟಲು ಅಂದ್ರೆ he undertakes so many experiments to protect himself against this ನಮಗೆ ತೊಂದರೆ ಎಲ್ಲಿ ಬರುತ್ತದೆ ಅಂದ್ರೆ ಶೇಂಗ ಬೆಳೆದಿಲ್ಲ, ರಾಗಿ ಆಗಿಲ್ಲ, ಅದೇ major fodder, other than cross breed cows ನಾಟಿ ಯಾವುವಿವೆ ಅವುಗಳಿಗೆ ಇಲ್ಲಿ ಮೇವಿಲ್ಲ ಬೆಳೆ ಆಗಿಲ್ಲ, haystack ಇಲ್ಲ ನಮ್ಮ ಹತ್ತಿರ, ಇದನ್ನು ಅದಕ್ಕೆ ಹಾಕಿ ಸಾಕಲು ಆಗುವುದಿಲ್ಲ Commercially it is not viable ಜಿಲ್ಲಾಧಿಕಾರಿಗಳಿಗೆ ಈ

classification ಎಲ್ಲ ಹೇಗೆ ಗೊತ್ತಾಗಬೇಕು ಹೇಳಿ, ಅವರು ಡೆಹ್ರಾಡೂನ್ ನಲ್ಲಿ ಪರೀಕ್ಷೆ ಮಾಡಿ ಬಂದವರು Somewhere down the line ಇದರ ಬಗ್ಗೆ ಕಾಳಜಿ, ಒಂಚೂರು involvement ಇರೋರು ಇದ್ದರೆ ಸಮನ್ವ coordination ಬೇಕು ಎಂದು ಅವರದು ಇವರದು ಮಾಡಿ not that ಅವರನ್ನು ಡಿಸ್ಕಾರ್ಡ್ ಮಾಡಿಬಿಡೋಣ ಅಂತ ಅಲ್ಲ ಅವರ ಮೇಲೆ aspersions caste ಮಾಡಿ ಅಂತ ನಾನು ಹೇಳುವುದಿಲ್ಲ ಅವರಿಂದ ಇದನ್ನೆಲ್ಲ ನಿರೀಕ್ಷೆ ಮಾಡುವುದು ನಮಗೂ ಕೂಡ ಟೂ ಮಚ್ ಆಗಿಬಿಡುತ್ತದೆ It is a crisis All of us will have to collectively put our efforts together to manage the crisis

ಶ್ರೀ ಜೆ ಸಿ ಮಾಧುಸ್ವಾಮಿ ಈ ಗೋಶಾಲೆ ವಿಚಾರ ಯಾರು ಇವರ್ ತಲೆಗೆ ತಂದರೋ ನಮಗೆ ಅರ್ಧವಾಗುವುದಿಲ್ಲ ಈ ಗೋಶಾಲೆಯನ್ನು ನೀವ್ಯಾಕೆ compulsory ಮಾಡುತ್ತೀರಿ, 5 ಸಾವಿರ ರಾಸು ಕೂಡಿಕೊಂಡು ನೀರು ಕೊಡುವ ಸ್ಥಳ ಇದೆಯೆ? ಮೇವು ಕೊಡುವ ಸ್ಥಳ ಇದೆಯೆ? Animal health care ತಗೊಳೋ ಸ್ಥಳ ಇದೆಯೆ? ರೈತರು ನಿಜವಾಗಿ ರಾಸು ಕೊಡುತ್ತಿಲ್ಲ, ನಾನೇನು ನಿಮ್ಮನ್ನು accuse ಮಾಡಬೇಕಾಗಿಲ್ಲ ಇವತ್ತಿನವರೆಗೆ ಮೇವು ತರೋರ್ಗೆ ಸ್ಕೋಪ್ ಕೊಟ್ಟಿಲ್ಲ, ಇವತ್ತಿನವರೆಗೆ ಒಂದು ಬಿಲ್ ಮಾಡಿಲ್ಲ ನಮಗ್ಯಾರಿಗೂ ಇವತ್ತಿನವರೆಗೂ ನೀವು ರೈತರಿಗೆ ಹೇಳಿ ನಾವು ಕೊಡುತ್ತೇವೆ ಅಂತ ಹೇಳಿಲ್ಲ ಸೊಸೈಟಿ ಅಧವ Animal husbandry department ಮೂಲಕ ನಾವು ಕೊಟ್ಟಿರುವ ಹಣದಿಂದ ಪ್ರಾಜೆಕ್ಟ ಮಾಡಿ ಒಂದಷ್ಟು ಬೀಜ ಕೊಟ್ಟಿದ್ದೇವೆ, ಇಲ್ಲ ಅಂತ ಹೇಳುವುದಿಲ್ಲ, ಮೇವು ಬೆಳೆದುಕೊಳ್ರಪ್ಪ ಅಂತ, ಎಷ್ಟು ಜನರಿಗೆ ಕೊಡುತ್ತೀರಿ ನೀವು, 50, 60 ಭಾರಿ ಅಂದ್ರೆ 100 familyಗೆ ಕೊಡುತ್ತೀರಿ, ಅಷ್ಟು ಬಿಟ್ಟು ಮೇವಿಗೆ substitute ಮಾಡುವುದನ್ನು ನೀವು ಯೋಚನೇನೆ ಮಾಡಿಲ್ಲ It is your duty ನಿಮ್ಮ ಕೆಲಸ, ಮೇವು ಎಲ್ಲಿದೆ, ಯಾವ ಜಿಲ್ಲೆಯಿಂದ ಎಲ್ಲಿಗೆ ತರಬೇಕು ಯಾರ್‍ಯಾರು ಎಲ್ಲಿಗೆ ಹೋಗಬೇಕು ಅಂತ ಏನಾದರೂ ಒಂದು ಕಾರ್ಯಕ್ರಮ ಮಾಡಬೇಕಲ್ಲ, ಅದರ ಸಾರಿಗೆ ವೆಚ್ಚವಾದರೂ ಕೊಡಬೇಕಲ್ಲ ನೀವು, ಇವತ್ತು ಏನಾಗಿದೆ? ಮನುಷ್ಯರು ಹೇಗೋ ನಿಭಾಯಿಸಿಕೊಂಡು ಹೋಗುತ್ತಾರೆ ಪ್ರಾಣಿ ಪಕ್ಷಿಗಳ ಸ್ಥಿತಿಯೇನು ಅಂತ ಯಾರೂ ಯೋಚನೆ ಮಾಡಲಿಲ್ಲ ಯಾವ ಹಂತದಲ್ಲೂ ಅದರ ಬಗ್ಗೆ ಚರ್ಚೆ ನಡೆದಿಲ್ಲ ಈಗ ಸುಮ್ಮನೆ ಕೋಟಿ ಕೋಟಿ, ಯಾಕೆ ಈ ದೃಷ್ಟಾಂತ ರಾಜ್ಯಕ್ಕೆ

ಬಂತೋ ಗೊತ್ತಿಲ್ಲ ಎಲ್ಲರೂ ಕೋಟಿಯಲ್ಲೇ ಮಾತನಾಡುವುದು, ಕೆಲಸದಲ್ಲಿ ಯಾರೂ ಮಾತನಾಡುತ್ತಿಲ್ಲ ಈಗ, ಏನ್ರೀ ಬೆಲೆಯಿದೆ ನಿಮ್ಮ ಕೋಟಿಗೆ ಈಗ, your money is not money today It is currency It is not money Even dollar is not money It is currency Both of them have lost their value ಕೋಟಿ ಕೋಟಿ, ಆಗುತ್ರೀ, ನಿಮ್ಮ money value ಅಲ್ಲಿಗೆ ಬಂದಿದೆ, 10 ವರ್ಷದ ಹಿಂದೆ ಲಕ್ಷ ಇದ್ದುದು ಇವತ್ತು 10 12 ಲಕ್ಷಕ್ಕೆ ಬಂದಿದೆ ನಿಮ್ಮ ಸರ್ಕಾರ ದೊಡ್ಡ ಸಾಧನೆ ಮಾಡಲಿಲ್ಲ ಇಷ್ಟು ಕೋಟಿ ಖರ್ಚು ಮಾಡಿಬಿಟ್ಟೆವು ಅಂತ ಹೇಳಿಕೊಂಡಾಗ, ಎಲ್ಲಿಗೆ ಕೊಟ್ಟಿದ್ದೀರಿ ಕೋಟಿಗಳನ್ನು, ಏನು ಪ್ರಾಜೆಕ್ಟಾಗುತ್ತದೆ ಅದರಿಂದ, ಶರಾವತಿ ಡ್ಯಾಮ್ ಕಟ್ಟಿದಾಗ ಎಷ್ಟುಖರ್ಚಾಗಿತ್ತು, ಈಗ ಅಂತಹ ಡ್ಯಾಂ ಕಟ್ಟಲು ಎಷ್ಟು ಖರ್ಚು ಆಗುತ್ತದೆ ಅಂತ compare ಮಾಡಿ, ದಯವಿಟ್ಟು ಹೀಗೆ ಕೋಟಿಗಳಲ್ಲಿ ಹೇಳುವುದನ್ನು ನಿಲ್ಲಿಸಿಬಿಟ್ಟರೆ ರಾಜ್ಯಕ್ಕೊಂದು ಸತ್‌ಗತಿ ಸಿಗುತ್ತದೆ ಮಾತು ಎತ್ತಿದರೆ ಕೋಟಿ, ಕೋಟಿ ನಮಗೆ ಸಣ್ಣದು ಗೊತ್ತಾಗುವುದಿಲ್ಲ, ನಾವು ರೈತರು ಎಂದು ಹೇಳಿ ಏನಾಗಿದೆ ನಿಮ್ಮ ಕೋಟಿಯಲ್ಲಿ ಎಂದು ಹೇಳಬೇಕಲ್ಲ ಏನು ಆಗುವ ಹಾಗೆ ಇಲ್ಲ ಸಾರ್ ಕೋಟಿಯಲ್ಲಿ ಒಂದು ಕಿಲೋ ಮೀಟರ್ ನಾಲೆಯನ್ನು ಮಾಡುವುದಕ್ಕೆ ಐದಾರು ಏಳು ಕೋಟಿ ಖರ್ಚಾಗುವ ಕಾಲ ಇದು ಏನಾಗಿದೆ? ನಿಮ್ಮ ನಬಾರ್ಡ್ ರೋಡು 30–35 ಲಕ್ಷ ಒಂದು ಕಿಲೋಮೀಟರ್‌ಗೆ ಖರ್ಚಾಗುತ್ತಿರುವ ಕಾಲ ಇದು ಪಕ್ಕಾ ರೋಡು ಮಾಡಬೇಕೆಂದರೆ ಒಂದು ಕೋಟಿ ಖರ್ಚು ಮಾಡುತ್ತಿರುವ ಕಾಲವಿದು ನಾಲ್ಕು ಲಕ್ಷ ರೂಪಾಯಿಗಳನ್ನು ನಾವು ಎಂಎಲ್‌ಎಗಳಾದಾಗ ಖರ್ಚು ಮಾಡುತ್ತಿದ್ದ ರೋಡಿಗೆ ಇವತ್ತು ನೀವು 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಕಾಲವಿದು ಕೋಟಿ ಕೋಟಿ ಕೋಟಿ ಎಂದು ಹೇಳಿ ನಿಮ್ಮ Finance Minister ಎಲ್ಲ ಕೋಟಿಗಳಲ್ಲೇ ಹೇಳಿ ನಮಗೆಲ್ಲಾ ಸಿನಿಮಾ ನಟಿಯರನ್ನು ತೋರಿಸಿ ಮನೆಯವರನ್ನೇ ಮರೆಸಿದರೆ ಗತಿಯೇನು? ಇವತ್ತು practical ಆಗಿ ಹೇಳಿ ಎಷ್ಟು potentialನ್ನು physical ಆಗಿ ತಾವು create ಮಾಡಿದಿರಿ ಎಂದು ಹೇಳಿ ಎಷ್ಟು ಲಕ್ಷ ಎಕರೆ ಯನ್ನು ತಾವು protective irrigation ಕೆಳಗೆ 10–15 ವರ್ಷದಿಂದ ತಂದಿದ್ದೀರಿ ಎಂದು ಹೇಳಿ Not even a single acre Tribunal ಇದೆ, ಅದು ಇದೆ, ಇದು ಇದೆ, distributaries ಮಾಡುವ ಹಾಗೆ ಇಲ್ಲ, ಯಾರು prevent ಮಾಡಿದರು ಸಾರ್ ನಿಮಗೆ ಎರಡು–ಮೂರು

ಜಿಲ್ಲೆಗಳಲ್ಲಿ protective irrigation ಅನ್ನು ಈ ರಾಜ್ಯದಲ್ಲಿ ಕೊಡುವುದಕ್ಕೆ ಸಾಧ್ಯ ಇತ್ತು ಬೇರೆ ಕಾರ್ಯಕ್ರಮಗಳಿಗೆ ಇತಿಶ್ರೀ ಹಾಡಿ ರೈತರ ನೆರವಿಗೆ ಬರಬೇಕಾಗಿತ್ತು ರೈತರೊಬ್ಬರೇ ಉಳಿದುಕೊಳ್ಳುತ್ತಿರಲಿಲ್ಲ ರೈತರು ನಂಬಿದ ಕಸುಬು ಉಳಿಯುತ್ತಿತ್ತು ಅಲ್ಲಿಯ ಕಸುಬುದಾರರು ಉಳಿಯುತ್ತಿದ್ದರು ಈ ಬೆಂಗಳೂರಿಗೆ ವಲಸೆ ಬರುವವರು ಉಳಿಯುತ್ತಿದ್ದರು ನಿಮ್ಮ garments factories ಏನಿದೆ, ಆ ಕಡೆ shift ಆಗುತ್ತಿತ್ತು ಆಗ ಮಾಡಲಿಲ್ಲ Entire ಜನಾಂಗ ಮೊದಲು ನಮ್ಮ ಕಡೆ ಸಕಲೇಶಪುರದ ಕಡೆಗೆ ವಲಸೆ ಹೋಗುತ್ತಿದ್ದರು Plantationನಲ್ಲಿ ಒಳ್ಳೆಯ rate ಸಿಗುತ್ತೆ ಎಂದು ನಮ್ಮವರು ಸಕಲೇಶಪುರದವರು ಎಲ್ಲಾ ಸೇರಿ ಬೆಂಗಳೂರು ಪೀಣ್ಯಾಗೆ ಬರುತ್ತಿದ್ದಾರೆ ಯಾರಿಗಾದರೂ ಕೇಳಿ ಬೊಮ್ಮಸಂದ್ರ, ಪೀಣ್ಯ ಇಡೀ ತುಮಕೂರು, ಹಾಸನದಲ್ಲಿರುವವರು ಈ ಕಡೆ shift ಆಗುತ್ತಿದ್ದಾರೆ ಎರಡನೆಯದು ಏನಾಗಿದೆ ಸಾರ್, ನಿಮ್ಮ ಕಾರ್ಯಕ್ರಮಗಳೆಲ್ಲ ಹಳದಿ ಕಾರ್ಡ್ ಮೇಲೆ ನಿಂತಿದೆ ಬೀಜ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡ್ ಅಕ್ಕಿ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡು ಔಷಧಿ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡು What is the fate of middle class? Middle class ಸ್ಥಿತಿ agriculture ಅನ್ನು ನೆಚ್ಚಿಕೊಂಡಿರುವ ಸ್ಥಿತಿಯೇನು ಎಂದು ಇಲ್ಲಿ ಯಾರಿಗಾದರೂ ಹೇಳಿ ಯಾವ ರಾಷ್ಟ್ರ middle classಗೆ ಹೆಸರಾಗಿತ್ತೋ ಆ ರಾಷ್ಟ್ರದಲ್ಲಿ middle class ಅನ್ನು ನಿರ್ನಾಮ ಮಾಡಿ Poor class ಕೆಳಗೆ ತಾವು ಇವತ್ತು ಸೇರಿಸುತ್ತಿದ್ದೀರಿ We are forced to go as poor class tomorrow ನಮಗೆ remuneration ಇಲ್ಲ ನಾನು ಇವತ್ತು ಕೊಬ್ಬರಿ ಮಾರಬೇಕೆಂದರೂ ಕೂಡ 30 ಕ್ವಿಂಟಾಲ್ ಮೇಲೆ ಮಾರುವ ಹಾಗೆ ಇಲ್ಲ ಸಾರ್ 30 ಕ್ವಿಂಟಾಲ್ ವರೆಗೆ ನನಗೆ ನಿಮ್ಮ subsidy ಆಮೇಲೆ ಇಲ್ಲ ನಮ್ಮ ಮನೆಯಲ್ಲಿ ಯಾರಾದರೂ cycle ಮೇಲೆ ಓಡಾಡುವ ಹಾಗೆ ಇಲ್ಲ ನಾನೊಂದು ಹಳದಿ ಕಾರ್ಡನ್ನು ತೆಗೆದುಕೊಳ್ಳಲೇಬೇಕು ಔಷಧಿ ಬೇಕಾದರೂ ನಾನು ಹಳದಿ ಕಾರ್ಡನ್ನು ತೆಗೆದುಕೊಳ್ಳಲೇಬೇಕು ನಾನು ಬೆಳಿಗ್ಗೆ ಮಾತನಾಡೋಣವೆಂದಿದ್ದೆ ಯಾರಿಗೆ ಕೊಡುತ್ತಿದ್ದೀರಿ ಔಷಧಿಯನ್ನು? ಹಳದಿ ಕಾರ್ಡ್‌ನವರಿಗೆ ಮಾತ್ರ ಈ ಸ್ಥಿತಿಯನ್ನು ರಾಜ್ಯದಲ್ಲಿ ನಿರ್ಮಾಣ ಮಾಡಿ which was middle class in rural areas you are killing them ಏನು ಮಾಡಲಿಲ್ಲ ಸುಮ್ಮನೆ ಒಂದು ಕೈಮಸುಕು ಮದ್ದು ಹಾಕಿಬಿಟ್ಟಿರಿ ಬಾಯಿತುಂಬ ಅವರಿಗೆ TV ನೋಡುವುದು,

ಸಾಲ ಮನ್ನಾ ಮಾಡುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿ ಅದರಲ್ಲೇ ಅವರು ನಮ್ಮ ಉದ್ಧಾರ ಇದೆ ಎಂದು ತಿಳಿದುಕೊಂಡುಬಿಟ್ಟರು ಅಷ್ಟೇ ಕಾರ್ಯಕ್ರಮವನ್ನು ಅವರಿಗೆ ಕೊಡುವ ಗೋಜಿಗೆ ಹೋಗಲಿಲ್ಲ ನೀವು ಎಷ್ಟು ಮನ್ನಾ ಆಗುತ್ತೋ ಏನಾಗುತ್ತೋ ಅದನ್ನು ಹೇಳಲಿಲ್ಲ ನೀವು ಖುಷಿ ಏನಾದರೂ ಸಾಲ ಮಾಡಿಕೊಬಹುದು, ಇವರು ಮನ್ನಾ ಮಾಡಿಬಿಡುತ್ತಾರೆ ನಾನೆಲ್ಲೋ ಓದುತ್ತಿದ್ದೆ why we want to be rich ಎನ್ನುವ ಒಂದು ಪುಸ್ತಕವನ್ನು ಬರೆದಿದ್ದಾರೆ, ತಾವು ತೆಗೆದುಕೊಂಡು ಓದಿ ಒಂದು basic ಅನ್ನು ಅವನು ಹೇಳುತ್ತಾನೆ ನಿನಗೆ ಏನೂ ತಿಳಿಯದಿದ್ದರೆ clear your debts, have some savings, ನಿನಗೆ capacity ಇದ್ದರೆ risk ತೆಗೆದುಕೊಳ್ಳುವ ಹಾಗೆ ಇದ್ದರೆ have some investment Investment ಮಾಡುವ ಶಕ್ತಿ ಇದ್ದರೆ ನಿನ್ನ ಕೈಯಲ್ಲಿ ಮಾಡು ನಿನ್ನ ಕೈಯಲ್ಲಿ ಏನೂ ಮಾಡುವುದಕ್ಕಾಗದಿದ್ದರೆ debts ಅನ್ನು clear ಮಾಡಿಕೊಂಡುಬಿಡು ಸಾಲ ಮಾಡಬೇಡ ಸ್ವಲ್ಪ ಎಲ್ಲಾದರೂ saving ಮಾಡಿಕೊ ಒಂದು ಹತ್ತು ವರ್ಷ ತಳ್ಳುತ್ತೀಯಾ ಎಂದು ಹೇಳುತ್ತಾನೆ Even that savings value zero ಆಗುತ್ತೆ ನಿನಗೆ ಹತ್ತು ವರ್ಷ ಆದಮೇಲೆ money valueನಲ್ಲಿ But you are bound to do that ಎಂದು ಅಧಿಕಾರವನ್ನು ನಮಗೆ ಬಿಡಿ ಪ್ರಕಾಶ್ ರವರೆ ಸಾಲ ಮಾಡುವ ಚಟವನ್ನು ಏತಕ್ಕೆ ತಂದು ಹಳ್ಳಿಯವರಿಗೆ ತುಂಬುತ್ತಿದ್ದೀರಿ? ಯಾರು ಕೇಳಿದ್ದರು ನಿಮಗೆ? ಬರೀ ಸಾಲ, ಸಾಲ ಸಾಲ ಮಾಡು, ವಜಾ ಮಾಡು ಎಂದು ಕಾಯ್ದುಕೊಂಡು ಕೂತುಕೊ Institutions ಅನ್ನು ನಿರ್ನಾಮ ಮಾಡುತ್ತಿದ್ದೀರಿ, Familyಗಳನ್ನು ನಿರ್ನಾಮ ಮಾಡುತ್ತಿದ್ದೀರಿ, Laziness ಅನ್ನು hundred percent ತಂದಿಟ್ಟಿದ್ದೀರಿ ಈ ಕಾರ್ಯಕ್ರಮಗಳನ್ನು ತಾವು ಯೋಚನೆ ಮಾಡಬೇಕು ಪಕ್ಷ, ಸರ್ಕಾರ ಇಲ್ಲ ಈ ವರ್ಷದಷ್ಟು ಅಸಡ್ಡೆ, ಬರವನ್ನು ಎದುರಿಸುವುದಕ್ಕೆ ಯಾವ ವರ್ಷವೂ ನಡೆದಿದ್ದು ನೋಡಲಿಲ್ಲ ತಾವು ತುಮಕೂರಿನಲ್ಲಿ meeting ಮಾಡಿ ಹೋದಿರಿ ಬೇರೆ ಪ್ರಶ್ನೆ ಆದರೆ ಅದೇ ಪ್ರಮಾಣದಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಚರ್ಚೆಯಾಗಿದೆಯಾ, Meeting ಆಗಿದೆಯಾ? Officers ಯಾರಾದರೂ ನಮ್ಮನ್ನು ಕೂಡಿಸಿಕೊಂಡು ಏನು ಮಾಡಬೇಕೆಂದು ಕೇಳಿದ್ದಾರಾ? We are the Chairmen of the taluk relief committees ಅವರು ಕೊಟ್ಟಿರುವುದು ಅಧಿಕಾರ ಅದು constitute ಆಗಿದೆಯಾ? ಯಾವ ಯಾವ

programme ಮಾಡುತ್ತಿದ್ದೀರಿ, ಎಲ್ಲಿ labour ಇದ್ದಾರೆಂದು ಗೊತ್ತಿದೆಯಾ? ನಿಮಗೆ ಯಾವ ಊರಿನಲ್ಲಿ ಕೆಲಸವಾಗುತ್ತಿದೆ? ಗೊತ್ತಿದೆಯಾ? ಏನೂ ಚರ್ಚೆಯಾಗಿಲ್ಲ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ, ಬಿಡುಗಡೆ ಮಾಡಿದ್ದೇವೆ, ಒಂದೊಂದು ಜಿಲ್ಲೆಗೆ ಒಬ್ಬೊಬ್ಬರು Secretary cadre officerಗಳನ್ನು ಹಾಕಿದ್ದೀರಿ ಪಾಪ, ಅವರು ತೋರಿಸಿದ್ದನ್ನು ನೋಡಿಕೊಂಡು ಬರುತ್ತಾರೆ ಅವರೇನು ಎಲ್ಲ ಹಳ್ಳಿಗಳನ್ನು ನೋಡಿರುತ್ತಾರಾ? ಇದರಿಂದ ತಾವು ರೈತರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದಿದ್ದೀರಿ ಎಂದು ಭಾವಿಸುವುದಕ್ಕಾಗುವುದಿಲ್ಲ You have utterly failed in implementing drought programmes ಎರಡನೆಯದು, ನಮಗೆ ನೋವಿದೆ, ಕೇಂದ್ರ ಸರ್ಕಾರ ಕೂಡ ಈ ವರ್ಷ ರಾಜ್ಯದ ನೆರವಿಗೆ ಅಷ್ಟಾಗಿ ಬಂದಿಲ್ಲ ಅದೇನೊ ನಿಮ್ಮ failure ಅಥವಾ ರಾಜಕೀಯ ಕಾರಣವೋ, ನಾವು ಅದನ್ನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ ಒಂದನ್ನು ತಾವು ಯೋಚನೆ ಮಾಡಬೇಕು ಕರ್ನಾಟಕದಲ್ಲಿ Horticulture ನಿರ್ನಾಮವಾಗುವ ಒಂದು ಸ್ಥಿತಿ ನಿರ್ಮಾಣವಾಗಿದೆ ಕರ್ನಾಟಕಕ್ಕೇನಾದರೂ agricultureನಲ್ಲಿ ಒಂದು ಪ್ರೌಢಿಮೆ ಇದ್ದಿದ್ದರೆ, ಹಿರಿಮೆ ಇದ್ದಿದ್ದರೆ ನಾವು Horticultureನಲ್ಲಿ ಮುಂದೆ ಇದ್ದೆವು ಎಂದು ಇತ್ತು ಎಲ್ಲಾ ರಾಜ್ಯಗಳೂ horticultureನಲ್ಲಿ progress ಮಾಡುತ್ತಿದ್ದರೆ ನಾವು ಹಿಂದೆ ಬರುತ್ತಿದ್ದೇವೆ ತಾವು ಮಾಹಿತಿಯನ್ನು ತರಿಸಿ ನೋಡಿ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ನಾವು ಮಾವಿನ ಹಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದವರು ಇವತ್ತು ಯಾರೂ ತೆಗೆದುಕೊಂಡು ಹೋಗುವುದಿಲ್ಲ ಸಾರ್ ಕೋಲಾರದಿಂದ ಪೂನಾಗೆ ಮಾವಿನ ಹಣ್ಣು ರಫ್ತು ಆಗುತ್ತಿತ್ತು ಇವತ್ತು ಯಾರೂ ತೆಗೆದುಕೊಂಡು ಹೋಗುವುದಿಲ್ಲ ತಿಪಟೂರು ಕೊಬ್ಬರಿ ಬಿಟ್ಟರೆ ಕೊಬ್ಬರಿಯೇ ಇಲ್ಲ ಎನ್ನುವ ಸ್ಥಿತಿ ಇದ್ದುದು ಇವತ್ತು ಯಾರೂ ಕೇಳುವುದಿಲ್ಲ ನಿಮ್ಮ ಬಿಜಾಪುರ ಬಿಟ್ಟರೆ ಒಳ್ಳೆಯ ದ್ರಾಕ್ಷಿ ಇಲ್ಲಿ ಆಗುತ್ತಿದ್ದುದು ಇವತ್ತು ಯಾರೂ ಕೇಳುವುದಿಲ್ಲ ನಿಮ್ಮ ದಾಳಿಂಬೆಯನ್ನು ಇವತ್ತು ಯಾರೂ ಕೇಳುತ್ತಿಲ್ಲ ವಾಸ್ತವವಾಗಿ ಕೇಳುತ್ತಿಲ್ಲ Why? ನಮ್ಮನ್ನು model ಮಾಡಿಕೊಂಡು ಅವರು ಕಲಿತುಕೊಂಡರು ನಾವು ನಿಂತಲ್ಲೇ ನಿಂತೆವು ಅದವಾ ಕೆಳಕ್ಕೆ ಬಂದೆವು Again ನಾನು quote ಮಾಡುತ್ತೇನೆ, ಒಂದು ಕಾಲವಿತ್ತು Green revolution ಆಗಬೇಕು, Production ಜಾಸ್ತಿಯಾಗಬೇಕು ಎಂದು ಇವತ್ತು ನೀವು ಯೋಚನೆ ಮಾಡಬೇಕಾಗಿದೆ Per year per acre productionನ್ನು ನೀವು ಜಾಸ್ತಿ ಮಾಡಬೇಕು And without chemical farming ಇವತ್ತು ಮಾಡಬೇಕು ಏನಾದರೂ thinking ಇದೆಯಾ? ಈ ಸರ್ಕಾರಕ್ಕೇನಾದರೂ ಆಲೋಚನೆ ಇದೆಯಾ? ಭೂಮಿಯನ್ನು ವಿಸ್ತಾರ ಮಾಡುವುದಕ್ಕಾಗುವುದಿಲ್ಲ ಜನಸಂಖ್ಯೆಯನ್ನು ತಾವು ಕುಗ್ಗಿಸುವುದಕ್ಕಾಗುವುದಿಲ್ಲ Production ಅಷ್ಟೇ ಇದ್ದರೆ ನಿಮಗೆ ಆಗುವುದೇ ಇಲ್ಲ Every year ಒಂದೊಂದು ಲಕ್ಷ ಟನ್ production ಕರ್ನಾಟಕದಲ್ಲಿ ಕಡಿಮೆಯಾಗುತ್ತಿದೆ ಎಲ್ಲಿಯಾದರೂ ನೀವು ಯೋಚನೆಯನ್ನು ಮಾಡಿದ್ದೀರಾ? ಎಲ್ಲಾದರೂ ಕೂತು ಮಂತ್ರಿಗಳಾಗಿದ್ದೇವೆ, ಜನಗಳ ಋಣದಲ್ಲಿ ಇದ್ದೇವೆ ನಾವು, ನಾವೇನಾದರೂ ಅವರ ಋಣವನ್ನು ತೀರಿಸದೇ ಹೋದರ ಪಾತಕಿಗಳಾಗುತ್ತೇವೆನ್ನುವ ಭಾವನೆ ಇದೆಯಾ? ನಾನು ಹೇಳಲಿಲ್ಲ ಈ ಮಾತನ್ನು ವಿವೇಕಾನಂದರು ಹೇಳಿದ್ದು ಎಲ್ಲಿಯವರೆಗೆ ಈ ದೇಶದ ವಿದ್ಯಾವಂತ ಈ ದೇಶದ ಅನಕ್ಷರತೆ ಬಡತನವನ್ನು ನಿರ್ಮೂಲನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುವುದಿಲ್ಲ, ಅಲ್ಲಿಯವರೆಗೆ ನಾನು ಅವನನ್ನು traitor ಎಂದು ಕರೆಯುತ್ತೇನೆ I have every right to quote Vivekananda here We have all become traitors ನಾವೆಲ್ಲ ಇವತ್ತು ಜನಗಳಿಗೆ traitorsಗಳಾಗಿದ್ದೇವೆ ಅವರ vote ಹಾಕಿಸಿಕೊಂಡು ಬಂದು ಇವತ್ತು ನಾವು AC ಕೆಳಗೆ ಕುಳಿತುಕೊಳ್ಳುತ್ತೇವೆ ಅವರ vote ಹಾಕಿಸಿಕೊಂಡು 50–60 ಸಾವಿರ ದುಡ್ಡನ್ನು ತೆಗೆದುಕೊಳ್ಳುತ್ತೇವೆ, ಅವನ ಋಣವನ್ನು ತೀರಿಸುವುದಕ್ಕೆ ನಾವೇನು ಮಾಡುತ್ತಿದ್ದೇವೆಂದರೆ big zero ನಮ್ಮದೇ ಕಲಹ ನಮ್ಮದೇ ವ್ಯಾಜ್ಯ ನಮ್ಮದೇ ತೆವಲು ನಮ್ಮದೇ ತೀಟೆ ಇಷ್ಟಕ್ಕೆ ನಾವೆಲ್ಲ MLA, ಮಂತ್ರಿಗಳಾಗಿ ಕೆಲಸವನ್ನು ಮಾಡಬೇಕಾಗಿದೆಯಾ? ಮಾಡಲಿಲ್ಲ ದಯಮಾಡಿ ಹೇಗಾದರೂ ಮಾಡಿ ತಾವು ಈ ಕಡೆ ಆಲೋಚನೆಯನ್ನು ಮಾಡಬೇಕು ನಾನು ತಮಗೆ advice ಮಾಡುವುದು ಈಗಲಾದರೂ ಕುಳಿತುಕೊಂಡು ಮೊದಲನೇ ಆದ್ಯತೆ ಮೇವಿಗೆ ಕೊಡಬೇಕು ಇಡೀ ಪ್ರಪಂಚದಲ್ಲಿ ಯಾವುದಾದರೂ ಉದ್ದಿಮೆ ಇದ್ದರೆ hundred percent ಬಂಡವಾಳವನ್ನು ಒಂದು ವರ್ಷಕ್ಕೆ ವಾಪಸ್ ಕೊಟ್ಟರೆ ಹಾಕಿರುವ ಮೂಲವಸ್ತುವನ್ನು ಇನ್ನೊಂದು ರೂಪದಲ್ಲಿ ನಮಗೆ ಲಾಭ ಮಾಡಿಕೊಟ್ಟರೆ ಅದು animal husbandry ಅಥವಾ ನಮ್ಮ poultry ಒಂದು ಹಸುವನ್ನು ಸಾಕಿದರೆ ಇನ್ನೊಂದು ಹಸುವನ್ನು ಮುಂದಿನ ವರ್ಷ ಕೊಡುವಂಥದ್ದು ಅಂಥ ಉದ್ದಿಮೆಯನ್ನು ನೀವು ನಾಶ ಮಾಡಿದರೆ

6 00 P M

production costನ್ನು ನೀವು agriculture sideನಲ್ಲಿ ಜಾಸ್ತಿ ಮಾಡುತ್ತಾ ಹೋದರೆ ಜನುಮದಲ್ಲಿ ನೀವು ರಾಜ್ಯದ ರೈತರಿಗೆ ನೀವು ನ್ಯಾಯವನ್ನು ದೊರಕಿಸಿಕೊಡುವುದಕ್ಕಾಗುವುದಿಲ್ಲ There is constraint for market ಯಾವುದೇ ವಸ್ತುವನ್ನು ಇಲ್ಲಿ ಬೆಳೆಯುತ್ತಾ ಹೋದರೆ production cost ಜಾಸ್ತಿಯಾಗುತ್ತಾ ಹೋದರೆ ಅಲ್ಲಿ ಮಾರಾಟವಾಗುವುದಿಲ್ಲ Subsidized ಮಾಡಬೇಕಾಗುತ್ತೆ ಈ ಕಡೆ ಆಲೋಚನೆ ಮಾಡಿದಾಗ ದಯಮಾಡಿ ಒಣಭೂಮಿ ಏನಿದೆ, ಬಯಲು ಪ್ರದೇಶ ಏನಿದೆ, ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಗಳೇನು ಇವೆ, ಅದನ್ನು ನೀವು ಒಂದು target groupನಲ್ಲಿಟ್ಟುಕೊಂಡು ಅದಕ್ಕೇನಾದರೂ treatment ಮಾಡುವ plan ಅನ್ನು ನೀವು ಮಾಡಲೇಬೇಕು ಎರಡನೆಯದು, ನಿಮ್ಮದು rain water harvesting Hundred percent ಕರ್ನಾಟಕದಲ್ಲಿ ನೀವು flop ಆಗಿದ್ದೀರಿ ನಾವು ಬಹಳ ಆಸೆಯನ್ನು ಇಟ್ಟುಕೊಂಡಿದ್ದೆವು Rain water harvesting ಅನ್ನು ತಂದುಬಿಟ್ಟಿರಿ, ಕೇಂದ್ರ ಸರ್ಕಾರದವರು ಬೇಕಾದಷ್ಟು subsidy ಕೊಟ್ಟರು ಎಂದು ಎಲ್ಲಿ ಶೇಖರಣೆಯಾಗಿದೆ ನೀರು? Schoolಗಳಿಗೆ ಮಾಡಿದರು ಎಲ್ಲಿಯೂ connect ಆಗಿಲ್ಲ ಮಳೆ ನೀರನ್ನು ಕೊಯ್ಲು ಮಾಡುತ್ತೇವೆ, ಮಳೆ ನೀರನ್ನು ಶೇಖರಣೆ ಮಾಡಿ ಇಡುತ್ತೇವೆ, ಬರಗಾಲದಲ್ಲಿ ಅಧವಾ ಬೇಸಿಗೆಯಲ್ಲಿ ಬಳಸುತ್ತೇವೆ ಎಂದಿದ್ದು 10% ಸಾದನೆ ಕೂಡ ಈ ರಾಜ್ಯದಲ್ಲಿ ಆಗಿಲ್ಲ ಮೂರನೆಯದು ಈ ಬರಗಾಲವನ್ನು face ಮಾಡಬೇಕಾಗಿದ್ದುದು making use of electricity, ಮಳೆ ಇಲ್ಲ ನೀರು ಹಾಯಿಸಲೇಬೇಕು Power utilize ಮಾಡಲೇಬೇಕು Complete stagnation Power cut ಅನ್ನು ಈ ದಶಕದಲ್ಲೇ ನೋಡದಷ್ಟನ್ನು ನೀವು ಸೃಷ್ಟಿಮಾಡಿಕೊಂಡಿದ್ದೀರಿ ಎಷ್ಟು ಬೇಜವಾಬ್ದಾರಿ ವರ್ತನೆ ಇಲ್ಲಿ ಆಗುತ್ತಿದೆ ಎಂದರೆ ಆ sub-committee ಅಧ್ಯಕ್ಷರು ಕೆಟ್ಟ ಹೆಸರು ಬರುತ್ತದೆಂದು ರಾಜೀನಾಮೆಯನ್ನು ಕೊಡುತ್ತಾರೆ ನಿಭಾಯಿಸುವುದಿಲ್ಲ Are you meant for this? ಅಂದವರು ಮಂತ್ರಿಗಿರಿಗೆ ರಾಜೀನಾಮೆಯನ್ನು ಕೊಟ್ಟು ಹೋಗಿ ಅಧ್ಯಕ್ಷಗಿರಿಗೆ ರಾಜೀನಾಮೆ ಕೊಡುವವರು ಮಂತ್ರಿಯಾಗಿ ಏಕೆ ಇರುತ್ತೀರೆಂದು ನಾನು ಕೇಳುವುದು When you are not here to take responsibility of that why are you here as a Minister? ನಾನು ಅದನ್ನು ನಿಭಾಯಿಸುತ್ತೇನೆ ಎನ್ನುವುದನ್ನು ಬಿಟ್ಟು ನನಗೆ ಈ ಜವಾಬ್ದಾರಿ ಬೇಡ ಎಂದರೆ, ಇದು ಸರ್ಕಾರವನ್ನು ನಡೆಸುವ ರೀತಿಯೇ? ಗ್ರಾಮೀಣ ಪ್ರದೇಶದಲ್ಲಿ 9,10,12 ಗಂಟೆ power cut ಮಾಡಿದ್ದಿರಿ ಆದರೆ, ಇವತ್ತು 16 ಗಂಟೆಗೆ ಹೋಗಿದ್ದೀರಿ ಬೆಳಿಗ್ಗೆ 2 ರಿಂದ 3 ಗಂಟೆ quality powerನ್ನು ನೀವು ಕೊಡುತ್ತಿಲ್ಲ ನೀವು ಇದರ ಬಗ್ಗೆ ಕುಳಿತುಕೊಂಡು ಚರ್ಚೆಯನ್ನೇ ಮಾಡಲಿಲ್ಲ purchase ಮಾಡುತ್ತೀರೋ, generate ಮಾಡುತ್ತೀರೋ, ಏನು ಮಾಡುತ್ತೀರೋ, ಅದನ್ನು ನೀವು ಹೇಳಬೇಕಲ್ಲ? ನಮಗೆ ನಾಚಿಕೆಯಾಗಬೇಕಲ್ಲ? 5 ವರ್ಷದಿಂದ ತಮಿಳುನಾಡಿನವರು ನಮಗಿಂತ ಹಿಂದೆ ಇದ್ದವರು, they were in dearth of power, but today they are surplus in power ನಮಗೇನಾಯಿತು? ನಾವು ಯೋಚನೆಯನ್ನು ಮಾಡಲಿಲ್ಲ Power production, generation ನಿಮ್ಮ ಆದ್ಯತೆಯಲ್ಲೇ ಇಲ್ಲ ನಿಮಗೆ ಕಾಣುವುದು cycle ಮಾತ್ರ ಇನ್ನೇನು ಕಾಣಲಿಲ್ಲ ನಿಮ್ಮ ಕ್ಯಾಲೆಂಡರ್ ತೆಗೆದರೂ ಸೈಕಲ್, ಪುಸ್ತಕ ತೆಗೆದರೂ ಸೈಕಲ್, ಕಾರ್ಯಕ್ರಮ ತೆಗೆದರೆ ಸೈಕಲ್ N T Ramrao ಸೈಕಲ್ ಗುರ್ತಿನಲ್ಲಿ ಗೆದ್ದುಬಿಟ್ಟರಲ್ಲ, ಇವರಿಗೆಲ್ಲಾ ಸೈಕಲ್ ಬಂದು ಬಿಟ್ಟಿತು projects ಮಾಡಿ ದಮ್ಮಯ್ಯ ಎಂದು ಹೇಳುತ್ತೇವೆ ಹಣ ಇದೆ ಈ ವರ್ಷ ನಿಜವಾಗಿಯೂ ಸುವರ್ಣ ಕರ್ನಾಟಕವಾಗಿದ್ದರೆ, ಯಾರೋ tax payer ದುಡ್ಡಲ್ಲಿ ಎಲ್ಲಾದರೂ ಒಂದು ಕಡೆ ಬಳಕೆ ಮಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆ ಸೈಕಲ್ ಕಳೆದುಹೋಗಿದೆ ಎಂದು ತಿಳಿದುಕೊಂಡೇ ನಿನ್ನೆ ಮುಖ್ಯಮಂತ್ರಿಯವರು ಬಂಗಾರಪ್ಪನವರ ಮನೆಗೆ ಹೋಗಿದ್ದರು!

ಶ್ರೀ ಜೆ ಸಿ ಮಾಧುಸ್ವಾಮಿ ಎರಡನೆಯದು, ಕುಡಿಯುವ ನೀರು ಕುಡಿಯುವ ನೀರಿನ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂದರೆ, ಮಾನ್ಯ ಪ್ರಕಾಶ್ ಸಾಹೇಬರೆ, ತಮಗೆ ಗೊತ್ತಿಲ್ಲ Task force ಇತ್ತು ಹೋದ ಸಲ ಬರಗಾಲದಲ್ಲಿ ಶಾಸಕರಿಗೆ ಕನಿಷ್ಠ ಕೆಲಸವನ್ನು ಇದರಿಂದ ಮಾಡುವುದಕ್ಕೆ ಸಾಧ್ಯವಾಯಿತು ತಕ್ಷಣ ನೀರಿನ ಸೌಲಭ್ಯ ಕಲ್ಪಿಸಿಕೊಡುತ್ತಿದ್ದೆವು ಈಗ ಬೋರ್‌ವೆಲ್‌ನವರೇನಾದರೂ ನಮ್ಮೆದುರಿಗೆ ಬಂದುಬಿಟ್ಟರೆ ನಾವು ತಪ್ಪಿಸಿಕೊಂಡು ಹೋಗುತ್ತೇವೆ! ಪಾಪ, ನಮ್ಮ ಅಪ್ಪ-ಅಮ್ಮ ನಮ್ಮನ್ನು ಸುಖವಾಗಿ ಸಾಕಿ ಬೆಳೆಸಿದ್ದರು ಯಾರಿಂದಲೂ ಸಾಲ ಪಡೆದುಕೊಂಡು ತಲೆತಗ್ಗಿಸಿಕೊಂಡು

ಓಡಾಡಿರಲಿಲ್ಲ ನಿಮ್ಮಿಂದಾಗಿ ಬೋರ್‌ವೆಲ್‌ನವನ ಎದುರು ತಲೆತಗ್ಗಿಸಿಕೊಂಡು ಓಡಾಡಬೇಕಾದ ಸ್ಥಿತಿ ಬಂದಿದೆ

ಶ್ರೀ ವಾಟಾಳ್ ನಾಗರಾಜ್ ಎಲ್ಲಾ ಶಾಸಕರನ್ನೂ ಸಾಲಗಾರರನ್ನಾಗಿ ಮಾಡಿದ ಕೀರ್ತಿ ನಿಮ್ಮ ಸರ್ಕಾರಕ್ಕೆ ಬಂದಿದೆ!

ಶ್ರೀ ಜೆ ಸಿ ಮಾಧುಸ್ವಾಮಿ ಅವನು ನಮಗೂ ಫೋನ್ ಮಾಡಿ ಟಾಸ್ಕ್ ಫೋರ್ಸ್‌ರವರ ಹತ್ತಿರ ಅನುಮತಿ ಕೊಡಿಸಿ ಸಾರ್ ಎಂದು ಕೇಳುತ್ತಾನೆ ಇಂಜಿನಿಯರ್ ಅವರನ್ನು ಕೇಳಿದರೆ, ZP ಮೇಲೆ ಹೇಳುತ್ತಾರೆ, ZPಯನ್ನು ಕೇಳಿದರೆ ಟಾಸ್ಕ್‌ಫೋರ್ಸ್ ರವರನ್ನು ಏನು ಮಾಡೋಣವೆಂದು ಹೇಳುತ್ತಾರೆ ನಮಗೆಲ್ಲಾ ಎಂತಹ ಸ್ಥಿತಿ ಇತ್ತು? ನಿಮ್ಮ ಸರ್ಕಾರ ಒಪ್ಪಲಿ, ಬಿಡಲಿ ಅಕಸ್ಮಾತ್ ಯಾರಿಗಾದರೂ ಒಂದು ಬೋರ್‌ವೆಲ್ ಅನ್ನು ಹಾಕಿ ಎಂದಿದ್ದರೆ, ಗ್ಯಾರಂಟಿಯಾಗಿ ಬಂದು ಹಾಕುತ್ತಿದ್ದರು ಆದರೆ, ಇವತ್ತು ಒಂದು ಫೋನನ್ನೂ ಮುಟ್ಟುವುದಿಲ್ಲ! ಅವನು ಫೋನ್ ಮಾಡಿದರೆ, ಎಲ್ಲಿ ದುಡ್ಡನ್ನು ಕೇಳುತ್ತಾನೋ, ಎಲ್ಲಿಂದ ಕೊಡುವುದು, ಇದು ಯಾವ ಗ್ರಹಚಾರ ಎಂದು ನಾವು ಫೋನ್ ಮುಟ್ಟುವುದಿಲ್ಲ ಸನ್ಮಾನ್ಯ ಮಂತ್ರಿಯವರಿಗೆ ನಾವು ಹೇಳಿದೆವು, ಸಾರಾಸಗಟಾಗಿ ಎಲ್ಲಾ ತಾಲ್ಲೂಕಿಗೂ 7 ಲಕ್ಷ ಎಂದು ಹೇಳಿಬಿಟ್ಟರು ನೀವು 50 ಬೋರ್‌ವೆಲ್‌ಗಳನ್ನಾದರೂ ಕೊರೆದಿರಿ, 100 ಬೋರ್‌ವೆಲ್‌ಗಳನ್ನಾದರೂ ಕೊರೆದಿರಿ ಎಲ್ಲರಿಗೂ 7 ಲಕ್ಷ ಒಂದೊಂದು ತಾಲ್ಲೂಕಿನಲ್ಲಿ ಒಂದು, ಒಂದೂವರೆ ಕೋಟಿ ರೂಪಾಯಿಯಷ್ಟು ಬಿಲ್ ಇಟ್ಟುಕೊಂಡು, ಮಾನ್ಯ ಪ್ರಕಾಶ್‌ರವರೆ, ನೀವು ನಮಗೆ ಹಣದ ಕೊರತೆ ಇಲ್ಲವೆಂದು ಹರಿಕದೆ ದಾಸರಂತೆ ಭಜನೆ ಮಾಡಿಕೊಂಡು ಅಲ್ಲಿ payment ಮಾಡದಿದ್ದರೆ, ನಮ್ಮ ಮಾನ–ಮರ್ಯಾದೆ ಏನಾಗಬೇಕು ಹೇಳಿ? ಹಣದ ಕೊರತೆ ಏನೂ ಇಲ್ಲ, ಕೋಟಿ, ಕೋಟಿ ಇದೆ ಎಂದು ಹೇಳಿ ಆ ರೀತಿ ಮಾಡಿದರೆ ಶಾಸಕರಾದ ನಮ್ಮಗಳ ಮರ್ಯಾದೆ ಏನಾಗಬೇಕು ಹೇಳಿ?

ಶ್ರೀ ವಾಟಾಳ್ ನಾಗರಾಜ್ ಕೋಟಿ ಹೇಳುವುದರಲ್ಲಿ ಬಹಳ ವೇಗವಾಗಿದ್ದೀರಿ!

ಶ್ರೀ ಜೆ ಸಿ ಮಾಧುಸ್ವಾಮಿ ಇನ್ನು ಮುಂದೆ ಅದನ್ನು ಕೊರೆಸುವುದಾದರೂ ಹೇಗೆ ಹೇಳಿ? ನಮ್ಮ ಭಾಗಗಳಲ್ಲಿ 2–3 ದಿವಸಕ್ಕೆ ಟ್ಯಾಂಕರ್‌ನಲ್ಲಿ ನೀರನ್ನು ಪೂರೈಸುವ ಪರಿಸ್ಥಿತಿ ನಿರ್ಮಾಣವಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಟ್ಯಾಂಕರ್‌ನಲ್ಲಿ ನೀರು ಪೂರೈಸಿರುವವರಿಗೇ ಇನ್ನೂ ದುಡ್ಡನ್ನು ಕೊಟ್ಟಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಿಂದಿನ pointಗೆ ಹಣವನ್ನು ಕೊಡದಿದ್ದರೆ, ಈ ಸಲ ಬೋರ್‌ವೆಲ್ ಹಾಕಿ ನೀರು ಕೊಡಿ ಎಂದರೆ, ಯಾರು ಕೋಡುತ್ತಾರೆ? ಕೆಲಸವೂ ಆಗುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ 2004ರ ಕೊನೆಯಲ್ಲಿ ನೀರನ್ನು transportation ಮಾಡಿದವರಗೆ ಕೊಡಬೇಕಿದ್ದ ಹಣವನ್ನೇ ಇದುವರೆಗೂ ಕೊಡದಿರುವುದರಿಂದ ಈಗ ಎಂಥ ಸ್ಥಿತಿ ನಿರ್ಮಾಣವಾಗಿದೆ ಎಂದರೆ, ನೀರು ಕಡಿಮೆಯಾಗಿದೆ, ನೀರಿಲ್ಲ ಯಾರಾದರೂ ಟ್ರ್ಯಾಕ್ಟರ್ ತೆಗೆದುಕೊಂಡು ಬನ್ನಿ ಎಂದರೆ ಯಾರೂ ಬರುವುದಿಲ್ಲ ಅವರುಗಳು ಒಂದು ಕಡೆ ನಮ್ಮ ಮಾನ-ಮರ್ಯಾದೆ ತೆಗೆಯುತ್ತಿದ್ದಾರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ನಮ್ಮ ಜಿಲ್ಲೆಗೆ ಬಂದಾಗ 2004ನೇ ಇಸವಿಯ ವಿಚಾರವನ್ನು ಅವರ ಹತ್ತಿರ ಚರ್ಚೆ ಮಾಡಬೇಕಾಯಿತು ಬೋರ್‌ವೆಲ್ ಹಾಕಿರುವುದನ್ನು ಬಿಟ್ಟು ಬಿಡಿ ನೀವು ನೀರನ್ನು transport ಮಾಡಿ ಎಂದು ಹೇಳಿದ್ದಿರಿ ಆ ರೀತಿ transport ಮಾಡಿಸಿರತಕ್ಕದ್ದರ ಬಿಲ್ ಅನ್ನು 2004ರಿಂದ ಇನ್ನೂ ಕ್ಲಿಯರ್ ಮಾಡಿಲ್ಲ

ಶ್ರೀ ಬಿ ಆರ್ ಪಾಟೀಲ್ ಎಲ್ಲಿ ನೀರಿನ source ಸಿಗಲಿಲ್ಲ, ಅಲ್ಲಿ ಯಾರಾದರೂ ಖಾಸಗಿಯವರ ಬಾವಿಯಿಂದ ನೀರನ್ನು ತೆಗೆದುಕೊಂಡು ಸರಬರಾಜು ಮಾಡಿ ಎಂದು ಹೇಳಿದ್ದಿರಿ ಅವರಿಗೆ ತಿಂಗಳಿಗೆ 5 ಸಾವಿರದವರೆಗೆ ಕೊಡುತ್ತೇವೆಂದು ಸರ್ಕಾರ ಹೇಳಿತ್ತು ತಮಗೆ ಹೇಳುತ್ತೇನೆ ಪಾಪ! ಅವರುಗಳು ತಮ್ಮ ಬೆಳೆಗಳನ್ನು ಹಾಳು ಮಾಡಿಕೊಂಡು ಊರಿಗೆ ನೀರನ್ನು ಕೊಟ್ಟಿದ್ದಾರೆ ಮೂರು ವರ್ಷಗಳಾಯಿತು ಅವರಿಗೆ 5 ಸಾವಿರ ರೂಪಾಯಿಗಳನ್ನು ಇದುವರೆಗೆ ಕೊಡುವುದಕ್ಕಾಗಿಲ್ಲ ಇದು ಪರಿಸ್ಥಿತಿ ಸರ್ಕಾರದಲ್ಲಿ ದುಡ್ಡಿದ್ದರೆ ಏಕೆ ಈ ಪರಿಸ್ಥಿತಿ ಬರುತ್ತಿತ್ತು

ಶ್ರೀ ಸಿ ಎಸ್ ಪುಟ್ಟೇಗೌಡ ಮಾನ್ಯ ಅಧ್ಯಕ್ಷರೆ, ಇದು ವಿರೋಧ ಪಕ್ಷದವರಿಗೆ ಮಾತ್ರ ಕಾಡುತ್ತಿರುವ ಸಮಸ್ಯೆಯಾಗಿಲ್ಲ ನಮಗೂ, ಎಲ್ಲಾ ಶಾಸಕರಿಗೂ ನಿಜವಾಗಿಯೂ ಹಳ್ಳಿಗಳಲ್ಲಿ ತಿರುಗಾಡಲು ಬಹಳ ತೊಂದರೆ ಇದೆ ನೀರಾವರಿ ಇರುವ ಯಾರಾದರೂ ಪುಣ್ಯಾತ್ಮರನ್ನು ಬಿಟ್ಟರೆ, ನಮಗೆಲ್ಲರಗೂ ಈ ಸಮಸ್ಯೆ ಇದೆ ಇದರ ಜೊತೆಗೆ ನಾವು ಬೋರ್‌ವೆಲ್ ಅನ್ನು ಕೊರೆದರೆ ಎಲ್ಲೂ ನೀರು ಬರುವುದಿಲ್ಲ ಮೊದಲು 150 ಅಡಿಗೆ ಸಿಗುತ್ತಿದ್ದ ನೀರು

ಇವೊತ್ತು 300, 350 ಅಡಿಗಳಷ್ಟು ಕೊರೆದರೂ ಬರುವುದಿಲ್ಲ ನಮಗಂತೂ ಇದು ನಮಗೇ ಕೊನೆಯೇನೋ ನಮ್ಮ ಮಕ್ಕಳಿಗೆ ನೀರನ್ನು ಕೊಡಲು ಆಗುವುದೇ ಇಲ್ಲವೇನೋ ಎಂಬ ಪರಿಸ್ಥಿತಿ ಇದೆ ಎಲ್ಲಿ excess water flow ಆಗುತ್ತಿದೆ, waste water ಸಮುದ್ರಕ್ಕೆ ಸೇರುತ್ತಿದೆ, ಆ ನೀರನ್ನು ಕುಡಿಯುವುದಕ್ಕೋಸ್ಕರ ಇದು ಬಂದ ತಕ್ಷಣ tribunalನಲ್ಲಿದೆ, ಅದು ಇದೆ, ಇದು ಇದೆ ಎಂದು ಹೇಳುತ್ತಾರೆ ಆದರೆ, ಕುಡಿಯುವ ನೀರಿಗೆ ಯಾವ ಅಡ್ಡಿಯೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ ನನ್ನ ಕ್ಷೇತ್ರದಲ್ಲೇ ಎಲ್ಲೋ ಒಂದು ಕಡೆ ಶನಿವಾರದ ಕೆರೆಯ waste water ಸಮುದ್ರಕ್ಕೆ ಬೀಳುತ್ತದೆ, ಇನ್ನೊಂದು ಕಡೆ ಎಲ್ಲೋ ಸಮುದ್ರಕ್ಕೆ ಬೀಳುತ್ತದೆ, ಅಂಥ water ಅನ್ನು ಕೆಲವು ಕೆರೆಗಳಿಗೆ ತುಂಬಿಸುವ ಕಾರ್ಯಕ್ರಮಕ್ಕೆ ನಿಜವಾಗಿಯೂ ಒತ್ತುಕೊಡಬೇಕು ಯಾವ್ಯಾವುದಕ್ಕೋ, ಕ್ಷೌರಿಕ ಪೆಟ್ಟಿಗೆಯನ್ನು ಹಿಡಿದುಕೊಂಡು ಹೋಗುವವರಿಗೆ ಎರಡು, ಮೂರು ಸಾವಿರ ಕೊಡುತ್ತೇವೆ ಸಪುಟ್ಟೇಗೌಡರೆ ಎಂದು ಎರಡು, ಮೂರು ಜನರಿಗೆ ಕೊಡುವುದು ಈ ರೀತಿಯ ಕಾರ್ಯಕ್ರಮ ನಿಂತರೂ ಪರವಾಗಿಲ್ಲ ಕುಡಿಯುವ ನೀರು ಬಹುಶ ನಮ್ಮ ಜೀವಿತಕ್ಕೇ ಕೊನೆಯಾಗುತ್ತದೆಂಬ ಭಯವಿದೆ ಮುಂದೆ ನಮ್ಮ ಮಕ್ಕಳಿಗೆ ಇನ್ನು ಹತ್ತಾರು ವರ್ಷದಲ್ಲಿ ಈಗ ಏನು 400 ಅಡಿ ಇದೆಯೋ, ಕೋಲಾರದಂತೆ 800, 1000 ಅಡಿಗಳಷ್ಟು ಆಳ ನಮ್ಮಲ್ಲಿ ಕೊರೆದರೂ ನೀರು ಬರುವಂತೆ ಕಾಣುವುದಿಲ್ಲ ಇದರ ಬಗ್ಗೆ ನಿಜವಾಗಿಯೂ ಸರ್ಕಾರದಲ್ಲಿ ಗಂಭೀರವಾಗಿ ಚಿಂತನೆ ಮಾಡಬೇಕು ಇದಕ್ಕೆ ಪಕ್ಷದ ಪ್ರಶ್ನೆ ತರುವುದು ಬೇಡ ಏಕೆಂದರೆ, ಎಲ್ಲರಿಗೂ, ಎಲ್ಲಾ ಪಕ್ಷದವರಿಗೂ ಕುಡಿಯಲು ನೀರು ಬೇಕು ಆದ್ದರಿಂದ, ಸರ್ಕಾರ ಇದಕ್ಕೆ ಒತ್ತು ಕೊಡಬೇಕೆಂಬುದು ನನ್ನ ಮನವಿ

ಛೇರ್ಮನ್ ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10 00 ಗಂಟೆಗೆ ಸೇರುವುದು

(ಸದನವು ಸಂಜೆ 6 ಗಂಟೆ 7 ನಿಮಿಷಕ್ಕೆ ಮುಕ್ತಾಯಗೊಂಡು ಪುನ ದಿನಾಂಕ 2ನೇ ಫೆಬ್ರವರಿ ಮಾಹೆ 2007ರ ಶುಕ್ರವಾರದಂದು ಬೆಳಿಗ್ಗೆ 10 00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

63 (179) ಶ್ರೀ ಎನ್ ಬಾಲರಾಜ್ (ಕೊಳ್ಳೇಗಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಸಂಖ್ಯೆ ಹೆಚ್ಚಾಗಿದ್ದು, ವಸತಿ ನಿಲಯಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಂಜೂರಾಗಿರುವ ಸಂಖ್ಯೆ ಬಹಳ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ ಮುಂದಿನ ಸಾಲಿನಲ್ಲಾದರೂ ಈ ಸಂಖ್ಯೆಯನ್ನು ಎರಡರಷ್ಟಕ್ಕಾದರೂ ಹೆಚ್ಚಿಸಲು ಮಂಜೂರಾತಿ ನೀಡಿ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸಂಬಂಧಪಟ್ಟಂತೆ ಕೊಳ್ಳೇಗಾಲ ತಾಲ್ಲೂಕಿನ ಹನೂರು ಗ್ರಾಮದಲ್ಲಿ 50 ಸಂಖ್ಯಾಬಲದ ಮೆಟ್ರಿಕ್‌ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವನ್ನು ಹೊಸದಾಗಿ ಪ್ರಾರಂಭಿಸುವ ವಿಷಯ ಮುಂದಿನ ವರ್ಷದ ಆಯವ್ಯಯದಲ್ಲಿ ಮಾಡುವ ಅವಕಾಶದ ಮೇಲೆ ಅವಲಂಬಿತವಾಗಿರುತ್ತದೆ

64 (180) Sri Balaraj S (Kollegal) Will the Minister of ?

a) How many veterinary Hospitals and Veterinary Dispensaries are there in Kollegal Assembly Constituency , (including Yelandur Taluk),

b) is there any proposal received to start new Veterinary Hospitals and Veterinary Institutions on necessity,

c) what are the actions taken up by the Government for upgradation of Veterinary Institutions,

d) is there any deficient of staff in there hospitals,

e) what are the programmes implemented during last year, (furnish detail information) ,

f) is there any new programmes to be implemented?

Sri (Minister)

a) There are15 Veterinary Institutions working in Kollegal including Yalandur They are,

Sl No	Institutions Name	No of Institution
1	Veterinary Hospitals	02
2	Veterinary Dispensires	02
3	Primary Veterinary Centers	03
4	K V C	08
	Total	**15**

b) In Yalandur and Kollegal taluk we have proposals have been received to start 10 Veterinary Institution in the following villages

1 Palya
2 Kurati
3 P G Palya
4 Maddur
5 Dhangere
6 Byllur
7 Gowdrahally
8 Gollara Dimbada
9 Hugyam
10 Ambale

c) The programmes of upgrading the Primary Veterinary Centers to Veterinary Dispensaries is on going programme in the Department of Animal Husbandry and Veterinary Services But there is no time limitation for this programme

At present proposal to upgrade 150 Primary Veterinary Centers, Artificial Insemination Centres to Veterinary Dispensaries and 50 Veterinary Dispensaries to Veterinary Hospitals is awaiting sanction from the Finance Department

d) Yes

11 posts are vacant in these institutions altogether Detail are given below

Sl No	**Name of the post**	**Sanction**	**Filled**	**Vacant**
1	Assistant Director	02	02	00
2	Veterinary Officer	06	02	04
3	Veterinary Livestock Supervisor	02	00	02
4	Senior Veterinary Inspector	10	08	02
5	Veterinary Inspector	09	07	02
6	Veterinary Assistant	08	08	00
7	Driver	01	00	01
8	D-Group	27	27	00
	Total	**65**	**54**	**11**

e Totally 22 programmes under State sector, 11 programmes under District sector are being implemented Scheme wise details furnished in the Annexure

f Yes

The following new programmes are being implemented in the Department of Animal Husbandry and Veterinary Services

1 Opening of New Veterinary College at Shimoga
2 Continued Research on Medical Values for Cow urine
3 Opening of institution in Rural Management and administration Institute as on the pattern of Anand
4 Opening of 69 New Veterinary Dispensaries in the Taluks where shortage of Veterinary Hospitals is noticed as per the Dr D M Nanjundappa Report For which Rs 800 crores has been allocated
5 Suvarna Karnataka Gothali Samrakshna Yojana to protect the local breeds of Cattle in Karnataka

ಅನುಬಂಧ

ಪ್ರಶ್ನೆ ಸಂಖ್ಯೆ 180 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 2006–07ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಹಾಗೂ ವೆಚ್ಚದ ವಿವರ

- 2006–07ನೇ ಸಾಲಿನಲ್ಲಿ ಯೋಜನೆಯಡಿ ರೂ 16400 38 ಲಕ್ಷಗಳನ್ನು ಒದಗಿಸಲಾಗಿದೆ ಡಿಸೆಂಬರ್ ಅಂತ್ಯಕ್ಕೆ ರೂ 6258 29 ಲಕ್ಷಗಳ ಗುರಿಗೆ ರೂ 4689 26 ಲಕ್ಷ ವೆಚ್ಚ ಆಗಿದ್ದು, ಈವರೆಗೆ ಬಿಡುಗಡೆಯಾದ ಅನುದಾನಕ್ಕೆ ರೂ 78 99 ಪ್ರಗತಿ ಆಗಿರುತ್ತದೆ
- **ರಾಜ್ಯದ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಔಷಧಿ ಮತ್ತು ರಾಸಾಯನಿಕ ಪೂರೈಕೆಗಾಗಿ** ಆಯವ್ಯಯದಲ್ಲಿ ರೂ 10 00 ಕೋಟಿಯಿಂದ ರೂ 20 00 ಕೋಟಿಗೆ ಹೆಚ್ಚಿಸಲಾಗಿದ್ದು ಔಷಧಿ ಸರಬರಾಜು ಮಾಡಲು ಕ್ರಮವಹಿಸಿದೆ ಯೋಜನೆಯಡಿ ರೂ 512 33 ಲಕ್ಷ ಹಾಗೂ ಯೋಜನೇತರ ಅಡಿ ರೂ 624 00 ಲಕ್ಷಗಳ ವೆಚ್ಚದಲ್ಲಿ ವಿವಿಧ ಪಶುವೈದ್ಯ ಸಂಸ್ಥೆಗಳಿಗೆ ಔಷಧಿ ಸರಬರಾಜು ಮಾಡಲು ಕ್ರಮವಹಿಸಿದೆ
- **ಕರ್ನಾಟಕ ಪಶುವೈದ್ಯಕೀಯದವರು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ** ಸ್ಥಾಪನೆಗಾಗಿ ಮೂಲಭೂತ ಸೌಕರ್ಯ ಒದಗಿಸಲು ರೂ 1978 95 ಲಕ್ಷ ಅನುದಾನವನ್ನು ಒದಗಿಸಿದ್ದು, ರೂ 709 47 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ (ಶೇ 111 00%)
- **ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಯಡಿ** ಕುರಿಗಳ ಆರೋಗ್ಯ ರಕ್ಷಣೆ, ಕುರಿ ಮತ್ತು ಆಡುಗಳ ತಳಿ ಅಭಿವೃದ್ಧಿ, ತರಬೇತಿ ಮತ್ತು ವಿಸ್ತರಣ ಕಾರ್ಯಕ್ರಮಕ್ಕಾಗಿ ರೂ 500 00 ಲಕ್ಷ ಅನುದಾನವನ್ನು

ನಿಗದಿಪಡಿಸಲಾಗಿದೆ ಡಿಸೆಂಬರ್ 2006 ರವರೆಗೆ ರೂ 75 00 ಲಕ್ಷ ವೆಚ್ಚವಾಗಿರುತ್ತದೆ ಹಾಗೂ ರೂ 125 00 ಲಕ್ಷ ಜನವರಿ ತಿಂಗಳಲ್ಲಿ ಬಿಡುಗಡೆಯಾಗಿದೆ

- **ಕರ್ನಾಟಕ ಜನಶ್ರೀ ವಿಮಾ ಯೋಜನೆ** ಜಾರಿಗೊಳಿಸಲಾಗುತ್ತಿದ್ದು ಕುರಿ ಸಾಕಾಣಿಕೆ ಅವಲಂಭಿಸಿರುವ 9 4 ಲಕ್ಷ ಕುರಿಗಾರರು ಮತ್ತು 110 ಲಕ್ಷ ಕುರಿಗಳ ವಿಮೆ ರಕ್ಷಣೆ ಒದಗಿಸಲು ರೂ 500 00 ಲಕ್ಷ ಸಹಾಯಧನವನ್ನು ಕುರಿಗಳ ಮತ್ತು ಕುರಿಗಾರರ ಕುಟುಂಬ ಆಕಸ್ಮಿಕ ನಷ್ಟಗಳ ಪರಿಹಾರ ಕಾರ್ಯಕ್ರಮಕ್ಕಾಗಿ ರೂ 500 00 ಲಕ್ಷಗಳನ್ನು ನಿಗಧಿಪಡಿಸಿದೆ ರೂ 470 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ
- **ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗೆ** ಜಾನುವಾರು ಲಸಿಕ ಉತ್ಪಾದನೆ ಮತ್ತು ಸರಬರಾಜಿಗಾಗಿ ರೂ 265 00 ಲಕ್ಷಗಳನ್ನು ಒದಗಿಸಿದೆ ಇದುವರೆವಿಗೂ ರೂ 150 00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ
- **ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ ಪುರಸ್ಕೃತ ಯೋಜನೆ–ಕೇಂದ್ರ 75 ರಾಜ್ಯ 251)** ಕಾರ್ಯಕ್ರಮದಡಿ ರೂ 1440 68 ಲಕ್ಷಗಳನ್ನು ಒದಗಿಸಿದೆ ರೂ 461 05 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು 89 00 ಲಕ್ಷ ಜಾನುವಾರುಗಳಿಗೆ ಕಾಲು ಬಾಯಿ ಜ್ವರ, ಪಿ ಪಿ ಆರ್ ಹಾಗೂ ಗಳಲೆ ರೋಗಗಳ ವಿರುದ್ಧ ಹಾಗೂ 50 62 ಲಕ್ಷ ಕೋಳಿಗಳಿಗೆ ಕೊಕ್ಕರೆ ರೋಗದ ವಿರುದ್ಧ ಚುಚ್ಚುಮದ್ದು ಹಾಕಲಾಗಿದೆ ಹಾಗೂ 15080 ಜಾನುವಾರುಗಳಿಗೆ ಕ್ಷಯ ಹಾಗೂ ಕಂದುರೋಗದ ತಪಾಸಣೆ ಮಾಡಲಾಗಿದೆ
- **ದಕ್ಷಿಣ ಪ್ರಾಂತೀಯ ಪ್ರಯೋಗಾಲಯ, ಬೆಂಗಳೂರು ಸಂಸ್ಥೆಯಲ್ಲಿ ಜಾನುವಾರು ರೋಗಗಳ ತಪಾಸಣೆ, ರೋಗ ನಿರ್ಣಯ, ಸೌಲಭ್ಯಗಳಿಗಾಗಿ ಸಹಾಯಧನವಾಗಿ** ರೂ 190 00 ಲಕ್ಷ ಅನುದಾನ ನಿಗದಿಪಡಿಸಿದ್ದು ಇದುವರೆಗೆ ರೂ 100 00 ಲಕ್ಷಗಳಿಗೆ ಮಂಜೂರು ನೀಡಿರುತ್ತದೆ **ಪ್ರಾಣರೋಗ ಪತ್ತೆಮಾಡುವ ಪ್ರಯೋಗಾಲಗಳನ್ನು** 30 ತಾಲ್ಲೂಕುಗಳಲ್ಲಿ ಸ್ಥಾಪಿಸಲು ರೂ 10 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ ಡಿಸೆಂಬರ್ ಅಂತ್ಯದವರೆಗೆ ರೂ 5 08 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ
- **ಇಲಾಖಾ ಕ್ಷೇತ್ರದಲ್ಲಿನ ಕಟ್ಟಡಗಳ ಅಭಿವೃದ್ಧಿಗಾಗಿ** ರೂ 50 00 ಲಕ್ಷ ಒದಗಿಸಿದ್ದು ಇದರಲ್ಲಿ ರೂ 26 72 ಲಕ್ಷ ಈಗಾಗಲೇ ವೆಚ್ಚವಾಗಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ

- **ಪಶು ಸಂಗೋಪನಾ ವಿಸ್ತರಣಾ ಕಾರ್ಯಚಟುವಟಿಕೆ ಅಂಗವಾಗಿ** ರೂ 37 34 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದ್ದು, ಇದುವರೆಗೂ ರೂ 22 09 ಲಕ್ಷ ವೆಚ್ಚವಾಗಿರುತ್ತದೆ 3966 ರೈತರಿಗೆ ತರಬೇತಿ ನೀಡಲಾಗಿದೆ
- **ಕೇಂದ್ರ ಪುರಸ್ಕೃತ ಯೋಜನೆ, ದೊಡ್ಡರೋಗ ನಿವಾರಣೆ ಯೋಜನೆ ಮತ್ತು ಕಣ್ಗಾವಲು ಕಾರ್ಯಕ್ರಮದಡಿ (ಶೇ 100%)** ರೂ 58 18 ಲಕ್ಷ ಅನುದಾನವನ್ನು ನಿಗದಿಯಾಗಿದ್ದು ಇದುವರೆವಿಗೂ ರೂ 30 2 ಲಕ್ಷಗಳ ಕಾರ್ಯಕ್ರಮಕ್ಕೆ ಮಂಜೂರಾತಿ ನೀಡಿದ್ದು, ಪ್ರಗತಿ ವಿವಿಧ ಹಂತದಲ್ಲಿರುತ್ತದೆ ದೊಡ್ಡರೋಗ ಪತ್ತೆ ಹಚ್ಚುವ ಸಲುವಾಗಿ 40950 ಗ್ರಾಮ ತಪಾಸಣೆ ಮಾಡಲಾಗಿದೆ
- **ಮಾದರಿ ಸಮೀಕ್ಷೆ ಯೋಜನೆಯಡಿ** ರೂ 53 57 ಲಕ್ಷ ವೆಚ್ಚದಲ್ಲಿ 4266 ಗ್ರಾಮಗಳ ಸಂಪೂರ್ಣ ಎಣಿಕೆ ಮಾಡಲಾಗಿದೆ
- **ಶುದ್ಧ ಹಾಗೂ ಗುಣಮಟ್ಟದ ಹಾಲು ಉತ್ಪಾದನೆ ಮಾಡಲು** ರೂ 40 00 ಕೋಟಿ ನಿಗದಿಪಡಿಸಿದೆ ಈಗಾಗಲೇ ರೂ 200 00 ಲಕ್ಷಗಳ ವೆಚ್ಚವಾಗಿದ್ದು ಬಿಡುಗಡೆಗೆ ಶೇ 100 ಸಾಧನೆಯಾಗಿರುತ್ತದೆ
- **ಪಶು ಸಂಗೋಪನೆ ಮೇಲಿನ ಬಂಡವಾಳ ವೆಚ್ಚ ಕಾರ್ಯಕ್ರಮದಡಿ** ರೂ 110 00 ಲಕ್ಷಗಳನ್ನು ನಿಗದಿಪಡಿಸಿದೆ ಆರ್ ಐ ಡಿ ಎಫ್ 12ರ ಕಾರ್ಯಕ್ರಮದಡಿ 150 ಹೊಸ ಪಶುವೈದ್ಯ ಸಂಸ್ಥೆಗಳ ಕಟ್ಟಡ ನಿರ್ಮಾಣಕ್ಕಾಗಿ ರೂ 15 00 ಕೋಟಿಗಳಿಗೆ ಅನುಮತಿ ನೀಡಲಾಗಿದೆ

ವಿಶೇಷ ಘಟಕ ಯೋಜನೆ

2006–07ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೆಯಡಿಯಲ್ಲಿ ನಿಗಧಿವಡಿಸಿರುವ ರೂ 311 22 ಲಕ್ಷ ಹಿಂದಕ್ಕೆ ಪಡೆಯಲಾಗಿದೆ ಜಿಲ್ಲಾ ಯೋಜನೆಯಡಿ ರೂ 217 66 ಲಕ್ಷ ನಿಗದಿಪಡಿಸಲಾಗಿದ್ದು ಪರಿಶಿಷ್ಟ ಜಾತಿಯವರಿಗೆ ಜಿಲ್ಲಾ ವಲಯ ನೆರವಿನಡಿ ಒಟ್ಟು ಸೇರಿ 2043 ಗುರಿ ಹೊಂದಲಾಗಿದ್ದು, ಗುರಿಯ ಸದರಿ ಅವಧಿಯಲ್ಲಿ ರೂ 62 97 ಲಕ್ಷ ವೆಚ್ಚದಲ್ಲಿ 607 ಕುಟುಂಬಗಳಿಗೆ ಸಹಾಯಧನ ಡಿಸೆಂಬರ್ 2006ರ ವರೆಗೆ ಒದಗಿಸಲಾಗಿದೆ

ಗಿರಿಜನ ಉಪಯೋಜನೆ

2006–07ನೇ ಸಾಲಿನಲ್ಲಿ ರಾಜ್ಯವಲಯ ಯೋಜನೆಯಡಿಯಲ್ಲಿ ನಿಗದಿವಡಿಸಿರುವ ರೂ 118 99 ಲಕ್ಷ ಹಿಂದಕ್ಕೆ ಪಡೆಯಲಾಗಿದೆ ಜಿಲ್ಲಾ ಯೋಜನೆಯಡಿ ರೂ 98 32 ಲಕ್ಷ ನಿಗದಿಪಡಿಸಲಾಗಿದ್ದು, ಪರಿಶಿಷ್ಟ ಪಂಗಡದವರಿಗೆ ಜಿಲ್ಲಾವಲಯ ನೆರವಿನಡಿ ಒಟ್ಟು ಸೇರಿ 532 ಗುರಿ ಹೊಂದಲಾಗಿದ್ದು, ಗುರಿಯ ಸದರಿ ಅವಧಿಯಲ್ಲಿ ರೂ 17 95 ಲಕ್ಷ ವೆಚ್ಚದಲ್ಲಿ 210 ಕುಟುಂಬಗಳಿಗೆ ಸಹಾಯಧನ ಡಿಸೆಂಬರ್ 2006ರ ವರೆಗೆ ಒದಗಿಸಲಾಗಿದೆ

ಪ್ರಶ್ನೆ ಸಂಖ್ಯೆ 180 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಜಿಲ್ಲಾ ವಲಯ ಕಾರ್ಯಕ್ರಮಗಳು

ಅ) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು

1) ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ

ಪಾಲಿಕ್ಲಿನಿಕ್ ಸ್ಥಾಪನೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ರೂ 21 63 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ

2) ಕಟ್ಟಡಗಳು

ಜಿಲ್ಲಾವಲಯಕ್ಕೆ ಸೇರಿದ ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 135 80 ಲಕ್ಷಗಳನ್ನು ನಿಗದಿಪಡಿಸಿದೆ

3) ಔಷಧಿ ಮತ್ತು ರಾಸಾಯನಿಕ ಸರಬರಾಜು

2006–07ನೇ ಸಾಲಿನಲ್ಲಿ ಘನೀಕೃತ ವೀರ್ಯ ನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ ಔಷಧ, ಲಸಿಕೆಗಳು ಹಾಗೂ ರಾಸಾಯನಿಕ ಖರೀದಿಗಾಗಿ ರೂ 512 09 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದೆ

4) ಜಾನುವಾರು ತಳಿ ಸಂವರ್ಧನಾ ಕೇಂದ್ರ,

ಜಾನುವಾರು ತಳಿ ಸಂವರ್ಧನಾ ಕೇಂದ್ರ, ಬು , ಚಾಮರಾಜನಗರ ಜಿಲ್ಲೆ ಇಲ್ಲಿಯ ಸಿಬ್ಬಂದಿಯ ವೇತನಕ್ಕಾಗಿ ಹಾಗೂ ಇತರೆ ವೆಚ್ಚಕ್ಕಾಗಿ ರೂ 6 41 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದೆ

5) ಗಿರಿರಾಜ ಹಕ್ಕಿಗಳ ಸಾಕಾಣಿಕೆ

ಗ್ರಾಮೀಣ ಜನತೆಯ ಹಿತ್ತಲಲ್ಲಿ ಕೋಳಿ ಸಾಕಾಣಿಕೆ ಮಾಡಲು ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುವಂತೆ ಹೆಚ್ಚು ಹೆಚ್ಚು ಗಿರಿರಾಜ ಕೋಳಿ ಸಾಕಾಣಿಕೆ ಮಾಡಿ ಸರಬರಾಜು ಮಾಡಲು ಪ್ರಸಕ್ತ ಸಾಲಿನಲ್ಲಿ ರೂ 32 60 ಲಕ್ಷಗಳನ್ನು ನಿಗದಿಪಡಿಸಿದೆ

6) ವಿಸ್ತರಣಾ ಘಟಕಗಳ ಬಲಪಡಿಸುವಿಕೆ

ಜಾನುವಾರು ಆರೋಗ್ಯ ಮತ್ತು ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಸ್ತರಣಾ ಚಟುವಟಿಕೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 27 07 ಲಕ್ಷಗಳನ್ನು ನಿಗದಿಪಡಿಸಿದೆ

7) ಮೊಲ ಸಾಕಾಣಿಕ ಕ್ಷೇತ್ರಗಳು

ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ರೂ 1 00 ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೊಲಗಳನ್ನು ಉತ್ಪಾದಿಸಿ ರೈತರಿಗೆ ವಿತರಣೆ ಮಾಡುವ ಗುರಿಯನ್ನು ಹೊಂದಲಾಗಿದೆ

- ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ 69 ಹೊಸ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸಲು ಯೋಜನಾ ಇಲಾಖೆಯು ಸಹಮತಿ ನೀಡಲಾಗಿದ್ದು ಮಂಜೂರಾತಿ ಹಂತದಲ್ಲಿರುತ್ತದೆ

- ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕ್ರಮಕ್ಕಾಗಿ ರೂ 270 00 ಲಕ್ಷಗಳಿಗೆ ಮಂಜೂರಾತಿ ದೊರಕಿದ್ದು ಪ್ರತಿ ಜಿಲ್ಲೆಗೆ ರೂ 10 00 ಲಕ್ಷ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗಿದೆ
- ಗೋಮೂತ್ರದಲ್ಲಿನ ಔಷಧ ಗುಣಗಳನ್ನು ಹೆಚ್ಚಿನ ಸಂಶೋಧನೆಗಾಗಿ ಪಶುವೈದ್ಯಕೀಯ ವಿಶ್ವವಿದ್ಯಾಲಯ ಬೀದರ್‌ಗೆ ರೂ 23 00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ
- ಶಿವಮೊಗ್ಗದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪನೆಗೆ ರೂ 844 00 ಲಕ್ಷ ಅನುದಾನ ಒದಗಿಸಿ ಮಂಜೂರಾತಿ ನೀಡಲಾಗಿದೆ

  ಕೇಂದ್ರ ನೆರವಿನ ಕಾರ್ಯಕ್ರಮದಡಿ ಗ್ರಾಮೀಣ ನಿರ್ವಹಣೆ ಮತ್ತು ಆಡಳಿತ ಸಂಸ್ಥೆಯನ್ನು ಗುಜರಾತ್ ರಾಜ್ಯ ಆನಂದ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಹ ತೆರೆಯಲು ರೂ 5 00 ಕೋಟಿ ಅನುದಾನ ಒದಗಿಸಿದ್ದು ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಸ್ಥಾಪಿಸಲು ಕ್ರಮವಹಿಸಿದೆ
- **ಕರ್ನಾಟಕ ಪಶುವೈದ್ಯಕೀಯ ಸಂಘಕ್ಕೆ ಪ್ರತಿ ವೃತ್ತಿ ನೈಪುಣ್ಯತೆಗಾಗಿ** ರೂ 5 00 ಲಕ್ಷ ಅನುದಾನಕ್ಕೆ ಮಂಜೂರಾತಿ ನೀಡಲಾಗಿದೆ
- **ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿಗೆ** ಸಹಾಯಧನವಾಗಿ ರೂ 15 00 ಲಕ್ಷ ನಿಗಧಿಪಡಿಸಿದ್ದು, ರೂ 10 00 ಲಕ್ಷಕ್ಕೆ ಮಂಜೂರಾತಿ ನೀಡಿದೆ 5000 ಗಿರಿರಾಜ ಕೋಳಿಮರಿ ಸರಬರಾಜು ಗುರಿಯಿದ್ದು, 5570 ಕೋಳಿಮರಿ ಸರಬರಾಜು ಮಾಡಲಾಗಿದೆ ಹಾಗೂ 388 ಜನ ರೈತರಿಗೆ ಕೋಳಿ ಸಾಕಾಣಿಗಾಗಿ ತರಬೇತಿ ನೀಡಲಾಗಿದೆ

8 ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ–75 ರಾಜ್ಯ–25)

ಈ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ 470 68 ಲಕ್ಷ ವೆಚ್ಚದಲ್ಲಿ ಜಾನುವಾರುಗಳಿಗೆ ಕಾಲು, ಬಾಯಿ ಜ್ವರ, ಗಂಟಲು ಬೇನೆ ಹಾಗೂ ಪಿ ಪಿ ಆರ್ ರೋಗಗಳ ವಿರುದ್ಧ ಲಸಿಕೆ ಹಾಕುವ ಗುರಿ ಹೊಂದಲಾಗಿದೆ

ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

ಗ್ರಾಮೀಣ ಪಶುವೈದ್ಯ ಶಾಲೆಗಳನನು ತೆರೆಯುವುದು ಹಾಗೂ ಅವುಗಳನ್ನು ಮೇಲ್ದರ್ಜೆಗೇರಿಸುವುದು

ಹಾಲಿ ಇರುವ ಪಶು ಸಂಸ್ಥೆಗಳ ಸಿಬ್ಬಂದಿ ವೇತನ, ಹಾಗೂ ಇತರೆ ಖರ್ಚಿಗಾಗಿ ಹಾಗೂ ಹೊಸದಾಗಿ ಪ್ರಾರಂಭಿಸುವ ಪಶು ಸಂಸ್ಥೆಗಳ ಖರ್ಚಿಗಾಗಿ ಹಾಗೂ ಪಶು ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ 1745 52 ಲಕ್ಷ ಅನುದಾನ ನಿಗದಿಪಡಿಸಲಾಗಿದೆ

10 ಗೊಡ್ಡು / ಬಂಜೆ ಜಾನುವಾರುಗಳಿಗೆ ಶಿಬಿರದ ವ್ಯವಸ್ಥೆ

ಪ್ರಸಕ್ತ ಸಾಲಿನಲ್ಲಿ ರೂ 51 61 ಲಕ್ಷಗಳ ಅನುದಾನದೊಂದಿಗೆ ಗೊಡ್ಡು ಜಾನುವಾರು ಶಿಬಿರಗಳನ್ನು ಏರ್ಪಡಿಸುವುದು ಹಾಗೂ ರೈತರಲ್ಲಿ ಜಾನುವಾರುಗಳಲ್ಲಿನ ಬಂಜೆನತದ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

11 ಟಗರು ಮತ್ತು ಹಂದಿ ಸರಬರಾಜು

ಕುರಿ ಮತ್ತು ಹಂದಿ ಅಭಿವೃದ್ಧಿಗಾಗಿ ರೂ 4 97 ಲಕ್ಷ ವೆಚ್ಚದಲ್ಲಿ ಆಯ್ದ ಐದು ಜಿಲ್ಲೆಗಳಲ್ಲಿ ಉತ್ತಮ ಗುಣಮಟ್ಟದ ಟಗರು ಮತ್ತು ಹಂದಿಗಳನ್ನು ದುರ್ಬಲ ವರ್ಗದ ಜನರಿಗೆ ಸರಬರಾಜು ಮಾಡಲು ಉದ್ದೇಶಿಸಲಾಗಿದೆ

65 (181) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಕೋರಿಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು ,

ಇ) ಮಂಜೂರು ಮಾಡದಿದ್ದಲ್ಲಿ, ಅದಕ್ಕೆ ಕಾರಣಗಳೇನು ,

ಈ) ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆಯಲ್ಲಿ ರಕ್ತ ನಿಧಿಯನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ ,

ಉ) ಉದ್ದೇಶಿಸಿದ್ದಲ್ಲಿ, ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಅಗತ್ಯಕ್ಕಿಂತ ಹೆಚ್ಚಿನ ಆಸ್ಪತ್ರೆಗಳು ಇರುವುದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ

ಆ) ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಅವಕಾಶವಿರುವುದಿಲ್ಲ

ಇ) ರಕ್ತ ಸಂಗ್ರಹಾಲಯವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಈ) ಮಂಜೂರಾತಿ ನಂತರ ಪ್ರಾರಂಭಿಸಲಾಗುವುದು

66 (182) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ತುಂಬಾ ದೊಡ್ಡ ತಾಲ್ಲೂಕು ಆಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆಯಿರುವ ಬಗ್ಗೆ ಸರ್ಕಾರ ಕೋರಿಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಾರ್ಗಸೂಚಿ ಪ್ರಕಾರ ಜನಸಂಖ್ಯೆ ಅನುಗುಣವಾಗಿ ಆಸ್ಪತ್ರೆ ಇರುತ್ತದೆ

ಆ) ಇಲ್ಲ

ಇ) ಈಗಾಗಲೇ ತಾಲ್ಲೂಕು ಮಟ್ಟದ ಕೊಳ್ಳೇಗಾಲ ಆಸ್ಪತ್ರೆಯನ್ನು 150 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಕೊಳ್ಳೇಗಾಲ ತಾಲ್ಲೂಕಿನ ಎಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 296 ಹಾಸಿಗೆಗಳಿವೆ ಪ್ರತಿ 1137 ಜನಸಂಖ್ಯೆಗೆ ಒಂದು ಹಾಸಿಗೆಯಂತೆ ಕಾರ್ಯ ನಿರ್ವಹಿಸುತ್ತಿರುತ್ತವೆ ಇದು ಮಾರ್ಗಸೂಚಿ ಪ್ರಕಾರ ಪ್ರತಿ 1500 ಜನಸಂಖ್ಯೆಗೆ ಒಂದು ಹಾಸಿಗೆಗಿಂತ ಉತ್ತಮವಾಗಿರುತ್ತದೆ ಆದುದರಿಂದ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು ಹೆಚ್ಚಿನ ಅವಶ್ಯಕತೆ ಇರುವುದಿಲ್ಲ

67 (182) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳಿಗೆ ಎಷ್ಟೆಷ್ಟು ಹಣ ಮಂಜೂರಾಗಿವೆ , ಯೋಜನೆವಾರು ಪೂರ್ಣ ವಿವರ ನೀಡುವುದು ,

ಆ) ಇಲಾಖೆಯಿಂದ ತೆಗೆದುಕೊಂಡ ಕಾಮಗಾರಿಗಳ ಪ್ರಗತಿಯೇನು ,

ಇ) ಈ ಯೋಜನೆಯಿಂದ ಕ್ಷೇತ್ರಕ್ಕಾಗುವ ಪ್ರಯೋಜನ ಏನು ಹಾಗೂ ಪ್ರಯೋಜನ ಪಡೆದ ಫಲಾನುಭವಿಗಳು ಯಾರ್‍ಯಾರು , (ಪೂರ್ಣ ವಿವರ ನೀಡುವುದು) ,

ಈ) ಕ್ಷೇತ್ರವಾರು ಯಾವ ಯಾವ ಉದ್ದೇಶಗಳಿಗೆ ಇಲಾಖೆ ಕಾರ್ಯಕ್ರಮ ಕೈಗೊಳ್ಳುತ್ತಿದೆ ,

ಉ) ಕೊಳ್ಳೇಗಾಲ ಕ್ಷೇತ್ರದ ಯೋಜನೆ ಬಿಡುಗಡೆಗೊಳಿಸಿರುವ ಹಣ ಎಷ್ಟು, (ಪೂರ್ಣ ವಿವರ ನೀಡುವುದು) ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ನಿಗಮದಿಂದ ಚಾಮರಾಜನಗರ ಜಿಲ್ಲೆಗೆ ಕಳೆದ 2 ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಹಾಗೂ ಸಾಧನೆ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ

ಕ್ರ ಸಂ	ಯೋಜನೆಗಳ ವಿವರ	2004–05 ಸಾಲಿನಲ್ಲಿ ಬಿಡುಗಡೆಯಾದ ಹಣ	2005–06ನೇ ಸಾಲಿನಲ್ಲಿ ಬಿಡುಗಡೆಯಾದ ಹಣ
1	ಅಲ್ಪಸಂಖ್ಯಾತರ ಕಾನೂನು ಪದವಿಧರರಿಗೆ ತರಬೇತಿ ಶಿಷ್ಯವೇತನ	11000	16000
2	ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡಿಕೆ	60000	60000
3	ಸಮುದಾಯ ಭವನ ನಿರ್ಮಾಣ	1500000	2500000

ಆ) ಕೊಳ್ಳೇಗಾಲ ಟೌನ್ ಬೆತಲ್ ಲೂಥರನ್ ಚರ್ಚ್ ಇವರು ನಿರ್ಮಿಸಿರುವ ಸಮುದಾಯ ಭವನ ನಿರ್ಮಾಣಕ್ಕೆ ರೂ 5 00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ

ಇ) ಈ ಸಮುದಾಯ ಭವನ ನಿರ್ಮಾಣದಿಂದ ಕ್ಷೇತ್ರದ ಅಲ್ಪಸಂಖ್ಯಾತರ ಜನಾಂಗದವರ ವಿವಾಹ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉಪಯೋಗವಾಗುತ್ತಿದೆ

ಈ) ಅಲ್ಪಸಂಖ್ಯಾತರ ಇಲಾಖಾ ಕಾರ್ಯಕ್ರಮಗಳಾದ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಭೇತಿ ಶಿಷ್ಯವೇತನ ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಪಂಡ್ ನೀಡಿಕೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ಕಾರ್ಯಕ್ರಮಗಳು ಅನುಷ್ಟಾನಗೊಳಿಸುತ್ತಿದೆ ಈ ಕಾರ್ಯಕ್ರಮಗಳು ಇಡೀ ಜಿಲ್ಲೆಗೆ ಅನ್ವಯುವಾಗುತ್ತಿದ್ದು, ಕ್ಷೇತ್ರವಾರು ವಿಂಗಡನೆಯಾಗಿ ಅನುಷ್ಟಾನವಾಗುತ್ತಿಲ್ಲ

ಉ) ಕೊಳ್ಳೇಗಾಲ ಕ್ಷೇತ್ರಕ್ಕೆ 2004–05 ಮತ್ತು 2005–06ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡಲಾಗಿದೆ

1	ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ಶಿಷ್ಯವೇತನ ಮಂಜೂರಾತಿಗೆ	19,000
2	ಐಟಿಐ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರಾತಿಗೆ	29,699
3	ಶಾದಿಮಹಲ್/ಸಮುದಾಯ ಭವನ ನಿರ್ಮಾಣಕ್ಕೆ	5 00

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಸಂಖ್ಯೆ 183ಕ್ಕೆ ಅನುಬಂಧ

ಕ್ರ ಸಂ	ಯೋಜನೆ	2004–05 ಆರ್ಥಿಕ		2005–06 ಆರ್ಥಿಕ	
		ಗುರಿ	ಸಾಧನೆ	ಗುರಿ	ಸಾಧನೆ
1	ಸ್ವಾವಲಂಬನಾ ಸಾಲದ ಯೋಜನೆ	5 78	5 04	4 04	5 30
2	ಗಂಗಾ ಕಲ್ಯಾಣ	18 10	10 32	0 70	1 30
3	ಅರಿವು	0 70	–	0 70	1 30
4	ನೇರ ಸಾಲ ಯೋಜನೆ	14 15	–	12 50	1 14
5	ಶ್ರಮಶಕ್ತಿ ಯೋಜನೆ	–	–	1 15	0 95

68 (217) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) (ವಿಧಾನಸಭೆ ಸದಸ್ಯರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ನರಳುತ್ತಿರುವವರ ಸಂಖ್ಯೆ ಎಷ್ಟು? ರಾಜ್ಯ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ರೋಗಿಗಳು ಇದರಿಂದ ನರಳುತ್ತಿದ್ದಾರೆ,

ಆ) ಇವರುಗಳಿಗೆ ಯೋಗ್ಯ ಚಿಕಿತ್ಸೆ ನೀಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ,

ಇ) ಈ ರೋಗ ಚಿಕಿತ್ಸೆಗಾಗಿ ವಿಶ್ವಬ್ಯಾಂಕ್, ಕೇಂದ್ರ ಸರ್ಕಾರ ಹಾಗೂ ಇತರೆ ಮೂಲಗಳಿಂದ ಸರ್ಕಾರಕ್ಕೆ ಬರುತ್ತಿರುವ ಹಣವೆಷ್ಟು , ಇದನ್ನು ಯಾವ ರೀತಿ ಸರ್ಕಾರವು ಬಳಸಿಕೊಳ್ಳುತ್ತಿದೆ,

ಈ) ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ಮೃತಪಟ್ಟ ರೋಗಿಗಳ ಕುಟುಂಬದವರಿಗೆ ಪುನರ್ ವಸತಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ 1987 ರಿಂದ ನವೆಂಬರ್ 2006ರ ವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ 10,589 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಈ ಬಗ್ಗೆ ವಿವರವನ್ನು ಲಗತ್ತಿಸಲಾಗಿದೆ

ಇ) ಈ ರೋಗ ಚಿಕಿತ್ಸೆಗಾಗಿ 2006–07 ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನಗಳು

1	ವಿಶ್ವಬ್ಯಾಂಕ್	– ರೂ 2777 22 ಲಕ್ಷಗಳು
2	ಜಿ ಎಫ್ ಎ ಟಿ ಎಮ್	– ರೂ 1986 90 ಲಕ್ಷಗಳು

ಈ ಹಣವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತಿದೆ

ಸಾರ್ವಜನಿಕರಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತಿದೆ

1 ಸಾರ್ವಜನಿಕರಿಗ ಮಾಹಿತಿ, ಶಿಕ್ಷಣ ಮತ್ತು ಸಮಾಚಾರ

2 ಆಪ್ತ ಸಮಾಲೋಚನಾ ಕೇಂದ್ರಗಳ (VCTC) ಮತ್ತು ಸಂಯುಕ್ತ ಕೇಂದ್ರಗಳ ಮೂಲಕ ಆಪ್ತ ಸಮಾಲೋಚನೆ ಮತ್ತು ಹೆಚ್ ಐ ವಿ /ಏಡ್ಸ್ ರಕ್ತ ಪರೀಕ್ಷೆ

3 ಪಿ ಪಿ ಟಿ ಸಿ ಟಿ ಕೇಂದ್ರಗಳಲ್ಲಿ ಗರ್ಭಿಣಿ ಸ್ತ್ರೀಯರೊಂದಿಗೆ ಆಪ್ತ ಸಮಾಲೋಚನೆ ಹಾಗೂ ಗರ್ಭಿಣಿ ತಾಯಿಯಿಂದ ಮಗುವಿಗೆ ಹೆಚ್ ಐ ವಿ ಸೋಂಕು ತಗಲುವುದನ್ನು ನಿಯಂತ್ರಿಸುವುದು

4 ಸರ್ಕಾರೇತರ ಸಂಸ್ಥೆಗಳ ಮೂಲಕ ಲೈಂಗಿಕ ಕಾರ್ಯಕರ್ತೆಯರು, ಸಲಿಂಗಕಾಮಿ ಪುರಷರು, ಟ್ರಕರ್ಸ್ ಮುಂತಾದ ಹೆಚ್ಚು ಅಪಾಯದಲ್ಲಿರುವ ಸಮುದಾಯಗಳಿಗೆ ಉದ್ದೇಶಿತ ಕಾರ್ಯಕ್ರಮ (Targetted Interventions)

5 ಶಾಲಾ ಮತ್ತು ಕಾಲೇಜಿನ ವಿದ್ಯಾರ್ಥಿಗಳಲ್ಲಿ ಹೆಚ್ ಐ ವಿ /ಏಡ್ಸ್ ಬಗ್ಗೆ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮಗಳು

6 ಆರೈಕೆ ಮತ್ತು ಬೆಂಬಲ ಕೇಂದ್ರಗಳ ಮೂಲಕ ಏಡ್ಸ್ ಪೀಡಿತರಿಗೆ ಆರೈಕೆ ಮತ್ತು ಬೆಂಬಲ ಸೇವೆಗಳನ್ನು ನೀಡುವುದು

7 ರಕ್ತ ಸುರಕ್ಷತೆಗೆ ಒತ್ತು ನೀಡುವುದು

8 ರಾಜ್ಯದ ಆಸ್ಪತ್ರೆಗಳಲ್ಲಿ ಏಡ್ಸ್ ಪೀಡಿತ ಜನರಿಗೆ ಆಂಟಿ ರಿಟ್ರೋವೈರಲ್ ಚಿಕಿತ್ಸೆ ನೀಡುವುದು

ಈ) ಪ್ರಸ್ತುತ ರಾಜ್ಯದಲ್ಲಿ AIDS-HIV-1, HIV-2 ರೋಗಗಳಿಂದ ಮೃತಪಟ್ಟ ರೋಗಿಗಳ ಕುಟುಂಬದವರಿಗೆ ಪುನರ್ ವಸತಿಗಾಗಿ ಸರ್ಕಾರವು ಯಾವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ ಈ ಬಗ್ಗೆ ಚಿಂತನೆ ನಡೆಸಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಹಾಗೂ ಈ ಕಾರ್ಯಕ್ರಮಗಳನ್ನು ಬಡತನ ರೇಖೆಗಿಂತ ಕಡಿಮೆ ಇರುವ ರೋಗಿಗಳಿಗೂ ಅನ್ವಯಿಸುತ್ತದೆ

ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆಗಳು	1987ರಿಂದ ನವೆಂಬರ್ 2006ರವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ
	ಬೆಂಗಳೂರು ವಿಭಾಗ	
1	ಬೆಂಗಳೂರು (ನಗರ)	1483
2	ಬೆಂಗಳೂರು (ಗ್ರಾಮಾಂತರ)	84
3	ತುಮಕೂರು	104
4	ಶಿವಮೊಗ್ಗ	152
5	ಚಿತ್ರದುರ್ಗ	42
6	ದಾವಣಗೆರೆ	1010
7	ಕೋಲಾರ	68
	ಮೈಸೂರು ವಿಭಾಗ	
8	ಮೈಸೂರ	269
9	ಚಾಮರಾಜನಗರ	10
10	ಮಂಡ್ಯ	162
11	ಮಂಗಳೂರು	1679
12	ಉಡುಪಿ	1804
13	ಮಡಿಕೇರಿ	10
14	ಚಿಕ್ಕಮಗಳೂರು	101
15	ಹಾಸನ	30
	ಬೆಳಗಾಂ ವಿಭಾಗ	
16	ಬೆಳಗಾಂ	1620
17	ಬಿಜಾಪುರ	20
18	ಬಾಗಲಕೋಟೆ	48
19	ಧಾರವಾಡ	662
20	ಹಾವೇರಿ	73
21	ಗದಗ್	63
22	ಕಾರವಾರ	158
	ಗುಲ್ಬರ್ಗಾ ವಿಭಾಗ	
23	ಗುಲ್ಬರ್ಗಾ	495

ಕ್ರಮ ಸಂಖ್ಯೆ	ಜಿಲ್ಲೆಗಳು	1987ರಿಂದ ನವೆಂಬರ್ 2006ರವರೆಗೆ ಏಡ್ಸ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ
24	ರಾಯಚೂರು	62
25	ಬೀದರ್	17
26	ಬಳ್ಳಾರಿ	321
27	ಕೊಪ್ಪಲ	42
	ಒಟ್ಟು	**10589**

ಎ ಆರ್ ಟಿ ಕೇಂದ್ರಗಳ ಪಟ್ಟಿ

1 ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ
ಶಿವಾಜಿನಗರ, ಬೆಂಗಳೂರು

2 ಕೆಂಪೇಗೌಡ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ಸ್
ಎಆರ್‌ಟಿ ಕೇಂದ್ರ (ಒಪಿಡಿ ಬ್ಲಾಕ್)
ವಿದ್ಯಾನಗರ, ಹುಬ್ಬಳ್ಳಿ

3 ಕೆ ಆರ್ ಆಸ್ಪತ್ರೆ
ಇರವಿನ್ ರೋಡ್, ಮೈಸೂರು (0821–2423400)

4 ವಿಮ್ಸ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ
ಕಂಟೋನ್‌ಮೆಂಟ್, ಬಳ್ಳಾರಿ (08392–235224)

5 ಜಿಲ್ಲಾ ಆಸ್ಪತ್ರೆ,
ಸೀರುಮ್ ರೋಡ್
ಗುಲ್ಬರ್ಗ (08472–240630)

6 ಜಿಲ್ಲಾ ಆಸ್ಪತ್ರೆ,
ಹೈದರಾಬಾದ್ ರೋಡ್
ರಾಯ್‌ಚೂರ್ ಪೋಸ್ಟ್
ರಾಯ್‌ಚೂರ್ (08532–235855, 235801)

7 ಜಿಲ್ಲಾ ಆಸ್ಪತ್ರೆ
ಬಿಜಾಪುರ (08352–27009)

8 ಜಿಲ್ಲಾ ಆಸ್ಪತ್ರೆ
ಬೆಳಗಾವಿ (0831–2420320)

9 ಜಿಲ್ಲಾ ಆಸ್ಪತ್ರೆ
ಬಾಗಲಕೋಟೆ (08354–236260)

10 ಜಿಲ್ಲಾ ಆಸ್ಪತ್ರೆ
ದಾವಣಗೆರೆ (08192–221585)

11 ಎಸ್ ಎನ್ ಆರ್ ಜಿಲ್ಲಾ ಆಸ್ಪತ್ರೆ
ಕೋಲಾರ (08152–222035)

12 ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ
ಮಂಗಳೂರು (ದ ಕ) (ಫೊ 0824–2425138)

ಏಡ್ಸ್ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

- ರಾಜ್ಯದಲ್ಲಿ HIV/AIDS ತಡೆಗಟ್ಟು ನಿಟ್ಟಿನಲ್ಲಿ ಸರ್ಕಾರ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮೊದಲಿನಿಂದ ಹಮ್ಮಿಕೊಂಡಿದೆ KSAPS ಜೊತೆಗೆ ಹಲವು ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ಒಗ್ಗೂಡಿ HIV/AIDS ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ

- ಸುಮಾರು 95 ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳು ಪಿಪಿಟಿಸಿಟಿ, ಉದ್ದೇಶಿತ ಕಾರ್ಯಕ್ರಮ (Targeted intervenions) ಹಾಗೂ ದೂರವಾಣಿ ಸಮಾಲೋಚನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಭಾಗಿಗಳಾಗಿದ್ದಾರೆ ಇವರು ಸೇವೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಇವರ ಸೇವೆಗಳನ್ನು ಬಳಸಿಕೊಳ್ಳಲಾಗುವುದು

- ಹೆಚ್‌ಐವಿ ತಡೆಗಟ್ಟುವ ನಿಟ್ಟಿನಲ್ಲಿ ವಿಶ್ವಬ್ಯಾಂಕ್, UNAIDS, USAID, ಬಿಲ್‌ಗೇಟ್, ಕ್ಲಿಂಟನ್ ಫೌಂಡೇಷನ್ ಹಾಗೂ ಇತರೆ ಸಂಸ್ಥೆಗಳೂ ಸಹ ಸಹಕಾರ ನೀಡುತ್ತಿದ್ದಾರೆ

- ಈ ಕಾರ್ಯಕ್ರಮ ಯಶಸ್ಸು ಕಾಣಲು ಸೇವಾ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ ಈ ನಿಟ್ಟಿನಲ್ಲಿ ನಿಯಂತ್ರಣ ಕ್ರಮಗಳಾಗಿ ಈಗಾಗಲೇ ವಿಸಿಟಿಸಿ 61 ಕೇಂದ್ರಗಳು, ಸೋಂಕಿತ ತಾಯಿಯಿಂದ ಮಗುವಿಗೆ ಹೆಚ್‌ಐವಿ ಸೋಂಕು ತಡೆಗಟ್ಟಲು ಪಿಪಿಟಿಸಿಟಿ 82 ಕೇಂದ್ರಗಳು, ಸಂಯುಕ್ತ ವಿಸಿಟಿಸಿ/ಪಿಪಿಟಿಸಿಟಿ 194 ಕೇಂದ್ರಗಳು, ಲೈಂಗಿಕ ಸಂಪರ್ಕ ಸೋಂಕನ್ನು ತಡೆಗಟ್ಟಲು ಎಸ್ ಟಿ ಡಿ 206 ಕ್ಲಿನಿಕ್‌ಗಳು, ಸೋಂಕಿತರ ಬೆಂಬಲ ಹಾಗೂ ಆರೈಕೆ

ಮಾಡಲು ಎ ಆರ್ ಟಿ 12 ಕೇಂದ್ರಗಳು ಹಾಗೂ ಹೆಚ್ ಐ ವಿ /ಟಿಬಿ 33 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಇವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲದೇ ಸಿಹೆಚ್‌ಸಿ ಹಾಗೂ ಪಿಹೆಚ್‌ಸಿ ಮಟ್ಟಕ್ಕೂ ವಿಸ್ತರಿಸಲಾಗಿದೆ

- ಹಾಗೆಯೇ ಪೋಲಿಸ್ ಸಿಬ್ಬಂದಿಗೆ, ಅಂಗನವಾಡಿ ಕಾರ್ಯಕರ್ತರಿಗೆ, ವೈದ್ಯರಿಗೆ, ದಾದಿಯರಿಗೆ ವಿವಿಧ ಮಟ್ಟದಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ
- HIV/AIDS ಬಾಧಿತರ ಆರೈಕೆ, ಜೀವನಮಟ್ಟ ಸುಧಾರಿಸಲು ಹಾಗೂ ಅವರ ಜೀವಿತದ ಅವಧಿ ಹೆಚ್ಚಿಸುವುದಕ್ಕಾಗಿ ಕಳೆದ ಆಗಸ್ಟ್‌ನಲ್ಲಿ 8 ನೂತನ ಎ ಆರ್ ಟಿ ಕೇಂದ್ರಗಳನ್ನು ರಾಜ್ಯದಲ್ಲಿ ತೆರೆಯಲಾಗಿದೆ ಈಗ ರಾಜ್ಯದಲ್ಲಿ ಏಡ್ಸ್ ಬಾಧಿತರಿಗೆ ಚಿಕಿತ್ಸೆ ನೀಡಲು ಒಟ್ಟು 12 ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ ಈ ಕೇಂದ್ರಗಳ ಆರಂಭ HIV/AIDS ಬಾಧಿತರ ಬದುಕಿನಲ್ಲಿ ಆಶಾಕಿರಣವಾಗಲಿದೆ ನ್ಯಾಕೊದಿಂದ ಇನ್ನು ನಾಲ್ಕು ಸಿಡಿ 4 ಯಂತ್ರಗಳನ್ನು ಸರಬರಾಜು ಮಾಡುತ್ತಿದ್ದಾರೆ
- ಅದೇ ರೀತಿಯಲ್ಲಿ ಹೆಚ್‌ಐವಿ ಸೋಂಕಿನೊಂದಿಗೆ ಜೀವಿಸುತ್ತಿರುವ ಮಕ್ಕಳಿಗಾಗಿ (15 ವರ್ಷಕ್ಕಿಂತ ಕೆಳಗಿನವರು) ಪ್ರಥಮ ಬಾರಿಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಎಆರ್‌ಟಿ ಚಿಕಿತ್ಸೆ ಪ್ರಾರಂಭಿಸಲಾಗಿದೆ ಬರುವ ದಿನಗಳಲ್ಲಿ ಎಲ್ಲಾ ಎಆರ್‌ಟಿ ಕೇಂದ್ರಗಳಲ್ಲೂ ಈ ಸೇವೆಯನ್ನು ವಿಸ್ತರಿಸಲಾಗುವುದು ನ್ಯಾಕೋ ಮುಖಾಂತರ ಕ್ಲಿಂಟನ್ ಫೌಂಡೇಶನ್‌ನವರು ಔಷಧಿಗಳನ್ನು ಉಚಿತವಾಗಿ ನೀಡಿದ್ದಾರೆ ಯುನಿಸೆಫ್‌ನವರು ವಿವಿಧ ಹಂತಗಳಲ್ಲಿ ತರಬೇತಿ ನೀಡಲು ಸಹಾಯ ಮಾಡುತ್ತಿದ್ದಾರೆ
- ಹಾಗೆಯೇ ವಿಭಾಗೀಯ ಮಟ್ಟದಲ್ಲಿ ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಸೋಂಕಿತ ಮಕ್ಕಳಿಗಾಗಿ ಆರೈಕೆ ಮತ್ತು ಬೆಂಬಲ (ಎ ಆರ್ ಟಿ ಚಿಕಿತ್ಸೆ) ನೀಡುವ ಸೆಂಟರ್ ಆಫ್ ಎಕ್ಸೆಲೆನ್ಸ್ ಸಂಸ್ಥೆಯನ್ನು ತೆರೆಯಲು ನ್ಯಾಕೋದಿಂದ ಮಂಜೂರಾತಿ ದೊರೆತಿದೆ
- ಇವುಗಳ ಜೊತೆಗೆ ಸುರಕ್ಷಿತ ಕ್ರಮವಾಗಿ ಕಾಂಡೋಮ್ ಬಳಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಕಾಂಡೋಮ್ ಬಳಕೆ ಕೇವಲ ಸಂತಾನ ನಿಯಂತ್ರಣ ಸಾಧನವಾಗಿರದೇ HIV/AIDS ನಿಯಂತ್ರಣ ಸಾಧನವಾಗಿ ಉಪಯೋಗಿಸಬಹುದೆಂದು ಜನತೆಯಲ್ಲಿ ಅರಿವು ಮೂಡಿಸಲಾಗುತ್ತಿದೆ ಹಾಗೆಯೇ ನಿರೋಧ್‌ಗಳನ್ನು ವಿತರಿಸಲಾಗುತ್ತಿದೆ

- "ಅರಿವೇ ಗುರು" ಎಂಬಂತೆ, ಅರಿವು ಹಾಗೂ ಸೂಕ್ತ ಎಚ್ಚರಿಕೆಯೊಂದೇ ಏಡ್ಸ್‌ನ್ನು ತಡೆಗಟ್ಟಬಲ್ಲದು ಎಂಬ ಉದ್ದೇಶದಿಂದ ರಾಜ್ಯಾದ್ಯಂತ ವಿವಿಧ ಮಾಧ್ಯಮಗಳ ಮೂಲಕ HIV/AIDS ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಸಹ ತುಂಬಾ ತೀವ್ರವಾಗಿ ಕೈಗೊಳ್ಳಲಾಗಿದೆ

69 (219) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು,

ಆ) ಇವುಗಳಿಗೆ ಯಾವ ಯಾವ ವರ್ಷದಲ್ಲಿ ಮಂಜೂರಾತಿಯನ್ನು ನೀಡಲಾಗಿದೆ ,

ಇ) ಇದನ್ನು ಯಾವ ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ ,

ಈ) ಇದಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಒಪ್ಪಿಗೆ ಪಡೆಯಲಾಗಿದೆಯೇ ,

ಉ) 2004-05ರಿಂದ ಪ್ರಾರಂಭವಾದ ಹೊಸ ವೈದ್ಯಕೀಯ ಕಾಲೇಜುಗಳಿಗೆ. ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಸರ್ಕಾರವು ಒದಗಿಸಿದೆಯೇ ,

ಊ) ಇವುಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ,

ಋ) ಇಲ್ಲವಾದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 7

ಆ) ಬಿಎಂಸಿ ಬೆಂಗಳೂರು	–	1924
ಎಂಎಂಸಿ ಮೈಸೂರು	–	1955
ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ	–	1997
ವಿಜಯನಗರ ವೈದ್ಯಕೀಯ ವಿಜ್ಞಾನಗಳ ನಂಸ್ಥೆ, ಬಳ್ಳಾರಿ	–	1994
ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ	–	2006
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ	–	2006
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ	–	2006

ಇ) ಬೆಂಗಳೂರು, ಮೈಸೂರು, ಧಾರವಾಡ, ಬಳ್ಳಾರಿ, ಬೆಳಗಾಂ, ಹಾಸನ ಮತ್ತು ಮಂಡ್ಯ

ಈ) ಹೌದು

ಉ) ಹೌದು

ಊ) ಇವುಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಕೊರತೆ ಇರುವ ಕಡೆ ಹುದ್ದೆಗಳನ್ನು ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ಋ) ಕೊರತೆ ಇರುವ ಕಡೆ ಹುದ್ದೆಗಳನ್ನು ನೇಮಕಾತಿ ಮಾಡಲಾಗುತ್ತಿದೆ

70 (220) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ)) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ ,

ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು ,

ಇ) ಜಿಲ್ಲೆಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡವೇನು ,

ಈ) ಆಯ್ಕೆ ಮಾಡುವಾಗ ಡಾ ನಂಜುಂಡಪ್ಪನವರು ಸರ್ಕಾರಕ್ಕೆ ಸಲ್ಲಿಸಲಾದ ಅಸಮತೋಲನ ನಿವಾರಣೆಯಂತೆ ಹಿಂದುಳಿದ ಜಿಲ್ಲೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದೇ ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಹೌದು

ಆ) ಕೇಂದ್ರ ಸರ್ಕಾರ ಅನುಮತಿ ನೀಡಿದಲ್ಲಿ ರಾಯಚೂರು, ಬೀದರ್ ಮತ್ತು ಶಿವಮೊಗ್ಗದಲ್ಲಿ ಪ್ರಾರಂಭ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

ಇ) ಆದ್ಯತೆ ಮತ್ತು ಅಗತ್ಯಕ್ಕನುಗುಣವಾಗಿ

ಈ) ಹೌದು

72 (138) ಶ್ರೀ ಬಸವರಾಜ್ ಹೆಚ್ ಡಿ (ವಿರಾಜಪೇಟೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಗಳ ಪಟ್ಟಿಗೆ ಮೇದಾರ ಜನಾಂಗವನ್ನು ಸೇರಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿರುವುದು ನಿಜವಲ್ಲವೇ ,

ಆ) ಸದರಿ ಜನಾಂಗವನ್ನು ಈವರೆವಿಗೂ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸದೆ ಇರುವುದರಿಂದ ಆರ್ಥಿಕ ಹಾಗೂ ಶೈಕ್ಷಣಿಕವಾಗಿ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ರಾಜ್ಯ ಸರ್ಕಾರವು ಈಗಲಾದರೂ ಕೇಂದ್ರ ಸರ್ಕಾರವು ಸದರಿ ಪ್ರಸ್ತಾಪನೆಗೆ ಅಂಗೀಕಾರ ನೀಡುವಂತೆ ಒತ್ತಾಯ ಮಾಡುವುದೇ ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ರಾಜ್ಯ ಸರ್ಕಾರವು ಪ್ರಕಟಿಸಿದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಂತೆ ಸದರಿ ಜನಾಂಗದವರು ಮೀಸಲಾತಿಯನ್ನು ಪಡೆಯುತ್ತಿದ್ದಾರೆ

ಇ) ತತ್ಸಂಬಂಧವಾಗಿ ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ಮಾಡಲಾಗುತ್ತಿದೆ ಪ್ರತ್ಯುತ್ತರ ಬಂದಿರುವುದಿಲ್ಲ ಏತನ್ಮಧ್ಯೆ ಮೇದಾರ ಜಾತಿಯ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲು ಕರ್ನಾಟಕ ಅನುಸೂಚಿತ ಜಾತಿ ಅನುಸೂಚಿತ ಬುಡಕಟ್ಟುಗಳ ಆಯೋಗದಿಂದ ವರದಿಯನ್ನು ಕೋರಲಾಗಿದೆ

73 (184) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಹಿಂಬಾಕಿ ಹುದ್ದೆಗಳಿಗೆ ಅರ್ಹತೆಯುಳ್ಳ ಅಭ್ಯರ್ಥಿಗಳ ಆಯ್ಕೆಗಾಗಿ ಪ್ರಕಟಣೆ ಹೊರಡಿಸದೇ ಇತರೆ ಅಭ್ಯರ್ಥಿಗಳಿಗೆ ಅನುಕೂಲ ಮಾಡಲು ಹೊಸ ಹುದ್ದೆಗಳಿಗೆ ಪ್ರಕಟಣೆ ಹೊರಡಿಸಿ ನೇಮಕಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಪರಿಶಿಷ್ಟ ಅಭ್ಯರ್ಥಿಗಳಿಗೆ ಇದರಿಂದಾಗುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ನಿಯಮಾನುಸಾರ ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನಿಂದ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಗೊಂಡ ಬ್ಯಾಕ್‌ಲಾಗ್ ಶಿಕ್ಷಕರ ಹುದ್ದೆಗಳ ಭರ್ತಿಗೆ ಜರುಗಿಸಬೇಕಾದ ಪ್ರಕ್ರಿಯೆಯನ್ನು ಪೂರ್ತಿಗೊಳಿಸಿ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ ಈ ಪೈಕಿ ಒಬ್ಬರು ಪ್ರಾಧ್ಯಾಪಕರ ಹುದ್ದೆಗೆ ಮತ್ತು ನಾಲ್ವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಹಾಜರಾಗಿರುತ್ತಾರೆ ತದನಂತರ ಸರ್ಕಾರದ ಅನುಮತಿಯಂತೆ 62 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಪ್ರಕ್ರಿಯೆ ಪೂರ್ತಿಗೊಳಿಸಿದ ನಂತರ 56 ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದ್ದು, ದಿ 17 01 2007 ರೊಳಗೆ ಸದರಿ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಗಡುವು ನೀಡಲಾಗಿತ್ತು ಈ ಅವಧಿಯು ಪೂರ್ತಿಗೊಂಡ ನಂತರ ಸದರಿ ಪ್ರಕಟಣೆಯಲ್ಲಿ ಭರ್ತಿಯಾಗದೇ ಉಳಿಯಲಾಗುವ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾದ ಹುದ್ದೆಗಳನ್ನು ಹಾಗೂ ಈ ಮೇಲಿನ ಹಸ್ತಾಂತರಗೊಂಡ ಬ್ಯಾಕ್‌ಲಾಗ್ ಹುದ್ದೆಗಳನ್ನು ಒಟ್ಟಾರೆಯಾಗಿ ವಿಶ್ವವಿದ್ಯಾಲಯದ ಹಣಕಾಸು ಹಾಗೂ ಕೆಲಸದ ಹಿತದೃಷ್ಟಿಯಿಂದ ನೇಮಕಾತಿ ಪ್ರಕಟಣೆಯನ್ನು ಹೊರಡಿಸಿ ಸೂಕ್ತ ಕ್ರಮ ಜರುಗಿಸಲಾಗುವುದು

ಅ) ಈ ದಿಸೆಯಲ್ಲಿ ಪರಿಶಿಷ್ಟ ಅಭ್ಯರ್ಥಿಗಳಿಗೆ ಯಾವುದೇ ರೀತಿಯಾದ ಅನ್ಯಾಯವಾಗುವುದಿಲ್ಲ

74 (186) ಶ್ರೀ ಧ್ರುವನಾರಾಯಣ ಆರ್ (ನಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯು ಹಿಂಬಾಕಿ ಹುದ್ದೆಗಳ ಭರ್ತಿ ವಿಷಯದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದೆಯೇ ,

ಆ) ಹಾಗಿದ್ದಲ್ಲಿ, ಇಲಾಖೆ ನೀಡಿದ ಸೂಚನೆಗಳನ್ನು ಉಳಿದ ಇಲಾಖೆಗಳಲ್ಲದೆ ಸ್ವಾಯತ್ತ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸಿವೆಯೇ , (ಇಲಾಖಾವಾರು ಮಾಹಿತಿ ನೀಡುವುದು) ಪಾಲಿಸದಿದ್ದಲ್ಲಿ ಕೈಗೊಂಡ ಕ್ರಮವೇನು ,

ಇ) ಸಮಾಜ ಕಲ್ಯಾಣ ಇಲಾಖೆಯ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದಂತಹ ಇಲಾಖೆ ಮತ್ತು ಸಂಸ್ಥೆಗಳಿಗೆ ನೀಡುವ ಅನುದಾನವನ್ನು ಕಡಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಹೌದು ಪಾಲನೆ ಮಾಡುವುದರಿಂದ ಹುದ್ದೆಗಳ ಪ್ರಕಟಣೆ ಆಗಿದೆ ಮತ್ತು ನೇಮಕಾತಿ ಆದೇಶಗಳು ಹೊರಡಿಸಲ್ಪಡುತ್ತಿವೆ

ಇ) ಸಮಾಜ ಕಲ್ಯಾಣ ಇಲಾಖೆಯ ಸೂಚನೆಗಳನ್ನು ಪಾಲಿಸದಂತಹ ಇಲಾಖೆ/ಸಂಸ್ಥೆಗಳಿಗೆ ಅನುದಾನ ಕಡಿತಗೊಳಿಸಲು ನಿಯಮಗಳಲ್ಲಿ ಅವಕಾಶ ವಿರುವುದಿಲ್ಲ

75 (187) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ,

ಆ) ಸದರಿ ಮೊರಾರ್ಜಿ ದೇಸಾಯಿ ಶಾಲೆಗಳು ಯಾವ ಯಾವ ಇಲಾಖೆಗಳ ನಿಯಂತ್ರಣದಲ್ಲಿವೆ ,

ಇ) ಮೊರಾರ್ಜಿ ದೇನಾಯಿ ಶಾಲೆಗಳಲ್ಲಿ ಮಂಜೂರಾದ ಶಿಕ್ಷಕರುಗಳ ಸಂಖ್ಯೆ ಎಷ್ಟು ,

ಈ) ಬಹಳಷ್ಟು ಶಿಕ್ಷಕರುಗಳ ಹುದ್ದೆಗಳು ಖಾಲಿ ಇದ್ದು, ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಖಾಯಂ ಮಾಡಲು ಸರ್ಕಾರ ಮುಂದಾಗುವುದೇ,

ಉ) ನವೋದಯ ಶಾಲೆಗಳ ಮಾದರಿಯಲ್ಲಿ ರಾಜ್ಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಡೆಸದೇ ಇರುವ ಕಾರಣವೇನು ,

ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ,

ಋ) ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ,

ಎ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದ ನವೋದಯ ಶಾಲೆಗಳ ಮಾದರಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಲಾಗುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 266 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿವೆ

ಆ) ಈ ವಸತಿ ಶಾಲೆಗಳು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಅಲ್ಪಸಂಖ್ಯಾತರ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ನಿಯಂತ್ರಣದಲ್ಲಿರುತ್ತವೆ

ಇ) ಮೇಲ್ಕಂಡ 266 ವಸತಿ ಶಾಲೆಗಳಿಗೆ 266 ಪ್ರಾಂಶುಪಾಲರ ಮತ್ತು 2466 ಶಿಕ್ಷಕರುಗಳ ಹುದ್ದೆಗಳು ಮಂಜೂರಾಗಿವೆ

ಈ) ಆಗಿಂದಾಗ್ಗೆ ಖಾಲಿಯಾಗುವ ಶಿಕ್ಷಕರ ಹುದ್ದೆಗಳನ್ನು ಆಯಾ ಜಿಲ್ಲಾ ಪಂಚಾಯತ್‌ಗಳು ಭರ್ತಿ ಮಾಡಿಕೊಳ್ಳುತ್ತಿವೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ವಿಚಾರ ಪ್ರಚಲಿತ ಕಾನೂನು/ನಿಯಮಗಳ ಹಿನ್ನೆಲೆಯಲ್ಲಿ ಪರಿಶೀಲನೆಯಲ್ಲಿದೆ

ಉ) ಕೇಂದ್ರೀಯ ನವೋದಯ ವಸತಿ ಶಾಲೆಗಳನ್ನು ಕೇಂದ್ರೀಯ ನವೋದಯ ವಿದ್ಯಾಲಯ ಸಮಿತಿಯ ಮೂಲಕ ಹಾಗೂ ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿರ್ವಹಿಸಲಾಗುತ್ತಿದೆ ಪ್ರತಿ ಜಿಲ್ಲೆಗೆ ಒಂದರಂತೆ ಈ ಶಾಲೆ ಮಂಜೂರು ಮಾಡಲಾಗಿದೆ ಈ ಶಾಲೆಗಳಲ್ಲಿ 6 ರಿಂದ 12ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಒಟ್ಟು 560 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಅವಕಾಶವಿರುತ್ತದೆ ಪ್ರತಿ ವಸತಿ ಶಾಲೆಯ ವಾರ್ಷಿಕ ನಿರ್ವಹಣೆಗಾಗಿ ಅಂದಾಜು ರೂ 1 00 ಕೋಟಿ ಒದಗಿಸಲಾಗುತ್ತಿದೆ ಈ ವಸತಿ ಶಾಲೆಗಳಲ್ಲಿ 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳಿಗೆ ರಾಜ್ಯ ಪರ್ಯ ಕ್ರಮದಂತೆ ಬೋಧನೆ ನೀಡಿ 8 ರಿಂದ 12ನೇ ನೀಡಲಾಗುತ್ತಿದೆ ಪ್ರತಿ ವಸತಿ ಶಾಲೆಗೆ 35 ಹುದ್ದೆಗಳನ್ನು 24 ಶಿಕ್ಷಕರು 11 ಬೋಧಕೇತರ ಸಿಬ್ಬಂದಿ ಹಾಗೂ 5 ಜನ ಹೊರ ಸಂಪನ್ಮೂಲದವರನ್ನು ನೇಮಿಸಲಾಗುತ್ತಿದೆ ರಾಜ್ಯ ಸರ್ಕಾರದ ವಿವಿಧ ವರ್ಗದವರಿಗಾಗಿ ನಡೆಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿರ್ವಹಿಸಲಾಗುತ್ತಿದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ್ಲಿ 6 ರಿಂದ 10ನೇ ತರಗತಿಯವರಗೆ ರಾಜ್ಯ ಪರ್ಯ ಕ್ರಮದಂತೆ ವಿದ್ಯಾಭ್ಯಾಸ ನೀಡಲಾಗುತ್ತಿದೆ ಒಟ್ಟು 250 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಅವಕಾಶವಿರುತ್ತದೆ ಪ್ರತಿ ವಸತಿ ಶಾಲೆಯ ವಾರ್ಷಿಕ ನಿರ್ವಹಣೆಗಾಗಿ ಅಂದಾಜು ರೂ 35 00 ಲಕ್ಷದಿಂದ ರೂ 4 00 ಲಕ್ಷಗಳನ್ನು

ಒದಗಿಸಲಾಗುತ್ತಿದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಒಟ್ಟು 25 ಸಿಬ್ಬಂದಿ ವರ್ಗದವರು 11 ಬೋಧಕ ಸಿಬ್ಬಂದಿ 14 ಬೋಧಕೇತರ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ

ಹೀಗೆ ಈ ಎರಡೂ ಬೇರೆ ಬೇರೆ ರೀತಿಯ ಯೋಜನೆಗಳಾಗಿವೆ

ಊ) ಪ್ರಶ್ನೆ (ಉ)ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಋ) ಒದಗಿಸಲಾಗ್ಗುತ್ತಿದೆ

ಎ) ಹಣದ ಲಭ್ಯತೆ ಆಧರಿಸಿ ಸಾಧ್ಯವಾದಷ್ಟು ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ

76 (188) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಸಂಬಂಧದ ಸಂಪುಟದ ಉಪಸಮಿತಿ ನಿಯಮಾನುಸಾರ ಕನಿಷ್ಠ ಎಷ್ಟು ದಿನಗಳಿಗೊಮ್ಮೆ ಸಭೆ ಸೇರಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯ ಪ್ರಗತಿ ಪರಿಶೀಲನೆ ನಡೆಸಬಹುದಾಗಿದೆ

ಆ) ಸಮಿತಿಯು ಸೆಪ್ಟೆಂಬರ್‌ನಿಂದ ಡಿಸೆಂಬರ್ 2006 ತಿಂಗಳುಗಳಲ್ಲಿ ಎಷ್ಟು ಸಭೆಗಳನ್ನು ನಡೆಸಿದೆ,

ಇ) ಈ ಸಭೆಗಳಲ್ಲಿ ಎಷ್ಟು ಇಲಾಖೆಗಳ ಬ್ಯಾಕ್‌ಲಾಗ್ ಹುದೆಗಳ ಭರ್ತಿಯ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಲಾಗಿದೆ ,

ಈ) ಕಾಲ ಕಾಲಕ್ಕೆ ಸಭೆಗಳು ನಡೆಯದಿರುವುದು ನಿಜವಲ್ಲವೇ ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಬ್ಯಾಕ್‌ಲಾಗ್ ಹುದ್ದೆಗಳ ಬಗೆಗಿನ ಸಚಿವ ಸಂಪುಟ ಉಪಸಮಿತಿಯ ನಿರ್ದಿಷ್ಟ ಅವಧಿಯಲ್ಲಿ ಗರಿಷ್ಟ ಅಥವಾ ಕನಿಷ್ಟ ಎಷ್ಟು ದಿನಗಳಿಗೊಮ್ಮೆ ಸಭೆ ಸೇರಬೇಕೆಂಬ ನಿಯಮ ಇರುವುದಿಲ್ಲ ಅಗತ್ಯತೆಗನುಗುಣವಾಗಿ ಸಭೆ ಸೇರುವುದು

ಆ) ಸಮಿತಿಯು ಸೆಪ್ಟೆಂಬರ್ 06 ರಿಂದ ಡಿಸೆಂಬರ್ 2006ರವರೆಗೆ ಒಂದು ಬಾರಿ ಸಭೆ ಸೇರಿದೆ

ಇ) ಈ ಸಭೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸದೇ ಇರುವ ಎಲ್ಲಾ ಇಲಾಖೆಗಳ ಪ್ರಗತಿ ಬಗ್ಗೆ ಪರಿಶೀಲನೆ ನಡೆಸಲಾಗಿದೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

77 (214) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೋಯಿಡಾ ತಾಲ್ಲೂಕಿನ ಕುಣಬಿ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಈ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಅಗತ್ಯವಿರು ಮಾನದಂಡಗಳಾದ ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಸ್ಥಿತಿಗತಿ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡಿ ಎಥ್ನೋಗ್ರಾಫಿಕ್ ವರದಿ ಕಳುಹಿಸಿಕೊಡಲು ಜಿಲ್ಲಾಧಿಕಾರಿ ಉತ್ತರ ಕನ್ನಡ ಜಿಲ್ಲೆ ಇವರನ್ನು ಸಮಾಜ ಕಲ್ಯಾಣ ಆಯುಕ್ತರು ಕೋರಿದ್ದರೆ ವರದಿ ಬಂದನಂತರ ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದಿಂದ ಶಿಫಾರಸ್ಸು ಪಡೆದು ಶಿಫಾರಸ್ಸಿನ ಅನ್ವಯ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ

78 (195) ಶ್ರೀ ಗುರುಪಾದಪ್ಪ ನಾಗಾಮಾರಪಲ್ಲಿ (ಔರಾದ್) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 2006ರ ಆಯವ್ಯಯದಲ್ಲಿ ಮಂಡಿಸಲಾದ ಕಾರ್ಯಕ್ರಮಗಳ ವಿವರಗಳೇನು , (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ,

ಆ) ಆಯವ್ಯಯದಲ್ಲಿ ಪ್ರಕಟಿಸಿರುವ ಕಾರ್ಯಕ್ರಮಗಳಿಗೆ ಅಗತ್ಯವಿರುವ ಹಣದ ಮೊತ್ತವೆಷ್ಟು ,

ಇ) ಈ ಪೈಕಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಲಾಗಿದೆ ,

ಈ) ಈ ಬಗ್ಗೆ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿ ಏನು , (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಇಲ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ರಾಜ್ಯವಲಯ ಕಾರ್ಯಕ್ರಮಗಳು

1 ಶಾದಿಮಹಲ್/ಸಮುದಾಯ ಭವನಗಳ ನಿರ್ಮಾಣ

2 ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್ ಕಟ್ಟಡಗಳ ನಿರ್ಮಾಣ

3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ಮಾಣ

4 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣ

5 ಅಲ್ಪಸಂಖ್ಯಾತರಿಗಾಗಿ ಪೀರ

6 ಹೊಸ ಮೊರಾರ್ಜಿ ದೇಸಾಯಿ ನಿಮಾಸಿ ಶಾಲೆಗಳು

7 ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ

8 ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಕಲಿಕೆ ಸಾಧನೆಗಳು

9 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ

ಜಿಲ್ಲಾವಲಯ ಕಾರ್ಯಕ್ರಮಗಳು

1 ಅಲ್ಪಸಂಖ್ಯಾತರ ತರಬೇತಿ

2 ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು

3 ಅಲ್ಪಸಂಖ್ಯಾತರ ಐಟಿಐ/ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ

4 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯ

5 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

6 ಅಲ್ಪಸಂಖ್ಯಾತರಿಗೆ ವೃತ್ತಿ ತರಬೇತಿ

7 ಅಲ್ಪಸಂಖ್ಯಾತರಿಗಾಗಿ ಅನಾಧಾಲಯಗಳು

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ

1 ಸ್ವಾವಲಂಬನ ಸಾಲದ ಯೋಜನೆ

2 ಸಹಾಯಧನ ಯೋಜನೆ

3 ಗಂಗಾ ಕಲ್ಯಾಣ ಯೋಜನೆ

4 ಶ್ರಮಶಕ್ತಿ ಯೋಜನೆ

5 ಭೂ ಖರೀದಿ ಯೋಜನೆ

ಜಿಲ್ಲಾವಾರು ವಿವರ ಅನುಬಂದದಲ್ಲಿ ಲಗತ್ತಿಸಿದೆ

ಆ) ಅಲ್ಪಸಂಖ್ಯಾತರ ಇಲಾಖೆಗೆ ರೂ 4260 91 ಲಕ್ಷ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ರೂ 40 00 ಕೋಟಿಗಳನ್ನು ಒದಗಿಸಲಾಗಿದೆ ಅನುಬಂಧ–3

ಆ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ ಅನುಬಂಧ–1

ಇ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ ಅನುಬಂಧ–2

ಅನುಬಂಧ

ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ವಿಧಾನಸಭಾ ಸದಸ್ಯರು ಇವರ ಪ್ರಶ್ನೆಯ ಸಂಖ್ಯೆ 195ಕ್ಕೆ

ಕ್ರಮ ಸಂಖ್ಯೆ (ಅ) (ಇ) ಅನುಬಂಧ (ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಗಳು	ಶಾದಿಮಹಲ್ / ಸಮುದಾಯ ಭವನ		ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್ ಕಟ್ಟಡಗಳ ನಿರ್ಮಾಣ		ಮೊರಾರ್ಜಿ - ದೇಸಾಯಿ ವಸತಿ ಶಾಲೆಗಳ ನಿರ್ಮಾಣ	
		ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ
1	2	3	4	5	6	7	8
1	ಬೆಂಗಳೂರು ನಗರ	ಜಿಲ್ಲಾವಾರು ಅನುಬಂಧ ಮೀಸಲಿಟ್ಟಿರುವುದಿಲ್ಲ	0	ಜಿಲ್ಲಾವಾರು ಅನುಬಂಧ ಮೀಸಲಿಟ್ಟಿರುವುದಿಲ್ಲ	0	ಜಿಲ್ಲಾವಾರು ಅನುಬಂಧ ಮೀಸಲಿಟ್ಟಿರುವುದಿಲ್ಲ ಜನವರಿ 2007ರಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ, ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರುರವರಿಗೆ ರೂ 900 00 ಲಕ್ಷಗಳನ್ನು ಬಿಡುಗಡೆ	
2	ಬೆಂಗಳೂರು ಗ್ರಾಮಾ		0		0		
3	ಬಾಗಲಕೋಟೆ		0		0		
4	ಬೆಳಗಾವಿ		24 50		0		
5	ಬಳ್ಳಾರಿ		5 00		0		
6	ಬೀದರ್		1 50		0		
7	ಬಿಜಾಪುರ		25 00		154 00		
8	ಚಾಮರಾಜನಗರ		0		0		
9	ಚಿಕ್ಕಮಗಳೂರು		0		0		

1	2	3	4	5	6	7	8
10	ಚಿತ್ರದುರ್ಗ		7 50		0		
11	ದಕ್ಷಿಣ ಕನ್ನಡ		20 00		0		
12	ದಾವಣಗೆರೆ		0		0		
13	ಧಾರವಾಡ		25 00	ಜಿಲ್ಲಾವಾರು ಅನುಬಂದ ಮೀಸಲಿಟ್ಟಿರುವುದಿಲ್ಲ	0	ಜಿಲ್ಲಾವಾರು ಅನುಬಂದ ಮೀಸಲಿಟ್ಟಿರುವುದಿಲ್ಲ	
14	ಗದಗ	ಜಿಲ್ಲಾವಾರು ಅನುಬಂಧ ಮೀಸಲಿಟ್ಟಿರುವುದಿಲ್ಲ	35 00		0		
15	ಗುಲ್ಬರ್ಗಾ		0		0		
16	ಹಾಸನ		10 00		0		
17	ಹಾವೇರಿ		0		0		
18	ಕೊಡಗು		0		0		
19	ಕೋಲಾರ		15 00		0		
20	ಕೊಪ್ಪಳ		13 00		0		
21	ಮಂಡ್ಯ		5 00		0		
22	ಮೈಸೂರು		0		35 60		
23	ರಾಯಚೂರು		45 00		0		
24	ಶಿವಮೊಗ್ಗ		22 00		0		
25	ತುಮಕೂರು		0		0		
26	ಉಡುಪಿ		0		0		
27	ಉತ್ತರ ಕನ್ನಡ		26 00		0		
	ಒಟ್ಟು		**279 50**		**189 60**		

ಕ್ರಮ ಸಂಖ್ಯೆ	ಜಿಲ್ಲೆಗಳು	ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ		ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಕಲಿಕೆ ಸಾಧನೆಗಳು		ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ	
		ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ
1	2	3	4	5	6	7	8
1	ಬೆಂಗಳೂರು ನಗರ	8400000	ಕಾರ್ಯಕ್ರಮ ಜಾರಿಯಲ್ಲಿದ್ದು, ಫಲಾನುಭವಿಗಳ ಅಂತಿಮ ಪಟ್ಟಿ ಬಂದ ನಂತರ ವೆಚ್ಚ ಮಾಡಲಾಗುವುದು	1800000	0 50	1900000	1 00
2	ಬೆಂಗಳೂರು ಗ್ರಾಮಾ	1085000		200000	0 50	290000	0 50
3	ಬಾಗಲಕೋಟೆ	1560000		210000	4 50	350000	0 50
4	ಬೆಳಗಾವಿ	4660000		830000	3 70	1050000	4 00
5	ಬಳ್ಳಾರಿ	1820000		310000	2 00	440000	0 50
6	ಬೀದರ್	2360000		580000	2 00	900000	8 00
7	ಬಿಜಾಮರ	1950000		350000	2 00	470000	0 50
8	ಚಾಮರಾಜನಗರ	670000		100000	2 00	95000	4 00
9	ಚಿಕ್ಕಮಗಳೂರು	871000		140000	2 00	170000	0 50
10	ಚಿತ್ರದುರ್ಗ	834000		120000	2 00	140000	0 30
11	ದಕ್ಷಿಣ ಕನ್ನಡ	2060000		740000	1 00	1100000	2 00
12	ದಾವಣಗೆರೆ	2900000		250000	2 00	320000	1 00
13	ಧಾರವಾಡ	1960000		450000	2 00	610000	3 00
14	ಗದಗ	1315000		150000	4 00	190000	3 00

1	2	3	4	5	6	7	8
15	ಗುಲ್ಬರ್ಗಾ	2600000		1000000	5 00	1400000	7 00
16	ಹಾಸನ	2080000		240000	2 00	470000	3 00
17	ಹಾವೇರಿ	955000		140000	2 00	170000	3 00
18	ಕೊಡಗು	1095000		390000	0 20	630000	2 00
19	ಕೋಲಾರ	1200000		100000	1 50	1600000	2 00
20	ಕೊಪ್ಪಳ	1160000		120000	0 60	200000	2 20
21	ಮಂಡ್ಯ	390000		100000	0 50	95000	2 50
22	ಮೈಸೂರು	1060000		370000	0 50	600000	8 00
23	ರಾಯಚೂರು	1470000		260000	5 00	430000	3 00
24	ಶಿವಮೊಗ್ಗ	1555000		300000	1 00	410000	0 50
25	ತುಮಕೂರು	1545000		300000	0 50	380000	1 00
26	ಉಡುಪಿ	960000		180000	0 50	220000	6 00
27	ಉತ್ತರ ಕನ್ನಡ	1485000		270000	0 50	270000	6 00
	ಒಟ್ಟು	**50000000**		**10000000**	**50 00**	**15000000**	**75 00**

ಕ್ರಮ ಸಂಖ್ಯೆ	ಜಿಲ್ಲೆಗಳು	ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ		ಅಲ್ಪಸಂಖ್ಯಾತರಿಗಾಗಿ ಪೀಠ		ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು	
		ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ
1	2	3	4	5	6	7	8
1	ಬೆಂಗಳೂರು ನಗರ	0	100	100		ಅನುದಾನ ಮೀಸಲಿಟ್ಟಿರುವುದಿಲ್ಲ	ಜನವರಿ 2007ರಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ರವರಿಗೆ ರೂ. 100 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ
2	ಬೆಂಗಳೂರು ಗ್ರಾಮಾ	0	0	0			
3	ಬಾಗಲಕೋಟೆ	0	0	0			
4	ಬೆಳಗಾವಿ	0	0	0			
5	ಬಳ್ಳಾರಿ	0	0	0			
6	ಬೀದರ್	0	0	0			
7	ಬಿಜಾಪುರ	0	0	10 00			
8	ಚಾಮರಾಜನಗರ	0	0	0			
9	ಚಿಕ್ಕಮಗಳೂರು	0	0	0			
10	ಚಿತ್ರದುರ್ಗ	0	0	0			
11	ದಕ್ಷಿಣ ಕನ್ನಡ	0	0	10 00			
12	ದಾವಣಗೆರೆ	0	0	0			

1	2	3	4	5	6	7	8
13	ಧಾರವಾಡ	0	0	0			
14	ಗದಗ	0	0	0			
15	ಗುಲ್ಬರ್ಗಾ	0	0	10 00			
16	ಹಾಸನ	0	1 00	0			
17	ಹಾವೇರಿ	0	0	0			
18	ಕೊಡಗು	0	0	0			
19	ಕೋಲಾರ	0	0	0			
20	ಕೊಪ್ಪಳ	0	0	0			
21	ಮಂಡ್ಯ	0	0	0			
22	ಮೈಸೂರು	0	0	10 00			
23	ರಾಯಚೂರು	0	0	0			
24	ಶಿವಮೊಗ್ಗ	0	0	10 00			
25	ತುಮಕೂರು	0	0	10 00			
26	ಉಡುಪಿ	0	0	0			
27	ಉತ್ತರ ಕನ್ನಡ	0	0	0			
	ಒಟ್ಟು	**0**	**2 00**	**70 00**			

ಕ್ರಮ ಸಂಖ್ಯೆ	ಜಿಲ್ಲೆಗಳು	ಅಲ್ಪಸಂಖ್ಯಾತರ ಕಾನೂನು ವದವೀದರರಿಗಾಗಿ ತರಬೇತಿ		ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು		ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ	
		ಮೀನಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ
1	2	3	4	5	6	7	8
1	ಬೆಂಗಳೂರು ನಗರ	0 80	0 60	16 00	8 00	1 57	0 45
2	ಬೆಂಗಳೂರು ಗ್ರಾಮಾ	0 60	0 46	0	0	0 77	0 50
3	ಬಾಗಲಕೋಟೆ	0 90	0 72	10 00	8 44	1 07	0 55
4	ಬೆಳಗಾವಿ	1 10	0 60	0	0	0 77	0 25
5	ಬಳ್ಳಾರಿ	1 00	0 75	8 50	6 16	0 57	0 60
6	ಬೀದರ್	0 70	0 50	11 00	8 50	0 77	0 20
7	ಬಿಜಾಪುರ	0 70	0 53	30 00	25 49	1 07	0 25
8	ಚಾಮರಾಜನಗರ	0 40	0 19	0	0	0 37	0 20
9	ಚಿಕ್ಕಮಗಳೂರು	0 50	0 37	0	0	0 57	0 07
10	ಚಿತ್ರದುರ್ಗ	1 10	0 75	0	0	0 37	0 15
11	ದಕ್ಷಿಣ ಕನ್ನಡ	0 70	0 46	12 00	9 63	0 77	0 40
12	ದಾವಣಗೆರೆ	1 45	1 00	8 50	0	0 87	0 15

1	2	3	4	5	6	7	8
13	ಧಾರವಾಡ	1 45	0 93	8 50	6 59	1 05	0 33
14	ಗದಗ	0 90	0 45	0	0	0 87	0 20
15	ಗುಲ್ಬರ್ಗಾ	1 20	0 80	18 00	13 85	1 08	0 30
16	ಹಾಸನ	0 50	0 10	0	0	1 28	0 30
17	ಹಾವೇರಿ	1 00	0 50	0	0	0 68	0 10
18	ಕೊಡಗು	0 70	0 55	0	0	0 28	0
19	ಕೋಲಾರ	1 50	1 06	0	0	0 68	0 32
20	ಕೊಪ್ಪಳ	0 70	0 52	8 50	5 33	0 20	0 05
21	ಮಂಡ್ಯ	0 50	0 30	0	0	0 32	0 10
22	ಮೈಸೂರು	1 45	0 77	16 50	13 93	1 08	0 10
23	ರಾಯಚೂರು	0 50	0 45	12 50	9 50	0 68	0 20
24	ಶಿವಮೊಗ್ಗ	1 45	1 08	0	0	0 30	0 10
25	ತುಮಕೂರು	1 20	0 35	0	0	1 08	0
26	ಉಡುಪಿ	1 00	0 50	0	0	0 38	0 07
27	ಉತ್ತರ ಕನ್ನಡ	1 00	0 50	0	0	0 50	0 10
	ಒಟ್ಟು	**25 00**	**16 09**	**160 00**	**115 42**	**20 00**	**6 04**

ಕ್ರಮ ಸಂಖ್ಯೆ	ಜಿಲ್ಲೆಗಳು	ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯ		ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು		ಅಲ್ಪಸಂಖ್ಯಾತರಿಗೆ ವೃತ್ತಿ ತರಬೇತಿ	
		ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ	ಮೀಸಲಿಟ್ಟ ಹಣ	ವೆಚ್ಚ
1	2	3	4	5	6	7	8
1	ಬೆಂಗಳೂರು ನಗರ	4 77	0	0	0	0	0
2	ಬೆಂಗಳೂರು ಗ್ರಾಮಾ	1 67	0	12 00	7 62	0	0
3	ಬಾಗಲಕೋಟೆ	2 47	0	12 00	2 42	1 00	0 75
4	ಬೆಳಗಾವಿ	16 00	8 05	38 00	27 30	1 00	0
5	ಬಳ್ಳಾರಿ	9 65	3 50	38 00	28 84	1 00	0
6	ಬೀದರ್	7 52	1 23	12 00	8 35	3 00	1 25
7	ಬಿಜಾಪುರ	5 98	0	0	0	3 30	1 06
8	ಚಾಮರಾಜನಗರ	0	0	0	0	0	0
9	ಚಿಕ್ಕಮಗಳೂರು	3 97	0	12 00	8 71	0	0
10	ಚಿತ್ರದುರ್ಗ	1 50	0	12 00	7 50	0	0
11	ದಕ್ಷಿಣ ಕನ್ನಡ	7 57	1 40	0	0	1 00	0 20
12	ದಾವಣಗೆರೆ	0	0	12 00	9 00	1 00	0 35

1	2	3	4	5	6	7	8
13	ಧಾರವಾಡ	1 25	0 47	51 00	45 10	1 00	0 43
14	ಗದಗ	0 80	0	0	0	0	0
